ಕಸ್ತೂರಿ

ಮಾರ್ಚ್ 1990 ರೂ. 3-





ತೇಲುವ ವಿನೋದದ ಹೊಸ ಆಟ...
ಫ್ರಿಸ್‌ಬೀ
ಚಿತ
ಫ್ರಿಸ್‌ಬೀ! ಚಾಕ್ಲೇಟ್
ಕಾಂಪ್ಲಾನ್‌ನ ಪ್ರತಿ 500
ಗ್ರಾಮ್ ಪ್ಯಾಕ್ ಕೊಂಡಾಗ
ಕಾಂಪ್ಲಾನ್®
ಸಂಪೂರ್ಣ ನಿಯೋಜಿತ ಆಹಾರ.
Complan
CHOCOLATE FLAVOUR
Complete Planned Food
FREE!
ಇದೀಗ, ನಿಮ್ಮ ಮುದ್ದಿನ
ಮಕ್ಕಳಿಗೆ ಪೋಷಣೆಯ
ಜೊತೆಗೆ ಕಾಂಪ್ಲಾನ್
ಫ್ಲೈಯಿಂಗ್ ಫ್ರಿಸ್‌ಬೀಯ
ವಿನೋದ-ಆನಂದ ನೀಡಿರಿ.
ಅವರು ನಗುನಗುತ್ತ,
ಓಡಾಡುತ್ತ ಬೆಳೆಯುವು-
ದನ್ನು ಕಾಣಿರಿ.
ಇದೀಗ ಆಯ್ದ ಸ್ಥಳಗಳಲ್ಲಿ ಲಭಿಸುತ್ತದೆ.

ಕಸ್ತೂರಿ

ಕನ್ನಡ ಡೈಜೆಸ್ಟ್

ವರ್ಷ: 34

ಸಂಚಿಕೆ: 7

ಮಾರ್ಚ್ 1990

ವ್ಯವಸ್ಥಾಪಕ ಸಂಪಾದಕ:
ಕೆ.ಶಾಮರಾವ್

ಸಂಪಾದಕ:
ಆರ್.ಎ.ಉಪಾಧ್ಯ

ಮುಖಪುಟ:
ಸೇವೆಗೆ ಸಿದ್ಧ

ವರ್ಣಚಿತ್ರ:
ಎಂ.ಎಸ್.ಶಶಿಧರ

ಕಸ್ತೂರಿ ಕಾರ್ಯಾಲಯ
ಕೊಪ್ಪೀಕರ ರಸ್ತೆ
ಹುಬ್ಬಳ್ಳಿ-580020

ಬೆಳಕಿಂಡಿ

★ ಕಲ್ಯಾಣರಾಜ್ಯಗಳಿಗೆ ಎರಡು ರೋಗಗಳು ಬಡಿದಿರುತ್ತವೆ: ಒಂದು ಆಶ್ವಾಸನೆಗಳ ಅತಿಸಾರ, ಇನ್ನೊಂದು ಆಚರಣೆಯ ಮಲಬದ್ಧತೆ.

- ಜೆ.ಎಂ.ಕರ್ಲಿ

★ ಸ್ತ್ರೀ ಎಂದೂ ಪ್ರತಿಜ್ಞೆ ಮಾಡುವುದಿಲ್ಲ. ಆದರೆ ಪುರುಷನಿಗಾಗಿ ಅವಳು ತನ್ನ ಸರ್ವಸ್ವವನ್ನೂ ತ್ಯಾಗಮಾಡುತ್ತಾಳೆ. ಪುರುಷ ಬಹಳ ಪ್ರತಿಜ್ಞೆಗಳನ್ನೇನೋ ಮಾಡುತ್ತಾನೆ, ಆದರೆ ಅವನ್ನು ಪೂರೈಸುವ ಪ್ರಯತ್ನವನ್ನು ಮಾಡುವುದಿಲ್ಲ.

- ಅನಾತೊಲ್ ಫ್ರಾನ್ಸ್

★ ನಾವು ಮಾಡುವ ಪರೋಪಕಾರಗಳು ಈ ಭೂಮಿಯ ಮೇಲೆ ನಾವಿರುವ ನೆಲಕ್ಕೆ ಕೊಡುವ ಬಾಡಿಗೆ ಮಾತ್ರ.

- ವಿಲ್‌ಫ್ರೆಡ್ ಗ್ರೆನ್‌ಫೆಲ್

★ ದನ ಸಾಕಲಿಲ್ಲ, ಹಾಲು ಕರೆಯಲಿಲ್ಲ. ಆದರೆ ದಿನವೂ ಹಾಲು ಕುಡಿಯುತ್ತದೆ ಭಾಗ್ಯಶಾಲಿ ಬೆಕ್ಕು.

- ಸಂಸ್ಕೃತ ಸುಭಾಷಿತ

ಚಂದಾ ದರಗಳು

ಬಿಡಿ ಸಂಚಿಕೆ	...	3=00
1 ವರ್ಷಕ್ಕೆ	ಅಂಚೆ ಸೇರಿ	34=00
2 ವರ್ಷಕ್ಕೆ	...	65=00
3 ವರ್ಷಕ್ಕೆ	...	100=00

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ 1ನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ 5ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರ ವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಸಹಚಿಂತನ

'ಹರಿಜನರ ಕಾಕಾ'

ಫೆಬ್ರವರಿ 90ರ ಸಂಚಿಕೆಯ 'ನಡೆದು ಬಂದ ದಾರಿ'ಯಲ್ಲಿ ಪ್ರಕಟವಾದ ಕಾಕಾ ಕಾರಖಾನೀಸರ ಬದುಕು-ಸಾಧನೆಗಳ ಆತ್ಮೀಯ ಚಿತ್ರಣ ಮನ ಸೆಳೆಯಿತು. ಅವರು ತೊಟ್ಟ ದೀಕ್ಷೆಯಿಂದಾಗಿ ಸಾವಿರಾರು ಕುಟುಂಬಗಳು ಕತ್ತಲಿಂದ ಬೆಳಕಿನೆಡೆಗೆ ಹೆಜ್ಜೆಯಿಟ್ಟು ಸಮಾಜದ ಪ್ರಮುಖ ಪ್ರವಾಹದೊಂದಿಗೆ ಒಂದಾಗಲು ಸಾಧ್ಯವಾಯಿತು.

ಕಲಬುರ್ಗಿ ಆರ್.ಬಿ.ಮಾಲಿಪಾಟೀಲ

ಎಂ.ಎಚ್.ಕೌಜಲಗಿಯವರ ಈ ಲೇಖನ ಒಂದು ಸಕಾಲಿಕ ಪ್ರಕಟಣೆ.

ಗೋಕಾಕ ಫಾಲ್ಸ್ ಮಹಾಲಿಂಗ ಗೋರಬಾಳ

ಕಾರಖಾನೀಸರ ಆ ನಂತರದ ಮೂವತ್ತೂ ಚಿಲ್ಲರೆ ವರ್ಷಗಳ ಬದುಕಿನ ಬಗ್ಗೆ ಒಂದಿಷ್ಟು ಸೇರಿಸಬಹುದಿತ್ತಲ್ಲವೆ ಈ ಲೇಖನದೊಂದಿಗೆ.

ರಾಯಚೂರು ಎಂ.ಎಸ್.ಪಾಟೀಲ

ಸೋಜಿಗದ ಬದುಕು

ಡಾ.ಎಸ್.ಐ.ಖಾನರು ತಮ್ಮ ಹೆತ್ತವರನ್ನು 43 ವರ್ಷಗಳ ದೀರ್ಘ ಅವಧಿಯ ನಂತರ ಮತ್ತೆ ಕೂಡಿಕೊಂಡ ಹೃದಯಸ್ಪರ್ಶಿ ವೃತ್ತಾಂತ ಓದಿ ಹೃದಯ ತುಂಬಿ ಬಂತು. ಲೇಖನದ ಕೊನೆಗೆ ಲೇಖಕರು "ಬದುಕು ವಿಚಿತ್ರವೆನ್ನುವುದು ಸುಳ್ಳೇ?" ಎಂದು ಪ್ರಶ್ನಿಸಿರುವುದಂತೂ ಬದುಕಿನ ಬಗ್ಗೆ ಗಾಢವಾಗಿ ಯೋಚಿಸುವಂತೆ ಮಾಡಿತು.

ವಿಜಾಪುರ ಎಸ್.ಪಿ.ಮುರುಡಿ

ಇಂಥ ನೈಜ ಪ್ರಸಂಗಗಳು ಭಾವೈಕ್ಯದ ಮಹತ್ವವನ್ನು ಸಾರುವಂತಾಗಲಿ, ದೇಶ ಎದುರಿಸುತ್ತಿರುವ ಮತಾಂಧ ಗಲಭೆಗಳಿಗೆ ಇವು ಪೂರ್ಣವಿರಾಮ ಹಾಕಲಿ.

ಹುಬ್ಬಳ್ಳಿ ರಾಧಿಕಾ ಗೋಪಾಲ

ಕಾದಿರುವನು...

ಪ್ರೇಮ, ದಯೆ, ಕರುಣೆಗಳಿಗೆ ಬಾಹ್ಯ ಸ್ವರೂಪ ಮುಖ್ಯವಲ್ಲ, ಅಂತರಂಗದ ಸೌಂದರ್ಯ ಶ್ರೀಮಂತಿಕೆಗಳೇ ಮುಖ್ಯ ಎಂಬುದನ್ನು ಒತ್ತಿ ಹೇಳುವ 'ಶಶಿಪ್ರಭ'ರ "ಕಾದಿರುವನು ಕೃಷ್ಣ.. ರಾಧೆ ಬರುವಳೆಂದು.." ಲೇಖನವೋದುತ್ತಿದ್ದಂತೆ ಕೊನೆಗೆ ಕೃಷ್ಣನ ಈಗಿನ ಬದುಕು ಹೇಗೆ ಸಾಗಿದೆಯೋ ಎಂದು ಚಿಂತಿಸುವಂತಾಯಿತು. ಹೌದು, ಇದೂ ಸೋಜಿಗದ ಬದುಕೇ..

ಮಾರನಹಳ್ಳಿ ಉಗ್ರನರಸಿಂಹಯ್ಯ

ನಮ್ಮ ಪುರಾಣಗಳಲ್ಲಿ ಇಂಥ ಸತಿಯರ ಚಿತ್ರಣಗಳಿರುವುದನ್ನು ಓದಿದ್ದೆ. ಆದರೆ ಈ ಲೇಖನ ಓದಿದಾಗ ಅವು ಕಾಲ್ಪನಿಕ ಚಿತ್ರಗಳಲ್ಲ ಎಂಬುದು ಅರಿವಾಯಿತು.

ಧಾರವಾಡ ಸುಗಂಧಾ ಮರಳಿಹಳ್ಳಿ

ಅಂದ ಹಾಗೆ ಡಾ.ಎಸ್.ಐ.ಖಾನರ ರಕ್ತ ಪರೀಕ್ಷೆಯ ಫಲಿತಾಂಶ ಏನು?

ಸಕಲೇಶಪುರ ಎಸ್.ಪಿ.ದಿನೇಶ್‌ಕುಮಾರ್

ಕಾಲಗಣನೆ

'ಪಂಚಾಂಗ ತಂದ ಫಜೀತಿ' (ಕಸ್ತೂರಿ, ಜನವರಿ 90)ಯಲ್ಲಿ ಲೇಖಕರು ಪಾಂಡವರ ವನವಾಸ ಅಜ್ಞಾತವಾಸಗಳ ಅವಧಿಯ ಬಗೆಗಿನ ಕಾಲಗಣನೆಯ ಮಾನದ ವಿಷಯದಲ್ಲಿ ಕೌರವ-ಪಾಂಡವರಿಬ್ಬರ ವಾದಗಳಲ್ಲಿಯೂ ದೋಷವಿಲ್ಲ ಎಂದಿದ್ದಾರೆ.

ಆಯಾ ಕಾಲಗಣನೆಯನ್ನು ಪ್ರತ್ಯೇಕವಾಗಿ ಪರಿಗಣಿಸಿದಾಗ ಈ ಗಣನೆಗಳೆಲ್ಲ ಸರಿಯೆ. ಆದರೆ ಯುಧಿಷ್ಠಿರನು ವನವಾಸ - ಅಜ್ಞಾತವಾಸವನ್ನು ತಮ್ಮ ಪ್ರತಿಜ್ಞಾ ಪೂರ್ತ್ಯೆಗಾಗಿ ಮಾಡಿದ. ಆತನ ಪಾಲಿಗೆ ಅದೊಂದು ವ್ರತ, ಒಂದು ಯಜ್ಞ. ಆದ್ದರಿಂದಲೆ ಅವನು ಸವನ (ಯಜ್ಞ) ಸಂಬಂಧವಾದ ಸಾವನಮಾನದಲ್ಲೇ ಕಾಲಗಣನೆ ಮಾಡಿದ್ದಾನೆ. ಯಾಕೆಂದರೆ,

ಸಾವನಾನಿ ಸ್ಯುರೇತಾನಿ ಯಜ್ಞ ಕಾಲ ವಿಧಿಸ್ತುತ್ತೈಃ॥
ಸೂತಕಾದಿ ಪರಿಚ್ಛೇದೋ ದಿನಮಾಸಾಬ್ದಪಾಸ್ತಥಾ।
ಮಧ್ಯಮಾಗ್ರಹ ಭುಕ್ತಿಶ್ಚ ಸಾವನೇನ ಪ್ರಕೀರ್ತ್ಯತೇ॥

(ಸೂರ್ಯ ಸಿದ್ಧಾಂತ, ಮಾನಾಧ್ಯಾಯ, 18-19)

- ಎಂದು ಶಾಸ್ತ್ರಗಳು, ಯಜ್ಞ ಮಾಡುವ ಸಮಯದ ವಿಧಾನವನ್ನು ಸಾವನಮಾನದಿಂದಲೇ ಮಾಡಬೇಕು ಎಂದು ಹೇಳುತ್ತವೆ. ಆದ್ದರಿಂದ ಯುಧಿಷ್ಠಿರನ ಕಾಲಗಣನೆಯೇ ಸರಿ ಎನ್ನಬೇಕಾಗುತ್ತದೆ. ಧುರ್ಯೋಧನನು ಹೇಳಿದ ವಿಜಯದಶಮಿಯಿಂದ ವಿಜಯದಶಮಿವರೆಗೆ ಎಂಬ ಚಾಂದ್ರಮಾನದ ಕಾಲಗಣನೆ ಇಲ್ಲಿ ಸರಿಯಾಗುವುದಿಲ್ಲ.

ಕುಂದರ (ಕ್ವಿಲಾನ್) **ನಾಗರಾಜ ರಾಯ**

ಭರವಸೆ ಮತ್ತು ವಿಶ್ವಾಸ

ಈ ನೀತಿಪಾಠ ಉದ್ಬೋಧಕ. ಭರವಸೆಯಲ್ಲಿ ಅಹಂಕಾರವಿದೆ, ವಿಶ್ವಾಸದಲ್ಲಿರುವುದಿಲ್ಲ. ಅಲ್ಲಿರುವುದು ಕೇವಲ ಆತ್ಮನಿವೇದನೆ. ಭಗವಂತನಿಗೆ ಪರಿಪೂರ್ಣವಾಗಿ ಅರ್ಪಿತವಾದ ಸ್ಥಿತಿ.

'ಅಮ್ಮ' ಕವನ ಓದಿ ನನ್ನ ತಾಯಿಯ ನೆನಪಾಗಿ ಮನಸ್ಸು ಮುದುಡಿತ್ತು.

ಬಂಕಾಪುರ **ಸ್ವಾಮಿ ಶಿವಾನಂದಜಿ**

ನುಡಿನಲ್ಲ, ಕವಿ

90, ಜನವರಿ ತಿಂಗಳ 'ಕಸ್ತೂರಿ'ಯ ಪುಟ 87ರಲ್ಲಿ ಪ್ರಕಟವಾದ ಕೆ.ಶಾಂತಾಮಣಿಯವರ ಪುಟ ಕೊನೆಯ ಕಿರುಲೇಖನದಲ್ಲಿ ಶ್ರೀಶ್ರೀ (ಶ್ರೀರಂಗಂ ಶ್ರೀನಿವಾಸಾಚಾರ್ಯ) ತೆಲುಗು ಭಾಷೆಯ ಸುಪ್ರಸಿದ್ಧ ನಟ ಎಂದು ಪ್ರಕಟವಾಗಿದೆ. ಅವರು ನಟ ಅಲ್ಲ, ತೆಲುಗಿನ ಆಧುನಿಕ ಮಹಾಕವಿ, ವಿಪ್ಲವ ಕವಿ.

ಬದನೆಹಾಳ **ಜಿ.ಎಚ್.ಎಂ.ಕುಮಾರಸ್ವಾಮಿ**

ವರಾಹ ದರ್ಶನ

ಡಾ.ಆನಂದ ದೇಶಪಾಂಡೆ ಅವರ "ಸ್ವಚ್ಛತೆಗಾಗಿ ದುಡಿಯುವ ಹೊಲಸು ಪ್ರಾಣಿ," 'ಹಂದಿ'ಯ ಕುರಿತಾದ ಲೇಖನ (ಕಸ್ತೂರಿ, ಫೆಬ್ರವರಿ 1990) ಕುತೂಹಲಕಾರಿ ವಿಷಯಗಳೊಂದಿಗೆ ಕೂಡಿತ್ತು. 'ನೀನಾರಿಗಾದೆಯೋ ಎಲೆ ಮಾನವ' ಎಂಬ ಕವಿ ಉಕ್ತಿಗೆ ತಕ್ಕಂತೆ ಕೇವಲ ಸ್ವಾರ್ಥ, ವಂಚನೆ, ಹಿಂಸೆ, ಆಸೆ, ಆಮಿಷಗಳಲ್ಲೇ ಕಾಲ ನೂಕುತ್ತಿರುವ ಈ ಮಾನವ ಜೀವನ, ವರಾಹದ ಉಪಯುಕ್ತತೆಯ ಮುಂದೆ ಕುಬ್ಜವೆಂದೆನಿಸಿತು.

ಶಿರಹಟ್ಟಿ **ವಿಜಯದತ್ತ**

ಪರೀಕ್ಷೆ - ಪ್ರತೀಕ್ಷೆ?

ಫೆಬ್ರವರಿ 90 'ಕಸ್ತೂರಿ'ಯಲ್ಲಿ ಪ್ರಕಟವಾದ 'ಪರೀಕ್ಷೆ' ಅನುವಾದಿತ ಕಥೆ 89ರ ಡಿಸೆಂಬರ್ 3ರ 'ಸುಧಾ'ದಲ್ಲಿ 'ಮಿ.ಕ್ಲೀನ್ ಸುಗರ್ಭಿ' ಎಂಬ ಹೆಸರಿನಲ್ಲಾಗಲೇ ಪ್ರಕಟವಾದದ್ದು ಸಂಪಾದಕರ ಗಮನಕ್ಕೆ ಬರಲಿಲ್ಲವೆ?

ಮರೇವಾಡ **ಚಂಬಣ್ಣ ನವಲಗುಂದ**

'ಸಂಧಿ'ಯಲ್ಲಿ (ಕಸ್ತೂರಿ, ಫೆಬ್ರವರಿ 90) ನಾಯಕನನ್ನು ಕೊಲ್ಲುವ ಟಿ.ಎಂ. ಜಗದೀಶ್‌ರು 'ಪ್ರತೀಕ್ಷೆ'ಯಲ್ಲಿ (ಮಲ್ಲಿಗೆ, ಫೆಬ್ರವರಿ 90) ಅವನನ್ನು ಹಾಗೆ ಬಿಟ್ಟು ಎರಡೂ ಪತ್ರಿಕೆಗಳನ್ನೋದುವವರನ್ನು ಗೊಂದಲಕ್ಕೀಡು ಮಾಡುವ ಉದ್ದೇಶವೇನಿತ್ತು?

ಕೊಟ್ಟೂರು **ಕೆ.ವೀರಭದ್ರಪ್ಪ**
ಡಿ.ಸುರೇಶ

90ರ ಫೆಬ್ರವರಿ ತಿಂಗಳ ಕಸ್ತೂರಿಯಲ್ಲಿ ಪ್ರಕಟಗೊಂಡ ಆರ್.ವಿ.ಕಟ್ಟಿಮನಿ ಅನುವಾದಿಸಿದ ಜೆಫರಿ ಆರ್ಚರ್‌ರ 'ಪರೀಕ್ಷೆ' ಈ ಹಿಂದೆ 3ನೇ ಡಿಸೆಂಬರ್ 'ಸುಧಾ'ದಲ್ಲಿ ಶ್ರೀ ಕಲಾಕುಮಾರ್‌ರವರು 'ಮಿ.ಕ್ಲೀನ್ ಸುಗರ್ಭಿ' ಎಂಬ ಹೆಸರಿನಿಂದ ಭಾಷಾಂತರಿಸಿದ್ದಾರೆ. ಒಂದೇ ಕತೆ ಇಬ್ಬರು ಭಾಷಾಂತರಿಸುವುದು ತಪ್ಪಲ್ಲ. ಇದು ಕಾಕತಾಳೀಯ. ಆದರೆ ಒಂದೇ ಕತೆಯನ್ನು, 'ಮಲ್ಲಿಗೆ'ಗೆ ಬರೆದು ಎರಡೂ ಕಡೆಯೂ ಒಂದೇ ತಿಂಗಳಲ್ಲಿ ಸ್ಥಾನ ಪಡೆದ ಟಿ.ಎಂ.ಜಗದೀಶರ ಆಸೆಯನ್ನು ಮೆಚ್ಚತಕ್ಕದ್ದೆ.

ಬೆಂಗಳೂರು **ಕಸ್ತೂರಿ ವೈ.ಕೆ.**

('ಪರೀಕ್ಷೆ' ಕತೆಯ ಕುರಿತು ಹೇಳಬೇಕೆಂದರೆ ಇದು ಜೆಫರಿ ಆರ್ಚರ್‌ರ ಮೂಲ ಇಂಗ್ಲಿಷ್ ಕತೆಯ ನೇರ ಅನುವಾದ. 'ಮಿ.ಕ್ಲೀನ್ ಸುಗರ್ಭಿ' ನೇರ ಅನುವಾದವಾಗಿರದೆ ರೂಪಾಂತರವಾಗಿದೆ. ಇನ್ನು 'ಪರೀಕ್ಷೆ' ಮತ್ತು ಟಿ.ಎಂ.ಜಗದೀಶರ 'ಸಂಧಿ' ಕಥೆಗಳನ್ನು ನಾವು ಪ್ರಕಟಣೆಗೆ ಸ್ವೀಕರಿಸಿದ್ದು ಹಲವು ತಿಂಗಳುಗಳ ಹಿಂದೆಯೆ. - ಸಂಪಾದಕ)

ಈ ಸಂಚಿಕೆಯಲ್ಲಿ

ವಿಶಾಲ ದೃಷ್ಟಿ

ಎಚ್. ಪಾಂಡುರಂಗ ವಿಠಲ

(ಒಂದು ಗುಜರಾತಿ ಜಾನಪದ ಕತೆ)

ತನ್ನ ಪರಾಕ್ರಮದಿಂದ ಅನೇಕ ರಾಜ್ಯಗಳನ್ನು ಗೆದ್ದ ಮಹಾರಾಜನೊಬ್ಬನು ತನ್ನ ವೈಭವಕ್ಕೆ ಸಾಟಿಯಾದ ಅರಮನೆಯನ್ನು ಕಟ್ಟಿಸಿದ. ನಿಜವಾಗಿ ಭೂಮಿಯ ಮೇಲೆ ಅಂಥ ಅರಮನೆ ಈವರೆಗೆ ಇದ್ದಿರಲೇ ಇಲ್ಲ - ಅಷ್ಟು ಚೆನ್ನಾಗಿತ್ತು ಅದು. ಅದರ ವರ್ಣ ಚಿತ್ರ ಬರೆಸಲು ನಿರ್ಧರಿಸಿ, ಆ ಕಾಲದ ಅತಿ ಪ್ರಸಿದ್ಧ ಕಲಾತಪಸ್ವಿಗೆ ಹೇಳಿಕಳಿಸಿದ.

ಆ ಕಲೆಗಾರ ಆಗಲೆ ವಾನಪ್ರಸ್ಥನಾಗಿ, ವಿಶ್ರಾಂತನಾಗಿದ್ದ. ದೂರದ ಕಾಡಿನಲ್ಲಿ ತಪಸ್ಸು ಮಾಡಿಕೊಂಡಿದ್ದ. ತನ್ನ ಜನ ಹಾಗೂ ರಾಜನಿಗಾಗಿ ಪುನಃ ಕುಂಚ ಹಿಡಿಯಲು ಒಪ್ಪಿದ. ಸ್ವತಃ ರಾಜನೇ ಅರಮನೆಯನ್ನೆಲ್ಲ ವಿವರವಾಗಿ ಅವನಿಗೆ ತೋರಿಸಿದ. ಈ ಎಲ್ಲವೂ ವಾಸ್ತವವಾಗಿ ಚೆನ್ನಾಗಿ ಬರುವಂತೆ ಚಿತ್ರಿಸಲು ಹೇಳಿದ.

ಕಲೆಗಾರ ಅದಕ್ಕೆ ಸಮ್ಮತಿಸಿ ತನ್ನ ಚಿತ್ರವನ್ನು ಅದು ಪೂರ್ಣವಾಗುವವರೆಗೂ ಯಾರೂ ನೋಡಬಾರದು ಎಂದು ಷರತ್ತು ಹಾಕಿದ. ಎಲ್ಲರೂ ಒಪ್ಪಿದರು. ಅನಂತರ ತಾನೊಬ್ಬನೇ ಕುಳಿತು ಕೆಲಸ ಮುಗಿಸುವೆನೆಂದು ಹೊರಟು ಹೋದ.

ಕೆಲವು ಕಾಲವಾದ ಬಳಿಕ ಕಲಾಕೃತಿ ಸಂಪೂರ್ಣವಾಯಿತು, ಕಲೆಗಾರನು ಎಲ್ಲಾ ಸಭಿಕರ ಮುಂದೆ ಚಿತ್ರದ ಮುಸುಕನ್ನು ತೆಗೆಯುವಂತೆ ರಾಜನಿಗೆ ಹೇಳಿದನು. ರಾಜನು ಪರದೆ ಎಳೆದ. ದಂಗಾದ. ಆಶ್ಚರ್ಯಚಕಿತನಾದ.

ಅಲ್ಲಿತ್ತು ಅತ್ಯದ್ಭುತವಾದ ಪ್ರಕೃತಿ ಚಿತ್ರ. ಕಾಡು, ಬೆಟ್ಟ, ನೀಲಿ ಆಕಾಶ, ಹರಿವ ನದಿ, ಆದರೆ... ಅರಮನೆ ಎಲ್ಲಿ?

ತನ್ನ ಬೆರಗು ಕಡಿಮೆಯಾದ ಬಳಿಕ ರಾಜ ''ಎಲ್ಲಿದೆ ನನ್ನ ಅರಮನೆ?'' ಎಂದು ಗಟ್ಟಿಯಾಗಿ ಉದ್ಗರಿಸಿದ.

ಕಲೆಗಾರ ವಿನಯದಿಂದ ''ಮಹಾಪ್ರಭುಗಳು ದಯಮಾಡಿ ಆ ಬೆಟ್ಟದ ಪಕ್ಕ ನೋಡೋಣವಾಗಲಿ. ಅಲ್ಲಿ ನದಿ ತಿರುವಿನಲ್ಲಿ ಕಾಡಿನ ಪಕ್ಕ... ಆ ಸಣ್ಣ ಚುಕ್ಕೆ... ಅದೇ ತಮ್ಮ ಅರಮನೆ...'' ಎಂದ. ರಾಜನ ಸ್ತಬ್ಧಭಾವ ದೂರವಾಗದಿರಲು, ''ಮಹಾಸನ್ನಿಧಾನದಲ್ಲಿ, ವಾಸ್ತವಿಕತೆಗೆ ಅನುಗುಣವಾಗಿ ಚಿತ್ರಿಸು ಎಂದು ಅಪ್ಪಣೆ ಮಾಡೋಣವಾಯಿತು. ಭಗವಂತನ ಸೃಷ್ಟಿ ವಾಸ್ತವಿಕತೆಯಲ್ಲಿ ಅರಮನೆ ನಿಜಕ್ಕೂ ಒಂದು ಸಣ್ಣ

ಚುಕ್ಕೆ. ಆದರೂ ಪ್ರಭುಗಳಿಗೆ ಮನಸ್ಸಾದರೆ ಒಂದು ಭೂತಗನ್ನಡಿ ಹಿಡಿದು ನೋಡೋಣ ವಾಗಲಿ. ಅರಮನೆಯ ಪ್ರತಿಯೊಂದು ವಿವರವೂ ಚಿತ್ರದಲ್ಲಿ ಯಥಾವತ್ತಾಗಿ ಬಂದಿದೆ'' ಎಂದ.

ಹಾಗಿತ್ತು ಆ ಕಲೆಗಾರನ ಕುಶಲ ಕಲೆ, ಹಾಗೂ ಭಗವಂತನ ಚಿತ್ತದ ಹಿನ್ನೆಲೆಯಲ್ಲಿ ಮಾನವನ ಬದುಕಿನ ಚಿತ್ರವನ್ನು ಕಾಣುವ ಜ್ಞಾನ.

ಮಾನವನು ತನ್ನ ಬಿಂಬವೇ ತನ್ನ ಪ್ರಜ್ಞೆಯೆಲ್ಲವನ್ನೂ ಆವರಿಸಿಕೊಳ್ಳುವಂತೆ ವಿಸ್ತರಿಸಿಕೊಳ್ಳುವನು. ಈ ನಾರ್ಸಿಸಸ್ ರೀತಿಯ ಸ್ವಮೋಹವೇ ತೊಂದರೆಯ ಮೂಲ. ಇಡೀ ಚೌಕಟ್ಟಿನಲ್ಲಿ ತಾನೇ ತುಂಬಿಕೊಂಡ ಈ ಅರಮನೆ ದಗ್ಧವಾದೀತು. ಭೂಕಂಪದಿಂದಲೋ ಶತ್ರುವಿನಿಂದಲೋ ನಾಶವಾದೀತು; ಇಲ್ಲವೆ ಮೃತ್ಯುವಿನಿಂದಾಗಿ ಇದನ್ನು ಹಿಂದೆ ಬಿಡಬೇಕಾದೀತು. ಹೀಗೆ ರಾಜ ಭಯದಲ್ಲಿ ಬದುಕಿ, ನೋವಿನಲ್ಲಿ ಸಾಯುತ್ತಾನೆ. ವಿಶಾಲದೃಷ್ಟಿಯೊಂದೇ ಸ್ಥಿತ ಪ್ರಜ್ಞೆಯನ್ನು, ಶಾಂತಿ, ಸಂಪೂರ್ಣತೆಯನ್ನು ಬದುಕಿಗೆ ನೀಡಬಲ್ಲದು. ವಾಸ್ತವಿಕತೆಯ ಅರ್ಥ ಇದೇ. ●

ಚೀರಲಿಲ್ಲ

ಎರಡು ಶತಮಾನಗಳಿಗೂ ಹಿಂದೆ ಫ್ರಾನ್ಸಿನಲ್ಲಿ ಸೈನಿಕರು ಪ್ರೊಟೆಸ್ಟೆಂಟ್‌ರನ್ನು ಕಣ್ಣಿಗೆ ಕಂಡೆಡೆಯಲ್ಲಿ ಕೊಲ್ಲುತ್ತಿದ್ದ ಸಮಯ. ಪ್ರಾಣಭಯದಿಂದಾಗಿ ಪ್ರೊಟೆಸ್ಟೆಂಟ್‌ರು ಇತರ ದೇಶಗಳಿಗೆ ಪಲಾಯನ ಮಾಡತೊಡಗಿದ್ದರು. ಉದರನಿರ್ವಹಣೆಗಾಗಿ ನೇಕಾರಿಕೆಯನ್ನಾಶ್ರಯಿಸಿದ್ದರು. ಹೀಗೆ ಆ ಪ್ರೊಟೆಸ್ಟೆಂಟ್‌ರಲ್ಲೊಬ್ಬ ಥೋರಿಗ್ನೆ ಎಂಬ ಹಳ್ಳಿಯಲ್ಲಿದ್ದ. ಅವನು ಅಮೇರಿಕಕ್ಕೆ ಪರಾರಿಯಾಗಲು ನಿಶ್ಚಯಿಸಿದ. ಅವನ ಮೂವರು ಮಕ್ಕಳಲ್ಲಿ ಅತಿ ಜಾಣನೂ ಸಾಹಸಿಯೂ ಆದ ಕಿರಿಯವನಿಗೆ ಐದು ವರುಷ ವಯಸ್ಸಾಗಿತ್ತು.

ಆದರೆ ಊರೆಲ್ಲಾ ತುಂಬಿಕೊಂಡಿರುವ ಸೈನಿಕರಿಂದ ತಪ್ಪಿಸಿಕೊಂಡು ಓಡಿ ಹೋಗುವುದು ಸುಲಭವಾಗಿರಲಿಲ್ಲ. ನೇಕಾರ ಒಂದು ಹಂಚಿಕೆ ಹೂಡಿದ. ತನ್ನ ಮೂರು ಮಂದಿ ಮಕ್ಕಳನ್ನೂ ಒಂದು ಚೀಲದಲ್ಲಿ ತುಂಬಿಸಿ, ಕತ್ತೆಯ ಮೇಲೆ ಹೇರಿಕೊಂಡ. ಹೆಂಡತಿಯೊಂದಿಗೆ ತರಕಾರಿ ಮಾರುವವನಂತೆ ನಟಿಸುತ್ತಾ ಮುಂಜಾವಿನಲ್ಲೇ ಹೊರಟ. ಅವನನ್ನು ಅರ್ಧದಲ್ಲೆ ಒಬ್ಬ ಸೈನಿಕ ತಡೆದು, ''ಇಷ್ಟು ನಸುಕಿನಲ್ಲಿ ಎಲ್ಲಿಗೆ ಹೊರಟೆ?'' ಎಂದು ಕೇಳಿದ. ''ನಮ್ಮ ಹೊಲದಲ್ಲಿ ಬೆಳೆದ ತರಕಾರಿ ತೆಗೆದುಕೊಂಡು ಮಾರಾಟಕ್ಕಾಗಿ ಸಂತೆಗೆ ಹೊರಟಿದ್ದೇನೆ,'' ಎಂದ ನೇಕಾರ.

''ಹಾಗೇನು?'' ಎಂದು ಸೈನಿಕ ಕತ್ತೆಯ ಮೇಲಿದ್ದ ಚೀಲವನ್ನು ಪರೀಕ್ಷಿಸಲು ಅದಕ್ಕೆ ಕತ್ತಿಯಿಂದ ಬಲವಾಗಿ ತಿವಿದು, ಏನೂ ಸಂಶಯ ಬಾರದುದರಿಂದ ಹೊರಟುಹೋದ. ಅವರೆಗೂ ಭಯಭೀತರಾಗಿ ನಡುಗುತ್ತಿದ್ದ ನೇಕಾರ ದಂಪತಿಗಳು ದೇವರನ್ನು ಪ್ರಾರ್ಥಿಸುತ್ತಾ, ಒಂದು ಸುರಕ್ಷಿತ ಸ್ಥಳವನ್ನು ತಲುಪಿದ ನಂತರ ಚೀಲವನ್ನು ಬಿಚ್ಚಿ, ಮಕ್ಕಳನ್ನು ಹೊರವೆಗೆದರು. ಆಗ ಕಿರಿಯ ಮಗ, ''ಅಪ್ಪಾ, ನಾನು ಆ ಸೈನಿಕನ ಮಾತುಗಳನ್ನೆಲ್ಲ ಕೇಳಿಸಿಕೊಂಡೆ. ಆದರೆ ಸ್ವಲ್ಪವೂ ಚೀರಲಿಲ್ಲ,'' ಎಂದು ಹೇಳುತ್ತಲೇ ಕೊನೆಯುಸಿರೆಳೆದ. ಸೈನಿಕ ತಿವಿದ ಖಡ್ಗ ಆ ಬಾಲಕನ ಕೊರಳನ್ನು ಹೊಕ್ಕಿತ್ತು. ●

\- ಪ.ರಾಮಕೃಷ್ಣ ಶಾಸ್ತ್ರಿ

ಐತಿಹಾಸಿಕ ಆಖ್ಯಾಯಿಕೆಗಳ ಸ್ವಾರಸ್ಯಗಳು

ಸತ್ಯ ಘಟನೆಗಳೊಡನೆ ಕಪೋಲ ಕಲ್ಪಿತ ಘಟನೆಗಳೂ ಬೆಸೆದುಕೊಂಡಿರುವುದು ಇತಿಹಾಸದ ಒಂದು ಅವಾಂಛಿತ ವೈಶಿಷ್ಟ್ಯ. ಸತ್ಯಾನ್ವೇಷಣೆಯಲ್ಲಿ ತೊಡಗಿರುವ ಇತಿಹಾಸಕಾರರಿಗೆ ಇದು ಕೆಲಮಟ್ಟಿಗೆ ತಲೆನೋವನ್ನುಂಟು ಮಾಡಿದರೂ ಆ ಕಪೋಲಕಲ್ಪಿತ ಸಂಗತಿಗಳು ಮನೋರಂಜನೆಗಳಾಗಿರುವುದರಿಂದ ಮನಸ್ಸಿಗೆ ಸ್ವಲ್ಪ ನೆಮ್ಮದಿಯೂ ಲಭಿಸುತ್ತದೆನ್ನುವುದಕ್ಕೆ ಈ ಕೆಳಗಿನ ಘಟನೆಗಳೆ ಸಾಕ್ಷಿ.

ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಹಂಪೆಯಲ್ಲಿ ಆಯಿತು. ಆ ಸ್ಥಳದಲ್ಲಿ ನಾಯಿಯನ್ನು ಬೆನ್ನಟ್ಟುತ್ತಿದ್ದ ಮೊಲವನ್ನು ಕಂಡು ಆಚ್ಚರಿಗೊಂಡ ವಿದ್ಯಾರಣ್ಯಸ್ವಾಮಿಗಳು ಹಿಂದೂ ಸಾಮ್ರಾಜ್ಯ ಸ್ಥಾಪನೆಗೆ ಅದೇ ಸ್ಥಳವನ್ನು ಆಯ್ದುಕೊಂಡರು ಎಂಬ ಆಖ್ಯಾಯಿಕೆ ಸುಪ್ರಸಿದ್ಧವಾಗಿದೆ. ಯವನರ ದಾಳಿಗೆ ಒಂದಾದ ನಂತರ ಒಂದರಂತೆ ರಾಜ್ಯಗಳು ಉರುಳುತ್ತ ಸಾಗಿದಾಗ ಮೊದಲ ಬಾರಿಗೆ ಹಿಂದೂಗಳ ಸಂಘಟನೆಯ ಆಧಾರದ ಮೇಲೆ ವಿಜಯನಗರ ಸ್ಥಾಪನೆಯಾದ ಹಿನ್ನೆಲೆಯಲ್ಲಿ ಯಾರೋ ಒಬ್ಬ ಮಹಾಶಯರು ಈ ಆಖ್ಯಾಯಿಕೆಯನ್ನು ಹೆಣೆದಿರಬೇಕು

ಪುಣೆಯ ಇತಿಹಾಸ ಪ್ರಸಿದ್ಧವಾದ ಶನಿವಾರವಾಡೆಯನ್ನು ಮೊದಲನೇ ಬಾಜೀರಾಯ ಸುಮಾರು 1730ರಲ್ಲಿ ಕಟ್ಟಿಸಿದ್ದಾನೆ. ಶನಿವಾರ ವಾಡೆಯನ್ನು ಕಟ್ಟಿಸಲೋಸುಗ ಅದೇ ನಿವೇಶನವನ್ನು ಆತ ಆಯ್ಕೆ ಮಾಡಲು ಕಾರಣವೆಂದರೆ ಆ ಸ್ಥಳದಲ್ಲಿ ನಾಯಿಯನ್ನು ಬೆನ್ನಟ್ಟಿದ ಮೊಲವನ್ನು ಆತ ಕಂಡು ಸೋಜಿಗಗೊಂಡನಂತೆ! ನಾಲ್ಕುನೂರು ವರ್ಷಗಳ ಹಿಂದೆ, ಅಂದರೆ 1336ರಲ್ಲಿ, ಹಂಪೆಯಲ್ಲಿ ವಿಜಯನಗರ ಸ್ಥಾಪನೆಗೊಂಡಾಗ ಪ್ರಚುರಗೊಂಡ ಆಖ್ಯಾಯಿಕೆಯೇ ಶನಿವಾರವಾಡೆಯ ಸ್ಥಾಪನೆಯ ಸಂದರ್ಭದಲ್ಲೂ ಪುನರಾವರ್ತನೆಯಾದುದು. ಆಖ್ಯಾಯಿಕೆಯ ಕಥಾನಕದಷ್ಟೇ ಸೋಜಿಗದ್ದಾಗಿದೆಯಲ್ಲವೇ!

ಮತ್ತೊಂದು ಬಹು ಪ್ರಚಲಿತ ಆಖ್ಯಾಯಿಕೆಯೆಂದರೆ ಛತ್ರಪತಿ ಶಿವಾಜಿ ಮಹಾರಾಜನಿಗೆ ಭವಾನಿ ಮಾತೆಯು ಖಡ್ಗ ನೀಡಿದ್ದು. ಈಗಲೂ ಅನೇಕ ಸ್ಥಳಗಳಲ್ಲಿ ಭವಾನಿ ಮಾತೆಯು ಶಿವಾಜಿಗೆ ಖಡ್ಗ ಕೊಡುತ್ತಿರುವ ದೃಶ್ಯದ ಚಿತ್ರಗಳನ್ನು ಭಕ್ತಿಭಾವದಿಂದ ಅಭಿಮಾನದಿಂದ ಹಾಕಿರುವುದನ್ನು ಕಾಣುತ್ತೇವೆ. ಶಿವಾಜಿಯ ಕಾಲ 1630ರಿಂದ 1680. ಭವಾನಿ ಮಾತೆ ಶಿವಾಜಿಗೆ ಖಡ್ಗ ಕೊಟ್ಟಿದ್ದಳು ಎಂಬ ಆಖ್ಯಾಯಿಕೆಯಂಥದೇ ಇನ್ನೊಂದು ಆಖ್ಯಾಯಿಕೆ ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದ್ದಿದೆ.

ಬುಕ್ಕ ಭೂಪತಿಯ ಸೊಸೆಯಾದ ಗಂಗಾಂಬಿಕೆಯು 'ಮಧುರಾವಿಜಯಂ' ಎಂಬ ಕಾವ್ಯವನ್ನು ಸಂಸ್ಕೃತದಲ್ಲಿ ರಚಿಸಿದ್ದಾಳೆ. ಕಂಪಣರಾಯನು ಮಧುರೈ ರಾಜ್ಯವನ್ನು ಕಬ

ಅನಂತ ಕಲ್ಲೋಳ

ಳಿಸಿದ್ದ ಸುಲ್ತಾನನ್ನು ಸೋಲಿಸಿ ಮಧುರಾ ನಗರವನ್ನು ಯವನರಿಂದ ಮುಕ್ತಗೊಳಿಸಿದ ವಿಷಯ ಈ ಕಾವ್ಯದಲ್ಲಿದೆ. ಈ ಘಟನೆ 1346ರ ಸುಮಾರಿಗೆ ಸಂಭವಿಸಿತು. ಕಂಪಣರಾಯ ಮಧುರಾನಗರದ ಮೇಲೆ ದಾಳಿ ಮಾಡಲು ಹೊರಟಾಗ ದಾರಿಯಲ್ಲಿ ಒಂದೆಡೆ ತಂಗಿರುತ್ತಾನೆ. ಆ ದಿನ ಆತನ ಕನಸಿನಲ್ಲಿ ಓರ್ವ ದೇವಿ ಪ್ರತ್ಯಕ್ಷಳಾಗಿ ದೈವೀಬಲವಿರುವ ಖಡ್ಗವನ್ನು ಕೊಡುತ್ತಾಳೆ. ಆ ಖಡ್ಗದ ಬಲದಿಂದಲೇ ಕಂಪಣರಾಯ ಆ ಬಲಾಢ್ಯ ಸುಲ್ತಾನನನ್ನು ಸೋಲಿಸಲು ಶಕ್ತನಾಗುತ್ತಾನೆ. ಕಾವ್ಯದಲ್ಲಿ ಈ ಖಡ್ಗ ಪ್ರಧಾನದ ಆಖ್ಯಾಯಿಕೆ ಇಡೀ ಒಂದು ಸರ್ಗವನ್ನೇ ವ್ಯಾಪಿಸಿದೆ. ಶಿವಾಜಿಗೆ ಭವಾನಿ ಖಡ್ಗ ದೊರಕಿದ ಆಖ್ಯಾಯಿಕೆಗಿಂತ ಎರಡುನೂರು ವರ್ಷಗಳ ಪೂರ್ವದಲ್ಲಿ ಇದೇ ಬಗೆಯ ಆಖ್ಯಾಯಿಕೆಯನ್ನು ಕಂಡಾಗ ಇತಿಹಾಸದ ಪುನರಾವರ್ತನೆ ಆಗುತ್ತಿರುತ್ತದೆ ಎಂಬಂತೆ ಆಖ್ಯಾಯಿಕೆಗಳ ಪುನರಾವರ್ತನೆಯೂ ಆಗುತ್ತಿರುತ್ತದೆ ಎಂಬಲ್ಲಿ ಸಂಶಯವುಳಿಯುವುದಿಲ್ಲ.

ಛತ್ರಪತಿ ಶಿವಾಜಿಗೆ ಸಂಬಂಧಿಸಿದಂತೆ ಮತ್ತೂ ಒಂದು ಆಖ್ಯಾಯಿಕೆ ತುಂಬ ಪ್ರಸಿದ್ಧವಾಗಿದೆ. ಆತನ ಓರ್ವ ಸರದಾರ ಕಲ್ಯಾಣದ ಮುಸಲ್ಮಾನ ಸುಬೇದಾರನ ಸುಂದರ ಸೊಸೆಯನ್ನು ಸೆರೆಹಿಡಿದು ತಂದು ಶಿವಾಜಿಗೆ ಒಪ್ಪಿಸಿದಾಗ ಶಿವಾಜಿ ಮಹಾರಾಜನು ಯಾವುದೇ ಬಗೆಯ ಮೋಹ, ಆಮಿಷಗಳಿಗೆ ಬಲಿಯಾಗದೆ, ''ನಮ್ಮ ತಾಯಿಯೂ ನಿಮ್ಮಷ್ಟು ಚೆಲುವಿಯಾಗಿದ್ದರೆ ನಾವೂ ಸುಂದರರಾಗಿರುತ್ತಿದ್ದೆವು'' ಎಂದು ಉದ್ಗರಿಸಿದ್ದನಂತೆ. ಪರನಾರಿಯರನ್ನು ಶಿವಾಜಿಯು ತಾಯಿಯಂತೆ ಕಾಣುತ್ತಿದ್ದನೆನ್ನುವುದನ್ನು ಸಾರಲು ಈ ಆಖ್ಯಾಯಿಕೆಯನ್ನು ಯಾರೋ ಹೊಸೆದಿದ್ದಾರೆ. ಇದಕ್ಕೆ ಯಾವುದೇ ಐತಿಹಾಸಿಕ ಸಾಕ್ಷ್ಯಾಧಾರವಿಲ್ಲ ಎಂಬುದನ್ನು ಈಗ ಎಲ್ಲರೂ ಒಪ್ಪಿದ್ದಾರೆ. ಹೀಗಿದ್ದರೂ ಐತಿಹಾಸಿಕ ಕಾದಂಬರಿಕಾರರಾಗಲಿ ಕವಿಗಳಾಗಲಿ ಈ ಆಖ್ಯಾಯಿಕೆಯ ಸಮ್ಮೋಹಿನಿಯಿಂದ ಇನ್ನೂ ಮುಕ್ತರಾಗಿಲ್ಲ.

ಛತ್ರಪತಿ ಶಿವಾಜಿಯು ಆಗ್ರಾ ಕಾರಾಗೃಹದಿಂದ ಮಿಠಾಯಿಯ ಪೇಠಾರಿಯಲ್ಲಿ (ಹಣ್ಣಿನ ಬುಟ್ಟಿಯಲ್ಲಿ ಎಂದೂ ಹೇಳುತ್ತಾರೆ!) ಅವಿತುಕೊಂಡು ಪಾರಾಗಿ ಬಂದ ಎಂಬ ರೋಮಾಂಚಕ ಸಂಗತಿಯೂ ಆತನ ಚರಿತ್ರೆಯಲ್ಲಿಯ ಒಂದು ಮಹತ್ವದ ವಿಷಯವಾಗಿದೆಯಲ್ಲವೆ? ಆದರೆ ಆ ಸಂಗತಿಯಲ್ಲಿ ಲವಲೇಶದಷ್ಟೂ ಸತ್ಯಾಂಶವಿಲ್ಲವೆನ್ನುವುದು ಈಗ ಸಂಶೋಧನೆಗಳಿಂದ ಸಿದ್ಧವಾಗಿದೆ.

1666ರಲ್ಲಿ ಶಿವಾಜಿ ಮತ್ತು ಆತನ ಮಗ ಸಂಭಾಜಿಯನ್ನು ಔರಂಗಜೇಬ ಆಗ್ರಾ ಕೋಟೆಯಲ್ಲಿ ಬಂಧಿಸಿಟ್ಟಿದ್ದ. ಅಲ್ಲಿಂದ ಶಿವಾಜಿಯು ತನ್ನ ಮಗ ಸಂಭಾಜಿಯೊಂದಿಗೆ ಹಣ್ಣಿನ ಪೇಠಾರಿಯಲ್ಲಿ ಅವಿತು ಪಾರಾಗಿ ಬಂದ ಎಂಬುದು ಕಪೋಲಕಲ್ಪಿತ. ನಿಜವಾಗಿಯೆಂದರೆ ಶಿವಾಜಿಯು ದಕ್ಷಿಣದಲ್ಲಿ ಕಡುವೈರಿಗಳಾದ ಆದಿಲಶಾಹಿ ಮತ್ತು ಕುತುಬಶಾಹಿಗಳೊಂದಿಗೆ ಸೇರುವುದು ಔರಂಗಜೇಬನಿಗೆ ಬೇಕಿರಲಿಲ್ಲ. ಔರಂಗಜೇಬನು ತನ್ನ ಹಿಂದೂ ಸರದಾರ ಜಯಸಿಂಹನ ಮುಖಾಂತರ ಶಿವಾಜಿಯನ್ನು ಕರೆಸಿಕೊಳ್ಳುತ್ತಾನೆ. ಪುರಂದರದ ಯುದ್ಧದಲ್ಲಿ ಶಿವಾಜಿಗೆ ಭಾರಿ ಸೋಲಾಗಿರುತ್ತದೆ. ಈ ಸೋಲಿನ ಹಿನ್ನೆಲೆಯಲ್ಲಿಯೇ ಜಯಸಿಂಹನ ಹೇಳಿಕೆಯಂತೆ ಔರಂಗಜೇಬನ ಭೇಟಿಗೆ ಬರಲು ಶಿವಾಜಿಯು ಒಡಂಬಡಬೇಕಾಗುತ್ತದೆ. ಪುರಂದರದಲ್ಲಾದ ಸೋಲು ಮತ್ತು ಅಪಮಾನಕಾರಕ ಒಪ್ಪಂದದ ದೆಸೆಯಿಂದಲೇ ಶಿವಾಜಿಗೆ ಔರಂಗಜೇಬನ ಭೇಟಿಗೆ ಹೋಗುವುದು ಕ್ರಮಪ್ರಾಪ್ತವಾಗಿರುತ್ತದೆ. ಔರಂಗಜೇಬನ ಓಲಗದಲ್ಲಿ ಶಿವಾಜಿಗೆ ಅಂಥ ಗೌರವವೇನೂ ಸಿಗುವುದಿಲ್ಲ. ತನಗೆ ಔರಂಗಜೇಬನ

ಓಲಗದಲ್ಲಿ ಸೂಕ್ತ ಮರ್ಯಾದೆಯಾಗಲಿಲ್ಲ ಎಂಬುದನ್ನು ಕಂಡ ಶಿವಾಜಿ ಕುಪಿತನಾಗುತ್ತಾನೆ. ಆಗ ಔರಂಗಜೇಬನು ಶಿವಾಜಿಯನ್ನು ಗೃಹಬಂಧನದಲ್ಲಿಡಿಸುತ್ತಾನೆ. ಶಿವಾಜಿಯು ಮತ್ತೆ ದಕ್ಷಿಣಕ್ಕೆ ಮರಳಿದರೆ ತನ್ನ ವೈರಿಗಳಾದ ಆದಿಲಶಾಹಿ, ಕುತುಬಶಾಹಿಗಳ ಜೊತೆಗೆ ಸೇರಿಕೊಳ್ಳಬಹುದೆಂದು ಬಗೆದು ಆತನನ್ನು ಕಾಬೂಲಕ್ಕೆ ಕಳುಹಿಸುವ ಯೋಜನೆಯಲ್ಲಿ ಔರಂಗಜೇಬನಿದ್ದಾಗ ಶಿವಾಜಿಯು ತನ್ನ ಉಳಿದ ಪರಿವಾರವನ್ನು ಮರಳಿ ದಕ್ಷಿಣಕ್ಕೆ ಕಳುಹಿಸುತ್ತೇನೆ ಎಂಬ ನೆಪ ಹೇಳಿ ತಾನೂ ಆ ಪರಿವಾರದೊಡನೆ ಮರಳುತ್ತಾನೆ. ಪ್ರಖ್ಯಾತ ಇತಿಹಾಸ ಸಂಶೋಧಕರಾದ ಶ್ರೀ ಜ.ಟಿ.ಕುಲಕರ್ಣಿ ಎಂಬುವವರು ಪರ್ಶಿಯನ್ ಭಾಷೆಯ ಮೂಲ ಐತಿಹಾಸಿಕ ದಾಖಲೆಗಳನ್ನು ಪರೀಕ್ಷಿಸಿ ಈ ವೃತ್ತಾಂತವನ್ನು ಹೊರಗೆಡವಿದ್ದಾರೆ.

ಬೆಳವಡಿ ಮಲ್ಲಮ್ಮನ ಸಂಗತಿ ಮರಾಠಿ ಇತಿಹಾಸಗಳಲ್ಲಿ, ಕಾದಂಬರಿಗಳಲ್ಲಿ ಇರುತ್ತಿರಲಿಲ್ಲ. ಈಗ ಪುಣೆಯ ವಿದ್ಯಾಪೀಠದ ಪ್ರಾಧ್ಯಾಪಕರೊಬ್ಬರು ಇತ್ತೀಚೆಗೆ ಐತಿಹಾಸಿಕ ದಾಖಲೆಯ ಆಧಾರದ ಮೇಲೆ ಒಂದು ಪುಸ್ತಕವನ್ನು ಪ್ರಕಟಿಸಿದ್ದಾರೆ. ಅನೇಕ ಸಲ ಆದ ಘಟನೆಗಳು ಅಜ್ಞಾನಾಂಧಕಾರದಲ್ಲಿ ಮುಳುಗಿ ಹೋಗುವುದು, ಕಪೋಲಕಲ್ಪಿತ ಆಖ್ಯಾಯಿಕೆಗಳ ನಿಜವಾಗಿ ಘಟಿಸಿದ ಸಂಗತಿಗಳು ಎಂಬ ನಂಬಿಕೆ ದೃಢಮೂಲವಾಗುವುದು ವಿಚಿತ್ರವಲ್ಲವೆ! ●

ಕ್ಯೂ

ಬಹುಜನರ ದಡ್ಡ ಕಲ್ಪನೆಯಲ್ಲಿ ಕ್ಯೂ ಎಂಬುದು ಕೇವಲ ನಿನ್ನೆ ಮೊನ್ನಿನದು ಎಂದಿರಬೇಕೆಂದು ಕಾಣುತ್ತದೆ. ಮೊದಲು ಬಸ್ ಹುಟ್ಟಿತು. ಆಮೇಲೆ ಬಸ್ ಸ್ಟಾಪ್ ಹುಟ್ಟಿತು, ಅನಂತರ ಕ್ಯೂ, ಆ ಸಲುವಾಗಿ ಆಫೀಸು, ಅಂಗಡಿಗಳಿಗೆ ಹೋಗುವವರು ಹುಟ್ಟಿದರು ಎಂದು ತಿಳಿದವರು ಇರಬಹುದು. ಅಮೃತಮಂಥನದ ಕತೆಯ ಸಮಯದಲ್ಲೇ! ಅಮೃತದ ಸೇವನೆಯಲ್ಲಿ ಕ್ಯೂ ಮಹತ್ವದ ಪಾತ್ರವಹಿಸಿತು, ಅನ್ನುವಾಗ ಕ್ಯೂವಿಗೆ ಚಾರಿತ್ರಿಕ ಕಾಲವೇಕೆ, ಪೌರಾಣಿಕ ಯುಗದಲ್ಲೂ ಕ್ಯೂವಿನ ಉಲ್ಲೇಖವಿದೆ.

ಇದೇ ಈ ಕ್ಯೂವಿನ ಆಚರಣೆಯಲ್ಲಿ ಒಂದು ಬಲು ಸ್ವಾರಸ್ಯಮಯ ಘಟನೆ ನಡೆಯಿತು. ತಿಮ್ಮನ ರಸವತ್ತಾದ ಅನುಭವವದು. ಯುಗಾದಿ ಬಂತು. ಮೈಲುದ್ದದ ಕ್ಯೂ ನಿಂತಿದೆ ಅಂಗಡಿಯ ಮುಂದೆ. ಜನ, ನೊಣ ಮುಕುರಿದ ಹಾಗೆ ಸಕ್ಕರೆ ಅಂಗಡಿಗೆ ಮುತ್ತಿತ್ತು. ಶಾಲೆಯ ಮಕ್ಕಳಂತೆ ಬಲು ತಡವಾಗಿ ಎದ್ದು, ಕೈಯಲ್ಲಿ ಬೀಗದ ಕೈಕುಚ್ಚು ಹಿಡಿದು ಆಕಳಿಸುತ್ತ ಬಂದ ತಿಮ್ಮ ಹನುಮನ ಬಾಲದಂತಿದ್ದ ಕ್ಯೂವನ್ನು ಕಂಡು ಅಚ್ಚರಿಪಡುತ್ತಿದ್ದಂತೆ ಮೊಣಕೈಯಿಂದ ತಿವಿದು ಹಿಂದಕ್ಕೆ ತಳ್ಳಿದರು. ಮುಂದಕ್ಕೆ ಬಿಡುವ ಭೂಪ ಯಾರೂ ಇಲ್ಲ. ಪಾಪ! ತಿಮ್ಮ ನಿಮ್ಮಿಷ್ಟ ಎಂದು ಕ್ಯೂವಿನ ಕೊನೆಯಲ್ಲಿ ನಿಂತೇ ಬಿಟ್ಟ. ಗಂಟೆಗಟ್ಟಲೆ ಜನ ಕಾದಿದ್ದೂ ಆಯಿತು. ಅಂಗಡಿ ಬಾಗಿಲು ತೆರೆಯಲಿಲ್ಲ. ಜನರಲ್ಲಿ ಗುಜುಗುಜು ಆರಂಭವಾಗಿ, "ಯಾರು ಅಂಗಡಿಯಾತ ಹಿಡಿದು ತನ್ನಿ" ಅನ್ನುವಾಗ ತಿಮ್ಮ ಮೆಲ್ಲನೆ ಬಾಯ್ಬಿಟ್ಟ - "ನಾನೇನು ಮಾಡಲಿ ಸ್ವಾಮಿ, ಅಂಗಡಿಯ ಸನಿಯವ್ರ ಬಿಡಲೊಲ್ಲರು." ಹಲ್ಲು ಕಿರಿಯುತ್ತಾ ಅಂಗಡಿಯೆಡೆ ನಡೆದ ತಿಮ್ಮ!!

(ಬೀchiಯವರ ನಗೆ ಬರಹದಿಂದ)

ಸಂಗ್ರಹ: ರಾಜೇಶ್ವರಿ ಇಂದಾಜೆ

STATEMENT ABOUT OWNERSHIP AND OTHER PARTICULARS ABOUT MONTHLY KASTURI TO BE PUBLISHED IN THE FIRST ISSUE EVERY YEAR AFTER THE LAST DAY OF FEBRUARY.

FORM IV
(See Rule 8)

1. Place of Publication	: Hubli
2. Periodicity of its Publication	: Monthly
3. Printer's Name	: V.G.Vaidya
Whether citizen of India?	: Yes
Address	: Samyukta Karnataka, Koppikar Road, Hubli - 580020
4. Publisher's Name	: V.G.Vaidya
Whether citizen of India?	: Yes
Address	: Samyukta Karnataka, Koppikar Road, Hubli - 580020
5. Editor's Name	: R.A.Upadhya
Whether citizen of India?	: Yes
Address	: Samyukta Karnataka, Koppikar Road, Hubli - 580020
6. Names and Address of individuls who own the newspapers and partners or share-holders holding more than one percent of the total capital.	: Loka Shikshana Trust, Koppikar Road, Hubli Board of Trustees: Sri B.D.Jatti, Chairman Sri A.R.Badarinarayan, Trustee, Sri S.P.Bhat, Trustee, Sri G.M.Patil, Trustee

I, V.G.Vaidya hereby declare that the particulars given above are true to the best of my knowledge and belief.

HUBLI
DATED: 1.3.1990

V.G.VAIDYA
Signature of Publisher

ಇನ್ನು ಇಪ್ಪತ್ತು ವರ್ಷಗಳಲ್ಲಿ ಜಪಾನ್ ಹೀಗಿರುತ್ತದೆ

ಹರೀಶ್ ಪುತ್ತೂರಾಯ

(ಸಾಧಾರ)

ಮನೆಗೆಲಸಕ್ಕಾಗಿ ಯಂತ್ರಮಾನವ, ಸ್ವಂತದ ಉಪಯೋಗಕ್ಕಾಗಿ ಗಣಕಯಂತ್ರ, ಇದೂ ಅಲ್ಲದೆ ಎಲಿವೇಟರ್, ಫ್ಯಾಕ್ಸಿಮೈಲ್ ಸಂಪರ್ಕ ವ್ಯವಸ್ಥೆ ಇವುಗಳೆಲ್ಲ ಶ್ರೀಸಾಮಾನ್ಯನಿಗೆ ಎಟುಕಬಹುದಾದ ವಸ್ತುಗಳೇ? ಗೃಹೋಪಯೋಗಿ ಸಲಕರಣೆಗಳಾಗಿ ಸಾಮಾನ್ಯ ಕಾರ್ಮಿಕನೊಬ್ಬನ ಮನೆಯನ್ನು ಅಲಂಕರಿಸಬಹುದೇ?

ನಮ್ಮ-ನಿಮ್ಮೆಲ್ಲರ ಕಲ್ಪನೆಗೂ ಹತ್ತಿರವೆನಿಸದ ಮೇಲಿನ ಪ್ರಶ್ನೆಗೆ ಉತ್ತರವೆಂಬಂತೆ ಈ ಜಗತ್ತಿನ ಒಂದು ದೇಶ ಹೌದೆನ್ನುತ್ತದೆ. ಅಷ್ಟು ಮಾತ್ರವಲ್ಲ, ತನ್ನ ಕಲ್ಪನೆಗಳೆಲ್ಲಾ ಸಾಕಾರಗೊಳ್ಳಲು ಯೋಜನೆಯೊಂದನ್ನು ಅನುಷ್ಠಾನದ ಮಟ್ಟಕ್ಕೂ ತರುತ್ತಲಿದೆ. ಜಗತ್ತಿನ ಪುಟ್ಟ ರಾಷ್ಟ್ರಗಳ ಗುಂಪಿಗೆ ಸೇರುವ ಜಪಾನ್ ದೇಶ ಇಪ್ಪತ್ತನೆಯ ಶತಮಾನದಲ್ಲಿನ ಕೊನೆಯ ದಶಕದಲ್ಲಿ ನಿಂತು ಇಪ್ಪತ್ತೊಂದನೆಯ ಶತಮಾನದ ಆರಂಭಕ್ಕೆ ನೀಡಿರುವ ತನ್ನ ದೇಶದ ಚಿತ್ರಣವಿದು. ಮುಂದಿನ ಇಪ್ಪತ್ತು ವರ್ಷಗಳಲ್ಲಿ ಅಲ್ಲಿ ಬೆಳವಣಿಗೆಯಾಗಲಿರುವ ತಾಂತ್ರಿಕ ಪ್ರಗತಿ, ಸಾಮಾಜಿಕ ಜೀವನದ ಏರುಮುಖ, ಮತ್ತು ಅಲ್ಲಿನ ದೈನಂದಿನ ಬದುಕಿನ ಅವಿಭಾಜ್ಯ ಅಂಗವಾಗಲಿರುವ ಇಲೆಕ್ಟ್ರಾನಿಕ್ ಸಾಧನಗಳ ನಿರ್ಮಾಣದ ಬಗೆಗೆ ಆ ದೇಶ ಈಗಾಗಲೆ ಯೋಜನೆಗಳನ್ನು ಹಾಕಿಕೊಂಡು ಜನಸಾಮಾನ್ಯರ ಅರಿವಿಗಾಗಿ ಅದನ್ನು ಪ್ರಕಟಿಸಿಯೂ ಬಿಟ್ಟಿದೆ.

ಕ್ರಿಸ್ತಶಕ 2010ರ ವೇಳೆಗೆ ಜಪಾನಿನ ಅರ್ಧಕ್ಕರ್ಧ ಕುಟುಂಬಗಳು ವಿಡಿಯೋ ಟೆಲಿಫೋನ್, ಫ್ಯಾಕ್ಸಿಮೈಲ್ ಸೌಲಭ್ಯ, ಕಂಪ್ಯೂಟರ್ ಮೂಲಕ ಸಂಪರ್ಕ ವ್ಯವಸ್ಥೆ, ಹೈ ಡೆಫಿನಿಷನ್ ಟೆಲಿವಿಜನ್ ಸೆಟ್ಟುಗಳು ಮುಂತಾದ ಪರಿಕರಗಳನ್ನು ಹೊಂದಲಿವೆ. ಇಂದು ಅತ್ಯಾಧುನಿಕವಾದ ಆಡಿಯೋ ವಿಜುವಲ್ ಸೆಟ್ಟುಗಳು ಪ್ರತಿಯೊಂದು ಮನೆಯನ್ನು

ಅಲಂಕರಿಸಿವೆ ನಮ್ಮಲ್ಲಿನ ರೇಡಿಯೋಗಳ ಮಾದರಿಯಲ್ಲಿ. ಜಪಾನಿನ ವಿಜ್ಞಾನ ಮತ್ತು ತಾಂತ್ರಿಕ ಇಲಾಖೆಯ ಮಹಾನಿರ್ದೇಶಕರ ಸಲಹಾ ಮಂಡಳಿಯು ಕೆಲವು ಸಮಯದ ಹಿಂದೆ ಬಿಡುಗಡೆ ಮಾಡಿದ ವರದಿಯಂತೆ ಕ್ರಿ.ಶ.2010ರ ವೇಳೆಗೆ ಪ್ರತಿಯೊಂದು ಕುಟುಂಬವೂ ಅತ್ಯಾಧುನಿಕ ಹಾಗೂ ಅತ್ಯುಚ್ಚ ಶ್ರೇಣಿಯ ತಾಂತ್ರಿಕ ಗೃಹೋಪಯೋಗಿ ಸಾಮಗ್ರಿಗಳನ್ನು ಒಳಗೊಂಡಿರುತ್ತದೆ.

ಆ ಸಮಿತಿಯು ನಡೆಸಿದ ಸಮೀಕ್ಷೆಯೊಂದರ ಪ್ರಕಾರ ಕೆಲವಿನ್ನೂ ಸಂಶೋಧನೆಯ ಹಂತದಲ್ಲಿಯೇ ಇರುವ ಉಪಕರಣಗಳನ್ನು ಒಳಗೊಂಡಂತೆ ವಿಡಿಯೋ, ಟೆಲಿಫೋನ್, ಡಿಶ್‌ವಾಶರ್ (ಪಾತ್ರೆ ಸ್ವಚ್ಛಗೊಳಿಸುವ ಯಂತ್ರ) ಹೋಂ ಕಂಪ್ಯೂಟರ್ ಮೊದಲಾದ ಹದಿನಾರು ಬಗೆಯ ಗೃಹೋಪಯೋಗಿ ಸಾಮಗ್ರಿಗಳು ಜಪಾನಿನ ಪ್ರತಿ ಮನೆಯನ್ನು ಅವುಗಳು ಮುಂಬರುವ ದಿನಗಳಲ್ಲಿ - ಮಾರುಕಟ್ಟೆ ಪ್ರವೇಶಿಸುತ್ತಿದ್ದಂತೆಯೇ ಎಲ್ಲೆಡೆ ವ್ಯಾಪಕಗೊಳ್ಳುವ ಸಲುವಾಗಿ ಅಗತ್ಯವೆನಿಸುವ ನಿಯಮಗಳನ್ನು ರೂಪಿಸಿ, ಈಗ ಐಷಾರಾಮಿ ವಸ್ತುಗಳೆನ್ನಬಹುದಾದ ಪಟ್ಟಿಯಲ್ಲಿದ್ದರೆ ಅಂತಹ ವಸ್ತುಗಳು - ನಾಗರಿಕರ ಕೈಗೆಟಕುವಂತಾಗಲು ಕ್ರಮಗಳನ್ನು ಕೈಕೊಳ್ಳಲಾಗುತ್ತಿದೆ.

ಇಂದು ಒಂದೇ ಸಮನೆ ಬೆಳವಣಿಗೆ ಹೊಂದುತ್ತಲೇ ಇರುವ ಜಪಾನು ತನ್ನ ಜನಸಂಖ್ಯೆ ಬೆಳೆಯುತ್ತಿರುವುದನ್ನೂ ಗಮನಿಸಿ ಅದರಿಂದುಂಟಾಗುವ ಸಮಸ್ಯೆಗಳಿಗೆ ಪರಿಹಾರ ಸೂತ್ರವನ್ನು ಕಂಡುಕೊಂಡಿದೆ. ಜನಸಂಖ್ಯೆಗೆ ಅನುಗುಣವಾಗಿ ವಿವಿಧೋದ್ದೇಶ ಶುಶ್ರೂಷಾ ಕೇಂದ್ರಗಳು ತಲೆಎತ್ತಲಿವೆ. ಇಂದಿನ ಸನ್ನಿವೇಶದಲ್ಲಿ ವೈದ್ಯಕೀಯ ವೆಚ್ಚ ದುಬಾರಿ ಎನಿಸುವ ಕಾರಣದಿಂದ ಸುಲಭ ದರದ ಕಿಟ್‌ಗಳ ನಿರ್ಮಾಣಕ್ಕೆ ಸರಕಾರ ಉತ್ತೇಜನ ನೀಡಿದೆಯಂತೆ. ಹೀಗಾಗಿ ಅಲ್ಲಿ ವಿವಿಧ ಬಗೆಯ ವೈದ್ಯಕೀಯ ಕಿಟ್‌ಗಳು ಕೈಗೆಟಕುವ ಬೆಲೆಯಲ್ಲಿ ಮಾರುಕಟ್ಟೆಯನ್ನು ಪ್ರವೇಶಿಸಲಿವೆ. ಸಾಮಾನ್ಯವಾಗಿ ಜಪಾನಿನ ಕುಟುಂಬವೊಂದರ ಮಾಸಿಕ ವರಮಾನ 1985ರಲ್ಲಿ 2,800 ಡಾಲರಗಳಷ್ಟು ಇದ್ದದ್ದು 2010ರ ವೇಳೆಗೆ 3,800 ಡಾಲರ್‌ಗಳಷ್ಟಾಗಿ ಮಾತ್ರ ಏರಲಿದೆ. ಆದ್ದರಿಂದ ಬಲು ದುಬಾರಿಯಾಗಬಹುದಾದ ವೈದ್ಯಕೀಯ ವೆಚ್ಚವನ್ನು ನಿಯಂತ್ರಿಸಲು ಮೇಲಿನ ಸೂತ್ರವನ್ನು ಅದು ರೂಪಿಸಿದೆ.

ಅಲ್ಲಿನ ಸರಕಾರ ಮೊದಲಿಗೆ ಡಿಶ್‌ವಾಶರ್, ಅಡುಗೆಯಂತ್ರ ಮೊದಲಾದ ಮಾನವ ಶ್ರಮವನ್ನು ಉಳಿಸುವ ಯಂತ್ರಗಳನ್ನು ನಿರ್ಮಿಸಲು ಒತ್ತುಕೊಟ್ಟು, ಮುಂದೆ ವಿಡಿಯೋ, ಟೆಲಿಫೋನ್, ಹೈಡೆಫಿನಿಷನ್ ಟಿ.ವಿ.ಸೆಟ್ಟುಗಳು ಹಾಗೂ ಇತರೆ ಕೆಲವು ಯಂತ್ರಗಳನ್ನು ತಯಾರಿಸಲು ಆದ್ಯತೆಯನ್ನೀಯುವದಂತೆ.

2010ರ ಸುಮಾರಿಗೆ ಜಪಾನಿನ ಶೇಕಡಾ 85ರಷ್ಟು ಮನೆಯೊಡೆಯರು ಡಿಶ್‌ವಾಶರ್ ಖರೀದಿಸಿರುತ್ತಾರಂತೆ. ಇಂದು ಶೇಕಡಾ ಹತ್ತರಷ್ಟು ಇಲ್ಲದ ಇಂತಹ ಯಂತ್ರಗಳು ಆಗ ಎಲ್ಲೆಡೆ ಕಾಣಸಿಗುತ್ತವೆ. ಇನ್ನೂ ಸಂಶೋಧನೆಯಲ್ಲಿರುವ ಹೈಡೆಫಿನಿಷನ್ ಟಿ.ವಿ.ಸೆಟ್ಟುಗಳು ಶೇಕಡಾ ಐವತ್ತಕ್ಕೂ ಹೆಚ್ಚು ಮನೆಗಳಲ್ಲಿ ರಾರಾಜಿಸಲಿವೆ. ಇವುಗಳ ಜೊತೆಯಲ್ಲಿಯೇ ಉಪಗ್ರಹದ ಮೂಲಕ ಪ್ರಸಾರ ವ್ಯವಸ್ಥೆ ಮತ್ತು ಕೇಬಲ್ ಟೆಲಿವಿಷನ್ ಕೂಡಾ ಮತ್ತಷ್ಟು ಜನಪ್ರಿಯವಾಗಬಹುದೆಂದು ಆ ಸಮಿತಿ ಅಂದಾಜಿಸುತ್ತದೆ.

'ವ್ಯಕ್ತಿಯಿಂದ ಸಮಾಜ' ಎಂಬ ಸಿದ್ಧಾಂತದಂತೆ ದೇಶದ ಒಟ್ಟು ಬೆಳವಣಿಗೆಯಲ್ಲಿ ಕುಟುಂಬದ ಪಾತ್ರವನ್ನು ಪ್ರಮುಖ ಅಂಶವನ್ನಾಗಿ ಆ ವರದಿಯಲ್ಲಿ ಪರಿಗಣಿಸಲಾಗಿದ್ದು ಆ ಪ್ರಕಾರ ಆರೋಗ್ಯ, ಶಿಕ್ಷಣ ಮತ್ತು ಸಂಪ

ಕ್ರಿ.ಶ. 2010ರಲ್ಲಿನ ಅಂದಾಜು ವಿವರ	
ಇಲೆಕ್ಟ್ರಾನಿಕ್ ಗೃಹೋಪಯೋಗಿ ವಸ್ತುಗಳು	ಪ್ರಸರಣಾ ಸಂಖ್ಯೆ (ಶೇಕಡಾವಾರು)
1) ಡಿಶ್‌ವಾಶರ್	85%
2) ಆಟೋಮ್ಯಾಟಿಕ್ ವಾಷಿಂಗ್ ಮಷಿನ್	65%
3) ವಿಡಿಯೋ ಟೆಲಿಫೋನ್	50%
4) ಹೋಂ ಕಂಪ್ಯೂಟರ್	50%
5) ಹೈ ಡೆಫಿನಿಷನ್ ಟಿ.ವಿ.	50%
6) ಫ್ಯಾಸಿಮೈಲ್	50%
7) ಸ್ವಯಂ ಚಾಲಿತ ಅಡುಗೆಯಂತ್ರ	45%
8) ಪಾನೀಯ ತಯಾರಿಸುವ ರೋಬಾಟ	45%
9) ವಾತಾವರಣ ನಿಯಂತ್ರಿಸುವ ಸಾಧನ	25%
10) ಆರೋಗ್ಯ ಕಾಪಾಡಿಕೊಳ್ಳುವ ಸಾಧನ	25%
11) ಎಲಿವೇಟರ್	10%

ಹನದತ್ತ ಹೆಚ್ಚು ಗಮನಹರಿಸಲಾಗಿದೆ. ಅಲ್ಲಿನ ಕಾರ್ಮಿಕರು ಹೆಚ್ಚು ವೇತನ ಪಡೆಯುವುದರ ಜೊತೆಗೆ ಐದು ದಿನಗಳ ವಾರವನ್ನು ಹೆಚ್ಚು ಖುಷಿಯಿಂದ ಅನುಭವಿಸಬಲ್ಲರು. ಜಪಾನಿನ ನಾಗರಿಕರು ಇಂತಹ ಹೈಟೆಕ್ ಗೃಹೋಪಯೋಗಿ ವಸ್ತುಗಳನ್ನು ಪಡೆಯಲು ಆಸಕ್ತಿತೋರುವುದರಿಂದ ಅವರಲ್ಲಿ ಕ್ರಿಯಾಶೀಲತೆ, ಮತ್ತು ಕೆಲಸದ ಉತ್ಸಾಹವೂ ಬೆಳೆಯಬಹುದೆಂದು ವರದಿ ಹೇಳುತ್ತದೆ. ಕಂಪ್ಯೂಟರ್ ಮತ್ತು ಉಳಿದ ಸಂಪರ್ಕ ಸಾಧನಗಳಿಂದಾಗಿ ಮನೆಯೊಳಗೆ ಒಂದೆಡೆ ಕುಳಿತು ಕಾರ್ಯ ನಿರ್ವಹಿಸಬಹುದಾದ್ದರಿಂದ ದೈಹಿಕ ಶ್ರಮದ ಉಳಿತಾಯವೂ ಮಾನವನ ದಕ್ಷತೆ ಹೆಚ್ಚಿಸಲು ಕಾರಣವಾಗುವುದರಿಂದ ಈ ಉಪಕರಣಗಳಿಗೆ ಭಾರಿ ಬೇಡಿಕೆ ಬರುವುದೆಂದು ಸಲಹಾ ಮಂಡಳಿ ಹೇಳಿದೆ. ಅಲ್ಲಿ ಇನ್ನು ಮುಂದೆ ಮನೆ ಕಚೇರಿಗಳೆರಡೂ ಒಂದೇ ಆದರೂ ಅಚ್ಚರಿ ಪಡಬೇಕಿಲ್ಲ.

ಮುಂದಿನ 20 ವರ್ಷಗಳ ತರುವಾಯ ಜಪಾನಿನಲ್ಲಿ ಉತ್ಪಾದಿಸಿ ಮಾರಾಟ ಮಾಡಲ್ಪಡುವ ಗೃಹೋಪಯೋಗಿ ವಸ್ತುಗಳ ಮೌಲ್ಯವನ್ನೂ ಸಲಹಾ ಮಂಡಳಿಯು ಅಂದಾಜಿಸಿ ನಮೂದಿಸಿದೆ. ಕನಿಷ್ಟವಾಗಿ ಸುಮಾರು 680 ಕೋಟಿ ಡಾಲರುಗಳಷ್ಟಾದರೆ ಗರಿಷ್ಟವಾಗಿ ಸಾವಿರ ಕೋಟಿ ಡಾಲರುಗಳಷ್ಟಾಗಬಹುದು. 1990ರ ವರ್ಷದಲ್ಲಿ ವಿಕ್ರಯಿಸಲ್ಪಟ್ಟ ತಾಂತ್ರಿಕ ಗೃಹೋಪಯೋಗಿ ವಸ್ತುಗಳ ಮೌಲ್ಯ ಸುಮಾರು 130 ಕೋಟಿ ಡಾಲರುಗಳಷ್ಟು. ಅಂದರೆ ಇನ್ನು ಇಪ್ಪತ್ತು ವರ್ಷಗಳಲ್ಲಿ ಜಪಾನು ತನ್ನ ಬೆಳವಣಿಗೆಯನ್ನು ಏಳು ಪಟ್ಟು ಹೆಚ್ಚಿಸಿಕೊಂಡಂತಾಗುತ್ತದೆ.

ಜಪಾನಿನ ಧುರೀಣರು ತಮ್ಮ ದೇಶವನ್ನು 21ನೇ ಶತಮಾನಕ್ಕೆ ಕೊಂಡೊಯ್ಯಲು ಯತ್ನಿಸುತ್ತಿರುವ ಸ್ಥೂಲ ಚಿತ್ರಣ ಇದು.

ಹೌದು ಆದರೆ ಈ ದಿಶೆಯಲ್ಲಿ ನಾವೇನು ಮಾಡುತ್ತಿದ್ದೇವೆ? ●

ಇದು ಮತ್ತೊಂದು ಕೈಗಾ?

ತೆಹರಿ ಜಲಾಶಯ

ಸಮಸ್ಯೆಯ ಸುಳಿಯಲ್ಲಿ

ಜಿ.ಆರ್.ರಂಗಸ್ವಾಮಯ್ಯ

ನೂರಾರು ಕೋಟಿ ರೂಪಾಯಿಗಳು ಈಗಾಗಲೇ ಖರ್ಚಾಗಿರುವ ಪರಸ್ಪರ ವಿರೋಧಾಭಾಸಗಳುಳ್ಳ ವರದಿಗಳಿಂದ ಆವೃತ್ತವಾದ ಉತ್ತರ ಪ್ರದೇಶದ ತೆಹರಿ ಜಲಾಶಯ ಯೋಜನೆ ಸಮಸ್ಯೆಯ ಸುಳಿಯಲ್ಲೇ ಮುಂದುವರಿಯುತ್ತಿದೆ. ಹರಿದ್ವಾರದಿಂದ 30-35 ಕಿ.ಮೀ. ದೂರದಲ್ಲಿ ನಿರ್ಮಿಸಲಾಗುವ ಈ ಜಲಾಶಯದಿಂದ ಪಟ್ಟಿ ರೈಕಾ, ಧರ್‌ಮಂಡಲ, ಫೈಗುಲ್, ಬಾರ್‌ಕೆಟ್ ಮತ್ತು ತೌಲಧರ್ ಬ್ಲಾಕಿಗೆ ಸೇರಿದ ಹಳ್ಳಿಗಳು ಅಪಾಯಕ್ಕೆ ಸಿಲುಕಲಿವೆ. ಅಸೀನಾ ಹಳ್ಳಿಯಿಂದ ಭಿಲಂಗಾಣ ಕಣಿವೆಯು ತೆಹರಿವರೆಗಿನ ಹಾಗೂ ತೆಹರಿಯಿಂದ ಭಾಗೀರಥಿಯ ಧರಾಸುವರೆಗೆ ಇರುವ ಜನರು ಅಪಾಯಕ್ಕೀಡಾಗಲಿದ್ದಾರೆ. ಈ ಆಯಕಟ್ಟಿನ ಸ್ಥಾನದಲ್ಲಿ ಸುಮಾರು 145 ಹಳ್ಳಿಗಳಿವೆ. ಈ ಕಣಿವೆಗಳು ಕಡಿದಾಗಿವೆ; ದುರ್ಬಲ ಬಂಡೆಗಲ್ಲುಗಳನ್ನು ಹೊಂದಿವೆ. ಈ ಬಂಡೆಗಲ್ಲುಗಳು ನೀರನ್ನು ಹೀರಿಕೊಂಡು ಕುಸಿದು ಬೀಳುವ ಸಾಧ್ಯತೆಗಳಿವೆ. ಜಲಾಶಯದ ನೀರಿನ ಒತ್ತಡ, ಅದರಲ್ಲಿ ತುಂಬಿಕೊಳ್ಳುವ ಹೂಳು ಮಣ್ಣು ಅಕ್ಕಪಕ್ಕದ ಹಳ್ಳಿಗಳಿಗೆ ಗಂಡಾಂತರಕಾರಿಯಾಗಲಿವೆ. ಫಲವತ್ತಾದ ಮಣ್ಣು ಕೊಚ್ಚಿ ಹೋಗಿ ಹಾಳಾಗುತ್ತದೆ, ಪರಿಸರದ ಸಮತೋಲನ ಹಾಳಾಗುತ್ತದೆ, ಕೊನೆಗೆ ಅಲ್ಲಿನ ಜನರ ಪ್ರಾಣಕ್ಕೇ ಕಂಟಕಪ್ರಾಯವಾಗುತ್ತದೆ.

ಸಮುದ್ರ ಮಟ್ಟದಿಂದ 1900 ಅಡಿ ಎತ್ತರದಲ್ಲಿರುವ ಈ ಬೆಟ್ಟಗುಡ್ಡಗಳ ಶ್ರೇಣಿ ಹಂತಹಂತವಾಗಿ ಜಲಾಶಯದ ಪಾಲಾಗುತ್ತದೆ. ಈ ಬಗ್ಗೆ ಭಾರತದ ಭೂಗರ್ಭಶಾಸ್ತ್ರ ಸಮೀಕ್ಷೆಯ ಹಿಂದಿನ ಮಹಾನಿರ್ದೇಶಕ ಎಸ್.ಪಿ.ನೌಟಿಯಾಲ್ ಹಾಗೂ ದೆಹಲಿ ವಿಶ್ವವಿದ್ಯಾಲಯದ ಭೂಗರ್ಭಶಾಸ್ತ್ರದ ಹಿಂದಿನ ಮುಖ್ಯಸ್ಥರಾದ ಶ್ರೀ ಸಕ್ಲಾನಿ ಎಚ್ಚರಿಕೆ ನೀಡಿದ್ದಾರೆ.

ಜಲಾಶಯ ನಿರ್ಮಿಸಬೇಕೆಂದಿರುವ ಈ ಸ್ಥಾನ ಭೂಕಂಪಕ್ಕೆ ತುತ್ತಾಗುವಂಥದ್ದು. ಇಲ್ಲಿ ಭೂಕಂಪದ ಅಲೆಗಳನ್ನು ಗುರುತಿಸಲಾಗಿದೆ. ಶ್ರೀಮತಿ ಇಂದಿರಾಗಾಂಧಿಯವರು ಪ್ರಖ್ಯಾತ ಪರಿಸರ ತಜ್ಞ ಎಸ್.ಕೆ.ರಾಯ್ ಅವರನ್ನು ಈ ಬಗ್ಗೆ ಕಾರ್ಯ ತಂಡವೊಂದನ್ನು ರೂಪಿಸಲು ನೇಮಕ ಮಾಡಿದರು. ಈ ಕಾರ್ಯ ತಂಡ

1980ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಈ ವರದಿಯಲ್ಲಿ ಭಾಗೀರಥಿಗೆ ಅಡೆ-ತಡೆಯಾಗಿರುವುದರಿಂದ ಸಂಭವಿಸಬಹುದಾದಂಥ ಅಪಾಯವನ್ನೂ ಮನಗಾಣಿಸಲಾಗಿದೆ.

ಭಾಗೀರಥಿ ಮತ್ತು ಭಿಲಂಗಾಣ ನದಿಗಳಿಂದ ಉಂಟಾದ ಭೂಕುಸಿತವನ್ನು ಸರಕಾರದ ಗಮನಕ್ಕೆ ತರಲಾಗಿದೆ. ಭಿಲಂಗಾಣ ಕಣಿವೆಯು ನಂದಗಾವ, ಖಿಂಡ್, ಗಡೋಲಿಯಾ ಅಪಾಯದ ಅಂಚಿನಲ್ಲಿವೆಯೆಂಬುದನ್ನೂ ತಿಳಿಸಲಾಗಿದೆ.

ಈ ಸಮಸ್ಯೆಯ ಅಧ್ಯಯನಕ್ಕಾಗಿ ಡೆಹರಾಡೂನಿನ Wadia Institute of Himalayan Geology ಅನ್ನು ನೇಮಿಸಲಾಯಿತು. ಸರಕಾರ ಈ ಯೋಜನೆಯನ್ನು ಕಾರ್ಯಗತಗೊಳಿಸುವಾಗ ಅಲ್ಲಿ ತೊಂದರೆಗೊಳಗಾಗಬಹುದಾದ ಹಳ್ಳಿಗಳನ್ನು ಕಡೆಗಣಿಸಿರುವುದು ಈ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. 1980ರ ಅಕ್ಟೋಬರಿನಷ್ಟು ಹಿಂದೆಯೇ ಹೈದರಾಬಾದಿನ National Geophysical Research Institute. ತನ್ನ ವರದಿಯಲ್ಲಿ "ಅಲ್ಲಿ ಜಲಾಶಯ ನಿರ್ಮಿಸಿದರೆ 550 ಮೀಟರ್ ಎತ್ತರದಲ್ಲಿ 260 ಮೀಟರ್ ದಪ್ಪದ ನೀರಿನ ಒತ್ತಡ ಅಪಾಯಕಾರಿ, ಅಲ್ಲಿನ ದುರ್ಬಲ ಬಂಡೆಗಲ್ಲುಗಳು ಕುಸಿದು ಬೀಳುವ ಸಾಧ್ಯತೆಯಿದೆ; ಅರಣ್ಯನಾಶವಾಗಿ ಈಗಾಗಲೇ ದುರ್ಬಲಗೊಂಡಿರುವ ಕಣಿವೆಗಳು ಮತ್ತಷ್ಟು ದುರ್ಬಲಗೊಂಡು ಹಾನಿಗೊಳಗಾಗುತ್ತವೆ" ಎಂದು ತಿಳಿಸಿದೆ.

ಆದರೆ ಬರಿಗಣ್ಣಿಗೇ ಗೋಚರವಾಗುವ ಅಲ್ಲಿನ ಕಣಿವೆಗಳ ದುಸ್ಥಿತಿ ಸರಕಾರದ ಕಣ್ಣಿಗೆ ಬೀಳುತ್ತಿಲ್ಲ. ಜಲಾಶಯ ನಿರ್ಮಾಣದ ಪರವಹಿಸುವ ಹಿತಾಸಕ್ತಿಗಳ ಪ್ರಕಾರ ಈ ಕಣಿವೆಯ ಪ್ರದೇಶ ಸ್ಥಿರವಾಗಿದೆ, ಕೆಳಗಿನಿಂದ ಮೇಲಿನವರೆಗೆ ದಟ್ಟ ಕಾಡುಗಳಿಂದ ತುಂಬಿದೆ. ತಮ್ಮ ತಾಳಕ್ಕೆ ಕುಣಿಯುವಂಥ ತಜ್ಞರನ್ನು ಮತ್ತೆ ನೇಮಿಸಿ (Study of Stability of Reservoir of Tehri Dam) ಅವರಿಂದ ಪ್ರಮಾಣಪತ್ರ ಗಿಟ್ಟಿಸಿ ಕೆಲಸ ಮುಂದುವರಿಸಿದೆ. ಈ ಅಧ್ಯಯನ ತಂಡವೂ ಭಾಗೀರಥಿ ನದಿಯ ಎಡ ದಂಡೆಯಲ್ಲಿನ ಉತ್ತರ ಅಲ್ಮೋರಾ ಪ್ರದೇಶದ ಥರಾಸು ಉತ್ತರ ಕಾಶಿ ರಸ್ತೆ ಭೂಕುಸಿತಕ್ಕೊಳಗಾಗಬಹುದೆಂದು ವರದಿ ಮಾಡಿದೆ. ಇಂಥ ಪರಸ್ಪರ ವಿರೋಧಾಭಾಸಗಳಿಂದ ತುಂಬಿದ ವರದಿಗಳ ಆಧಾರದ ಮೇಲೆ ಕಾರ್ಯ ಮುಂದುವರಿದಿದೆ. ಕೇವಲ ಕಾಗದದ ಮೇಲೆ ಈ ಕಣಿವೆಗಳನ್ನು ಭದ್ರಪಡಿಸಿ ಆ ಸ್ಥಳಕ್ಕೆ ಬಹುಶಃ ಭೇಟಿ ನೀಡದೆ ಕಾರ್ಯ ಮುಂದುವರಿಸಲಾಗಿದೆ. ಇದೇ ವರದಿಯ ಕೊನೆಯಲ್ಲಿ ಹೆಲಿಕಾಪ್ಟರಿನಿಂದ ತೆಗೆದ ಛಾಯಾಚಿತ್ರಗಳ ಕೊರತೆಯಿಂದಾಗಿ ಈ ಪ್ರದೇಶದ ವ್ಯಾಪಕ ವಿಶ್ಲೇಷಣೆ ಸಾಧ್ಯವಾಗಿಲ್ಲ ಎಂದೂ ಹೇಳಲಾಗಿದೆ.

ರಾಜ್ಯಸಭೆಯಲ್ಲಿ 1987ರ ಮಾರ್ಚ್‌ನಲ್ಲಿ ಈ ಕಾರ್ಯತಂಡದ ವರದಿಯ ಬಗ್ಗೆ ಹಾಕಲಾದ ಪ್ರಶ್ನೆಯೊಂದಕ್ಕೆ ಅಂದಿನ ಕೃಷಿ ಮಂತ್ರಿ, ಭಜನ್‌ಲಾಲ್ ಉತ್ತರಿಸುತ್ತಾ ಜಲಾಶಯದ ಕೆಲವು ಕಣಿವೆ ಪ್ರದೇಶಗಳು ಅಸ್ಥಿರ, ಭಾಗೀರಥಿ ಕಣಿವೆಯಲ್ಲಿ ವಿಶೇಷತಃ ಹೆಚ್ಚು ಅರಣ್ಯನಾಶವಾಗಿದೆ, ಈ ಯೋಜನೆ ಭೂಕಂಪ ಸಂಭವಿಸಬಹುದಾದ ವಲಯದಲ್ಲಿ ಕಾರ್ಯಗತವಾಗಲಿದೆ, ಜಲಾಶಯ ಕಾರಣಾಂತರಗಳಿಂದ ಒಡೆದರೆ ಋಷಿಕೇಶ ಮತ್ತು ಹರಿದ್ವಾರದ ಜನರೂ ಅಪಾಯಕ್ಕೆ ಸಿಲುಕುವರು ಎಂದು ಕಾರ್ಯ ತಂಡ ತಿಳಿಸಿದ್ದರೂ ಇದು ಈ ಯೋಜನೆಯನ್ನು ತಿರಸ್ಕರಿಸಿಯೂ ಇಲ್ಲ, ಪುರಸ್ಕರಿಸಿಯೂ ಇಲ್ಲ; ಈ ಬಗ್ಗೆ ತೀರ್ಮಾನ ಕೈಗೊಳ್ಳುವ ಅಧಿಕಾರವನ್ನು ಸರಕಾರಕ್ಕೇ ಬಿಟ್ಟಿರುವುದರಿಂದ ಈ ಯೋಜನೆಯನ್ನು ಸರಕಾರ ಮುಂದುವರಿಸಲು ತೀರ್ಮಾನಿಸಿದೆ ಎಂದು ಹೇಳಿಕೆ ನೀಡಿದ್ದರು.

ತಕ್ಷಣವೇ ಪರಿಸರ ಮತ್ತು ಅರಣ್ಯ ಇಲಾ-

ಖೆಯು ''ಈ ಯೋಜನೆಗೆ ಸುರಂಗ ನಿರ್ಮಿಸಲು 205 ಕೋಟಿ ರೂಪಾಯಿಗಳು ಖರ್ಚಾಗಿವೆ... ಪರಿಸರ, ಅರಣ್ಯ ಮತ್ತು ವನ್ಯ ಜೀವಿ ಇಲಾಖೆಯು ಈ ಯೋಜನೆಯನ್ನು ಮುಂದುವರಿಸುವುದು ಸರಿಯಲ್ಲವೆಂದು ತೀರ್ಮಾನಿಸಿದೆ'' ಎಂದು ವರದಿ ಮಾಡಿದೆ. ಈ ವರದಿ ಹೊರಬರದಂತೆ ಪಟ್ಟಭದ್ರ ಹಿತಾಸಕ್ತಿಗಳು ಮತ್ತು ಹಿಂದಿನ ಸರಕಾರದ ಸೂತ್ರಧಾರರು ನ್ಯಾಯಾಲಯದ ಮೊರೆ ಹೋಗಿ ತೆಪ್ಪಗೆ ಕುಳಿತಿದ್ದಾರೆ.

ರಾಜ್ಯ ಸರಕಾರ, ಕೇಂದ್ರ ಸರಕಾರ, ಕಂಟ್ರಾಕ್ಟರ್‌ಗಳ ಕಪಿಮುಷ್ಟಿಯಿಂದ ತೆಹರಿ ಜಲಾಶಯ ಹೊರಬಿದ್ದರೆ ಸಾವಿರಾರು ಜನರ ಅಳಿವು-ಉಳಿವಿನ ಪ್ರಶ್ನೆ ಇತ್ಯರ್ಥವಾದೀತು. ಸಿಮೆಂಟ್ ಕಾರ್ಖಾನೆಗಳು, ಹಲವಾರು ಪಂಚತಾರಾ ಹೋಟೆಲ್‌ಗಳನ್ನುಳ್ಳ ಜನರ ಈ ಜಲಾಶಯವನ್ನು ಕಟ್ಟಲು ಬಯಸುವಾಗ, ದುಡ್ಡಿನ ಚೀಲಗಳನ್ನು ಸುರಿದು ತಜ್ಞರು ಮತ್ತು ರಾಜಕಾರಣಿಗಳನ್ನು ಕೊಂಡುಕೊಳ್ಳುವವರಿರುವಾಗ ತೆಹರಿ ಜಲಾಶಯದ ಕಾರ್ಯ ನಿಂತೀತೆ? ಚಿಪ್ಕೊ ಚಳುವಳಿಯ ಮುಖಂಡ ಸುಂದರ್ ಲಾಲ್ ಬಹುಗುಣ ''ತೆಹರಿ ಬಂದ್ ವಿರೋಧಿ ಸಂಘರ್ಷ ಸಮಿತಿ''ಯನ್ನು ರಚಿಸಿಕೊಂಡು ಜಲಾಶಯ ನಿರ್ಮಾಣವಾಗದಂತೆ ತಡೆಯಲು ಹೆಣಗುತ್ತಿದ್ದಾರೆ. ಒಂದು ವಾರ ತೆಹರಿಯಲ್ಲಿ ನಿರಶನವ್ರತ ಹೂಡಿದ್ದ ಅವರನ್ನು ಇಂದಿನ ಕೇಂದ್ರ ಸರಕಾರ ಉಪವಾಸ ಸತ್ಯಾಗ್ರಹವನ್ನು ಬಿಟ್ಟುಕೊಡುವಂತೆ ಮನವೊಲಿಸಿತಲ್ಲದೇ ಈ ವಿಷಯದಲ್ಲಿ ಡ್ಯಾಂ ನಿರ್ಮಾಣ ಕಾರ್ಯ ಮುಂದುವರಿಸದಂತೆ ಆದೇಶವನ್ನೂ ಇತ್ತಿತ್ತು. ಆದರೆ ''ಭೂಕಂಪನ ಅಥವಾ ಇನ್ನಾವುದೇ ರೀತಿಯ ಅಪಾಯವಿಲ್ಲ''ವೆಂಬ ಅಭಿಪ್ರಾಯವನ್ನು ಮತ್ತೆ 'ತಜ್ಞರು' ನೀಡಿದ್ದಾರೆ.

1300 ಕೋಟಿ ವೆಚ್ಚದ ಈ ಯೋಜನೆಗೆ ಇಂದು 3000 ಕೋಟಿ ರೂ.ಗಳು ಬೇಕಾದೀತು. ಈ ಜಲಾಶಯ ಕಟ್ಟುವುದು ಪ್ರಾರಂಭವಾದರೆ 80-85 ಸಾವಿರ ಜನರು ನಿರಾಶ್ರಿತರಾಗುತ್ತಾರೆ. ಇದಕ್ಕಿಂತ ಕಡಿಮೆ ಖರ್ಚಿನಲ್ಲಿ ಸೌರಶಕ್ತಿಯನ್ನು ಬಳಸಿಕೊಂಡು ವಿದ್ಯುತ್ ಉತ್ಪಾದಿಸುವ ಸ್ಥಾವರಗಳನ್ನು ನಿರ್ಮಿಸಬಹುದಾಗಿದೆ. ಸಣ್ಣ-ಸಣ್ಣ ಹಲವಾರು ನೀರಾವರಿ ಯೋಜನೆಗಳನ್ನು ಕೈಗೊಳ್ಳಬಹುದಾಗಿದೆ. ಈ ಜಲಾಶಯ ಆಯಕಟ್ಟಿನ ಸ್ಥಳದಲ್ಲಿರುವುದರಿಂದ ಶತ್ರುಗಳ ದಾಳಿಗೆ ತುತ್ತಾಗಬಹುದು. ಇಡೀ ಹರಿದ್ವಾರ-ಋಷಿಕೇಶಗಳನ್ನೊಳಗೊಂಡು ಅಗಣಿತ ಹಳ್ಳಿಗಳು ಕೊಚ್ಚಿಹೋಗಬಹುದು.

ಎಡ್ವರ್ಡ್ ಗೋಲ್ಡ್‌ಸ್ಮಿತ್ ಮತ್ತು ನಿಕೊಲಸ್ ಹಿಲ್‌ಡ್ಯೆಯರ್ಡ್ ತಮ್ಮ "The social and Environmental Effects of Large Dams" ಎಂಬ ಪುಸ್ತಕದಲ್ಲಿ ''ತಜ್ಞರು ಮತ್ತು ತಜ್ಞ ಅಭಿಪ್ರಾಯಗಳು ಇಂದು ಚಿನ್ನದಂತೆ ಮಾರಾಟದ ವಸ್ತುವಾಗಿವೆ ಹಾಗೂ ಉದ್ಯಮಕ್ಕೆ ಬೇಕಾದ್ದನ್ನೇ ಹೇಳುವಂಥ ತಜ್ಞರು ಎಲ್ಲೆಲ್ಲೂ ಯಾವಾಗಲೂ ಸುಲಭವಾಗಿ ಸಿಗುತ್ತಾರೆ,'' ಎಂದು ಅಭಿಪ್ರಾಯಪಟ್ಟಿದ್ದಾರೆ. ತೆಹರಿ ಅಣೆಕಟ್ಟೆ ಮತ್ತು ಕೈಗಾ ಅಣು ಸ್ಥಾವರದ ಬಗ್ಗೆ ಸುಂದರಲಾಲ್ ಬಹುಗುಣ ಹಾಗೂ ಡಾ. ಶಿವರಾಮ ಕಾರಂತರಂಥವರು ಎಷ್ಟೇ ಬೊಬ್ಬೆ ಹೊಡೆದರೂ ಹಣದ ಚೀಲಗಳು ಮಾತನಾಡುವಾಗ ಸತ್ಯ ಸತ್ತಂತೆ ಬಿದ್ದಿರುತ್ತದೆಯಲ್ಲವೆ? ವಿಜ್ಞಾನ ಮತ್ತು ಉದ್ಯಮಗಳು ಮಾನವ ಜನಾಂಗದ ಅಳಿವು-ಉಳಿವಿಗೆ, ಒಂದು ಪರಂಪರೆಗೆ ಕೊಡಲಿ ಹಾಕದೆ ಉದ್ಧಾರವಾಗಲು ಸಾಧ್ಯವಿಲ್ಲವೆ? ವಿಶ್ವದ ಇತರ ದೇಶಗಳು ದೊಡ್ಡ ದೊಡ್ಡ ಜಲಾಶಯಗಳಿಂದ ಹಾಗೂ ಅಣುಸ್ಥಾವರಗಳಿಂದ ಉಂಟಾಗುವ ಅನಾಹುತಗಳನ್ನು ಮನಗಂಡಿದ್ದರೂ ನಾವೇಕೆ ಈ ಯಥಾರ್ಥಕ್ಕೆ ಕಣ್ಮುಚ್ಚಿಕೊಂಡಿದ್ದೇವೆ? ●

ಎರಡು ಮುದ್ದು ಕಣ್ಣುಗಳು

ಶಾಂತಾರಾಮ ಸೋಮಯಾಜಿ

ನೆಲ್ಲೂರಿನ ಬಸ್‌ಸ್ಟಾಂಡಿಗೆ ಎಂಟು ಗಂಟೆಯೊಳಗೇ ಮುಟ್ಟಿಯಾಯ್ತು. ಸ್ಟಾಂಡಲ್ಲಿ ಜನವೇ ಜನ. ರಾತ್ರಿಯಿಡೀ ಬಂದ ಮಳೆಯಿಂದ ನೆಲವೆಲ್ಲಾ ಕೆಸರು. ಗಜಬಿಜಿ. ಆ ಕಡೆ ಕಾಲಿಟ್ರೆ ದನದ ಸಗಣಿ. ಈ ಕಡೆ ಕಾಲಿಟ್ರೆ, ನೀರು, ಕೆಸರು. ಬಸ್ಸು ಬಂದ್ರೆ ಸಾಕಾಗಿತ್ತು.

ಬೋಳು ತಲೆಯವನೊಬ್ಬನಲ್ಲಿ ವಿಚಾರಿಸಿದೆ, ಕಾವಲಿ ಬಸ್ಸು ಎಷ್ಟು ಗಂಟೆಗಂತೆ. ''ಈಗ ಎಷ್ಟು ಗಂಟೆ?'' ಅಂತ ಪ್ರಶ್ನೆ ಹಾಕಿದ. ಬೆಳಕು ಶುಭ್ರವಾಗಿತ್ತು. ಬಿಸಿಲು ಮಂದವಾಗಿತ್ತು. ಎಂಟು ಎಂದೆ, ವಾಚು ನೋಡದೆ. ''ಎಂಟಕ್ಕೇ ಒಂದು ಬಸ್ಸಿದೆ ಸಾರ್, ಕಾವಲಿಗೆ,'' ಎಂದ.

ಅನಂತರ ಒಂದು ಬಸ್ಸು ಬಂತು. ಗುಂಟೂರು ಬಸ್ಸಂತೆ. ಕಾವಲಿಗೆ ಹೋಗೋದಿಲ್ಲ ಎಂದಾಯ್ತು. ಮತ್ತೊಂದು ಬಂತು. ಅದೂ ಹೋಗೋದಿಲ್ಲ. ಬಸ್ಸು ಬರುತ್ತಲೇ ಇತ್ತು. ಹೋಗುತ್ತಲೇ ಇತ್ತು. ಜನ ಸೇರುತ್ತಲೇ ಇದ್ದರು. ಎಲ್ಲರೂ ಕಾವಲಿಗೆ ಹೊರಟವರೇನೋ.

ಕೊನೆಗೆ ಬಂತು ಬಸ್ಸು. ಕಾವಲಿ ಬಸ್ಸು. ಎದುರಿನ ಗಾಜಿನಲ್ಲಿ ಬರೆದಿತ್ತು. ಸ್ಪೆಶಲ್, ಕಾವಲಿಗೆ ನಾನ್ ಸ್ಟಾಪ್ ಅಂತ. ಕಾಯುತ್ತಿದ್ದವರೆಲ್ಲಾ ನುಗ್ಗಿದರು. ಬಸ್ಸು ನಿಲ್ಲುವ ಮೊದಲೇ ಕರ್ಚೀಪು, ಟವೆಲ್ ಎಲ್ಲಾ ಬಸ್ಸಿನ ಕಿಟಕಿಯಿಂದ ಒಳ ತೂರಿ ಸೀಟಿನ ಮೇಲೆ ಹಕ್ಕು ಸ್ಥಾಪಿಸಿಕೊಂಡರು. ಕಂಡಕ್ಟರ್ ಹೇಳು



ತ್ತಿರೋ ಇದ್ದ ಮೆಟ್ಟಿಲ್ಲ ಇಳೀಲಿಕ್ಕೆ ಬಿಡ್ರೀ. ಅವರು ಸ್ವಲ್ಪ ಇಳೀಲಿ, ಮತ್ತೆ ಹತ್ರಿ,'' ಅಂತ. ಆದ್ರೆ ಕೇಳುವವರಾರು? ಬೈದು, ದೂಡಿ, ಒದ್ದು ಒಳಗೆ ಹೋದ್ರೆ ಸಾಕು. ಎಷ್ಟಾದರೂ ನಾವು ಕುರಿಗಳಲ್ವಾ!

ಬಸ್ಸು ತುಂಬುತ್ತಾ ಇತ್ತು. ನಾನಿನ್ನು ಹೊರಗಡೆ. ಮುಂದಿಂದ ಹತ್ತಿಪ್ಪತ್ತು ಮಂದಿ, ನುಗ್ಗುವವರು. ಬೆವರ ವಾಸನೆ, ಬೀಡಿ ವಾಸನೆ, ಉಸಿರಿಗೇ ಕಷ್ಟವಾಗಿ ತಲೆ ತಿರುಗಿಸಿದೆ. ಎರಡು ಮುದ್ದಾದ ಕಣ್ಣುಗಳು ಕಂಡು ಬಂದವು.

ಇನ್ನೊಮ್ಮೆ ತಿರುಗಿ ನೋಡಿದೆ. ನನ್ನ ಹಿಂದೇನೇ ನಿಂತಿದ್ದಳು, ಬಸ್ಸು ನುಗ್ಗುವ ಗುಂಪಿನೊಂದಿಗೆ.

ಒಂದು ತರ ಕಪ್ಪು ಬಣ್ಣ. ಚೊಕ್ಕದಾಗಿ ಬಾಚಿದ ಕೂದಲು. ನೀಳ ಮುಖ, ಸಣ್ಣ ಕಣ್ಣುಗಳು. ಚಿಕ್ಕ ಹಣೆ. ಕೆಂಪು ಕಲ್ಲಿನ ಕಿವಿಯ ರಿಂಗ್. ಕೆಂಪು ಬಾರ್ಡರಿನ ಸೀರೆ. ಆತ್ಮೀಯ ನಗು. ಎಲ್ಲೋ ಪರಿಚಯವಾದಂತಿದೆಯಲ್ಲಾ ಎಂಬಂಥ ಅನ್ಯೋನ್ಯ ಬೆಡಗು. ಬೇಕೋ ಬೇಡವೋ ಎಂಬಂತೆ ಮುಗುಳ್ನಕ್ಕೆ. ಆಕೆಯೂ ನಕ್ಕಳು, ನೆಪ ಸಿಕ್ಕಿದವಳಂತೆ.

ಸರಿದು ನಿಂತು ಹೇಳಿದೆ- ''ಮುಂದೆ ಹೋಗಿ.''

ಆಕೆ ಮುಂದೆ ಹೋದಳು, ನನಗೆ ಸೆರಗು ತಾಗಿಸಿಕೊಂಡೇ. ಆದ್ರೆ ಮುಂದಿನವರು ಬಿಡುವವರಾ? ಕುರಿಗಳನ್ನು ಬದಲಾಯಿಸಲಾಗುತ್ತಾ? ಹೇಗೂ ಮೆಟ್ಟಿಲ ಮೇಲೆ ಒಂದು ಕಾಲಿಟ್ಟಳು. ಹಿಂದಿನಿಂದ ನಾನು.

ನನ್ನ ಹಿಂದಿಂದ ಯಾರೋ ಹೇಳಿದರು- ''ಹೋಗ್ರೀ ಮುಂದ,'' ಅಂತ. ತಿರುಗಿ ನೋಡಿದೆ. ಹೇಳಿದವನ ತಲೆ ಮಾತ್ರ ಕಾಣುತ್ತಿತ್ತು. ವಾರಗಟ್ಟಲೆ ನೀರು ಕಾಣದೆ ಚೆಲ್ಲಾಪಿಲ್ಲಿಯಾದ ಕೂದಲು. ಅವನೇ ಇರ್ಬೇಕು, ಅವಸರದವ.

ಐದು ನಿಮಿಷದಲ್ಲೇ ಬಸ್ಸು ಹೊರಟಿತು. ಕಂಡಕ್ಟರ್ ಬಸ್ಸೇರಿ, ಪಿಸಲ್ ಬಾರಿಸಿ ಬಾಗಿಲು ಎಳೆದುಕೊಂಡ, ಮೇಲೆ ಬಂದು ಬಸ್ಸಿನ ಹಿಂಭಾಗಕ್ಕೆ ಹೋದ, ಟಿಕೇಟು ಕೊಡ್ಲಿಕ್ಕೆ. ಉಸಿರಾಡಲೂ ಅಸಾಧ್ಯವಾದಂತೆ ತುಂಬಿಕೊಂಡ ಜನ. ಹಿಂದಿನ ಸೀಟಿನಿಂದ ಮಗುವಿನ ಅಳು. ಪಕ್ಕದಲ್ಲಿ ಕುಳಿತವ ನಶ್ಯ ಹಾಕುತ್ತಿದ್ದ. ನಾನು ಕಂಬಿ ಹಿಡಿದು ನಿಂತಿದ್ದೆ. ಹಿಂದೆ ಏನೋ ತಾಗಿದಂತಾಗಿ ತಿರುಗಿ ನೋಡಿದೆ. ಕಂಡದ್ದು ಅದೇ ಗಲೀಜು ತಲೆ. ಕತ್ತು ತಿರುಗಿಸಿ ನೋಡಿದೆ. ಈಗ ಮುಖ ಕೂಡಾ ಕಂಡು ಬಂತು.

ಸಿಡುಬು ಕಲೆಯ ಮುಖ. ಹಲ್ಲು ಮುಂದೆ. ಆಳ, ವಿಕಾರ ಕಣ್ಣುಗಳು. ಸ್ವಲ್ಪ ಗೂನು ಬೆನ್ನು; ಕತ್ತು ಮುಂದೆ ಬಾಗಿದಂತೆ ಕಾಣುತ್ತಿತ್ತು. ಆಗಾಗ ಅಗಲಿಸಿ ಮುಚ್ಚಿಕೊಳ್ಳುವ ತುಟಿ. ದೊಗಲು ಶರ್ಟ್. ಉದ್ದ ದೇಹ.

ನನ್ನನ್ನು ನೇರವಾಗಿ ದಿಟ್ಟಿಸಿ ನೋಡಿದ. ನಾನು ಮುಖ ತಿರುಗಿಸುವುದರೊಳಗಾಗಿ ಕೇಳಿದ, ''ಗಂಟೆ ಎಷ್ಟೀ?'' ಅಂತ.

''ಹನ್ನೆರಡು'' ಎಂದು ಹೇಳಬೇಕಿತ್ತು. ಈ ಹುಚ್ಚನಿಗೆ ಗಂಟೆ ಎಷ್ಟಾದರೇನಂತೆ? ಆದ್ದರಿಂದ ತಲೆ ತಿರುಗಿಸಿಕೊಳ್ಳುತ್ತಾ ಹೇಳಿದೆ, ''ಎಂಟೂವರೆ.''

ಅಷ್ಟರಲ್ಲೇ ಏನೋ ಹೇಳಿದ. ಕತ್ತು ತಿರುಗಿಸಿ ಏನು ಎಂಬಂತೆ ತಲೆಯಾಡಿಸಿದೆ. ''ನಾನೂ ಹಾಗೇ ಎಣಿಸಿಕೊಂಡಿದ್ದೆ'' ಎಂದ. ಅರ್ಥವಾಗದವರಂತೆ ಪ್ರಶ್ನೆ ಹಾಕಿದೆ- ''ಏನು?''. ಬಾಯನ್ನು ಅಗಲ ಮಾಡಿ ಇಪ್ಪತ್ತೆರಡರ ಹಲ್ಲು ಪ್ರದರ್ಶನ ಮಾಡುತ್ತಾ ಹೇಳಿದ- ''ಮತ್ತಿನ್ನೇನು? ಟೈಮು. ಟೈಮು ಎಂಟೂವರೆ ಅಂತ.'' ಅವನ ಮಾತಿನ ಧಾಟಿ ನೋಡಿದರೆ ತೀರಾ ಕಟು ಮನುಷ್ಯ ಎಂದುಕೊಂಡೆ.



ಬಸ್ಸು ಮುಂದೆ ಹೋಗುತ್ತಿತ್ತು. ಎಲ್ಲಾ ಕಡೆ ಬಯಲು. ಕಂಡಕ್ಟರ್ ಈಗ ಈ ಭಾಗಕ್ಕೆ ಬರುತ್ತಿದ್ದ. ಬದಿಗೆ ಸರಿದು ನಿಂತೆ. ಹಿಂದಿಂದ ಬಳೆ ಸದ್ದು. ತಿರುಗಿ ನೋಡಿದೆ. ಅದೇ ಕೆಂಪು ಈಯರ್ರಿಂಗ್ ಹಾಕಿದ ಮುಖ. ಅದೇ ಆತ್ಮೀಯ ನಗು. ಅವಳ ಮುದ್ದು ಕಣ್ಣುಗಳನ್ನು ನೋಡುತ್ತಾ ನಿಧಾನಕ್ಕೆ ನಕ್ಕೆ. ಆಕೆಗೆ ಖುಶಿಯಾದಂತೆನಿಸಿತು. ಬಲಗಡೆಯಿಂದ ಯಾರೋ ಕುಟುಕಿದಂತಾಯ್ತು. ತಿರುಗಿ ನೋಡಿದ್ರೆ ಅವನೇ ಸಿಡುಬು ಮುಖದವ.

''ಟಿಕೇಟು ತಕ್ಕೊಳ್ರೀ,'' ಎಂದ, ಆರ್ಡರ್ ಮಾಡುವವನಂತೆ. ಎದುರು ಕುಳಿತಿದ್ದವರು, ನಿಂತವರು ಅವನ ಧಾಟಿಗೆ ಬೆದರಿರಬೇಕು. ಎಲ್ಲರ ಕಣ್ಣುಗಳು ಅವನ ಕಡೆ. ನಾನು ಮಾತಾಡಲಿಲ್ಲ. ಕಿಸೆಯಿಂದ ಪರ್ಸ ತೆಗೆದು, ಹಣ ಎಣಿಸಿ ಕಂಡಕ್ಟರ್ ಮುಂದೆ ಹಿಡಿದು ಹೇಳಿದೆ. ''ಕಾವಲಿಗೆ,'' ಅಂತ ಕಂಡಕ್ಟರ್ ಟಿಕೇಟು ಹರಿದು ಕೊಟ್ಟ. ಮತ್ತೆ ಕೇಳಿದ- ''ನಿಮ್ಮದೆಲ್ರೀ ಟಿಕೇಟು?'' ಕೇಳಿದ್ದು ಬೇರೆ ಯಾರಲ್ಲೂ ಅಲ್ಲ, ಸಿಡುಬು ಮೋರೆಯವನಲ್ಲಿ. ಅವನ ಧೈರ್ಯ ನೋಡಬಾರದಾ! ಅವಂದು ಟಿಕೇಟು ಆಗ್ಲಿಲ್ಲ, ಅದ್ರೆ ಬೇರೆಯವ್ರಗೆ ಆರ್ಡರ್ ಮಾಡ್ತಾನೆ. ತಲೆ ಸರಿಯಿದೆಯಾ ಅವ್ನಿಗೆ. ''ಚೋಧರಿ ಪಲು, ಸ್ವಾಮಿ,'' ಎಂದ. ನಿಂತವರೆಲ್ಲ ಆತನ ಕಡೆಗೆ ತಿರುಗಿದರು. ಬಸ್ಸು, ನಾನ್ ಸ್ಟಾಪ್ ಕಾವಲಿಗೆ ಎಂದು ಹೊರಗಡೆಯಲ್ಲೇ ಬರೆದಿತ್ತು, ದೊಡ್ಡ ಅಕ್ಷರಗಳಲ್ಲಿ. ಈತನಿಗೆ ಬೇರೊಂದು ಕಡೆ ಇಳೀಬೇಕಂತೆ. ಗಮ್ಮತ್ತಾಗಿ ಪ್ಯಾಂಟು, ಶರ್ಟ್ ಹಾಕಿದ್ದಾನೆ, ಓದ್ಲಿಕ್ಕೂ ಬರೋಲ್ವಾ? ಬಾರದಿದ್ರೂ, ಹೋಗ್ಲಿ, ಯಾರ ಹತ್ರಾದ್ರೂ, ಕೇಳ್ಬಹುದಿತ್ತಲ್ಲಾ. ''ಏನ್ರೀ. ಇದು ಎಕ್ಸ್‌ಪ್ರೆಸ್ ಬಸ್. ಕಾವಲಿಯಲ್ಲಿಳಿಯುವುದು ಮಾತ್ರ,'' ಎಂದ ಕಂಡಕ್ಟರ್, ಉದಾಸೀನ ತೋರಿಸುತ್ತಾ. ಸಿಡುಬು ಮೋರೆಯವ ಮತ್ತಾವುದೊ ಒಂದು ಹಳ್ಳಿಯ ಹೆಸರು ಹೇಳಿದ. ''ಇಲ್ಲಾರೀ. ಇದು ನಾನ್‌ಸ್ಟಾಪ್ ಕಾವಲಿಗೆ,'' ತಾಳ್ಮೆ ಕಳೆದುಕೊಂಡ ಕಂಡಕ್ಟರ್ ಹೇಳಿದ. ಸಿಡುಬು ಮೋರೆಯವ ಬೇಕೋ ಬೇಡವೋ ಎಂಬಂತೆ ಕಿಸೆಯಿಂದ ಹಣ ತೆಗೆದು, ಕಂಡಕ್ಟರ್ ಮುಖದೆದುರು ನೋಟು ಆಡಿಸುತ್ತಾ ಹೇಳಿದ. ''ಕೊಡ್ರೀ ಹಾಗಾದ್ರೆ,

ಏನೂ ಆಗದವರಂತೆ ಟಿಕೇಟು ಹರಿದು ಚಿಲ್ಲರೆ ಕೊಟ್ಟು ಮುಂದೆ ಹೋದ. ಸಿಡುಬು ಮೋರೆಯುವ ಸ್ವಲ್ಪ ಈಚೆ ಕಡೆ ಸರಿದು ನನಗೆ ತಾಗಿಕೊಂಡೇ ನಿಂತುಕೊಂಡ. ನನ್ನ ದೇಹ ಪೂರ್ತಿ ಕಚಗುಳಿ. ಹೇಸಿಗೆ, ಸ್ವಲ್ಪ ಸರಿದು ಪಕ್ಕದ ಸೀಟಿಗೆ ತಾಗಿ ನಿಂತುಕೊಂಡೆ.

ಬಸ್ಸು ವೇಗವಾಗಿ ಓಡುತ್ತಿತ್ತು. ನೆರೆ ನೀರಲ್ಲಿ ಮುಳುಗಿದ ಬಯಲು ಕಂಡು ಬರಲಾರಂಭಿಸಿತು. ಬಣ್ಣದ ನೀರು, ನೀಲಿ ಆಕಾಶ, ಶುಭ್ರ ಸೂರ್ಯ, ನೆರೆಯಲ್ಲಿ ಮುಳುಗಿದ ಭತ್ತದ ಬಯಲು, ಅಲ್ಲಲ್ಲಿ ಮೇಲೆದ್ದು ನಿಂತ ಕೆಂಪು ಕಲ್ಲಿನ ನೆಲ, ತೂಫಾನಿನ ಅಪಾಂತರಕ್ಕೆ ವಾಲಿದ ತಾಳೆ ಮರಗಳು..... ಬಸ್ಸು ಓಡುತ್ತಲೇ ಇತ್ತು.

ನನ್ನ ಪ್ಯಾಂಟಿನ ಬಲಕಿಸೆಯಲ್ಲಿ ಏನೋ ಜಿದ್ದಂತಾಯ್ತು. ಕಂಬಿ ಮೇಲೆ ಕೈ ಬದಲಿಸಿ ಕಿಸೆಯೊಳಗೆ ಕೈ ತುರುಕಿದೆ, ತಿರುಗಿ ನೋಡಿದೆ. ಸಿಡುಬು ಮೋರೆಯ ಆಸಾಮಿ ಮುಖ ಆಚೆ ತಿರುಗಿಸಿಕೊಂಡ. ಬಲಗೈಯಿಂದ ಗಡ್ಡ ಸವರಲು ಸುರುಮಾಡಿದ. ಒಂದು ವೇಳೆ ......? ಕಣ್ಣು ಬಸ್ಸಿನ ಹೊರಗಿದ್ದರೂ ಮೈಯೆಲ್ಲಾ ಕಿಸೆಯೊಳಗಿತ್ತು.


ಐದು ನಿಮಿಷದ ನಂತರ ನನ್ನ ಹಿಪ್ ಪಾಕೆಟ್ ಮೇಲೆ ಯಾರದೋ ಕೈ. ಫಕ್ಕನೆ ತಿರುಗಿ ನೋಡಿದೆ. ಆಸಾಮಿ ಸೆಟೆದು ನನಗೆ ವಿರುದ್ಧ ಮುಖ ಮಾಡಿ ನಿಂತುಕೊಂಡ. ಅರೆ! ನಾನು ಎಣಿಸಿದ್ದು ಸರಿ ಇರಬೇಕು. ಈತನಿಗೆ ಕಿಸೆ ಕದಿಯುವ ಕೆಲಸ. ನನ್ನೆದುರು ನಿಂತ ಗುಂಗುರು ತಲೆಯವನೊಬ್ಬ ನನ್ನನ್ನೇ ಅಳೆಯುತ್ತಿದ್ದ. "ಆ ಮನುಷ್ಯನ ಕೈ ಮೇಲೆ ಸ್ವಲ್ಪ ಜಾಗ್ರತೆಯಿರ್ಲಿ" ಎಂದು ಇಂಗ್ಲೀಷಿನಲ್ಲಿ ಹೇಳಿದೆ. ಸಿಡುಬು ಮೋರೆಯವನಿಗೆ ಕೇಳಿಸಿದ್ದರಬಹುದು. ಆದರೆ ಅರ್ಥವಾದಂತೆ ಕಂಡು ಬರಲಿಲ್ಲ.

ಕಿರುಚುತ್ತಾ ಗಕ್ಕನೆ ನಿಂತು ಬಿಟ್ಟಿತು. ದಾರಿ ಪಕ್ಕ ಮರ ಬಿದ್ದಿತ್ತು. ಒಂದು ಗಾಡಿ ಹೋಗಲು ಹಾದಿ. ಎದುರಿಂದ ಟ್ರಕ್, ಮುಂದಿದ್ದ ಮುದುಕರೊಬ್ಬರ ಹೆಗಲ ಮೇಲೆ ಕತ್ತು ಚಾಚಿ ನೋಡಿದೆ. ಬಸ್ಸಿನ ಡ್ರೈವರ್ ಟ್ರಕ್‌ಗೆ ದಾರಿ ಬಿಟ್ಟು ಕೊಟ್ಟಿದ್ದ, ಟ್ರಕ್ ನಿಧಾನವಾಗಿ ಬರುತ್ತಿತ್ತು. ಬಸ್ಸು ಹೊರಡುತ್ತೆ ಎನ್ನುವಷ್ಟರಲ್ಲಿ ಪರಿಚಿತ ಮುಖವೊಂದು ಈಚೆ ಬಂದು ನಕ್ಕಿತು. ಅದೇ ಸ್ನೇಹ ನಗು. ಆಕೆ ಈಗ ನನ್ನ ತೀರಾ ಪಕ್ಕದಲ್ಲಿದ್ದಳು. ಏನಾದರೂ ಹೇಳಬೇಕು, ಹೇಗಾದರೂ ಮಾತನಾಡಿಸಬೇಕು.... ತೊಡೆಯ ಮೇಲೆ ಏನೋ ಹರಡುತ್ತಿದೆ..... ಫಕ್ಕನೆ ತಿರುಗಿ ನೋಡಿದೆ. ಆತನ ಒಂದು ಕೈ ನಿಧಾನವಾಗಿ ಹಿಂದೆ ಹೋಗುತ್ತಿತ್ತು. ಏನೂ ಅರಿಯದ ಬೆಪ್ಪನಂತೆ ಮುಂದೆ ಚಾಚಿದ ಹಲ್ಲುಗಳಿಂದ ಎಂಜಲನ್ನು ಒಳದೂಡಿ ಕೇಳಿದ "ಇನ್ನೆಷ್ಟು ಮೈಲಿ?" ಕಿಸೆಯೊಳಗೆ ಕೈಯಿಳಿಸಿ ತಟ್ಟಿ ನೋಡಿದೆ. ಕೀ ಗೊಂಚಲು, ಬಸ್ಸು ಟಿಕೇಟು, ಖಾಲಿ ಇನ್‌ಲೆಂಡ್ ಲೆಟರ್, ತಂಗಿ ತೆಗೆಸಿಕೊಟ್ಟ ಮೃದು ಮೈಯ ಪರ್ಸ್..... ಎಲ್ಲಾ ಹಾಗೇ ಇವೆ. ಕಳ್ಳ. ಈಗ್ಲೇ ಕಂಡಕ್ಟರನ್ನು ಕರೀಬೇಕು, ಕರೆದು ಹೇಳಬೇಕು, ಇಲ್ಲೊಬ್ಬ ಪಿಕ್ ಪಾಕೆಟ್ ಇದ್ದಾನೆ, ಎಂದು. ಕಾವಲಿಯಲ್ಲಿ ಇಳಿದ ಕೂಡಲೇ ಪೋಲೀಸರಿಗೆ ಒಪ್ಪಿಸಿಕೊಡಬೇಕು.... ಫಕ್ಕನೆ ಯಾರದೋ ಸ್ವರ, "ಐದು ಮೈಲಿ" ಸ್ವರ ಇಂಪಾಗಿತ್ತು. ಮೆಲು ದನಿ. ಉತ್ತರ ಕೊಟ್ಟ ಮುದ್ದಿನ ಹುಡುಗಿ ಸಿಡುಬು ಮೋರೆಯವನನ್ನೇ ನೋಡುತ್ತಿದ್ದಳು. ಆಕೆಯ ಮುಖದಲ್ಲಿ ಅದೇ ಮಂದಹಾಸ. ಸಿಡುಬು ಮೋರೆಯವ ನನ್ನನ್ನೊಮ್ಮೆ ದುರುಗಟ್ಟಿ ನೋಡಿದ. ನನ್ನಿಂದ ಉತ್ತರ ಸಿಗುವ ಹಕ್ಕು ಇತ್ತೆಂಬಂತೆ, ಮತ್ತೆ ಏನೋ ಗಡಿಬಿಡಿಯಲ್ಲಿದ್ದವನಂತೆ ಆಕೆಯ ಎದುರು ಹೋಗಿ

ನಿಂತ. ಎಣಿಸಿಕೊಂಡದ್ದನ್ನೆಲ್ಲಾ ಮರೆತೆ. ಅದಲ್ಲದೆ ಹೇಳುವುದಾದರೂ ಹೇಗೆ? ಪರ್ಸ್‌ಲ್ಲಿದ್ದ ಮುನ್ನೂರ ಇಪ್ಪತ್ತು ರೂಪಾಯಿ ಹಾಗೇ ಇದೆ. ಈಗ ಮಾತ್ರ ಆಕೆಯ ಕಪ್ಪು ಕೂದಲು ನನ್ನ ಕಿವಿಯ ತೀರಾ ಸಮೀಪ ಹಾರಾಡುತ್ತಿದ್ದವು.

ಕೆಲ ನಿಮಿಷ ಕಳೆಯಿತು. ತೂಫಾನಿಗೆ ಮಗುಚಿ ಹೋದ ತಾಳೆ ಮರ, ನೆಲ ಸಮವಾದ ಹಳ್ಳಿ ಮನೆಗಳು, ಕವುಚಿ ಬಿದ್ದ ತಂತಿ ಕಂಬಗಳು ಕಂಡುಬರಲಾರಂಭಿಸಿದವು.

ಫಕ್ಕನೆ ಆಕೆ ಕಿರಿಚಿಕೊಂಡಳು. ಸಟಕ್ಕನೆ ಬ್ಯಾಲೆನ್ಸ್ ತಪ್ಪಿದವಳಂತೆ ನನ್ನ ಮೈಮೇಲೇ ಬಿದ್ದು ಬಿಟ್ಟಳು. ಆಕೆಯ ಪರ್ಸ್ ಕೆಳಗೆ ಬಿತ್ತು. ಕಂಬಿ ಹಿಡಿದ ಕೈ ಮೇಲೆ ತಲೆಯಿಟ್ಟು ನಿಧಾನಕ್ಕೆ ಅಳತೊಡಗಿದಳು. ಸಿಡುಬು ಮೋರೆಯುವ ಏನೋ ಮಾಡಿರಬೇಕು. ಆಕೆಯ ಒಂದೆಳೆ ಚಿನ್ನದ ಸರದ ಮೇಲೆ ಕೈ? ಅಥವಾ ಪರ್ಸಿನೊಳಗೆ? ಅಥವಾ ಆಕೆಯ ಮೈಮೇಲೆ...? ಹುಂ, ಕೈ ಹಾಕಿರಲೂ ಬಹುದು. ಹೇಳುವುದು ಹೇಗೆ? ಎದುರು ನಿಂತವರು ಏನೋ ಹೇಳಿದರು, ಬಾಗಿಲ ಬಳಿ ನಿಂತ ಕಂಡಕ್ಟರನಲ್ಲಿ. ಕಂಡಕ್ಟರ್ ವಿಸಲ್ ಹಾಕಿದ. ಬಸ್ಸು ನಿಂತಿತು. ಸಿಡುಬು ಮೋರೆಯವ ಈವಾಗಲೇ ಆಕೆಯಿಂದ ಸರಿದು ಬಾಗಿಲ ಬಳಿ ನಿಂತಿದ್ದ. ಎಲ್ಲರ ದೃಷ್ಟಿ ಆತನ ಮೇಲೆ. ಮುದ್ದು ಮುಖದವಳೀಗ ತಲೆಯೆತ್ತಿದಳು. ನಾಚಿದವಳಂತೆ ಕೈಯಿಂದ ಕಣ್ಣೊರೆಸಿಕೊಂಡಳು. ಬಾಗಿ ಪರ್ಸ್ ಎತ್ತಿಕೊಂಡಳು. ಕಂಡಕ್ಟರ್ ಕೇಳಿದ, ''ಏನಾಯ್ತುರೀ?'' ಎಂದು. ''ಏನೂ ಇಲ್ಲ''ವೆಂಬಂತೆ ಆಕೆ ತಲೆಯಾಡಿಸಿದಳು. ಆತ ಒಂದು ಗಳಿಗೆ ಅಲ್ಲೇ ನಿಂತ, ಏನಾದರೂ ಹೇಳಿಯಾಳು ಎಂಬಂತೆ. ಆಕೆಯಿಂದ ಬೇರಾವ ಸದ್ದು ಬಾರದಿದ್ದಾಗ ಹಿಂದೆ ಬಾಗಿಲಿಗೆ ಹೋದ. ಸಿಡುಬು ಮೋರೆಯವನೀಗ ಕೆಳಗಿನ ಮೆಟ್ಟಿಲ ಮೇಲೆ ನಿಂತಿದ್ದ. ಎಲ್ಲರ ದೃಷ್ಟಿ ಆತನ ಮೇಲೆ. ಮುದ್ದು ಮುಖದವಳು ಸೆರಗು ಸರಿಪಡಿಸಿಕೊಂಡಳು. ಸಿಡುಬು ಮೋರೆಯವ, ಇದ್ಯಾವುದೂ ತನಗೆ ಸಂಬಂಧಿಸಿದ್ದಲ್ಲವೆಂಬಂತೆ ಕಂಡಕ್ಟರನಿಗೆ ''ನಾನೀಲ್ಲೇ ಇಳಿದು ಹೋಗ್ತೇನೆ,'' ಅಂದ





ವನೆ ಅವನ ಉತ್ತರಕ್ಕೂ ಕಾಯದೆ ಬಾಗಿಲು ದಾಟಿ ಕೆಳಗಿಳಿದು ಹೋದ. ''ಇಂಥವರೂ ಇದ್ದಾರಲ್ರೀ!?'' ಎಂದ, ಎದುರು ನಿಂತ ಮುದುಕ. ''ಮೊದ್ಲು ನಿಮ್ಮ ನಿಮ್ಮ ಕಿಸೆ ನೋಡ್ಕೊಳ್ಳಿ,'' ಎಂದೆ ನಾನು. ನನ್ನ ಕಿಸೆ ನೋಡಿಕೊಂಡೆ. ಎಲ್ಲಾ ಭದ್ರವಾಗಿತ್ತು. ಮುದ್ದು ಮುಖದವಳು ಒಂದು ಕೈಯಿಂದ ಪರ್ಸ್ ಅದುಮಿ ಹಿಡಿದು ನನ್ನನ್ನು ನೋಡಿದಳು; ಆತಂಕವಿದ್ದಂತಿತ್ತು ಕಣ್ಣುಗಳಲ್ಲಿ. ''ಎಲ್ಲಾ ಓಕೇ ತಾನೇ?'' ಎಂದು ಕೇಳಿದೆ, ಆದಷ್ಟು ನಗು ಸೂಚಿಸುತ್ತಾ. ತಲೆಯಾಡಿಸಿದಳು. ಮೆತ್ತಗೆ ನಕ್ಕಳು. ಮತ್ತು ಒಂದು ಹೆಜ್ಜೆ ಈಚೆ ಸರಿದು ನನಗೆ ತಾಗಿಕೊಂಡೇ ನಿಂತುಕೊಂಡಳು. ನಾನಾಗಲೇ ಅವಳಿಗೆ ಪರಿಚಿತನಾಗಿದ್ದೆ. ಅಥವಾ ಹಾಗೆ ಅಂದುಕೊಳ್ಳಬಹುದಿತ್ತು.

ಕಾವಲಿಯ ತಾಲೂಕು ಆಫೀಸು ಬಂತು. ಬಸ್ಸಿನ ಹಿಂದಿದ್ದವರು ಯಾರೋ, ''ಇಲ್ಲಿ ಸ್ವಲ್ಪ ನಿಲ್ಸಿ, ಕಂಡಕ್ಟರ್,'' ಎಂದು ಕೂಗಿದರು. ಕಂಡಕ್ಟರ್ ವಿಸಲ್ ಹಾಕಿದ, ತೂಫಾನಿಗೆ ತಾಲೂಕು ಆಫೀಸಿನ ಮಾಡ, ಹಂಚು ಹಾರಿಹೋಗಿದ್ದವು. ಅಲ್ಲಲ್ಲಿ ಮಗುಚಿಬಿದ್ದ ಕಟ್ಟಡಗಳು. ಬಸ್ಸು ನಿಧಾನಗೊಂಡು ನಿಂತಿತು.

ಹಿಂದಿನವರು ಇಳಿದು ಹೋಗಲೆಂದು ಈಚೆ ಸರಿದು ನಿಂತೆ. ಆಕೆ ಮೈ ಮೇಲೆ ಸ್ವಲ್ಪ ಭಾರ ಹೊರದೆ ಉಪಾಯವಿರಲಿಲ್ಲ, ಒಂದು ನಿಮಿಷ ಹಾಗೇನೇ ನನಗೆ ಆಧಾರ ಕೊಟ್ಟು ನಿಂತು, ಆ ಕೂಡಲೇ ನನ್ನಿಂದ ಸರಿಯುತ್ತಾ ಹೇಳಿದಳು. ''ನಾನಿಲ್ಲೇ ಇಳ್ದುಹೋಗ್ತೇನೆ'', ದಯವಿಟ್ಟು ಮರೆಯಬೇಡಿ, ನನ್ನನ್ನು ಎಂಬರ್ಥ ಬರುವಂತೆ. ಅಥವಾ, ನನಗೆ ಇಳಿದು ಹೋಗಲು ನಿಮ್ಮ ಸಮ್ಮತಿಯಿದೆಯಾ ಎಂದರ್ಥ ಬರುವಂತೆ. ನಾನೂ ಇಲ್ಲಿ ಇಳಿದು ಹೋದರೆ? ಆಕೆಯ ಕುರಿತೆಲ್ಲಾ ವಿಚಾರಿಸಬಹುದು. ಆದರೇಕೋ ಸರಿ ಕಾಣಲಿಲ್ಲ. ಅದಲ್ಲದೆ ಸಮಯದ ಕೊರತೆ ಬೇರೆ. ಮೂರರ ಒಳಗೆ ನನ್ನ ನ್ಯೂಸ್ ಪೇಪರ್ ಆಫೀಸಿಗೆ, ತೂಫಾನಿನ ಬಗ್ಗೆ ವರದಿ ಕಳುಹಿಸಿಕೊಡಬೇಕಿತ್ತು.

ಕಾವಲಿ ಬಸ್ ಸ್ಟಾಪ್ ಬಂತು. ನಿಲ್ದಾಣದ ಅರ್ಧಾಂಶ ತೂಫಾನಿಗೆ ಬಿದ್ದು ಹೋಗಿತ್ತು. ಒಂದೆರಡು ಬಸ್ಸುಗಳು ಜಖಂ. ಬಸ್ಸಿಂದ ಕೆಳಗೆ ಕಾಲಿಡುತ್ತಿರುವಂತೆ ಎಳನೀರು ಮಾರುವವ ಬಂದ. ''ಹೇಗೆ?'' ಎಂದು ಕೇಳಿದೆ. ಮೂರುವರೆ, ಎಂದ. ಜಗಳ ಮಾಡುವುದು ಸರಿಕಾಣಲಿಲ್ಲ. ''ಹುಂ, ಕೊಡು'' ಎಂದೆ. ನೆಲದಲ್ಲಿ ಕುಳಿತ. ತೊಡೆಯ ಮೇಲೆ ಎಳನೀರು ಕೆತ್ತಿದ, ನೀರು ಚಿಮ್ಮಿತು, ''ಸ್ಟ್ರಾ ಬೇಡ'' ಎಂದೆ. ನೀರು ಸಿಹಿಯಾಗಿತ್ತು. ಕುಡಿದಾದ ನಂತರ ಅವನೇ ಎತ್ತಿಕೊಂಡು ಬಿಸಾಕಿದ. ನಾನು ಕಿಸೆಗೆ ಕೈ ಹಾಕಿದೆ, ಹಣಕ್ಕೆ, ಬೆರಳಿಗೆ ಸಿಕ್ಕಿತು, ಇನ್‌ಲೆಂಡ್ ಲೆಟರ್, ಬಸ್ ಟಿಕೆಟ್, ಕೀ ಗೊಂಚಲು, ಹುಂ, ಮತ್ತೆ? ಕೈ ಬೆರಳು ಮುಷ್ಟಿಯಾಯಿತು. ಮತ್ತೆ ಪರ್ಸ್....? ಪರ್ಸೆಲ್ಲಿ? ಹಣಕ್ಕೆ ಕೈ ಮುಂದೆ ಹಿಡಿದ ಎಳನೀರಿನವ ಅಚ್ಚರಿ ಕಣ್ಣುಗಳಿಂದ ನನ್ನನ್ನೇ ಅಳೆಯುತ್ತಿದ್ದ. ಆ ಕಣ್ಣುಗಳ ಹಿಂದೆ ಎರಡು ಮುದ್ದಾದ ಕಣ್ಣುಗಳು ಕಂಡು ಬಂದವು. ●



ವಿಶ್ವದಲ್ಲಿ ಮನುಷ್ಯ ಏಕಾಕಿಯೆ?

ಟೈಮ್ಸ್ ಆಫ್ ಇಂಡಿಯಾದಲ್ಲಿ ಕ್ಲಾಡ್ ಅಲ್ವರೀಸರ ಲೇಖನವನ್ನು ಆಧರಿಸಿ



ಮನುಷ್ಯನ ಜೀವನಕ್ಕೆ ಅರ್ಥವಿದೆಯೆ? ಅದಕ್ಕೊಂದು ಧ್ಯೇಯವಿದೆಯೇ? ಈ ಪ್ರಶ್ನೆಗಳು ಅನಾದಿಯಿಂದ ಮಾನವನನ್ನು ಕೆಣಕುತ್ತಿವೆ; ಗಾಬರಿಗೊಳಿಸುತ್ತಲೂ ಇವೆ. ಪ್ರಾಚೀನ ಕಾಲದಿಂದಲೂ ಕೆಲವರಾದರೂ ಚಿಂತಕರು, ಮಾನವನನ್ನೊಳಗೊಂಡು ಇಡೀ ವಿಶ್ವವೇ ಆಕಸ್ಮಿಕಗಳ ಸರಪಳಿಯೆಂದು ಹೇಳುತ್ತ ಬಂದಿದ್ದಾರೆ. ಉಳಿದವರು ಆತ್ಮ ಮತ್ತು ಪರಮಾತ್ಮ ವಸ್ತುಗಳು ಇವೆ, ವಿಶ್ವಕ್ಕೆ; ಆದ್ದರಿಂದ ಮಾನವನಿಗೆ, ಒಂದು ಧ್ಯೇಯ ಇದೆ, ಆ ದೈವಸಂಕಲ್ಪ ಸೃಷ್ಟಿಯಲ್ಲಿ ಅನೂಚಾನವಾಗಿ ಪ್ರಕಟಕ್ಕೆ ಬರುತ್ತಾ ಇದೆ ಎಂದು ಸಾಧಿಸುತ್ತಾ ಬಂದಿದ್ದಾರೆ. ಆದರೆ ತಮ್ಮ ಈ ಪ್ರಮೇಯದಿಂದ ಉದ್ಭವಿಸಿದ ಎಲ್ಲ ಪ್ರಶ್ನೆಗಳಿಗೂ ಉತ್ತರ ಕೊಡುವುದು ಯಾವ ಸಿದ್ಧಾಂತಿಗೂ ಸಾಧ್ಯವಾಗಿಲ್ಲ.

ವಿಜ್ಞಾನಯುಗ ಕಾಲಿಟ್ಟ ಮೇಲೆ ವಿಶ್ವವ್ಯಾಪಾರಗಳಲ್ಲಿ ನಿಯಮಗಳನ್ನು ಕಾಣುವುದು ಸಾಧ್ಯವಾಯಿತೇ ಹೊರತು ಅದರಲ್ಲಿ ಧ್ಯೇಯಗಳನ್ನು ಗುರುತಿಸಲಾಗಲಿಲ್ಲ. ಜೀವನಕ್ಕೆ ನಿಯತಿ ಎಂಬುದು ಇಲ್ಲವೆಂಬ ಊಹೆಗೇ ಹೆಚ್ಚು ಬೆಂಬಲ ದೊರಕುವಂತೆ ಕಂಡಿತು. ಇದರ ಮೇಲೆ ಡಾರ್ವಿನ್ನನ ವಿಕಾಸವಾದ ಬಂತು. ಏಕಾಣುಜೀವದಿಂದಾರಂಭಿಸಿ ಅತ್ಯಂತ ಜಟಿಲವಾದ ಅಣುಸಂಧಾನದಿಂದ ಕೂಡಿದ ಮಾನವನ ವರೆಗೆ ಜೀವಜಾತಿ ಹೇಗೆ ಒಂದರಿಂದೊಂದು ಉದ್ಭವಿಸಿತೆಂದು ಆತ ತೋರಿಸಿಕೊಟ್ಟ. ಇದರಿಂದ ಜೀವಸೃಷ್ಟಿ ಕಾಲ ಕಳೆದಂತೆ ಮೇಲು ಮೇಲು ಹಂತಗಳನ್ನೇರುತ್ತಿದೆಯೆಂಬುದು ನಿಷ್ಪನ್ನವಾದರೂ ಒಬ್ಬ ಸೃಷ್ಟಿಕರ್ತನ ಅಗತ್ಯವನ್ನು ಅದು ಇನ್ನಷ್ಟು ಕಡಿಮೆ ಮಾಡಿತು. ಆದ್ದರಿಂದ ಬದುಕಿಗೆ ಧ್ಯೇಯವಿ

1972 ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟವಾದದ್ದು

ದೆಯೇ ಎಂಬ ಪ್ರಶ್ನೆ ಇನ್ನಷ್ಟು ಸಂದಿಗ್ಧವೇ ಆಯಿತು.

19-20ನೆಯ ಶತಮಾನದ ತತ್ವಚಿಂತಕರಲ್ಲಿ ಹೆಚ್ಚಿನವರು ಸೃಷ್ಟಿಗಾಗಲಿ ಮನುಷ್ಯ ಜೀವನಕ್ಕಾಗಲಿ ಧ್ಯೇಯವಿಲ್ಲ; ಆದ್ದರಿಂದ ಅರ್ಥವಿಲ್ಲ, ಎಂಬ ತೀರ್ಮಾನಕ್ಕೇ ಬಂದರು. ಫ್ರಾನ್ಸಿನ ಅಸ್ತಿತ್ವವಾದಿ ತತ್ವಜ್ಞಾನಿಗಳು ವಿಶ್ವವೆಲ್ಲ ಅರ್ಥವಿಹೀನವಾದದ್ದು; ಮನುಷ್ಯನಿಗೆ ಅರ್ಥವೇನಾದರೂ ಬೇಕಾಗಿದ್ದರೆ ಪ್ರತಿಯೊಬ್ಬನೂ ತನ್ನ ಬದುಕಿಗೆ ತಾನೇ ಅರ್ಥವನ್ನು ಸೃಷ್ಟಿಸಿಕೊಳ್ಳಬೇಕು ಎಂದು ಹೇಳತೊಡಗಿದರು. ಆದರೆ ಯಾವುದೊಂದು ಯೋಜನೆಯೇ ಇಲ್ಲದ ವಿಶ್ವದಲ್ಲಿ ಕ್ಷುದ್ರ ಮನುಷ್ಯಪ್ರಾಣಿ, ಅದೂ ವೈಯಕ್ತಿಕವಾಗಿ ತನ್ನ ಅರ್ಥವನ್ನು ತಾನೇ ನಿರ್ಮಿಸಿಕೊಳ್ಳುವುದೆಂಬುದು ಅಷ್ಟೇ ಅಸಾಧ್ಯ ಮತ್ತು ಅರ್ಥರಹಿತವೆಂದು ಜನಕ್ಕೆ ತೋರುವುದು ಸಹಜವೇ.

ವಿಕಾಸವಾದದ ಉಚ್ಛ್ರಾಯದ ಹಿನ್ನೆಲೆಯಲ್ಲಿ ಇಬ್ಬರು ತತ್ವಜ್ಞಾನಿಗಳು ಈ ಇಡೀ ಚಲ್ಲಾಪಿಲ್ಲಿಯಲ್ಲಿ ಒಂದು ರಹಸ್ಯಾರ್ಥವನ್ನು ಕಾಣುವ ಯತ್ನ ಮಾಡಿದರು. ಒಬ್ಬರು ಶ್ರೀ ಅರವಿಂದರು. ಅವರು ವಿಶ್ವವೆಲ್ಲವೂ ದೈವನಿಯತವೆಂದೂ ಅದೇ ಈ ವಿಕಾಸವನ್ನು ಸಂಕಲ್ಪಿಸಿದೆಯೆಂದೂ ಹೇಳಿದರು. ಮಾನವನೂ ಇತರ ಜೀವಜಾತಗಳೂ ಮಾತ್ರವಲ್ಲ, ಜಡಪ್ರಕೃತಿ ಕೂಡ ಈ ವಿಶ್ವ ಸಂಕಲ್ಪಕ್ಕೆ ಅಧೀನವಾಗಿ ಮೇಲು ಮೇಲಿನ ಚೈತನ್ಯಾವಸ್ಥೆಗೆ ಏರುತ್ತಿದೆ; ಕೊನೆಗೆ ಆ ದೈವೀ ಕೃಪೆಯಿಂದಲೇ ಮೇಲೆತ್ತಲ್ಪಟ್ಟು ಜಂಜಡದಿಂದ ಮುಕ್ತವಾದ ಚಿದಾನಂದಾವಸ್ಥೆಗೇರುವುವೆಂದು ಅರವಿಂದರು ಸಾರಿದರು. ಇನ್ನೊಬ್ಬರು ಫ್ರಾನ್ಸಿನ ಜೆಸೂಟ್ ಪಾದ್ರಿಯೂ (ಮುಂದೆ ಅವರು ಕೆಥೋಲಿಕ್ ಧರ್ಮಾಧಿಕಾರಿಗಳಿಂದ ಪಾದ್ರಿಗಿರಿಯಿಂದ ಬಿಡಿಸಲ್ಪಟ್ಟರು) ಪುರಾತತ್ವ ವಿಜ್ಞಾನಿಗಳೂ ಚಿಂತಕರೂ ಆದ ಪಿಯರೆ ಟೇಲ್ಹಾರ್ಡ್ ಚಾರ್ಡಿನ್ನರು. ಅವರೂ ಜೀವವಿಕಾಸವನ್ನು ದೈವೀ ಸಂಕಲ್ಪದ ಫಲವೆಂದು ಸಾಧಿಸಿದರು. ಮನುಷ್ಯನು ಈ ವಿಕಾಸದ ಊರ್ಧ್ವಗಾಮಿ ಬಾಣದ ಮೊನೆಯಾಗಿದ್ದಾನೆ. ಮಾನವನಿಗೆ ಇಂದು ತನ್ನ ಭವಿಷ್ಯವನ್ನು ರೂಪಿಸಿಕೊಳ್ಳುವ ಶಕ್ತಿ ಜ್ಞಾನದ ರೂಪದಲ್ಲಿ ದೈವನಿಯತಿಯಿಂದ ಲಭ್ಯವಾಗಿದೆ. ಅವನು ತನ್ನ ಜ್ಞಾನಬಲದಿಂದ ಇನ್ನೂ ದಿವ್ಯವಾದ ಅವಸ್ಥೆಗಳಿಗೇರುವನು. ಆ ದಿವ್ಯಾವಸ್ಥೆಯನ್ನು ಚಾರ್ಡಿನ್ನರು ''ಒಮೇಗಾ ಬಿಂದು'' ಎಂದು ಕರೆದಿದ್ದಾರೆ. ಮನುಷ್ಯ ಜೀವನ ಅರ್ಥಹೀನವಾಗಿದೆಯೆಂದು ವಾದಿಸುವವರನ್ನು ಅವರು ಖಂಡಿಸಿದರು. ಅರವಿಂದರ ಹಾಗೆ ಚಾರ್ಡಿನ್ನರೂ ಮನುಷ್ಯನ ಉದಯ ದಿವ್ಯ ಯೋಜನೆಯ ಪೂರ್ವನಿಯತ ಫಲವೆಂದೂ ವಿಕಾಸ ಅಥವಾ ಉತ್ಕ್ರಾಂತಿ ಮೇಲಿನ ಹಂತವನ್ನೇರುವುದು ದೈವಸಂಕಲ್ಪವಾಗಿರುವುದರಿಂದ ಅದು ಅನಿವಾರ್ಯವೆಂದೂ ಅಭಿಪ್ರಾಯಪಟ್ಟರು. ಪುರಾತತ್ವಶಾಸ್ತ್ರದ . ಗಾಢ ಪರಿಚಯದಿಂದ ಹುಟ್ಟಿದ ಅವರ ಅಭಿಪ್ರಾಯ ಜೀವವಿಕಾಸದ ಸ್ವಭಾವಜ್ಞಾನವನ್ನು ಅವಲಂಬಿಸಿತ್ತಾದ್ದರಿಂದ ಅನೇಕ ಚಿಂತಕರಿಗೆ ಮೆಚ್ಚಿಕೆಯಾಗಿತ್ತು.

ಆದರೂ ಚಾರ್ಡಿನ್ನರ ಸಿದ್ಧಾಂತಗಳು ವೈಜ್ಞಾನಿಕ ತರ್ಕದಿಂದ ಉದ್ಭವಿಸದೆ ಅವು ಅವರ ''ದರ್ಶನ''ದ ಫಲವಾಗಿವೆಯೆಂದು ಅನೇಕ ವಿಜ್ಞಾನಿಗಳು ವಾದಿಸುತ್ತಿದ್ದರು. ಈಗ ನೋಬೆಲ್ ಪಾರಿತೋಷಕ ಪಡೆದ ಫ್ರೆಂಚ್ ವಿಜ್ಞಾನಿ ಜ್ಯಾಕ್ಸ್ ಮೊನೋದರು ತಮ್ಮ 30 ವರ್ಷಗಳ ವೈಜ್ಞಾನಿಕ ಅನುಭವದ ಬಲದಿಂದ ಚಾರ್ಡಿನ್ನರ ಸಿದ್ಧಾಂತದ ವೈಜ್ಞಾನಿಕ ತಳಹದಿಗೆ ಬಲವಾದ ಆಹ್ವಾನ ಕೊಟ್ಟಿದ್ದಾರೆ. ವಿಶ್ವಕ್ಕೆ ಯಾವುದೇ ಸಂಕಲ್ಪದ ಆಧಾರವನ್ನು ಕಾಣಲಿಕ್ಕೆ ಬರುವುದಿಲ್ಲವೆಂದವರು ಹೇಳುತ್ತಾರೆ. ಇದು ಅವರ ವಾದದ ಸಾರ:


ವಿಶ್ವವೆಲ್ಲ ಆಕಸ್ಮಿಕ. ಅದರ ಸ್ವರೂ

...ಪ್ರತಿಯೊಂದು ಅಂಗದಲ್ಲಿಯೂ ಆಕಸ್ಮಿಕತೆ ಹಾಸುಹೊಕ್ಕಾಗಿದೆ. ಹೀಗಿರುವುದರಿಂದ ವಿಶ್ವ ಅರ್ಥಹೀನವಾದದ್ದೆನ್ನುವುದೂ ಅರ್ಥಹೀನವಾಗುತ್ತದೆ. ವಿಶ್ವದ ಆಕಸ್ಮಿಕತೆಗಳಿಂದ ಉದ್ಭವಿಸಿದ ಮನುಷ್ಯ ಮಾತ್ರ ಒಂದು ಅರ್ಥರಹಿತ ಜಂತು ಎನ್ನಬಹುದಷ್ಟೇ. ಏಕೆಂದರೆ ವಿಕಾಸದ ಕುರುಡು ಓಟದಲ್ಲಿ ಅವನ ಉತ್ಪತ್ತಿಯಾಗಿದೆ.

ಮೊನೋದರು ಅಣವಿಕ ಜೀವಶಾಸ್ತ್ರಗಳು (molecular biologist). ಕಳೆದ ಇಪ್ಪತ್ತು ವರ್ಷಗಳಲ್ಲಿ ಈ ಶಾಸ್ತ್ರಶಾಖೆಯಲ್ಲಿ ಕಂಡು ಹಿಡಿಯಲ್ಪಟ್ಟಿರುವ ತಥ್ಯಗಳು ಜೀವವಿಕಾಸಕ್ಕೆ ಏನಾದರೊಂದು ಪೂರ್ವಸಂಕಲ್ಪ ಇರಬಹುದೆಂಬ ಅಲ್ಪಸ್ವಲ್ಪ ಸಂಶಯವನ್ನೂ ನಿರಸನಗೊಳಿಸಿದೆಯೆಂದು ಅವರು ಹೇಳುತ್ತಾರೆ.

ಜೀವವಿಕಾಸದಲ್ಲಿ ದೈವ ಅಥವಾ ಸಂಕಲ್ಪ ಉಂಟೋ ಇಲ್ಲವೊ ಎನ್ನುವುದು ಜೀವವಿಕಾಸ ಹೇಗಾಯಿತೆಂಬುದನ್ನು ತಿಳಿಯಲಾಗಿದೆ. ಆಧುನಿಕ ಅಣವಿಕ ಜೀವಶಾಸ್ತ್ರ ಈ ರಹಸ್ಯವನ್ನು ಬಯಲಿಗಿಟ್ಟಿದೆ. ಎಲ್ಲ ಜೀವಿಗಳಲ್ಲಿಯೂ ಜಡಕ್ಕೆ ವ್ಯತಿರಿಕ್ತವಾದ ಎರಡು ಗುಣಗಳಿವೆ. ಒಂದು, ತನ್ನ ಕುಲದ ರಕ್ಷಣೆ ಮತ್ತು ಸಂಖ್ಯಾವೃದ್ಧಿ; ಎರಡು, ತನ್ನ ಗುಣಗಳನ್ನು ಇದ್ದಕ್ಕಿದ್ದಂತೆ ಮುಂದಿನ ಪೀಳಿಗೆಗೆ ದಾಟಿಸುವುದು. ಹೀಗೆ ಜೀವದ ಸ್ವಭಾವ ಗತಾನುಗತಿಕವಾದದ್ದು. ಆದರೆ ನಿಸರ್ಗ ಗತಾನುಗತಿಕವಲ್ಲ. ಇವೆರಡರ ಸಮ್ಮಿಳನದ ಫಲವಾಗಿ ರೂಪುಗೊಂಡ ಜೀವವಿಕಾಸದ ಚರಮ ಕಾರಣವನ್ನಾಗಲಿ ಚರಮ ಫಲವನ್ನಾಗಲಿ ಹೇಳಲು ಸಾಧ್ಯವಿಲ್ಲ. ಆದ್ದರಿಂದ ಪ್ರಪಂಚವನ್ನು ನಾವು ವಾಸ್ತವಿಕವೆನ್ನಬಹುದು; ಆದರೆ ಸಂಕಲ್ಪದ ಅರ್ಥಾತ್ ವೈಯಕ್ತಿಕತೆಯ ಅಂಶವಿಲ್ಲ.

ಬೆಕ್ಟೀರಿಯದಿಂದ ಮಾನವನವರೆಗೆ ಸಕಲ ಜೀವಜಾತಗಳಿಗೂ ಆಧಾರವಾದವು



ಹುಡುಗೀನಾ ನೋಡ್ಲಿಕ್ಕೆ ಎರಡೂ ಕಣ್ಣು ಸಾಲದು ಅಂತಾ ನೀವು ಅಂದದ್ದು — ಈ ರೀತಿ ಇದೆ ಅಂತಾ ನಾನು ಕನಸಿನಲ್ಲೂ ಭಾವಿಸಿಲ್ಲಾ
- ಜೋಯಿಸ್ರೇ!!

ಮೂಲತಃ ಎರಡೇ ಭೌತಿಕಾಂಶಗಳು: ಪ್ರೋಟೀನುಗಳು ಮತ್ತು ನ್ಯೂಕ್ಲಿಯಿಕ್ ಆಮ್ಲಗಳು. ಇವೆರಡಕ್ಕೂ ಸಂಖ್ಯಾಪರಿಮಿತಿ ಇದೆ. ಸಕಲ ವಿಧದ ಪ್ರೋಟೀನುಗಳು ಕೇವಲ 20 ವಿಧದ ಅಮೈನೋ ಆಮ್ಲಗಳ ಸಂಯೋಗಗಳಿಂದ ಸಾಧ್ಯವಾಗುತ್ತವೆ. ನ್ಯೂಕ್ಲಿಯಿಕ್ ಆಮ್ಲಗಳ ರಚನೆಯಲ್ಲಿ ಕೇವಲ ನಾಲ್ಕು ನ್ಯೂಕ್ಲಿಯೊಟೈಡುಗಳು ಪಾತ್ರವಹಿಸುತ್ತವೆ. ಜೀವಜಾತಗಳೆಲ್ಲ ತಮ್ಮ ಸರ್ವಕ್ರಿಯೆಗಳಿಗೆ ಒಂದೇ ತರಹದ ರಾಸಾಯನಿಕ ಪ್ರತಿಕ್ರಿಯಾ ಶ್ರೇಣಿಗಳನ್ನು ಅವಲಂಬಿಸಿರುತ್ತವೆ. ಇದು ಜೀವಸೃಷ್ಟಿಯಲ್ಲಿರುವ ಏಕತ್ವ.

ಜೀವಗಳಲ್ಲಿ ಪೀಳಿಗೆಯಿಂದ ಪೀಳಿಗೆಗೆ ಗುಣಗಳು ಇದ್ದಕ್ಕಿದ್ದಂತೆ ಹೇಗೆ ದಾಟುತ್ತವೆ ಎಂದು ನೋಡೋಣ. ನಾವು 20 ವಿಧದ ಅಮೈನೋ ಆಮ್ಲಗಳು ಮತ್ತು ನಾಲ್ಕು ವಿಧದ ನ್ಯೂಕ್ಲಿಯೊಟೈಡ್ಸ್ ವಿಷಯ ಹೇಳಿದೆವು. ಇವುಗಳನ್ನು ನಾವು ಮುದ್ರಣದ ಅಕ್ಷರ ಅಚ್ಚುಗಳಿಗೆ ಹೋಲಿಸಬಹುದು. ಒಮ್ಮೆ ಅಕ್ಷರಗಳನ್ನು ಒಂದು ವಿಶಿಷ್ಟ ವರಸೆಯಲ್ಲಿ ಜೋಡಿಸಿ ''ಕಂಪೋಜು'' ಮಾಡಿದ್ದಾಯಿತು; ಅವುಗಳನ್ನು ಯಂತ್ರಕ್ಕೆ ಕಳಿಸಿದರೆ ಯಥಾವತ್ತಾಗಿ ಎಷ್ಟು ಕೋಟಿ ಪ್ರತಿಗಳನ್ನೂ ಮುದ್ರಿಸಬಹುದು! ಜೀವಜಾತಗಳ ಮೂಲ 'ಅಚ್ಚು' ಡಿ ಎನ್ ಎ ಯಲ್ಲಿ ನ್ಯೂಕ್ಲಿಯೋಟೈಡುಗಳ ವರಸೆಯ ರೂಪದಲ್ಲಿ ನಿಬದ್ಧವಾಗಿ



''ಈ ಗಾರ್ಡನ್ ರೆಸ್ಟಾರೆಂಟಿನಲ್ಲಿ ಮರದ ಕೆಳಗೆ ಕೂಡುವುದು ಬೇಡಾ ಅಂದ್ರೂ, ಕೇಳಲಿಲ್ಲ ನೀನು..''

ರದೆ ಒಮ್ಮೆ ಒಂದು ವರಸೆಯಲ್ಲಿ ಮೂಲ ಅಚ್ಚು ರೂಪುಗೊಂಡ ಮೇಲೆ ಹೊರಗಿನ ಯಾವ ಸಂದೇಶವನ್ನೂ ಲೆಕ್ಕಿಸದೆ ಯಥಾವತ್ತಾಗಿ ಅದು ಪುನರ್ಮುದ್ರಣವಾಗುತ್ತ ಹೋಗುತ್ತದೆ.

ಜೀವದ ಸ್ವಭಾವದಲ್ಲಿ ಹೀಗೆ ಪೀಳಿಗೆಯಿಂದ ಪೀಳಿಗೆಗೆ ಬದಲಾಗದಂಥ ಕ್ರಿಯಾ ಏಕತ್ವ ಮತ್ತು ಪುನರಾವೃತ್ತಿಯ ಗುಣ ನಿಗದಿತವಾಗಿರುವಾಗ ಇಷ್ಟೆಲ್ಲ ಜೀವಜಾತಿಗಳು (ದೈವಸಂಕಲ್ಪವಿಲ್ಲದೆ) ಹೇಗಾದವು? ಜೀವವಿಕಾಸ ಹೇಗಾಯಿತು? ಇದ್ದಕ್ಕಿದ್ದಂತೆ ಪುನರಾವೃತ್ತಿಯಾಗುವುದೇ ಜೀವ ಲಕ್ಷಣವಾಗಿರುವಾಗ ಹೊರಗಿನ ಸಂಕಲ್ಪವಿಲ್ಲದೆ ಅನಾದಿ ಜೀವ ವೈವಿಧ್ಯಮಯವಾಗಿ ರೂಪುಗೊಳ್ಳಲು ಹೇಗೆ ಸಾಧ್ಯವಾಯಿತು.

ಇದಕ್ಕೆ ಉತ್ತರ ಭೌತಶಾಸ್ತ್ರದಲ್ಲಿದೆ. ಉಷ್ಣಾಂಶವು ಶುದ್ಧ ಶೂನ್ಯವಾಗಿರದ ಹೊರತು ಸೂಕ್ಷ್ಮ ಪದಾರ್ಥಗಳಲ್ಲಿ ಕ್ವಾಂಟಂ ಸ್ಥಿತ್ಯಂತರವಾಗುವುದನ್ನು ತಡೆಯಲು ಸಾಧ್ಯವಿಲ್ಲ. ಶುದ್ಧ ಶೂನ್ಯ ಉಷ್ಣಾಂಶ ಅಸಾಧ್ಯವಾಗಿರುವುದರಿಂದ ಯಾವುದೇ ಅಣು ವ್ಯವಸ್ಥೆಯ ರಚನೆ ಸಾವಕಾಶವಾಗಿ, ಆದರೆ ಅಪರಿಹಾರ್ಯವಾಗಿ ಬದಲಾವಣೆ ಹೊಂದುತ್ತದೆ. ಹೀಗೆ ಜೀವ ಪ್ರಪಂಚದ ಪುನರಾವೃತ್ತಿಯ ಮೂಲ ಅಚ್ಚಿನಲ್ಲಿಯೂ ಸ್ಥಿತ್ಯಂತರವಾಗುತ್ತದೆ. ಫಲವಾಗಿ ಡಿ ಎನ್ ಎ ಮೂಲ 'ಅಚ್ಚು'ಗಳ ನ್ಯೂಕ್ಲಿಯೊಟೈಡ್ ವರಸೆಯಲ್ಲಿ ಬದಲಾವಣೆಯಾಗುತ್ತದೆ. ಒಮ್ಮೆ ಆದರಲ್ಲಿ ಬದಲಾವಣೆ ಆದ ಮೇಲೆ ಈ ಬದಲಾವಣೆ ಹಾಗೆಯೇ ಉಳಿದು ಪುನರ್ಮುದ್ರಣದಲ್ಲಿಯೂ ಕಾಣಿಸಿಕೊಳ್ಳುವುದು ತಪ್ಪಿದ್ದಲ್ಲ. ಇದೇ ಜೀವ ವೈವಿಧ್ಯದ ಕಾರಣ.

ಆದರೆ ಇದನ್ನೇ ''ದೈವಸಂಕಲ್ಪ'' ಎನ್ನುವುದಕ್ಕೆ ಏನು ಅಭ್ಯಂತರ? ಎಂದು ಕೇಳಬಹುದು. ಮೊನೋದರು ಸಂಕಲ್ಪ ಇರಲು ಸಾಧ್ಯವಿಲ್ಲ ಎನ್ನುತ್ತಾರೆ. ಸಂಕಲ್ಪ ಇದ್ದರೆ ಏನಾದರೊಂದು ಕ್ರಮ ಕಾಣಿಸಬೇಕು. ಆದರೆ ವಿಕಾಸದಲ್ಲಿ ಯಾವ ಕ್ರಮವೂ ಕಾಣಿಸುವುದಿಲ್ಲ. ಪ್ರತಿಯೊಂದು ಡಿ ಎನ್ ಎ ಅಚ್ಚಿನ ಬದಲಾವಣೆಯೂ ಆಕಸ್ಮಿಕವಾಗಿದೆ. ಮುಂದಿನ ಬದಲಾವಣೆ ಹೀಗಾಗುತ್ತದೆಂದು ಮುಂದಾಗಿ ಹೇಳಲು ಸಾಧ್ಯವೇ ಇಲ್ಲ. ಆಕಸ್ಮಿಕ ಹೊರತು ಮತ್ತಾವುದೇ ಬದಲಾವಣೆಯ ಕಾರಣ ಜೀವಲೋಕದಲ್ಲಿ ಇಲ್ಲವೇ ಇಲ್ಲವೆಂಬುದು ಸಂದೇಹಕ್ಕೆ ಎಡೆಯಿಲ್ಲದಂತೆ ಅಣವಿಕ ಜೀವಶಾಸ್ತ್ರದಿಂದ ಸಿದ್ಧಪಟ್ಟಿದೆ. ಜೀವವಿಕಾಸವೆಂದು ನಾವು ಕರೆಯುವ ಈ ಮಹಾಗೋಪುರ ರಚನೆಯ ಬುಡದಲ್ಲಿ ಕೇವಲ, ಶುದ್ಧ, ಅಂಧ ಆಕಸ್ಮಿಕತೆ ಹೊರತು ಯಾವುದಾದರೊಂದು ಬಗೆಯ ಸಂಕಲ್ಪ ಇರಬಲ್ಲದೆಂಬ ಆಶೆಗೂ ಎಡೆಯಿಲ್ಲವೆಂದು ಮೊನೋದ್

ಸಾಧಿಸುತ್ತಾರೆ.

ಡಿ ಎನ್ ಎ ಎಂಬ ಅಚ್ಚಿನ ರಚನೆಯಲ್ಲಾಗುವ ಬದಲಾವಣೆಗಳನ್ನು ನಾವು ವಿಕರಣ (mutation) ಎಂದು ಕರೆಯುತ್ತೇವೆ. ವಿಕರಣಕ್ಕೆ ಏನಾದರೊಂದು ಕ್ರಮ ಇದೆಯೆಂದು ಈಗ ವಿಕಾಸಗೊಂಡಿರುವ ನಾನಾ ಜೀವ ಜಾತಿಗಳನ್ನು ನೋಡಿದರೆ ನಮಗೆ ಅನಿಸೀತು. ಆದರೆ ಹಾಗಿಲ್ಲ. ವಿಕರಣ ಎಂಬುದೊಂದು ಅಗಾಧ ಅವ್ಯವಸ್ಥೆಯ ಕೂಟ. ಏಕಾಣು ಜೀವಿಗಳಲ್ಲಿ ಯಾವುದಾದರೂ ಒಂದು ಜೀವಿ ವಿಕರಣ ಹೊಂದುವ ಸಂಭವ ಹತ್ತು ಲಕ್ಷದಿಂದ ಹತ್ತು ಕೋಟಿಗಳಲ್ಲಿ ಒಂದು. ಅರ್ಥಾತ್ ಪ್ರತಿ ತಲೆಮಾರಿನಲ್ಲಿ ಪ್ರತಿ ಹತ್ತು ಲಕ್ಷದಿಂದ ಹತ್ತು ಕೋಟಿ ಏಕಾಣುಜೀವಿಗಳಲ್ಲಿ ಯಾವುದಾದರೂ ಒಂದು ಜೀವಿ ವಿಕರಣ ಹೊಂದುತ್ತದೆ. ಇದೇನು ಮಹಾ ಎನ್ನುತ್ತೀರಾ?

ಶುಭಕಾರ್ಯ

ಅ.ನ.ಕೃಷ್ಣರಾಯರ ಸ್ನೇಹಿತರೊಬ್ಬರ ಮಗಳ ಮದುವೆ. ಅದು ಬಹುಶಃ ಸಾಹಿತ್ಯ ಪರಿಷತ್ತಿನ ಖಜಾಂಚಿಯ ಮಗಳದ್ದಿರಬಹುದು. ರಾಯರು ರಿಸೆಪ್ಷನ್‌ಗೆ ಹೋಗಬೇಕೆಂದು ನಿರ್ಧರಿಸಿದ್ದರೆಂದು ಕಾಣುತ್ತದೆ. ಒಂದು ದಿನ ಸಾಯಂಕಾಲ ಹರಟುತ್ತ ಕುಳಿತಿದ್ದಾಗ ಇದ್ದಕ್ಕಿದ್ದಂತೆ ಎದ್ದು, ಬಟ್ಟೆ ಬದಲಾಯಿಸಿಕೊಂಡು, "ಏಳಿ, ಹೋಗಿ ಬರೋಣ," ಎಂದರು. ನಾನೂ ನಟರಾಜರೂ ಅವರೊಂದಿಗೆ ಟ್ಯಾಕ್ಸಿಯಲ್ಲಿ ಕಲ್ಯಾಣ ಮಂಟಪ ತಲುಪಿದೆವು. ಆ ಕಿಕ್ಕಿರಿದ ಜನ ಸಂದಣಿಯಲ್ಲಿಯೂ ರಾಯರನ್ನೂ ನಮ್ಮನ್ನೂ ಅವರು ಸಂಭ್ರಮದಿಂದ ಸ್ವಾಗತಿಸಿದರು. ಪರಸ್ಪರ ಕೈಕುಲುಕು, ನಮಸ್ಕಾರ. ಮದುಮಕ್ಕಳ ಬಳಿ ಹೋಗಿ ಶುಭವಾಗಲೆಂದು ಹಾರೈಸಿದೆವು. ನಂತರ ಒಂದೆಡೆ ಕೂತೆವು. ತಂಪು ಪಾನೀಯ ಬಂತು. ಅನೇಕರು ರಾಯರ ಸುತ್ತ ಸೇರಿದರು. ಅಲ್ಲೊಂದು ಚಿಕ್ಕ ಸಾಹಿತ್ಯ ಸಮ್ಮೇಲನವೇ ನಡೆಯಿತು. ಆದರೆ ರಾಯರ ಕಣ್ಣುಗಳು ಮಾತ್ರ ತಮ್ಮ ಸ್ನೇಹಿತ (ಆಮಂತ್ರಿಸಿದವರು) ರನ್ನು ಹುಡುಕುತ್ತಿದ್ದವು. ಅರ್ಧ ಗಂಟೆ ಕಳೆದಿರಬಹುದು. ನಂತರ ನಾವು ರಾಯರ ಮನೆ ತಲುಪಿದ್ದಾಯಿತು. ಆದರೆ ರಾಯರಿಗೆ ಅಲ್ಲಿ ತನ್ನ ಸ್ನೇಹಿತರನ್ನು ಕಂಡು ಅಭಿನಂದಿಸಿ ಬರಲಾಗಲಿಲ್ಲವಲ್ಲ ಎಂಬ ಕೊರಗು.

ಮರುದಿನ ರಾಯರು ಆ ಸ್ನೇಹಿತರಿಗೆ ಫೋನ್ ಮಾಡಿದರಂತೆ. "ನಿನ್ನೆ ಸಂಜೆ ಮದ್ವೆ ರಿಸೆಪ್ಷನ್ನಿಗೆ ಬಂದಿದ್ದೆ. ನೀವೇ ಇರಲಿಲ್ವಲ್ಲ? ಪರವಾಯಿಲ್ಲ, ಮದ್ವೆ ಭರ್ಜರಿಯಾಗಿ ಮಾಡೀದ್ರಿ," ಎಂದು.

"ಏನಂದ್ರಿ? ನಿನ್ನೇನೆ? ನನ್ಮಗಳ ಮದ್ವೆ ರಿಸೆಪ್ಷನ್ನು ಇವತ್ತು ಸಾಯಂಕಾಲ. ಖಂಡಿತ ದಯಮಾಡಿಸಿ," ಅತ್ತ ಕಡೆಯ ಧ್ವನಿ.

"ಹೀಗಾ... ಆಯ್ತು ಬಿಡಿ. ನಿನ್ನೆ ನಾನು ಹೋದ ಮದ್ವೆ ಯಾರದಾದರೇನಂತೆ.. ಒಂದು ಶುಭಕಾರ್ಯವಾಯ್ತಲ್ಲ. ಅಷ್ಟೇ ಸಾಕು," ಎಂದು ಫೋನು ಕೆಳಗಿರಿಸಿದಂತೆ ರಾಯರು. ●

('ರಸಚೇತನ' ಸಂಭಾವನಾ ಗ್ರಂಥದಲ್ಲಿ
ಶ್ರೀ ಮಧುಪರು ಬರೆದ ಲೇಖನದಿಂದ)

ಸಂಗ್ರಹ: **ಟಿ.ಆರ್.ವೆಂಕಟೇಶಮೂರ್ತಿ**

ಒಂದು ಚಮಚೆ ನೀರಿನಲ್ಲಿ ಅನೇಕ ಶತಕೋಟಿ ಏಕಾಣು ಜೀವಿಗಳು ಇರಬಲ್ಲವು. ಅಂದರೆ ಒಂದು ಚಮಚೆ ನೀರಿನಲ್ಲಿರಬಹುದಾದ ಏಕಾಣು ಜೀವಿಗಳಲ್ಲಿ 1,000 ದಿಂದ 10,000 ಜೀವಿಗಳು ಒಂದೇ ತಲೆಮಾರಿನಲ್ಲಿ ವಿಕರಣ ಹೊಂದಬಲ್ಲವು.

ಏಕಾಣು ಜೀವಿಗಳನ್ನು ಕೈಬಿಟ್ಟು ಮನುಷ್ಯ ಜೀವಿಯ ಕಡೆ ತಿರುಗೋಣ. ಈಗ ಪ್ರಪಂಚದ ಪ್ರಪಂಚದ ಜನಸಂಖ್ಯೆ 300 ಕೋಟಿ. ಈ ಜನಸಂಖ್ಯೆಯಲ್ಲಿ ಪ್ರತಿ ತಲೆಮಾರಿನಲ್ಲಿ ಹತ್ತರಿಂದ ನೂರು ಕೋಟಿ ವಿಕರಣಗಳು ಆಗುತ್ತಿರಬಹುದೆಂದು ಮೊನೋದ್ ಲೆಕ್ಕ ಹೇಳುತ್ತಾರೆ. ನಮ್ಮನ್ನು ತಲೆಮಾರಿನಿಂದ ತಲೆಮಾರಿಗೆ ಪುನರ್ಮುದ್ರಿಸುವ ಅಚ್ಚುಗಳು ಎಷ್ಟೇ ಖಚಿತವಾಗಿದ್ದರೂ ಮನುಷ್ಯ ಕುಲದಲ್ಲಿ ಎಷ್ಟೆಲ್ಲ ವೈವಿಧ್ಯಗಳು ಒಂದೇ ತಲೆಮಾರಿನಲ್ಲಿ ತಲೆದೋರಲು ಸಾಧ್ಯವಿದೆ ಎಂದು ಇದರಿಂದ ವೇದ್ಯವಾಗುತ್ತದೆ.

ಅಂದ ಮೇಲೆ ನೂರಾರು ತಲೆಮಾರುಗಳ ನಂತರ ಮನುಷ್ಯರು ಒಬ್ಬರನ್ನೊಬ್ಬರು ಇಷ್ಟು ಮಟ್ಟಿಗಾದರೂ ಹೋಲುವುದೇ ಆಶ್ಚರ್ಯವೆನಿಸುವುದಿಲ್ಲವೇ? ನಮ್ಮ ಪುರಾಣಿಕರು ಹೇಳುವ "84 ಲಕ್ಷ ಜೀವರಾಶಿಗಳ" ಬದಲು ಅಕ್ಷರಶಃ ಲೆಕ್ಕ ಮಾಡಲಾರದಷ್ಟು ಜೀವಜಾತಿಗಳಿಂದ ಈ ಪ್ರಪಂಚ ಒಂದು ಅವ್ಯವಸ್ಥೆಯ ತುಮುಲವಾಗಿರಬೇಕಿತ್ತಲ್ಲವೆ?

ಹೀಗಾಗದೆ ಜೀವ ಪ್ರಪಂಚದಲ್ಲಿ ಏನಾದರೂ ವ್ಯವಸ್ಥೆ ಇದೆಯೆಂದು ಭಾಸವಾಗಲು ಕಾರಣ ಬೇರೆಯೇ ಇದೆ. ಇದನ್ನೇ "ಅವಶ್ಯಕತೆ"ಯ ತತ್ವ ಎನ್ನುವುದು. ಪ್ರತಿ ತಲೆಮಾರಿನಲ್ಲಿ ಪ್ರತಿ ಜೀವ ಜಾತಿಯಲ್ಲಿ ಆಗುವ ವಿಕರಣಗಳೆಲ್ಲ ಬದುಕಿ ಉಳಿಯುವುದಿಲ್ಲ. ಜೀವ ರೂಪದಲ್ಲಿ ಉಳಿದುಕೊಳ್ಳಲು ಅರ್ಹ ಅಥವಾ ಅನುಕೂಲವಾದ ವಿಕರಣಗಳು ಮಾತ್ರ ಉಳಿದುಕೊಳ್ಳುತ್ತವೆ. ಪ್ರತಿಕೂಲ ವಿಕರಣವನ್ನು ಹೊಂದಿದ ಜಂತುಗಳು ಅಳಿದು ಹೋಗುತ್ತವೆ. ಇದಕ್ಕೆ ಎದ್ದು ಕಾಣುವ ಉದಾಹರಣೆ ಬೇಕಾದರೆ "ಭೂತಶಿಶು"ಗಳೆನಿಸುವ ಮಕ್ಕಳು ಬಹು ಬೇಗನೆ ಸತ್ತು ಹೋಗುವುದನ್ನು ಗಮನಿಸಬಹುದು. ಇದೇ "ನೈಸರ್ಗಿಕ ಆಯ್ಕೆ". ಹೀಗೆ "ಆಕಸ್ಮಿಕ"ದಿಂದ ಉಂಟಾಗಬಹುದಾದ ವೈವಿಧ್ಯಗಳ ಅತಿರೇಕವನ್ನು "ಅವಶ್ಯಕತೆ" ನಿಯಮಿಸುತ್ತದೆ.



"ನಿಮ್ಮೆಜಮಾನ್ರು ಇವತ್ತು ಕಬ್ಬಿಣದ ಬೀರ್ ತೊಗೊಂಡ್ರಾ? ನಮ್ಮೆಜಮಾನ್ರು ದಿನಾಗ್ಲೂ ತೊಗೊಳ್ತಾರೆ."

ಪ್ರತಿ ತಲೆಮಾರಿನಲ್ಲಿ ಕೋಟ್ಯಂತರ ವಿಕರಣಗಳಾಗಬೇಕು. ಅವುಗಳಲ್ಲಿ ಕೆಲವು ಮಾತ್ರ ಉಳಿದುಕೊಳ್ಳಬೇಕು ಎಂಬುದು ಜೀವ ವಿಕಾಸದಲ್ಲಿ ಯಾವುದೇ ಸಂಕಲ್ಪ ಅಥವಾ ಯೋಜನೆ ಇಲ್ಲ ಎಂಬುದಕ್ಕೆ ಖಚಿತ ಪ್ರಮಾಣವಾಗಿದೆಯೆಂದು ಮೊನೋದ್ ಭಾವಿಸುತ್ತಾರೆ. ಹೀಗಿರುವಾಗ ಜೀವವಿಕಾಸ ಒಂದು ವಿಶಿಷ್ಟ ದಿಕ್ಕಿ



"ನನಗೆ ಮಂತ್ರಿ ಪದವಿ ಸಿಗಲಿಲ್ಲ ಅಂತ ಅಸಮಾಧಾನವಿಲ್ಲ.. ಜನತಾ ಸೇವೆ ಮಾಡೋ ಅವಕಾಶವಿಲ್ಲವಲ್ಲ ಅಂತ ದುಃಖ ಅಷ್ಟೆ.."

ನಲ್ಲೇ ಹೊರಟಿದೆಯೆಂದಾಗಲಿ ಅದು ದಿವ್ಯತ್ವದ ಕಡೆ ಸಾಗಿದೆಯೆಂದಾಗಲಿ ನಂಬಲು ಏನಾಧಾರ? ನಿಜವಾಗಿ ವಿಕಾಸಕ್ಕೆ ಮೂಲ ಕಾರಣವಾದ ವಿಕರಣಗಳು ಜೀವಿಗಳಿಗೆ ವಿಶಿಷ್ಟವಾದ ಪುನರಾವೃತ್ತಿ ಗುಣದಲ್ಲಿ ಇರುವ ಕೊರತೆಗಳ ಫಲವಾಗಿವೆಯೆ ಹೊರತು ಯಾವುದೇ ಸರ್ವಜ್ಞ ಬುದ್ಧಿಯ ಫಲಗಳಲ್ಲ.

ಮೊನೋದರ ಪ್ರಕಾರ, ಜೀವನದ ಆರಂಭ, ಪೃಥ್ವಿಯಲ್ಲಿ ಜೀವಪೂರ್ವದಲ್ಲಿದ್ದ ''ರಸ''ದಲ್ಲಿನ ನ್ಯೂಕ್ಲಿಯಿಕ್ ಆಮ್ಲದ ಕಣಗಳ ಆಕಸ್ಮಿಕ ಸಂಘಟನೆಯಿಂದ ಆಯಿತು. ಅನಂತರ ಜೀವಗಳ ಸ್ವತಂತ್ರ, ಅನಿರ್ದೇಶ್ಯ, ಯದ್ವಾತದ್ವಾ ವಿಕರಣಗಳ ಫಲವಾಗಿ ಜೀವಜಾತಿಗಳ ವಿಕಾಸವಾಗಿ ಮನುಷ್ಯನ ಉತ್ಪತ್ತಿಯಾಯಿತು. ಈ ವಿಕಾಸದಲ್ಲಿ ಯಾವ ಪೂರ್ವಯೋಜನೆಯೂ ಇಲ್ಲ, ಸಂಕಲ್ಪವೂ ಇಲ್ಲ. ನಿಜವಾಗಿ ನೋಡಿದರೆ ಜೀವಗಳು ವಿಕಾಸ ಹೊಂದುವ ಅಸಂಖ್ಯ ಮಾರ್ಗಗಳಿವೆ; ಈ ಪೈಕಿ ಒಂದು ಮಾರ್ಗದಲ್ಲಿ ಆಕಸ್ಮಾತ್ತಾಗಿ ತಳ್ಳಲ್ಪಟ್ಟು ಪೃಥ್ವಿಯಲ್ಲಿ ನಾವು ಕಾಣುವ ರೀತಿಯಲ್ಲಿ ಜೀವವಿಕಾಸವಾಗಿದೆ. ಅದು ಅಕಸ್ಮಾತ್ತಾಗಿ ಇನ್ನಾವುದಾದರೂ ದಾರಿ ಹಿಡಿದಿದ್ದರೆ ಬೇರೆಯೆ ತರಹದ ಜೀವಜಾತಿಗಳ ವಿಕಾಸವಾಗಬಹುದಿತ್ತು. ಮೊನೋದರ ತರಹದಲ್ಲಿಯೇ ಯೋಚಿಸುವ ಇನ್ನೊಬ್ಬ ವಿಜ್ಞಾನಿಯಾದ ಥಿಯೊಡೋಸಿಯಸ್ ದೋಬ್‌ಜನ್ಸ್ಕಿಯವರ ಅಭಿಪ್ರಾಯದಲ್ಲಿ, ಪೃಥ್ವಿಯಲ್ಲಿ ಎಲ್ಲವೂ ನಾಶವಾಗಿ ಇನ್ನೊಮ್ಮೆ ಆದಿ ಪ್ರಾಣ ತಲೆಯೆತ್ತಿದರೆ ಅದು ವಿಕಾಸಹೊಂದುತ್ತ ಮನುಷ್ಯನಂಥ ಪ್ರಾಣಿಯ ಉದಯದಲ್ಲಿ ಪರಿಣಮಿಸುವುದೆಂದು ಕೂಡ ಹೇಳಲಾಸಲ್ಲ; ಆ ಸಂಭವ ತೀರ ಅಲ್ಪ.

ಇವೆಲ್ಲದರಿಂದ ನಿಷ್ಪನ್ನವಾಗತಕ್ಕದ್ದೇನು? ಜೀವವಿಕಾಸದ ಹಿಂದೆ ಯಾವುದೊಂದು ಸಂಕಲ್ಪವಾಗಲಿ, ಧ್ಯೇಯವಾಗಲಿ ಇಲ್ಲವೇ ಇಲ್ಲ. ಮನುಷ್ಯನು ಕೇವಲ ಆಕಸ್ಮಿಕ ಮತ್ತು ಅವಶ್ಯಕತೆಗಳ ಫಲವಾಗಿ ಉದಯವಾಗಿದ್ದಾನೆ. ತಂತಾನೆ ಅತಿಮಾನವನಾಗಿ ಅಥವಾ ಮುಂದೆ ಅವನು ''ಓಮೇಗಾ ಬಿಂದು''ವಿಗೆ ಅಭಿಮುಖನಾಗಿ ದಿವ್ಯತ್ವವನ್ನು ಹೊಂದುವನೆಂಬುದೂ ವ್ಯರ್ಥ ಕಲ್ಪನೆ. ಮುಂದೆ ವಿಕಾಸದ ಗತಿ ಇಂಥದೇ ದಾರಿ ಹಿಡಿಯುವುದೆಂದು ಹೇಳಲು ಸಾಧ್ಯವೇ ಇಲ್ಲ. ಏಕೆಂದರೆ ಸಂಭಾವ್ಯತೆಗಳು ಅಕ್ಷರಶಃ ಅಸಂಖ್ಯವಾಗಿವೆ. ಮನುಷ್ಯೋತ್ಪತ್ತಿ ಅನಂತ ಆಕಸ್ಮಿಕಗಳನ್ನೊಳಗೊಂಡ ಒಂದು ಮಹಾ ಲಾಟರಿಯ ಪರಿಣಾಮ. ಪ್ರಸ್ತುತ ಲಾಟರಿಯಲ್ಲಿ ಮನುಷ್ಯನಿಗೆ ಬಹುಮಾನ ಸಿಕ್ಕಿದೆ. ಮುಂದಿನ ಲಾಟರಿಯಲ್ಲಿ ಏನೋ ಎಂತೋ. ವಿಧಿಯೆಂಬುದು ಕ್ಷಣದಿಂದ ಕ್ಷಣಕ್ಕೆ ನಿರ್ಮಾಣವಾಗುತ್ತಿದೆ. ಎಲ್ಲಾ ದೈವಿಕ ಸಿದ್ಧಾಂತಗಳು ಬರಿಗುಲ್ಲು, ನಿದ್ರೆಗೇಡು.


ಮೊನೋದರ ವಿಶ್ಲೇಷಣೆಯಲ್ಲಿ ನಿರಾಕರಿಸಲ್ಪಡುವವರು ಆಧ್ಯಾತ್ಮಿಗಳು ಮಾತ್ರವಲ್ಲ;

ಶುದ್ಧ ಲೋಕಾಯತಿಕರಾದ ಮಾರ್ಕ್ಸ್‌ವಾದಿಗಳೂ ಅದರಲ್ಲಿ ಹುಚ್ಚು ಕನಸಿನವರಾಗಿ ಕಾಣುತ್ತಾರೆ. ಮನುಷ್ಯ ಜಾತಿಗೊಂದು ಭವಿತವ್ಯತೆ ಇದೆ, ಅವನು ಸೃಷ್ಟಿಯ ಪ್ರಭು, ಇದು ಸೃಷ್ಟಿಯ ಪೂರ್ವ ನಿರ್ದಿಷ್ಟ ವಿಧಿ ಎನ್ನುವ ನಂಬಿಕೆ ಮಾರ್ಕ್ಸ್‌ವಾದಿಗಳದು. ಇದೂ ಹುಚ್ಚು ಕಲ್ಪನೆಯೆಂದೇ ಮೊನೋದ್ ಹೇಳುತ್ತಾರೆ.

ಅದು ಹೋಗಲಿ, ವಿಶ್ವದಲ್ಲಿ ತಾನೊಂದು ಕ್ಷುಲ್ಲಕ ಬಿಂದು ಎಂದು ಮನವರಿಕೆಯಾದ ಮೇಲೂ ತನ್ನಂತೆ ಇತರ ಲೋಕಗಳಲ್ಲಿ ಬುದ್ಧಿವಂತರಾದ "ಮನುಷ್ಯ"ರಿರಬಹುದು. ಇದ್ದೇ ತೀರಬೇಕು ಎಂಬ ನಂಬಿಕೆಯಿಂದ ದೂರ ನಕ್ಷತ್ರಗಳನ್ನು ಅನ್ವೇಷಿಸುವ ಆ ನಕ್ಷತ್ರಶಾಸ್ತ್ರಿಗಳ ಯತ್ನಗಳೂ ವೃಥಾ ಪ್ರಯತ್ನಗಳೇ ಸೈ. ಏಕೆಂದರೆ ಇನ್ನೊಂದು ಗ್ರಹದಲ್ಲಿ, ಲೋಕದಲ್ಲಿ ಜೀವೋತ್ಪತ್ತಿಯಾದರೂ ಅದು ನಮ್ಮ ಪೃಥ್ವಿಯಲ್ಲಿ ಹಿಡಿದ ಜಾಡನ್ನೇ ಹಿಡಿದು ಮನುಷ್ಯ ಸದೃಶ ಜೀವಿಗಳು ಉದ್ಭವಿಸಿರಬಹುದೆಂಬ "ವೈಜ್ಞಾನಿಕ" ಆಶೆ ಕೂಡ ಒಂದು ಬಯಲಾಸೆಯೆಂದೇ ಮೊನೋದರ ವಾದದ ತಾತ್ಪರ್ಯ. ಮನುಷ್ಯನು ಈ ವಿಶ್ವದಲ್ಲಿ ಬಹುಶಃ ಏಕಾಕಿಯಾಗಿದ್ದಾನೆ. ಅವನಿಗೆ ಬಂಧುಗಳು ಬೇರೆಲ್ಲಿಯೂ ಇಲ್ಲ.

ಹಾಗಾದರೆ ಮಾನವನ ಧರ್ಮಗಳು, ತತ್ವಜ್ಞಾನಿಗಳು, ಕೆಲ ಮಟ್ಟಿಗೆ ವಿಜ್ಞಾನ ಕೂಡ ನಂಬಿಕೊಂಡು ಬಂದ ಮೂಲ ತತ್ವಗಳ ಗತಿಯೇನು? ಅವನ ನೀತಿಗೆ, ಸದಸತ್ ವಿವೇಕಕ್ಕೆ ಬುನಾದಿಯೆಲ್ಲಿ? ಈ ಶೀತಲ ವಿಶ್ವದಲ್ಲಿ ಏಕಾಂಗಿಯಾಗಿ, ತನ್ನ ಉತ್ಪತ್ತಿ ಕೇವಲ ಆಕಸ್ಮಿಕ, ಅದು ದಿಗ್ರಹಿತವಾದದ್ದು, ಉದ್ದೇಶರಹಿತವಾದದ್ದು, ತಾನು ಎಲ್ಲಿಗೂ ಹೊರಟಿಲ್ಲ, ತಾನು ಕೇವಲ ಕಣ್ಣು ಕಟ್ಟಿ ಅಡವಿಯಲ್ಲಿ ಬಿಡಲ್ಪಟ್ಟ ಜಂತು, ತನ್ನ ನಿರರ್ಥಕತೆಯನ್ನು ಅರ್ಥ ಮಾಡಿಕೊಳ್ಳುವಷ್ಟು ಬುದ್ಧಿಯುಳ್ಳ ದುರ್ದೈವಿ ಎಂಬ ತಿಳುವಳಿಕೆಯನ್ನು ಅವನು ಹೇಗೆ ಜೀರ್ಣಿಸಿಕೊಳ್ಳಬಲ್ಲ?

ತನ್ನೀ ನಿಜ ಅವಸ್ಥೆಯನ್ನು ಒಪ್ಪಿಕೊಳ್ಳಲು ಮನುಷ್ಯ ಸಹಸಾ ಸಿದ್ಧನಾಗಲಿಕ್ಕಿಲ್ಲವೆಂದು ಮೊನೋದ್ ಒಪ್ಪುತ್ತಾರೆ. ಶತಮಾನಗಳ



ಸಂಪ್ರದಾಯವನ್ನು, ಅದು ನಿರ್ಮಿಸಿದ ಸುಂದರ ಸೌಧವನ್ನು, ಅದು ಒದಗಿಸಿದ ಹಿತೋಷ್ಣವಾದ ನೆಮ್ಮದಿಯನ್ನು ತೊರೆದು ಸತ್ಯದ ಪ್ರಖರ ಪ್ರಕಾಶವನ್ನು - ತಮ್ಮದು ಸತ್ಯವೆಂದು ಮೊನೋದರಿಗೆ ಅಷ್ಟು ಖಾತ್ರಿ ಇದೆ - ನೆಟ್ಟಗೆ ನೋಡಲು ಆತ ಒಪ್ಪಲಾರ. ಅವನು ಇನ್ನೂ ದೈವಕ್ಕೆ ಜೋತುಬಿದ್ದು ಉಳಿಯಬಹುದು.

ಆದರೆ ಮನುಷ್ಯ ಸತ್ಯದರ್ಶನಕ್ಕೆ ಸಿದ್ಧನಾಗಬೇಕು, ಅವನು ಸತ್ಯವನ್ನು - ಈ ಭೌತ ಪ್ರಪಂಚದಲ್ಲಿ ವ್ಯಕ್ತವಾಗುವ ಸತ್ಯವನ್ನು - ಕಂಡುಹಿಡಿಯಲು ಈಗ ಕೆಲ ಶತಮಾನಗಳಿಂದ ಪ್ರತಿಜ್ಞಾತನಾಗಿದ್ದಾನೆ; ಅದನ್ನು ನಿರಂತರವಾಗಿ ಬೆನ್ನು ಹತ್ತಿದ್ದಾನೆ. ಆದರೆ ಅವನ ಭಾವಪ್ರಪಂಚ ಇನ್ನೂ ಭೌತ ಸತ್ಯಾನ್ವೇಷಣೆಗಿಂತ ಹಿಂದಿನ ದೈವಿಕ ಕಲ್ಪನೆಗಳಿಗೆ ಜೋತುಕೊಂಡಿದೆ. ಇದು ಅವನನ್ನು ಒಂದು ಬಗೆಯಲ್ಲಿ ಇಬ್ಬಂದಿ ಮನದವನನ್ನಾಗಿ ಮಾಡಿದೆ. ಈ ಇಬ್ಬಂದಿಯನ್ನು ತೊರೆದು ಅವನು ಸತ್ಯದ ತೇಜಸ್ಸನ್ನು ಎದುರಿಸಬೇಕು. ಇಲ್ಲದಿದ್ದರೆ ಅವನಿಗೆ ತನ್ನ ನಾಗರಿಕತೆಯನ್ನು ಇನ್ನು ಮುನ್ನಡೆಸಿಕೊಂಡು ಹೋಗುವ ತ್ರಾಣ ಬರಲಾರದು - ಇದು ಮೊನೋದರ ತೀರ್ಪು.

ಮೊನೋದರ ವಿಚಾರದಲ್ಲಿ ನೈತಿಕತೆ ಹೊಸ ಅರ್ಥವನ್ನು ತಾಳುತ್ತದೆ. ವಾಸ್ತವ (objective) ಸತ್ಯವನ್ನು ಅರಿಯುವುದಕ್ಕೆ ಮನುಷ್ಯ ಕೈಕೊಂಡ ನಿರ್ಧಾರವೇ ಒಂದು ನೈತಿಕ ನಿರ್ಧಾರ. ಅದು ಅವನ ಜ್ಞಾನದ ವಿಸ್ತರಣದಿಂದ ಹೊರಟ ನಿರ್ಧಾರವಲ್ಲ; ಸ್ವತಂತ್ರ ಬುದ್ಧಿಯಿಂದ ಬಂದ ನಿರ್ಧಾರ. ಸತ್ಯವನ್ನು ಈ ರೀತಿಯಲ್ಲಿ ಬೆಂಬತ್ತಿದಂದಿನಿಂದಲೆ ಅವನಿಗೆ ನಿಜವಾದ ಜ್ಞಾನ ಲಭ್ಯವಾಗತೊಡಗಿತು.

ಈ ನವ ನೈತಿಕತೆಯಲ್ಲಿ ಜ್ಞಾನ ಅಥವಾ ಸತ್ಯಾನುಸಂಧಾನವೇ ಪರಮ ಧ್ಯೇಯವಾಗುತ್ತದೆ. ಮನುಷ್ಯನ ಉಳಿದೆಲ್ಲ ಮೌಲ್ಯಗಳು ಈ ಧ್ಯೇಯದಿಂದ ಹೊರಹೊಮ್ಮತಕ್ಕವುಗಳು: ವೈಜ್ಞಾನಿಕ ಸಮಾಜವಾದಿ ಮಾನವತಾವಾದ ಈ ಮೌಲ್ಯಗಳಲ್ಲೊಂದು, ಅನಿರ್ಬಂಧವಾದ ಸತ್ಯಾನುಸಂಧಾನ, ಚಿಂತನೆ, ಸೃಷ್ಟಿ ಇವುಗಳನ್ನು ರಕ್ಷಿಸುವ ಸಮಾಜ ವ್ಯವಸ್ಥೆಯನ್ನು ಕಟ್ಟಲು ಅದು ಸ್ಫೂರ್ತಿ ಕೊಡಬೇಕು. ಇದು ಮನುಷ್ಯ ತನ್ನ ಹೃದಯದೊಳಗೆ ಕಟ್ಟಬೇಕಾದ ಸಾಮ್ರಾಜ್ಯ. ಅದಾದಲ್ಲಿ ಅವನು ದೈವಿಕ ಕಲ್ಪನೆಗಳ ಭಯದಿಂದ ವಿಮುಕ್ತನಾಗಿ ತನ್ನ ಧ್ಯೇಯದತ್ತ ಸಾಗುವ ಧೈರ್ಯ ಮಾಡುತ್ತಾನೆ.

ಅಮೇರಿಕದಲ್ಲಿ ಒಂದು ದಿನದಲ್ಲಿ

★ ಒಂದು ನೂರಾ ಅರವತ್ತೇಳು ವ್ಯಾಪಾರಗಳು ದಿವಾಳಿಯಾಗುತ್ತವೆ. 689 ಹೊಸ ವ್ಯಾಪಾರಗಳು ಆರಂಭಗೊಳ್ಳುತ್ತವೆ. ಮತ್ತು 105 ಅಮೇರಿಕನ್ನರು ಲಕ್ಷಾಧಿಪತಿಗಳಾಗುತ್ತಾರೆ.

★ ಸ್ಮಿತ್ ಸೋನಿಯನ್ ಮ್ಯೂಜಿಯಮ್ 2,500 ವಸ್ತುಗಳನ್ನು ತನ್ನ ಸಂಗ್ರಹಕ್ಕೆ ಸೇರಿಸಿಕೊಳ್ಳುತ್ತದೆ.

★ ಅಮೇರಿಕನ್ನರು 45,000 ಹೊಸ ಕಾರು ಮತ್ತು ಟ್ರಕ್ಕುಗಳನ್ನು ಖರೀದಿಸುತ್ತಾರೆ. ಮತ್ತು 87,000 ವಾಹನಗಳನ್ನು ನಾಶಪಡಿಸುತ್ತಾರೆ.

★ 6,300ಕ್ಕಿಂತಲೂ ಹೆಚ್ಚು ಜನರು ವಿವಾಹ ವಿಚ್ಛೇದನ ಪಡೆಯುತ್ತಾರೆ. ಅದೇ ಕಾಲಕ್ಕೆ 13,000 ಜನ ವಿವಾಹವಾಗುತ್ತಾರೆ.

★ ನಾಯಿಗಳು 20 ಜನ ಪೋಸ್ಟ್‌ಮ್ಯಾನ್‌ಗಳನ್ನೊಳಗೊಂಡಂತೆ 11,000 ಪ್ರಜೆಗಳನ್ನು ಕಚ್ಚುತ್ತವೆ.

ಆರ್.ವಿ.ಕಟ್ಟಿಮನಿ ತಡಕಲ್

ನಾಸಿಕಾಪುಟ ಪುಷ್ಟಿ ಜ್ಞಾನಚೂರ್ಣ





ಎಸ್ವೀಬಿ, ನಿಟ್ಟೆ

ನಶ್ಯ ಮೂಗಿಗವಶ್ಯ, ಮೂಗು ಮನುಷ್ಯನಿಗವಶ್ಯ. ನಮ್ಮ ನಾಡಿನಲ್ಲಿ ಮೂಗಿಲ್ಲದ ಮನುಷ್ಯನಿಲ್ಲ. ನನ್ನ ಶಿಷ್ಯ ಕಪಿಶನಿಂದ ಹಿಡಿದು ಬೃಹದ್ದೇಶ ರಶ್ಯದವರೆಗೂ ನಶ್ಯದ ಬಗ್ಗೆ ಅವಶ್ಯ ದಾಖಲೆಗಳು ವಶ್ಯವಾಗುತ್ತಿವೆ. ತುಂಬಾ ಪ್ರಾಚೀನವಾದ ಋಗ್ವೇದದ ಪುರುಷ ಸೂಕ್ತದಲ್ಲಿ ಹೇಳಲಾದ, ''ಏತಾವಾಹಿ ನಶ್ಯ ಮಹಿಮಾ'' ಎಂಬ ನುಡಿಯು ನಶ್ಯ ಸೇದುವ ಕುರಿತಾದ ಪ್ರಾಚೀನ ಉಲ್ಲೇಖವಾಗಿದ್ದು, ನಶ್ಯ ಸೇದುಗರಿಗೆ ನಶ್ಯ ಸೇದಲು ಹುಮ್ಮಸ್ಸು ನೀಡಿದೆಯೆಂದು 'ನಾಸಾ ಪುಟ ಸಂಶೋಧನಾ ಮಂಡಲಿ' ಇತ್ತೀಚಿಗಿನ ಪತ್ರಿಕಾ ಪ್ರಕಟಣೆಯಲ್ಲಿ ಹೇಳಿಕೆ ನೀಡಿದೆ. ಬಹುಶಃ ನಶ್ಯವನ್ನು ಮೂಗಿಗೇರಿಸಿದಾಗ ನಸ್ಯವಾಗುವುದೇ ಇದರ ರಹಸ್ಯವಿರಬಹುದು. ಆದ್ದರಿಂದ ನಶ್ಯವಿಲ್ಲದೆ, ಬಾಳಲಾರ ಮನುಷ್ಯ. ನಶ್ಯ ಸೇದದ ಬಾಳು ವ್ಯರ್ಥವಾಗುವುದು, ಅನವಶ್ಯ.


ಜ್ಞಾನ ಚೂರ್ಣವಿದು. ಹೆಚ್ಚು ಓದುವವರೆಂದು ಹೇಳಿಕೊಳ್ಳುವ ಸುದ್ಧಿಜೀವಿಗಳು, ಬುದ್ಧಿಜೀವಿಗಳು ತಮ್ಮ ಬುದ್ಧಿ ಬರಿದಾದಾಗ, ನಿರಂತರವಾಗಿ ಓದುತ್ತಾ ಮನಸ್ಸು ಗೋಡೆ ದಾಟಿ, ಕಂಪೌಂಡು ಬಿಟ್ಟು ಪೇಟೆಗೆ ಹೊರಟು ವಿಶಾಲವಾಗುತ್ತಾ ಹೋಗುವಾಗ ಮೀನು ಪೇಟೆಯ ಹೆಂಗಸರ ಲೆಕ್ಕ ಫಕ್ಕನೆ ತಪ್ಪಿದಾಗ, ಭಾಷಣ ಕೊರೆಯುವವರ ಸ್ವರ ಶ್ರುತಿ ಬದ್ಧವಾಗಿ ಶ್ರೋತೃಗಳಿಗೆ ಜೊಂಪು ಹಿಡಿಸಿದಾಗ, ಕ್ಲಾಸಿನ ಪಾಠ ಕೇಳುವ ಸಂಯಮವಿಲ್ಲದಾಗ, ನಿರಂತರ ಚರ್ಚೆ ನಡೆವಾಗ, ಸಂಭಾಷಣೆಗೆ ಶಬ್ದಗಳು ತಡವರಿಸುವಾಗ, ಒಂದು ಚಿಟಿಕೆ ನಶ್ಯ ಆ ನಿಮ್ಮ ಮೂಗಿಗೆ ತುರುಕಿಸಿದರೆ.. ಆಕ್ಷೀ.... ಎಂಬ ಸೀನಿನೊಂದಿಗೆ ಹೊಸ ಸ್ಫೂರ್ತಿದಾಯಕ ವಾತಾವರಣ ಚಿಮ್ಮಿ ಬರುತ್ತದೆ. ಎದುರಿದ್ದ ಎದುರಾಳಿ ನಿಮಗೆ ನಮಸ್ಕಾರ ಹೇಳದೆ ಕಾಲಿಗೆ ಬುದ್ಧಿ ಹೇಳುತ್ತಾನೆ. ಹುರುಪು, ಮುಮ್ಮಡಿಗೊಂಡು ಮೂಗನ್ನೊರಿಸಿಕೊಳ್ಳುವಷ್ಟೂ ಪುರಸೊತ್ತು ಕೊಡದೆ ಕಾರ್ಯಪ್ರವೃತ್ತವಾಗುತ್ತದೆ. ಇಂತಹ ಅತ್ಯದ್ಭುತ ಸ್ಫೂರ್ತಿ ಸಿಂಚನೀ ಉಲ್ಲಾಸಮಯಿ,



ಸಂಜೀವಿನಿ ಶಕ್ತಿ ಹೊಂದಿರುವ ವಸ್ತು ಬೇರೆ ಯಾವ ಲೋಕದಲ್ಲೂ ಅಲಭ್ಯ. ಅದಕ್ಕಾಗಿ ಆಂಗ್ಲರು ಇದನ್ನು ಸೇದಿ ಗಾದೆಯನ್ನು ರಚಿಸುವ ಸ್ಫೂರ್ತಿ ಪಡೆದರು ''ಯಾನ್ ಇಂಚ್ ಆಫ್ ಸ್ನಫ್ ಗಿವ್ಸ್ ಯಾನ್ ಇಂಚ್ ಆಫ್ ಸ್ಪಿರಿಟ್'' ಎಂದು.

ಈಗಿನ ಕಾಲದಲ್ಲಿ ಸುಮ್ಮನೆ ಯಾವುದನ್ನೂ ಜನ ನಂಬುವುದಿಲ್ಲ. ಕಾರಣ, ಭಗವದ್ಗೀತೆಯಲ್ಲಿ ಶ್ರೀಕೃಷ್ಣ, ''ಸಂಶಯಾತ್ಮಾ ವಿನಶ್ಯತಿ'' ಎಂದಿದ್ದಾನೆ. ಅಂದರೆ 'ಸಂಶಯವಿದ್ದವರಿಗೆ ನಶ್ಯವೆಂದೂ ಸಿಗುವುದಿಲ್ಲ' ಎಂದು. ಜನ ಅದಕ್ಕಾಗಿ ಯಾವುದರ ಬಗ್ಗೆಯೂ ಸಂಶಯವಿಟ್ಟುಕೊಳ್ಳಲಾರರು. ನಿಮಗೆ ನಶ್ಯ ಸಿಗದಿರಲು (ನೀವು ಸೇದದಿದ್ದರೆ) ನಿಮ್ಮಲ್ಲಿರುವ ಅಜ್ಞಾನದ ಸಂಶಯವೇ ಕಾರಣ. ನಶ್ಯ ಸೇದುವ ವಿಚಾರವಂತರು ಸಂಶಯ ಬಿಟ್ಟು ನಶ್ಯ ಸೇದಿ ಸರ್ವಜ್ಞರೆನಿಸಿಕೊಂಡಿದ್ದಾರೆ. ಅಂಥವರಲ್ಲಿ ನಮ್ಮಜ್ಜ ಮೂಸಾಚಾರ್ಯರು ಅಗ್ರಗಣ್ಯರು. ಅವರು ತಮ್ಮ ಭರ್ಜರಿ ಊಟದ ಜೀರ್ಣಕ್ಕೆ ಮೂಗಿಗೆ ವ್ಯಾಯಾಮ ಕೊಡುವುದನ್ನು ಬಿಟ್ಟು ಬೇರೇನನ್ನೂ ಮಾಡಲಾರರು. ಎಡಗೈಯಲ್ಲಿ ಅರ್ಧ ತೊಲೆ ನಶ್ಯವನ್ನು ಸುರಿದು ಬಲಗೈ ಚಿಟಿಕೆಯಿಂದ ಮೂಗಿನ ಹೊಳ್ಳೆಗಳಿಗೆ ಕೋವಿಗೆ ಮದ್ದು ತುಂಬಿಸಿದಂತೆ ನಶ್ಯ ತುಂಬಿ ತಮ್ಮ ತೋರು ಬೆರಳನ್ನು ಮೂಗಿನೊಳಗೆ ತುರುಕಿ, ನೂಕುತ್ತಾರೆ. ಆ ನಶ್ಯವು ಮೂರ್ಧನ್ಯಕ್ಕೆ ತಲುಪಿ, ಹೊಟ್ಟೆಗೆ ಸೂಚನೆ ಕೊಡಲು ಹೊಟ್ಟೆಯ ಪಟ್ಟೆಯು ಸಡಿಲಾಗುವ ಅನುಭವವಾದಾಗ ಇವರು ದೀರ್ಘಶ್ವಾಸಕ್ರಿಯೆಯನ್ನು ಪ್ರಾರಂಭಿಸುವರು. ಅವರಲ್ಲೇ ಪ್ರಾಸಂಗಿಕವಾಗಿ ಕೇಳಿದೆ, ''ನೀವು ಬೀಡಿ, ಸಿಗರೇಟು, ವೀಳ್ಯ... ಇವನ್ನೆಲ್ಲ ಬಿಟ್ಟು ನಶ್ಯವನ್ನೇ ಸೇದುವುದೇಕೆ?''

ಅವರು ಪ್ರವಚನವನ್ನೇ ಪ್ರಾರಂಭಿಸಿದರು, ''ಇದು ಜ್ಞಾನ ಚೂರ್ಣ, ಕೈಯ ಒಂದು ಮತ್ತು ಎರಡನೆಯ ಬೆರಳನ್ನು (ಅಂಗುಷ್ಟ ಮತ್ತು ತೋರು ಬೆರಳು) ಸೇರಿಸಿದರೆ, ಅದು ಜ್ಞಾನ ಮುದ್ರೆ ಎನಿಸುತ್ತೆ. ಹಾಲು ಕರೆಯುವಾಗಿನ ಬೆರಳು ಇವೇ ನೋಡಿ. ನಶ್ಯ ಸರಾಗವಾಗಿ ಮೂಗಿನ ಶಿಖರವೇರಿ ಜ್ಞಾನೋದಯವಾಗುವುದೂ ಇದೇ ಮುದ್ರೆಯಲ್ಲಿ ನಶ್ಯ ಏರಿಸಿದಾಗ,'' ಎಂದರು. ಇದನ್ನು ನನಗೆ ವಿರೋಧಿಸಲಾಗಲಿಲ್ಲ. ಆಬಾಲ ಸ್ತ್ರೀವೃದ್ಧರೆಲ್ಲರನ್ನೂ ಸೆಳೆದುಕೊಂಡಿರುವ ಈ ನಶ್ಯ ಅವರಿಗೆ ಎಂಥ ಜ್ಞಾನವನ್ನು ಕೊಡುತ್ತಾ ಇದೆ! ಎಂದು ಚಕಿತನಾದೆ. ಮನುಷ್ಯನ ಜ್ಞಾನ ಮಾರ್ಗವು ಮೂಗಿನ ಹೊಳ್ಳೆಗಳ ಮೂಲಕ ಮಸ್ತಿಷ್ಕದವರೆಗೆ ಇದ್ದು, ನಶ್ಯ ಮೂಗಿನಲ್ಲೇರಿಸಿದಂತೆ ಜ್ಞಾನವೂ ಏರುತ್ತಾ ಹೋಗುವುದು ಈ ಪ್ರಪಂಚದ ಮಿಗಿಲಾದ ಕೌತುಕ.



ಜ್ಞಾನದ ಸಂಕೇತವಾದ ಚಾಳೀಸಿಗೂ (ಕನ್ನಡಕ), ನಶ್ಯಕ್ಕೂ ಗಳಸ್ಯ ಕಂಠಸ್ಯ ಸ್ನೇಹ. ಅಂದರೆ ನಶ್ಯ ಸೇದುವವರು ಚಾಳೀಸನ್ನು ಚೆನ್ನಾಗಿ ಧರಿಸಬಲ್ಲರು. ಮೂಗಿನ ಹೊಳ್ಳೆಗಳ ಮುಖಾಂತರ ನಶ್ಯವು ಮುನಸಿಪಾಲ್ಟಿಯ ವಾಹನದಂತೆ ರಭಸವಾಗಿ ಸಾಗಿ, ನಾಸಿಕಾಪುಟಗಳು ಪುಷ್ಟಿಗೊಂಡು ಸುಂದರವಾಗಿ ಉಬ್ಬಿ


ಚಾಳೀಸು ನಿಲ್ಲಲು ಸಹಕಾರಿಯಾಗುತ್ತವೆ.

"ನಶ್ಯಂ ಕುರ್ವತಿ ಸುಲೋಚನಂ
, ಸುಖಕರಂ ಜಗಂ ಪಶ್ಯತಿ"

ಎಂಬ ನಶ್ಯೋಪನಿಷತ್ತಿನ ಪ್ರತೀಕ್ಷಾಖಂಡದ ಈ ಮೇಲಿನ ವಾಕ್ಯವೂ ಇದಕ್ಕೆ ಆಧಾರ ಕೊಡುತ್ತದೆ. ಈ ರೀತಿ ನಾಸಿಕಾಪುಟ ಪುಷ್ಟಿ ಚೂರ್ಣದಿಂದ ದಿವ್ಯ ದೃಷ್ಟಿಯೂ ಸೃಷ್ಟಿಯಾಗಿ ಈ ಲೋಕದ ಸಮಸ್ತವ್ಯವಹಾರಗಳ ತ್ರಿಕಾಲ ಜ್ಞಾನವನ್ನು ಪಡೆಯುವಂತಾಗುತ್ತದೆ.

ಪತ್ರಿಕೆಯಲ್ಲೊಂದು ಸುದ್ದಿ- ವಿದೇಶದ ರೈತನೊಬ್ಬ 24 ಗಂಟೆಗಳು ಸತತವಾಗಿ ಸ್ವಲ್ಪವೂ ಮೈಗೆ, ವಸ್ತ್ರಕ್ಕೆ, ನೆಲಕ್ಕೆ ತಾಗಿಸದೆ ನಶ್ಯ ಸೇದಿ ಗಿನ್ನಿಸ್ ಪುಸ್ತಕ ಸೇರಿದ್ದು., ಕಪಿಶನಿಗೇಕೋ ಅಷ್ಟೊಂದು ದೊಡ್ಡದೆಂದು ಕಾಣಲಿಲ್ಲ. ಅದಕ್ಕೆ ಆತ ಈಗ ಬೇರೆಯೇ ಸಾಧನೆಯ ಬೆನ್ನು ಹತ್ತಿದ್ದಾನೆ. ನಶ್ಯ ಸೇದುವವರೆಂದು ಗೊತ್ತಾದರೆ ನಿಮ್ಮ ಬಳಿಗೆ ಬಂದು 'ಶೀತವಾಗಿದೆ ಸ್ವಲ್ಪ ಪುಡಿ ಕೊಡ್ರೀ' ಎಂದು ಕೇಳಿ ನಿಮ್ಮ ನಶ್ಯದ ಬುರುಡೆಯನ್ನು ಪಡೆಯುತ್ತಾನೆ. ತನ್ನ ಕೈಯಲ್ಲಿದ್ದ ಪುಸ್ತಕ 'ಮೋಸದ ಜಾಲ' ಎಂಬ ಪುಸ್ತಕವನ್ನು ನಿಮಗಿತ್ತು ನಿಮ್ಮ ಗಮನವನ್ನು ಅದರ ಕಡೆಗೆ ಓಡಿಸಿ, ತನ್ನ ಕಾರ್ಯಕ್ಕೆ ಸನ್ನದ್ಧನಾಗುತ್ತಾನೆ. ತನ್ನ ಎಡಗೈಯನ್ನು ಬೊಗಸೆಯಂತೆ ಹಿಡಿದು ನಿಮ್ಮ ನಶ್ಯ ಬುರುಡೆಯಿಂದ ನಶ್ಯ ಸುರಿದುಕೊಳ್ಳುತ್ತಾನೆ. ತನ್ನೆರಡೂ ಮೂಗಿನ ಹೊಳ್ಳೆಗಳಲ್ಲಿ ಆದಷ್ಟು ನಶ್ಯ ತುಂಬಿ ಉಳಿದುದನ್ನು ತನ್ನ ಬಲಗೈಯ ಜ್ಞಾನ ಮುದ್ರೆಯ ಅಂಕಿತದಲ್ಲಿಟ್ಟು "ಥ್ಯಾಂಕ್ಯೂ.. ಸಾ.. ಇನ್ನೊಮ್ಮೆ ಸಿಗ್ತೇನ್ರೀ...." ಎಂದು ತನ್ನ ಪುಸ್ತಕ ಪಡೆದು ಅಲ್ಲಿಂದ ಮೆಲ್ಲನೆ ಜಾರುತ್ತಾನೆ. ನಿರ್ಜನ ಪ್ರದೇಶಕ್ಕಾಗಮಿಸಿ, ತನ್ನೆರಡೂ ಮೂಗಿನ ಹೊಳ್ಳೆಗಳಲ್ಲಿ ತುಂಬಿದ ಸುಮಾರು ಮುಕ್ಕಾಲು ತೊಲೆ (ನಿಮ್ಮ ಬುರುಡೆಯಲ್ಲಿದ್ದಿದ್ದರೆ, ಇಲ್ಲದಿದ್ದರೆ ನಿಮ್ಮ ಅದೃಷ್ಟ) ನಶ್ಯವನ್ನು ತನ್ನ ಒಳಕಿಸೆಯಲ್ಲಿ ಭದ್ರವಾಗಿ ಬಚ್ಚಿಟ್ಟಿದ್ದ ನಶ್ಯದ ಡಬ್ಬಿಯಲ್ಲಿ ಕೈಬೆರಳ ಸಹಾಯವಿಲ್ಲದೆ ತುಂಬುತ್ತಾನೆ. ಕೇವಲ ಮೂಗು ಮತ್ತು ಶ್ವಾಸ ಈ ಕೆಲಸವನ್ನು ಶೀಘ್ರವಾಗಿ ಮತ್ತು ಚೊಕ್ಕವಾಗಿ ನಡೆಸಿಕೊಡುತ್ತವೆ.





ಗಿನ್ನಿಸ್ ದಾಖಲೆಗೆ ಆತ ಸೇರಿಸ ಹೊರಟಿರುವುದು ಇದನ್ನೇ, (ನಶ್ಯವನ್ನಲ್ಲ). ಈ ಕ್ರಿಯೆಯನ್ನು ಇದನ್ನಾತ 'ನಾಸಾಪುಟ ಸಂಶ್ಲೇಷಣ ಪ್ರಯೋಗ' ಎಂದು ಹೆಸರಿಸಿದ್ದಾನೆ. ಅವನ ಗುರಿ ಪ್ರತೀ ತಿಂಗಳು ಈ ಪ್ರಯೋಗದಿಂದ ಸಂಗ್ರಹಿಸಿದ ನಶ್ಯವನ್ನು ಡಬ್ಬಿಗಳಲ್ಲಿ ಶೇಖರಿಸಿ ವರ್ಷಾಂತ್ಯದಲ್ಲಿ ಆ ಡಬ್ಬಿಗಳನ್ನು ತೂಗುವುದು. ದೊಡ್ಡ ದೊಡ್ಡ ಪ್ರದರ್ಶನಾಲಯಗಳಲ್ಲಿ ಪ್ರದರ್ಶನಕ್ಕಿಡುವುದು. ಬೇರೆಯವರಿಂದ ಈ ರೀತಿ ನಶ್ಯ ಸಂಗ್ರಹವಾಗದಂತೆ ತನ್ನ ಪ್ರಯೋಗವನ್ನು ಹೆಚ್ಚೆಚ್ಚು ಪ್ರಯೋಗಿಸಲು ನಶ್ಯ ಸೇದುವವರನ್ನು ಕುತೂಹಲದಿಂದ ಹುಡುಕುತ್ತಿರುವುದು. ಈ ಮಧ್ಯೆ ಅವನು ನಶ್ಯ ಸೇದಬೇಕಾದಾಗ ಅಂಗಡಿಗಳಿಗೆ ಹೋಗಿ 'ಸ್ಯಾಂಪಲ್‌ಗೆ ಸ್ವಲ್ಪ ನಶ್ಯ ಕೊಡ್ರೀ' ಎಂದು ನಶ್ಯ ಪಡೆದು, 'ಚೆನ್ನಾಗಿದೆ, ಮತ್ತೆ ಬರ್ತೇನ್ರೀ....., ಎಂದು ಹೇಳಿ ಕಾಲು ಕೀಳು

ವುದನ್ನು ಅಭ್ಯಾಸ ಮಾಡಿಕೊಂಡಿದ್ದಾನೆ.

ನಶ್ಯದ ಘಾಟು ವಿನಸ್ಯಕ. ನಶ್ಯ ಸೇದುವಿಕೆಯು ಕ್ರಿಮಿಕೀಟಾದಿ ಪಿಪೀಲಿಕಗಳ ವಿನಾಶಕ್ಕೆ ಹೇತು. ರಾತ್ರಿ ಕಾಲದಲ್ಲಿ ವಿಶೇಷ ಕಾಟ ಕೊಡುವ ಸೊಳ್ಳೆಗಳಿಂದ ನೀವು ದೂರವಿರಲು ಬಯಸುವುದಾದರೆ ನಶ್ಯವನ್ನು ಭರ್ಜರಿ ಸೇದಿ ಮಲಗಿ. ನಿಮ್ಮ ಮೂಗಿನ ಹೊಳ್ಳೆಗಳು ವಿರೋಧಿಗಳನ್ನು ಎದುರಿಸಲು ಸನ್ನದ್ಧರಾಗಿ ನಿಂತ ಜೋಡು ಫಿರಂಗಿಗಳಂತೆ ಕಾರ್ಯವೆಸಗುತ್ತವೆ. ಎಲ್ಲಿಯಾದರೂ ಧೈರ್ಯಮಾಡಿ ಸೊಳ್ಳೆಗಳು ಹೊಳ್ಳೆಗಳ ಪ್ರವೇಶ ಮಾರ್ಗಕ್ಕೆ ಬಂದರೆ ಆ ಹೊಳ್ಳೆಗಳಲ್ಲಿ ರಭಸದಿಂದುಕ್ಕುವ ನಶ್ಯಾನಿಲವು ಸೊಳ್ಳೆಗಳನ್ನು ದೌಡಾಯಿಸಿ ಎಚ್ಚರ ತಪ್ಪಿಸಿ ಬಿಡುತ್ತದೆ. ಜೊತೆಗೆ ಗೊರಕೆ ಹೊಡೆಯುವ ಅಭ್ಯಾಸವಿದ್ದರಂತೂ ನಶ್ಯದ ರೇಚಕ ಶಕ್ತಿ ಅಧಿಕವಾಗಿ ಮನೆಯಲ್ಲಿರುವ ಮೂಷಿಕಗಳು ಮೂಗು ಮುಚ್ಚಿಕೊಂಡು ಮೂಲೋತ್ಪಾಟನವಾಗುತ್ತವೆ. ಹೀಗೆ ನಶ್ಯ ಸೇದುವವರ ಸಮೀಪ ಸೊಳ್ಳೆ, ನೊಣ, ಇರುವೆ, ಕ್ರಿಮಿಕೀಟಾದಿಗಳು ಇಲಿಗಳು ಬರಲಾರವು, ಜನರಂತೂ ಧೈರ್ಯದಲ್ಲಿ ಹತ್ತಿರ ನುಸುಳುವುದಿಲ್ಲ. ಆದ್ದರಿಂದ ಆತ ಒಬ್ಬ ಯೋಗ್ಯ ಸಮ್ಮಾರ್ಜನಿ, ಏಕಾಂತವಾಸಿ, ತನ್ಮೂಲಕ ಜ್ಞಾನ ಸಂವರ್ಧಕ.





ನಶ್ಯ ಸೌಂದರ್ಯ ವರ್ಧಕ. ನಶ್ಯ ಸೇದುವವರ ಮೂಗು ಸದಾ ಸ್ವಚ್ಛವಾಗಿರುತ್ತದೆ. ಜೀವಶಾಸ್ತ್ರ ತಿಳಿಸುವಂತೆ ಮೂಗಿನೊಳಗಿನ ಕೂದಲುಗಳು, ಹೊರಗಿನ ಧೂಳುಕಸಗಳನ್ನು ಮೂಗಿನೊಳಗೆ ಸೇರದಂತೆ ತಡೆಯುತ್ತವೆ. ಆದರೆ ನಶ್ಯ ಸೇದಿದರೆ ಆ ಕೂದಲುಗಳೂ ಉದುರಿ ಹೋಗಿ ಅದರ ಘಾಟಿಗೆ ಧೂಳುಕಸಗಳು ಧೂಳೀಪಟವಾಗುತ್ತವೆ. ಜೋರಾಗಿ ನಶ್ಯ ದಾಳಿ ನಡೆಸಿದರೆ ಗಾಳಿಯೂ ಮೂಗಿ



ನಲ್ಲಿ ಪ್ರವೇಶಿಸಿದು. ಹಾಗೆ [illegible] ಮೂಗಿನೊಳಗಿನ ಕೂದಲುಗಳ ದಮನಕ್ಕೆ ಯೋಗ್ಯ ರೇಜರೊಂದನ್ನು ಶೋಧಿಸಲು ಪ್ರಯತ್ನಿಸಿ, ಅಷ್ಟು ಪುಟ್ಟ ಗಾತ್ರದ ರೇಜರನ್ನು ಶೋಧಿಸಲು ವಿದೇಶಿ ಕಂಪೆನಿ ವಿಫಲವಾದಾಗ, ನಮ್ಮವರು 'ನಶ್ಯ ಸೇದಿ ಅಂತಹ ಕೂದಲುಗಳ ಸಂಹಾರಗೈಯಲು ಸಾಧ್ಯ' ಎಂದು ತೋರಿಸಿಕೊಟ್ಟಿದ್ದಾರೆ. ಮುಖ್ಯವಾಗಿ ಸೌಂದರ್ಯದ ರಹಸ್ಯಕ್ಕಾಗಿ ಮಾತ್ರ ಅವರಿದನ್ನು ಬಯಲುಗೊಳಿಸಿದ್ದಾರೆ. ಅವರ ಈ ವಿಜಯದ ಸ್ಮರಣಾರ್ಥ ಸಮಾರಂಭದಲ್ಲಿ



'ಸಿಂಕಿ' ಎಂಬ ನಶ್ಯವನ್ನು ಎಲ್ಲರಿಗೂ ಹಂಚಲಾಯಿತು. ಸಿಂಕಿ ಸೇದಿದ ಮಂದಿಯೆಲ್ಲ ಇಪ್ಪತ್ತು ನಿಮಿಷಗಳ ಕಾಲ ನಿರಂತರವಾಗಿ ನಲ್ವತ್ತಕ್ಕೆ ಕಡಿಮೆಯಾಗದಂತೆ ಸೀನನ್ನು ಸೀನಿಕೊಂಡು ತಮ್ಮ ಮೂಗು ಸ್ವಚ್ಛವಾದದ್ದನ್ನು ನೋಡಿ ಆಶ್ಚರ್ಯಪಟ್ಟರು. ಮುಖದ ಮೇಲೆ ಮೀಸೆ ಇಲ್ಲದ ರಸಿಕ ಹೆಂಗಸರೂ ಮೂಗಿನೊಳಗಿನ ಸ್ಮಶ್ರು ವಿನಾಶಕ್ಕಾಗಿ ನಶ್ಯ ಸೇದುವುದನ್ನು ಅಭ್ಯಾಸ ಮಾಡಿದರು. ಹೀಗೆ ನಶ್ಯ 'ಸ್ಮಶ್ರು ವಿನಾಶಿ, ಸೌಂದರ್ಯ ವರ್ಧಕ.'

ಹೀಗೆ ನಶ್ಯ ಸೇದಿ ಅನೇಕ ಸಾಹಿತಿಗಳು



ಕಾವ್ಯ ಬರೆದಿದ್ದಾರೆ, ಸಂಗೀತಗಾರರು ಹಾಡಿದ್ದಾರೆ, ವಾದ್ಯ ಬಾರಿಸಿದ್ದಾರೆ, ಮಾರ್ಕೆಟಿನ ಹೆಂಗಸರು ಮೀನು ಮಾರಾಟ ಮಾಡಿದ್ದಾರೆ, ಆಟಗಾರರು ಚೆನ್ನಕ್ಕಾಗಿ ಪರದಾಡಿದ್ದಾರೆ, ರಾಜಕೀಯ ಪುಢಾರಿಗಳು ಓಡಿ ಹೋಗಲು ಕಲಿತಿದ್ದಾರೆ, ಯುದ್ಧದಲ್ಲಿ ಜನರು ಮುನ್ನುಗ್ಗಿದ್ದಾರೆ, ಮುಂದಿನ ಜನಾಂಗವಾದ ಇಂದಿನ ಯುವಕರು ತಮ್ಮ ಗೆಳತಿಯರನ್ನು ಸೀನಿಸಿ ಅವರ ಮೂಗನ್ನು ಸ್ವಚ್ಛಗೊಳಿಸಿದ್ದಾರೆ. ಇನ್ನೊಂದು ವಿಶೇಷವೆಂದರೆ ನಶ್ಯ ಸೇದುವವರಿಗೇ ವಿಶೇಷ ಸೌಲಭ್ಯವೆಂಬಂತೆ ಖಾದಿ ಬಟ್ಟೆಗಳನ್ನು ಕಡಿತ ದರದಲ್ಲಿ ಮಾರಾಟದ ವ್ಯವಸ್ಥೆಯನ್ನೂ ಮಾಡಲಾಗಿದೆ. ಈ ನಾಸಿಕಾಪುಟ ಪುಷ್ಟಿ ಜ್ಞಾನ ಚೂರ್ಣದ ಬಗ್ಗೆ ಕಂಪ್ಯೂಟರುಗಳೂ ಕೆಲಸ ಮಾಡುತ್ತಿವೆ(ಯೆ?). ಆದ್ದರಿಂದ ನಶ್ಯದ ಶಕ್ತಿ ಅತ್ಯದ್ಭುತ. ಶ್ವಾಸೇಂದ್ರ ಮುನಿಗಳ ನಶ್ಯಾಸ್ತುತಿಯೊಂದು ಹೀಗಿದೆ:

"ನಶ್ಯ ಸೇವಕ, ನಶ್ಯ ಘಾಟಕ,
ನಶ್ಯ ಪ್ರೇರಕ, ನಶ್ಯ ಉಲ್ಲಾಸಕ,
ನಶ್ಯ ಧ್ಯಾನಕ, ನಶ್ಯ ಪ್ರಚೋದಕ,
ನಶ್ಯ ಸಮ್ಮಾರ್ಜಕ, ನಶ್ಯ ಸೌಂದರ್ಯಕ,
ನಶ್ಯ ವಿಸ್ಮಯಕ, ನಶ್ಯ ಪ್ರಭಾವಕ,
ನಶ್ಯಾಯುಷ್ಯ ಭದ್ರಕ, ಮನುಷ್ಯ ಕುಲ
ಭವಿಷ್ಯ ಸೂಚಕಾ.... ಅಹೋ ನಶ್ಯಕಾ...
ನಶ್ಯ ಪ್ರವರ್ತಕಾ.... ನೀ ಸದಾ ಪೂಜ್ಯಕ....
ಓಂ..."

ನಶ್ಯದ ಬಗ್ಗೆ ಎಷ್ಟು ಹೇಳಿದರೂ ಮತ್ತೆ ಮತ್ತೆ ಜ್ಞಾನೋದಯವಾಗುತ್ತಾ ಮತ್ತೆ ಮತ್ತೆ ಬರೆಯಬೇಕಾದುದರಿಂದ ನಶ್ಯ ಸೇದದೆ ಈ ಲೇಖನವನ್ನು ಮುಗಿಸಬೇಕಾಗಿದೆ. ●



ಇದು ಜೀವ ಇದು ಜೀವನ

ಎಂದಿನಂತೆ ಅಂದೂ ಸಾಯಂಕಾಲ ಮಕ್ಕಳಿಬ್ಬರನ್ನು ಸಿಂಗರಿಸಿ ಅವರಿಗಾಗಿ ಕಾಯುತ್ತ ನಿಂತಿದ್ದೆ.

ಅಷ್ಟರಲ್ಲಿ ಮಕ್ಕಳಿಬ್ಬರೂ ''ಪಪ್ಪ ಬಂದರು'' ಎಂದು ಕೂಗಿದರು. ತಿರುಗಿ ನೋಡಿದೆ, ಒಬ್ಬರಲ್ಲ, ಇಬ್ಬರು ಬರುತ್ತಿದ್ದರು.

ಯಾರಿರಬಹುದು? ಎಂದುಕೊಂಡು ಅವರ ಊಟ, ತಿಂಡಿಯ ವ್ಯವಸ್ಥೆಗಾಗಿ ಆಲೋಚಿಸತೊಡಗಿದೆ. ಅಷ್ಟರಲ್ಲಿ ಇವರು ಸಮೀಪ ಬಂದರು. ''ಶಾಲೂ, ಇವತ್ತು ನೋಡು ಹೊಸ ಅತಿಥಿ ಬಂದಿದ್ದಾರೆ, ಅದೂ ದೂರದ ಕರ್ನಾಟಕದಿಂದ,'' ಎಂದಾಗ ''ನಮಸ್ಕಾರ'' ಎಂದೆ.

ನಾವಾಗ ಇದ್ದದ್ದು ಕಲ್ಕತ್ತಾದಲ್ಲಿ. ಹೀಗಾಗಿ ಯಾರೇ ಕನ್ನಡದವರು ಬಂದರೂ, ನಮ್ಮಲ್ಲಿ ಅತಿಥಿ ಸತ್ಕಾರವಿದ್ದೇ ಇರುತ್ತಿತ್ತು.

ಅದೂ ಇವತ್ತು ಬಂದವರು ವಯಸ್ಸಾದ ಮುದುಕರು. ನೋಡಿದರೆ ತುಂಬಾ ಗೌರವ ಬರುವಂತೆ ಇದ್ದರು. ಬಿಳಿಯ ಬಣ್ಣದ ಪ್ಯಾಂಟು, ಶರ್ಟು ತೊಟ್ಟಿದ್ದರು. ನಿರರ್ಗಳವಾಗಿ ಇಂಗ್ಲಿಷು, ಕನ್ನಡದಲ್ಲಿ ಮಾತಾಡುತ್ತಿದ್ದರು. ಇವರು ಎಲ್ಲಿಯವರು? ಇವರಿಗೆ ಎಲ್ಲಿ ಸಿಕ್ಕರು? ಎಂದುಕೊಳ್ಳುತ್ತಿದ್ದೆ. ಅಷ್ಟರಲ್ಲಿ ನಮ್ಮವರೇ, ''ಇವರು ಮೈಸೂರಿನ 'ಮಾನಸ ಗಂಗೋತ್ರಿ'ಯಲ್ಲಿ ಕನ್ನಡ ಪ್ರೊಫೆಸರ್‌ರಂತೆ, ಇಂತಹವರಿಗೆ ಎಂತಹ ತೊಂದರೆಯಾಯಿತು ನೋಡು. ಮೈಸೂರಿನಿಂದ ಮಗಳ ಮನೆಗೆ ರಾಂಚಿಗೆ ಹೊರಟವರಿಗೆ ಖರಗಪುರದಲ್ಲಿ ಉಟ್ಟ ಬಟ್ಟೆ ಬಿಟ್ಟು ಮತ್ತೆಲ್ಲವೂ ಕಳುವಾಗಿ ಹೋಯಿತು. ಹೀಗಾಗಿ ಇಲ್ಲಿ ಇಳಿದು ನಮ್ಮ ಬ್ಯಾಂಕಿನಲ್ಲಿ ಕನ್ನಡದವರು ತುಂಬಾ ಜನರಿದ್ದಾರೆಂದು ತಿಳಿದು ನಮ್ಮಲ್ಲಿಗೆ ಬಂದಿದ್ದರು. ನಾನು ರಾತ್ರಿ ನಮ್ಮಲ್ಲಿ ಊಟ ಮಾಡಿ ಹೋಗಲು ಕರೆದುಕೊಂಡು ಬಂದೆ. ಅವರಿಗೆ ರಾಂಚಿಗೆ ಹೋಗಲು ರಾತ್ರಿ ಎರಡು ಗಂಟೆಗೆ ಟ್ರೇನು. ಅದಕ್ಕೂ ಮೊದಲು ಹನ್ನೆರಡು ಘಂಟೆಯ ಟ್ರೇನಿಗೆ ನನ್ನ ಫ್ರೆಂಡ್ ಒಬ್ಬರು ಊರಿಗೆ ಹೊರಟಿದ್ದಾರೆ. ಅವರನ್ನೂ ಕಳುಹಿಸಲು ಹೋಗಬೇಕು,'' ಅಂದರು.

ನಾನು ಅಡಿಗೆಮನೆಗೆ ಧಾವಿಸಿದೆ. ಬಂದ ಅತಿಥಿ ನನ್ನ ಮಕ್ಕಳಿಬ್ಬರನ್ನು ಮಾತನ್ನಾಡಿಸುತ್ತಿದ್ದರು. ಮಧ್ಯೆ, ಮಧ್ಯೆ ನನಗೂ ಒಳ್ಳೆಯ ಕೆಲವು ಸಲಹೆಗಳನ್ನು ಕೊಡುತ್ತಲೂ ಇದ್ದರು, ಒಟ್ಟಿನಲ್ಲಿ ನನಗೆ ಅವರು ತುಂಬಾ ಆತ್ಮೀಯರೆನಿಸಿದರು. ಅವರ ಜೊತೆ ಮಾತನ್ನಾಡುತ್ತಿದ್ದರೆ ನನ್ನ ತಂದೆಯ ಜೊತೆ ಮಾತನಾಡಿದಂತೆ ಭಾಸವಾಗುತ್ತಿತ್ತು.

ರಾತ್ರಿ ಊಟದ ನಂತರ ನನ್ನ ಕೈ ಅಡಿಗೆಯನ್ನು ಹೊಗಳಿದ್ದೆ ಹೊಗಳಿದ್ದು. ಊಟದ ನಂತರ ನಮ್ಮವರು ಸ್ಟೇಶನ್ನಿಗೆ ಹೊರಡಬೇಕಿತ್ತು. ಅವರಿಗೂ ತಯಾರಾಗಲು ಹೇಳಿದರು.

ಆದರೆ ಅವರು ಇಷ್ಟು ಬೇಗ ಹೊರಡಲು ತಯಾರಿರಲಿಲ್ಲ. ''ನೀವು ನಿಮ್ಮ ಫ್ರೆಂಡನ್ನು ಕಳುಹಿಸಿ ಬನ್ನಿ. ನನಗೆ ಮಧ್ಯರಾತ್ರಿಗೆ ಟ್ರೇನು. ನಾನು ಆಮೇಲೆ ಒಬ್ಬನೇ ಹೋಗುತ್ತೇನೆ,'' ಎಂದರು.

ರೇಲ್ವೆ ಸ್ಟೇಶನ್ ದೂರ ಇದ್ದುದರಿಂದ ''ಮೊದಲು ಅವರನ್ನು ನಂತರ ನಿಮ್ಮನ್ನು ಕಳುಹಿಸಿಯೇ ಬರುತ್ತೇನೆ'' ಎಂದು ನನ್ನವರು ಅವರನ್ನು ಹೊರಡಿಸಿಯೆ ಬಿಟ್ಟರು. ನನಗಂತೂ ಅವರನ್ನು ಕಳುಹಿಸುವಾಗ ಒಬ್ಬ ಆತ್ಮೀಯ ಬಂಧುವನ್ನು ಕಳುಹಿಸಿದ ಅನುಭವ.

ಇವರು ರಾಂಚಿಯವರೆಗೆ ಟಿಕೆಟ್ಟು ತೆಗೆಸಿಕೊಟ್ಟು ಕೈಗೂ ಸ್ವಲ್ಪ ಹಣ ಕೊಟ್ಟುದಲ್ಲದೇ ರಾಂಚಿಯಲ್ಲಿರುವ ಸ್ನೇಹಿತರ ಎಡ್ರೆಸ್‌ನ್ನು ಕೊಟ್ಟು ಮತ್ತೇನಾದರೂ ತೊಂದರೆಯಾದರೆ ಅಲ್ಲಿ ಅವರನ್ನು ಸಂಪರ್ಕಿಸಲು ಹೇಳಿ ಬಂದಿದ್ದರು.

ಅವರು ಹೋದ ನಂತರ ಕಷ್ಟದಲ್ಲಿದ್ದ ವ್ಯಕ್ತಿಗೆ ಸೇರಿದಂತಾಯಿತು ಎಂದು ಇವರಿಗೆ ಏನೋ ಒಂದು ತರದ ನೆಮ್ಮದಿ.

ಆದರೆ ಮುಂದೆ ಎಂಟೇ ದಿನದಲ್ಲಿ ಇವರ ಸ್ನೇಹಿತರಿಂದ ಕಾಗದ ಬಂತು. ''ನೀವು ಕಳುಹಿಸಿ ಕೊಟ್ಟ ಮುದುಕ ದೊಡ್ಡ ಅಂತಾರಾಷ್ಟ್ರೀಯ ಕಳ್ಳ. ಅವನು ಹೇಳಿದ್ದೆಲ್ಲಾ ಸುಳ್ಳು. ಈಗ ಅವನು ರಾಂಚಿಯ ಪೋಲೀಸ್ ಕಸ್ಟಡಿಯಲ್ಲಿದ್ದಾನೆ. ಅಂತಹವರಿಗೆಲ್ಲಾ ಇನ್ನು ಅಡ್ರೆಸ್ಸು ಕೊಡಬೇಡ,'' ಎಂದು ತಿಳಿಸಿದ್ದರು.

ಆ ಪತ್ರ ಓದಿ ನಮ್ಮಿಬ್ಬರ ಆತ್ಮಸಾಕ್ಷಿಗೆ ಪೆಟ್ಟು ಬಿದ್ದಂತಾಯಿತು. ಆದರೂ ನಂಬಿಕೆ ಬಾರದೇ ಮೈಸೂರಿನ ಮಾನಸ ಗಂಗೋತ್ರಿಗೆ ಪತ್ರ ಬರೆದು ಕೇಳಲಾಗಿ ಆ ಹೆಸರಿನ ವ್ಯಕ್ತಿ ತಮ್ಮಲ್ಲಿ ಇಲ್ಲವೆಂದು ತಿಳಿದಾಗ, ಒಳ್ಳೆಯವರನ್ನು ನಂಬದಂತಹ ಪರಿಸ್ಥಿತಿ ನಮ್ಮದಾಯಿತು. ●

- ಶೈಲಜಾ ಜಯರಾಮ್

ಇನ್ನೂ ಶಾಲೆಯ ಬೆಲ್ ಹೊಡೆಯಲು 10 ನಿಮಿಷ ಇತ್ತು. ಆದರೆ ಹಸಿವು ನನ್ನನ್ನು ಆಗಲೇ ಡಬ್ಬಿ ತೆರೆಯುವಂತೆ ಮಾಡಿತು. ಅಷ್ಟರಲ್ಲಿ ಅಲ್ಲೇ ಮೇಜಿನ ಮೇಲಿದ್ದ ಖಾಲಿ ನೀರಿನ ಬಾಟಲು ನನಗೆ ಕಂಡಿತು. ಮಾಮೂಲಿನಂತೆ ಅದನ್ನು ತೊಳೆಸಿ, ನೀರು ತರುವಂತೆ ಯಾರಾದರೂ ಹುಡುಗರಿಗೆ ಹೇಳೋಣ ಎನ್ನಿಸಿತು. ಸ್ಟಾಫ್ ರೂಮಿನಿಂದ ಹೊರಗೆ ಅಂಗಳಕ್ಕೆ ಬಂದೆ. ಯಾರೂ ಕಾಣಲಿಲ್ಲ. ಅಷ್ಟರಲ್ಲಿ ಕ್ಲಾಸ್ ರೂಮಿನ ಮುಂದೆ ನಿಂತಿದ್ದ ಹುಡುಗನೊಬ್ಬನನ್ನು ಕಂಡೆ. ಆ ಹುಡುಗನನ್ನು ಜೋರು ಮಾಡಿ ಕರೆದೆ. ಬಂದ. ಆತನಿಗೆ ಆ ಖಾಲಿ ಬಾಟಲು ಕೊಟ್ಟು, ''ಕೆಳಗೆ ಹೋಗಿ, ಬಾಟಲು ತೊಳೆದು, ನೀರನ್ನು ತುಂಬಿಸಿ ತಂದಿಡು,'' ಎಂದು ಅದೇ ದರ್ಪದ ದನಿಯಲ್ಲೇ ನುಡಿದೆ. ಆ ಹುಡುಗ ಬಾಟಲು ತೆಗೆದುಕೊಂಡು ಸರಸರನೆ ಹೋದ. ನಾನು ಡಬ್ಬಿ ಬಿಚ್ಚಿ, ತಿನ್ನಲು ಕುಳಿತೆ. ನೀರಿನೊಂದಿಗೆ ಹಿಂದಿರುಗಿದ ಹುಡುಗ ಮೇಜಿನ ಮೇಲೆ ಬಾಟಲ್ ಇಟ್ಟು, ಒಂದು ಕ್ಷಣ ನಿಂತ. ಏನು! ಎನ್ನುವಂತೆ ಅವನನ್ನು ನೋಡಿದೆ. ''ಆದರೆ ನಾನು ಈ ಸ್ಕೂಲಿನ ಸ್ಟೂಡೆಂಟಲ್ಲ ಸಾರ್,'' ಎಂದು ಹೇಳಿದವನೇ ಸರಸರ ಹೊರ ನಡೆದ. ಎತ್ತಿದ ತುತ್ತು ಒಂದು ಕ್ಷಣ ಹಾಗೆಯೇ ನಿಂತಿತು!

- ಹೆಚ್.ಎಸ್.ಶ್ರೀರಾಮಕೃಷ್ಣ

''ಧಡ್'' ಎಂಬ ಶಬ್ದದೊಂದಿಗೆ ಕಣ್ಣು ಮುಚ್ಚಿದೆ. ಕಣ್ಣು ಬಿಟ್ಟು ನೋಡಿದಾಗ ಸುಮಾರು ಇಪ್ಪತ್ತು ಅಡಿ ದೂರ ಬಿದ್ದಿದ್ದೆ. ಪರಿಸ್ಥಿತಿಯನ್ನು ತಿಳಿಯುವ ವೇಳೆಗೆ ಜೇಬಿನಲ್ಲಿದ್ದ ನಾಲ್ಕು ಸಾವಿರ ರೂಪಾಯಿಗಳ ನೋಟುಗಳು ಸುತ್ತಲೂ ಹಾರಾಡುತ್ತಿದ್ದವು. ನಿಲ್ಲಲು ಪ್ರಯತ್ನಿಸಿದೆ. ಸಾಧ್ಯವಿಲ್ಲವಾಯಿತು. ಕಾಲಿನಲ್ಲಿ ವಿಪರೀತ ನೋವಾಯಿತು. ಮಂಕು ಕವಿಯಿತು. ಅಷ್ಟರಲ್ಲಿ ಜನರು ಮುತ್ತಿಗೆ ಹಾಕಿದರು. ನಂತರ ನಡೆದ ಸಂಗತಿ ನನಗೆ ಸರಿಯಾಗಿ ಗೊತ್ತಾಗಲಿಲ್ಲ. ಪೂರ್ಣ ಪರಿಸ್ಥಿತಿ ಬರುವ ವೇಳೆಗೆ ನಾನಾಗಲೇ ಆಸ್ಪತ್ರೆಯ ಮಂಚದ ಮೇಲಿದ್ದೆ. ಆಗಲೇ ತಿಳಿದದ್ದು, ಬಲಗಾಲಿನ ಎರಡೂ ಮೂಳೆಗಳು ಮುರಿದಿವೆಯೆಂದು.

ತಕ್ಷಣ ನೆನಪಿಗೆ ಬಂದದ್ದು ಸ್ನೇಹಿತರೊಬ್ಬರು ಇನ್ನೊಬ್ಬರಿಗೆ ಕೊಡಲು ಕೊಟ್ಟಿದ್ದ ಹಣ. ಅದು ಎಂದು. ಎಣಿಸಿ ನೋಡಿದೆ. ಸರಿಯಾಗಿತ್ತು. ನೋವಿನಲ್ಲೂ ನಲಿವು ಮೂಡಿತು. ಜನರ ಔದಾರ್ಯ ಮತ್ತು ಮಾನವೀಯ ಗುಣಗಳಿಗೆ ಬೆರಗಾದೆ. ಭಟರಂತೆ ಇನ್ನೂ ಇಬ್ಬರು ನನ್ನ ಶುಶ್ರೂಷೆಗೆ ಕಂಕಣಬದ್ಧರಾಗಿ ನಿಂತಿದ್ದರು. ಅಗತ್ಯವಾದ ಔಷಧೋಪಚಾರ ಮಾಡಿಸಿದ್ದರು. ಪರಿಸ್ಥಿತಿಯನ್ನು ಅಷ್ಟರಲ್ಲೆ ನಿಭಾಯಿಸಿದ ದೇವರಿಗೆ ನಮಿಸುತ್ತಾ, ಜನರ ಔದಾರ್ಯಕ್ಕೆ ತಲೆಬಾಗಿದೆ.

ಅಂದ ಹಾಗೆ ಧಡ್ ಎಂಬ ಶಬ್ದ ಹೇಗೆ ಬಂತು ಅನ್ನುವುದನ್ನು ಹೇಳಲಿಲ್ಲ ಅಲ್ಲವೆ? ಹಠಾತ್ತನೆ ಅಡ್ಡ ಬಂದ ಆಟೋರಿಕ್ಷಾಕ್ಕೆ ನನ್ನ ಲೂನಾ ಮೊಪೆಡ್ ಡಿಕ್ಕಿ ಹೊಡೆದಿತ್ತು.

ಮೋಸ, ವಂಚನೆಗಳಿಂದ ತುಂಬಿ ತುಳುಕಾಡುವ ಇಂದಿನ ಜನಾಂಗದಲ್ಲಿ ಇನ್ನೂ ಇಂತಹವರು ಇರುವುದನ್ನು ನೆನೆಸಿಕೊಂಡಾಗ ವಿಸ್ಮಯದಿಂದ ಮೂಕನಾಗುತ್ತೇನೆ. ಭಾವ ವಿಭೋರನಾಗಿ ನೋವನ್ನು ಮರೆಯುತ್ತೇನೆ. ●

- ಕೆ.ಹೊನ್ನಪ್ಪ



ರಾಮಾಯಣದ 'ದರ್ಶನ' ಮಾಡಿಸುವ ರಾಯರು

ಕರ್ನಾಟಕದಲ್ಲಿ ಗಮಕ ಕಲೆಯ ಮೂಲಕ ಭಾರತ ಕಥಾಮಂಜರಿ, ಲಕ್ಷ್ಮೀಶ ಭಾರತಗಳನ್ನು ಜನಮನಕ್ಕೆ ಮುಟ್ಟಿಸಿದವರಲ್ಲಿ ಭಾರತ ಬಿಂದೂರಾಯರಾದಿಯಾಗಿ ಕಳಲೆ ಸಂಪತ್ಕುಮಾರಾಚಾರ್ಯರು, ಕೃಷ್ಣಗಿರಿ ಕೃಷ್ಣರಾಯರು, ತಲಕಾಡು ಮಾಯಿಗೌಡರು, ಎಂ.ರಾಘವೇಂದ್ರರಾಯರು, ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾಯರು, ಕೇರಳಾಪುರದ ಸುಬ್ಬರಾಯರು, ಜೋಳದರಾಶಿ ದೊಡ್ಡನಗೌಡರು ಮುಂತಾದವರು ಮುಖ್ಯರಾಗುತ್ತಾರೆ. ಇವರೆಲ್ಲ ಹೆಚ್ಚಾಗಿ 'ಭಾರತ'ವನ್ನೇ ಹಾಡಿ ಜನಮನ ತಣಿಸಿದವರು.


ಆದರೆ ಮುಕ್ತ ಛಂದಸ್ಸಿನಲ್ಲಿ ಕುವೆಂಪು ರಚಿಸಿದ 'ಶ್ರೀ ರಾಮಾಯಣ ದರ್ಶನಂ', ಗಮಕಕ್ಕೆ ಒಗ್ಗದವು ಎನಿಸಿದ್ದ ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ', ಚಾಮರಸನ 'ಪ್ರಭುಲಿಂಗಲೀಲೆ', ರತ್ನಾಕರವರ್ಣಿಯ 'ಭರತೇಶ ವೈಭವ' ಮುಂತಾದವುಗಳನ್ನು ಸುಶ್ರಾವ್ಯವಾಗಿ ವಾಚಿಸಬಹುದೆಂಬುದನ್ನು ಹಾಡಿತೋರಿಸಿದ್ದಷ್ಟೇ ಅಲ್ಲ, ಅವುಗಳನ್ನು ಜನಪ್ರಿಯಗೊಳಿಸಿದ ಗಮಕಿ ಹೊಸಬಾಳೆ ಸೀತಾರಾಮರಾಯರು. ಗಮಕ ಕಲೆಗೆ ಹೆಸರಾದ ಶಿವಮೊಗ್ಗ ಜಿಲ್ಲೆಯ ಸೀತಾರಾಮರಾಯರದು ಎತ್ತಿ ಹೇಳಬಹುದಾದ ಹೆಸರು.

ಇದೀಗ ಅರವತ್ತರ ಪಕ್ವವಯವನ್ನು ತಲುಪಿರುವ ಸೀತಾರಾಮರಾಯರು (ಜನನ 1930) ಜನ್ಮತಃ ಈ ಸಂಸ್ಕಾರವನ್ನು ಪಡೆದವರು. ತಂದೆ ಅನಂತಪ್ಪನವರು ವರದಳ್ಳಿಯ ಶ್ರೀಧರಸ್ವಾಮಿಗಳೊಂದಿಗೆ ಬಹುಕಾಲವಿದ್ದವರು. ಹರಿಕತೆ, ಪುರಾಣ, ಉಪನ್ಯಾಸ ಮಾಡುತ್ತಿದ್ದ ಸಹೃದಯಿ, ಅಧ್ಯಾತ್ಮವಾದಿ. ಸಂಸ್ಕೃತ - ಕನ್ನಡ ಪಂಡಿತರಾಗಿದ್ದ ಅವರು ಕರ್ನಾಟಕ ಸಂಗೀತವನ್ನು ಬಲ್ಲವರು. ಸೀತಾರಾಮರಾಯರು ಇವರ ಏಕಮಾತ್ರ ಪುತ್ರ.

ಸಾಗರದಲ್ಲಿ ಹೈಸ್ಕೂಲು ಓದುತ್ತಿದ್ದಾಗಲೇ ಹಿಂದಿಯನ್ನು ಕಲಿಯುವುದರೊಂದಿಗೆ ತಂದೆಯಿಂದ ಸಂಸ್ಕೃತ ಜ್ಞಾನವನ್ನೂ ಪಡೆದ ಸೀತಾರಾಮರಾಯರು ಸುಶ್ರಾವ್ಯವಾಗಿ ಹಾಡುವುದನ್ನೂ ರೂಢಿಸಿಕೊಂಡರು. ಆಗಿನ ಕಾಲದ ಗಮಕಿಗಳಿಂದ ಪ್ರಭಾವಿತರಾಗಿ ಗಮಕವಾಚನದತ್ತ ಲಕ್ಷ್ಯ ಹರಿಸಿದರು. ಆಗ ಮೈಸೂರಿನ ಖ್ಯಾತ ಗಮಕಿ ವೆಂಕಟೇಶಯ್ಯ ಶಿವಮೊಗ್ಗೆಯಲ್ಲಿದ್ದರು. 1950-51ರಲ್ಲಿ ವಾರಕ್ಕೊಮ್ಮೆ ಹೊಸಬಾಳೆಯಿಂದ ಶಿವಮೊಗ್ಗಕ್ಕೆ ಹೋಗಿ ನಿಷ್ಠೆಯಿಂದ ಗಮಕ ಅಭ್ಯಾಸವನ್ನು ನಡೆಸಿ

ದರು. ವಾರ್ಧಿಕ - ಭಾಮಿನಿಗಳ ಶೈಲಿಯನ್ನು ಅರಿತರು. ವೃತ್ತ, ಶ್ಲೋಕ, ಸಾಂಗತ್ಯ ರೂಢಿಸಿಕೊಂಡರು. ಅಕ್ಷರ - ಸಾಹಿತ್ಯ ಸ್ಫುಟತೆ, ಅನುಸ್ವಾರ, ವಿಸರ್ಗಗಳ ಸ್ಪಷ್ಟತೆ, ಅರ್ಥಕ್ಕೆ ಒತ್ತು ನೀಡಿ ವಾಚನದ ಶ್ರೇಷ್ಠತೆ ತೋರಿಸುವುದೇ ಅವರ ವೈಶಿಷ್ಟ್ಯ. ಅವರು ಕಾವ್ಯ ವಾಚಿಸುತ್ತಿರುವಾಗ ಸಾಮಾನ್ಯ ವ್ಯಕ್ತಿಗೆ ಸುಲಭವಾಗಿಯೇ ಅರ್ಥವಾಗುತ್ತದೆ.

1967ರಲ್ಲಿ ಮಂಡ್ಯದಲ್ಲಿ ಪ್ರಥಮ ಬಾರಿಗೆ 'ರಾಮಾಯಣ ದರ್ಶನಂ' ಅನ್ನು ತಮ್ಮದೇ ಆದ ಶೈಲಿಯಲ್ಲಿ ರಾಯರು ವಾಚಿಸಿದರು. ಅದೊಂದು ಗಮಕವಾಚನ ಸ್ಪರ್ಧೆ. ಅರವತ್ತು ಜನ ಸ್ಪರ್ಧಾಳುಗಳು. ಸೀತಾರಾಮರಾಯರಿಗೆ ದ್ವಿತೀಯ ಬಹುಮಾನ ಬಂತು. ಅಲ್ಲಿ ಹಾಜರಿದ್ದ ಗಮಕಿ ಶ್ರೀಮತಿ ಶಕುಂತಲಾ ಬಾಯಿ ಪಾಂಡುರಂಗರಾವ್ ಅವರ ಕೆಲ



ಮೋಹನ ಹೆಗಡೆ, ಬಂದಗದ್ದೆ

ಸೂಚನೆಗಳು ಇವರಿಗೆ ಮಾರ್ಗದರ್ಶಕವಾದವು. ಜೊತೆಗೆ ಅನೇಕ ಹಿರಿಯ ಶ್ರೇಷ್ಠ ಗಮಕಿಗಳ ಪರಿಚಯದ ಲಾಭವಾಯಿತು. ಈ ರಾಮಾಯಣದ ವಾಚನ ಅನೇಕರಿಗೆ ಹೊಸ ದಾರಿ ತೋರಿತು. ಮೊದಲು ಇವರ ಹಾಡಿಕೆಯನ್ನು ಮೆಚ್ಚದ ಕವಿ ಕುವೆಂಪು ಅವರಿಗಾಗಿಯೇ ಸೀತಾರಾಮರಾಯರು 1973ರಲ್ಲಿ ಮೈಸೂರಿನ 'ಉದಯರವಿ'ಯಲ್ಲಿ 'ರಾಮಾಯಣ ದರ್ಶನಂ' ಅನ್ನು ಹಾಡಿದಾಗ ಮಹಾಕವಿ ಮನತುಂಬಿ ರಾಯರನ್ನು ಅಭಿನಂದಿಸಿದರಂತೆ. ಇದರಿಂದಾಗಿ ಸೀತಾರಾಮರಾಯರಿಗೆ ದೊಡ್ಡ ಸ್ಫೂರ್ತಿ ದೊರೆತಂತಾಯಿತು.

ಡಾ.ಡಿ.ವಿ.ಜಿ.ಯವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದಾಗ ಗಮಕ ತರಗತಿಯ ಆರಂಭವೂ ಅಲ್ಲಿಯೇ ಆಯಿತು. ಭಾರತ ಬಿಂದೂರಾಯರೇ ಈ ತರಗತಿಗಳ ಪ್ರಥಮ ಅಧ್ಯಾಪಕರು. ಮುಂದೆ ಜಿ.ನಾರಾಯಣರ ಅಧ್ಯಕ್ಷತೆ, ಗಮಕಿ ಎಂ.ರಾಘವೇಂದ್ರರಾಯರ ಉಪಾಧ್ಯಕ್ಷತೆಯಲ್ಲಿ ಗಮಕ ಕಲಾ ಪರಿಷತ್ತು ಸ್ಥಾಪನೆ(1982)ಯಾದಾಗ ಶಿವಮೊಗ್ಗ ಜಿಲ್ಲೆಯ ಪ್ರತಿನಿಧಿಯಾಗಿ ಹೊಸಬಾಳೆ ರಾಯರು ಆಯ್ಕೆಯಾದರು.

ರಾಜ್ಯದ ಅನೇಕ ಕಡೆಗಳಲ್ಲಿ ಸೀತಾರಾಮರಾಯರು 'ರಾಮಾಯಣ ದರ್ಶನಂ'ದ ಜತೆ ಜತೆಯಲ್ಲಿಯೇ 'ಮಂಕುತಿಮ್ಮನ ಕಗ್ಗ'ವನ್ನು ಬಿಡಿಸಿದ್ದಾರೆ, 'ಕುಮಾರ ರಾಮ' ಮತ್ತು 'ಭರತೇಶ ವೈಭವ'ಗಳ ಸೊಗಸು ತೋರಿದ್ದಾರೆ, 'ಹರಿಶ್ಚಂದ್ರ ಕಾವ್ಯ' ಹಾಡಿ ಹರನೆಂಬುದೇ ಸತ್ಯ ಎಂದು ತೋರಿದ್ದಾರೆ. ಕುಮಾರವ್ಯಾಸನ 'ಕರ್ಣಾಟ ಭಾರತ ಕಥಾಮಂಜರಿ'ಯನ್ನು ಅವನ ತವರು ಕೋಳಿವಾಡದಲ್ಲಿ, ಲಕ್ಷ್ಮೀಶ ಭಾರತವನ್ನು ಕವಿಯ ಊರಾದ ಸುರಪುರ(ದೇವನೂರು)ದಲ್ಲಿ, 'ಭರತೇಶ

ವೈಭವ'ವನ್ನು ರತ್ನಾಕರವರ್ಣಿಯ ಊರಾದ ಮೂಡಬಿದ್ರೆಯಲ್ಲಿ, 'ರಾಮಾಯಣ ದರ್ಶನಂ'ವನ್ನು ಕುವೆಂಪು ಅವರ ಹುಟ್ಟೂರಾದ ಕುಪ್ಪಳ್ಳಿಯಲ್ಲಿ, ಕವಿಯ ಪ್ರಿಯಸ್ಥಾನ 'ಕವಿಶೈಲ'ದಲ್ಲಿ ಹಾಡಿದಾಗ ತಮಗುಂಟಾದ ಅನಿರ್ವಚನೀಯ ಅನುಭವವನ್ನು ನೆನೆದು ಇಂದಿಗೂ ರಾಯರು ಪುಳಕಗೊಳ್ಳುತ್ತಾರೆ. ಕರ್ನಾಟಕದಲ್ಲಷ್ಟೇ ಅಲ್ಲ, ದೂರದ ಮುಂಬಯಿಯ ಅನೇಕ ಕನ್ನಡ ಸಂಘ-ಸಂಸ್ಥೆಗಳಲ್ಲಿಯೂ ರಾಯರು ಆಹ್ವಾನದ ಮೇರೆಗೆ 'ರಾಮಾಯಣ ದರ್ಶನ'ದ ಅಮೃತವನ್ನು ಅಲ್ಲಿಯ ರಸಿಕರಿಗೆ ಉಣಬಡಿಸಿದ್ದಾರೆ.

ಇವರಿಗೆ ಜೊತೆಗಾರರಾಗಿ ಮತ್ತೂರು ಲಕ್ಷ್ಮೀಕೇಶವ ಶಾಸ್ತ್ರಿಗಳು, ಸಾಗರದ ಖ್ಯಾತ ಯಕ್ಷಗಾನ ಅರ್ಥಧಾರಿಗಳಾದ ಎಂ.ಆರ್.ಲಕ್ಷ್ಮೀನಾರಾಯಣರಾಯರು ಮತ್ತು ನೀ.ಸಾ.ಮಧ್ಯಸ್ಥರು ಅನೇಕ ಸಂದರ್ಭಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ.

ಗಮಕ ಪ್ರಸಾರ ಕಾರ್ಯದಲ್ಲಿಯೂ ಸೀತಾರಾಮರಾಯರದು ಅನುಪಮ ಸೇವೆ. ತಮ್ಮೂರಾದ ಹೊಸಬಾಳೆಯ ಸಮೀಪದ ನಿಸರಾಣಿ ಹೈಸ್ಕೂಲಿನಲ್ಲಿ ಅವರು 1976ರಿಂದ ಗಮಕ ತರಗತಿಗಳನ್ನು ನಡೆಸುತ್ತಿದ್ದಾರಲ್ಲದೆ ಇವರ ಪ್ರೇರಣೆಯಿಂದ ಕೆಳದಿ, ಸಾಗರ



ಮಹಾಕವಿಯೊಂದಿಗೆ

ಬತ್ತುತ್ತಿರುವ ಕನ್ನಡ ರಸಿಕರ ಹೃದಯ ಸಾಗರವನ್ನು ಮುಟ್ಟಲಿಕ್ಕೆ, ಕಾವ್ಯದ ಹೊಸ ಗಂಗಾವತರಣಕ್ಕೆ ಹೊಸಬಾಳೆ ಸೀತಾರಾಮರಾಯರಂಥ ಭಗೀರಥರೇ ಬೇಕು.

- ಗೌರೀಶ ಕಾಯ್ಕಿಣಿ

ಸೀತಾರಾಮರಾಯರ ಕಾವ್ಯವಾಚನ ಕರ್ಣರಸಾಯನ.

- ಡಾ.ಗೊರೂರು ರಾಮಸ್ವಾಮಿ ಅಯ್ಯಂಗಾರ್

ರಾಯರ ಹಾಡಿಕೆ ತುಂಬ ಮನೋಜ್ಞವಾಗಿದೆ.

- ಡಾ.ಪು.ತಿ.ನರಸಿಂಹಾಚಾರ್

ಮಲೆನಾಡಿನ ಸೌಜನ್ಯ, ಸಂಸ್ಕೃತಿ, ಸಾಹಿತ್ಯ - ಕಲಾಪ್ರೇಮಗಳ ಪ್ರತೀಕ ಹೊಸಭ್ಹಾಳೆ ಸೀತಾರಾಮರಾಯರು.

- ಬಸವರಾಜ ಕಟ್ಟೀಮನಿ

ಸಂಸ್ಕಾರವೆಂಬ ಮಾತಿಗೆ ಬೇಕಾದ ತಿಳಿವು, ನಡವಳಿಕೆ, ಸೊಗಸುಗಳನ್ನು ಸೀತಾರಾಮರಾಯರಲ್ಲಿ ಕಂಡೆನೆಂದರೆ ಅತಿಶಯೋಕ್ತಿಯಾಗಲಾರದು.

- ಡಾ.ಶಿವರಾಮ ಕಾರಂತ

ಸಹೃದಯತೆಯ ಸಮೃದ್ಧವಾದ ಸತ್ಕಾರ, ಸಾಹಿತ್ಯ ಸಂಗೀತದ ರಸದೂಟವನ್ನು ಗಮಕ ವಿನ್ಯಾಸದ ಮೂಲಕ ಸಾಕ್ಷಾತ್ಕಾರಪಡಿಸಿದವರು ಹೊಸಬಾಳೆ ಸೀತಾರಾಮರಾಯರು.

- ಬನ್ನಂಜೆ ಗೋವಿಂದಾಚಾರ್ಯ

ಹಳ್ಳಿಯಲ್ಲಿದ್ದೂ ಸೀತಾರಾಮರಾಯರು ಸಾಧಿಸಿದ ಪಾಂಡಿತ್ಯ, ಸಾಧನೆ ಕಂಡು ಅಚ್ಚರಿಯಾಗಿದೆ.

- ದೇವರಾಜ ಅರಸು

ಹಾಗೂ ಇನ್ನಿತರ ಕಡೆ ಗಮಕ ವರ್ಗಗಳು ಪ್ರಾರಂಭವಾಗಿವೆ. ಹೀಗಾಗಿ ಪ್ರತಿಭಾನ್ವಿತ ಯುವ ಗಮಕಿಗಳನೇಕರು ರಾಜ್ಯದಲ್ಲೀಗ ನಮ್ಮ ಪ್ರಾಚೀನ ಕಾವ್ಯಸುಧೆಯನ್ನು ಜನ ಸಾಧ್ಯವಾಗಿದೆ. ಮನಕ್ಕೆ ರುಚಿಸುವಂತೆಮಾಡಲು

ಆಕಾಶವಾಣಿ ಯ ಮೂಲಕ 'ರಾಮಾಯಣ ದರ್ಶನಂ'ದ ವಾಚನವನ್ನು ಮಾಡಿದ ರಾಯರು ಮುಂದೆ ಅದರ ಕ್ಯಾಸೆಟ್ ಕೂಡ ಜನಕ್ಕೆ ಸಿಕ್ಕುವಂತೆ ಮಾಡಿ ಮಹದುಪಕಾರಗೈದಿದ್ದಾರೆ. 1983ರಲ್ಲಿ ಬಿಡುಗಡೆಯಾದ ಇವರ ಕ್ಯಾಸೆಟ್ಟಿಗೆ ಸುಜನಾ ಅವರ ನಿರೂಪಣೆಯಿದೆ. ಇದೇ ಸಂದರ್ಭದಲ್ಲಿ ಮೈಸೂರಿನಲ್ಲಿ ಡಾ.ದೇಜಗೌ ಅವರ ಅಧ್ಯಕ್ಷತೆಯಲ್ಲಿ ಸೀತಾರಾಮರಾಯರಿಗೆ ಸನ್ಮಾನವೂ ಸಂದಿತು.


"ಗಮಕ ಕಲೆ ಸಾಹಿತ್ಯ - ಸಂಗೀತ - ನಾಟಕ - ಉಪನ್ಯಾಸಗಳು ಮೇಳೈಸಿದ ವಿಶಿಷ್ಟ ಕಲೆ. ಸಾಹಿತ್ಯದ ಅರ್ಥಧ್ವನಿಯನ್ನು ಶ್ರೋತೃಗಳಿಗೆ ಮುಟ್ಟಿಸಬೇಕಾದ್ದು ಗಮಕಿಯ ಕರ್ತವ್ಯ," ಎನ್ನುವ ಸೀತಾರಾಮರಾಯರು ಸ್ವಾಗತ ಪದ್ಯಗಳನ್ನು ಷಟ್ಪದಿಗಳಲ್ಲಿ, ವಿಶಿಷ್ಟ ಶೈಲಿಯಲ್ಲಿ ಬರೆದಿದ್ದು ಅವುಗಳ ಒಂದು ಗ್ರಂಥವನ್ನೂ ಪ್ರಕಟಿಸಿದ್ದಾರೆ.

ಗೌರವರ್ಣದ ನೀಳಕಾಯದ ಬೆಳ್ಳಿಗೂದಲಿನ ಶ್ವೇತ ವಸ್ತ್ರಧಾರಿಯಾದ ಸರಳ ಜೀವಿ. ಮುಖದಲ್ಲಿ ಸದಾ ಸಸ್ನೇಹ ಲಾಸ್ಯ. ಅಭಿಮಾನದಿಂದ ಕರೆದಲ್ಲಿಗೆ ಹೋಗಿ ಗಮಕ ಸೇವೆಯಿಂದ ಜನಮನವನ್ನು ತಣಿಸಿ ಬರುವ ಸೀತಾರಾಮರಾಯರದು ತೃಪ್ತ ಜೀವನ. ●

ಕಣ್ಣಿಗೆ ಕಾಣದ ಈ ಯಂತ್ರಗಳು...

'ಪ್ರಭಾ'

ಕಾರ್ಖಾನೆಯೊಂದರಲ್ಲಿ ಉದ್ಯೋಗದಲ್ಲಿ ಇರುವ ಮಧುಸೂದನನಿಗೆ ಈಗ ಐವತ್ತು ವರ್ಷ. ಎರಡು ಚಿಕ್ಕ ಮಕ್ಕಳು, ಹೆಂಡತಿ, ತಂದೆ ತಾಯಿ ಇದ್ದಾರೆ. ಬರುವ ಸಂಬಳದಲ್ಲಿ ಹೇಗೋ ಜೀವನ ನಡೆಸಿಕೊಂಡು ಹೋಗುತ್ತಿದ್ದಾನೆ. ಇದ್ದಕ್ಕಿದ್ದಂತೆ ಮಧುಸೂದನನಿಗೆ ಎದೆ ನೋವು ಬಂದಿತು. ಆಸ್ಪತ್ರೆಗೆ ದಾಖಲಾದ. ಹೃದಯದ ರಕ್ತಧಮನಿಗಳು ಸಂಕುಚಿತಗೊಂಡು ಹೃದಯಗಳ ರಕ್ತ ಚಲನೆ ಸರಿಯಾಗಿ ಆಗುತ್ತಿಲ್ಲ; ಇದನ್ನು ಸರಿಪಡಿಸಬೇಕೆಂದರೆ ಹೃದಯದ ಶಸ್ತ್ರಚಿಕಿತ್ಸೆ ನಡೆಸಬೇಕು, ತೊಡೆಯಲ್ಲಿನ ರಕ್ತನಾಳಗಳನ್ನು ತೆಗೆದು ಹೃದಯಕ್ಕೆ ಜೋಡಿಸಬೇಕು ಎಂದು ತಜ್ಞರು ಸೂಚಿಸುತ್ತಾರೆ. ಜೊತೆ ಜೊತೆಗೇ ಮಧುಸೂದನನಿಗೆ ಮಧುಮೇಹ ಮತ್ತು ರಕ್ತದೊತ್ತಡವೂ ಇದೆಯೆಂಬ ಅಂಶ ಬೆಳಕಿಗೆ ಬರುತ್ತದೆ. ರಕ್ತದೊತ್ತಡ ಮತ್ತು ಮಧುಮೇಹಗಳೆರಡನ್ನೂ ನಿಯಂತ್ರಣಕ್ಕೆ ತರಬೇಕು. ನಂತರ ಶಸ್ತ್ರಚಿಕಿತ್ಸೆಗಾಗಿ ತೊಡೆ ಹಾಗೂ ಎದೆಯನ್ನು ಕೊಯ್ಯಬೇಕು. ಇವೆಲ್ಲಕ್ಕಿಂತ ಮಧುಸೂದನ ಹೆದರಿದ್ದು ಹೆಚ್ಚಾಗಿ ಈ ಚಿಕಿತ್ಸೆಗೆ ತಗಲುವ ವೆಚ್ಚವನ್ನು ಕೇಳಿ. ತನ್ನನ್ನೇ ನಂಬಿರುವ ಕುಟುಂಬದ ಜನರನ್ನು ನೆನೆದು ಆತನ ಚಿಂತೆ ನೂರ್ಮಡಿಸುತ್ತದೆ...



ದೂರದ ಮಂಗಳ ಗ್ರಹದಲ್ಲಿ ಭೂವಿಜ್ಞಾನಿಗಳು ಪ್ರಯೋಗವೊಂದನ್ನು ನಡೆಸಲು ಯೋಜಿಸಿದ್ದಾರೆ. ಅದಕ್ಕಾಗಿ ಮಂಗಳಗ್ರಹದಿಂದ ಒಂದು ಹಿಡಿ ಮಣ್ಣನ್ನು ಭೂಗ್ರಹಕ್ಕೆ ತರಬೇಕಿದೆ. ಅದಕ್ಕಾಗಿ ತಗಲುವ ವೆಚ್ಚ, ಶ್ರಮ ನೆನೆದರೆ ಈ ಪ್ರಯೋಗ ಕೈಬಿಡುವುದೇ-ಸರಿ ಎನಿಸುತ್ತದೆ. ಆದರೆ ಸೂಕ್ಷ್ಮ ರೋಬೋಟುಗಳನ್ನು ಕಳಿಸಿ ಈ ಮಣ್ಣನ್ನು ತರುವ ಹಾಗಿದ್ದರೆ ಮತ್ತು ಈ ರೋಬೋಟುಗಳನ್ನು ನಿರ್ಮಿಸಲು ವೆಚ್ಚವೂ ಕಡಿಮೆಯಾಗುವ ಹಾಗಿದ್ದರೆ ಪ್ರಯೋಗ ಕೈಬಿಡಬಹುದೇ?

ಆ ದೇಶದ ಪ್ರಧಾನಿಯ ಕೊನೆ ದಿನಗಳು ಅವು. ಇನ್ನೇನು, ಚುನಾವಣೆ ಸಮೀಪದಲ್ಲಿದೆ. ಅಷ್ಟರಲ್ಲಿ ತನ್ನ ಹೆಸರು ಚಿರಕಾಲ ಉಳಿಯುವಂತೆ ಮಾಡಲು ಆತ ಅಂತರಿಕ್ಷಕ್ಕೆ ಈವರೆಗೆ ಯಾರೂ ಕಳಿಸದೇ ಇದ್ದ, ತನ್ನ ದೇಶದ ಶೈಕ್ಷಣಿಕ, ಮನೋರಂಜನೆಯ ಕ್ಷೇತ್ರಗಳನ್ನು ವಿಸ್ತರಿಸಲು ಒಂದು ಉಪಗ್ರಹವನ್ನು ಉತ್ಪಾದಿಸಲು ಯೋಚಿಸುತ್ತಾನೆ. ಅದರಂತೆ ಉಪಗ್ರಹ ಉಡಾವಣೆಗೆ ಸಿದ್ಧವಾಗಿದೆ. ಆದರೆ ಕೊನೆಯ ಕ್ಷಣದಲ್ಲಿ ಪದರು ಪದರುಗಳಲ್ಲಿ ಸೇರಿರುವ ಸಣ್ಣ ತಂತಿಯೊಂದು ಕಡಿದುಕೊಂಡು ಈ ಉಪಗ್ರಹವನ್ನು ಉಡಾಯಿಸುವಂತಿಲ್ಲ! ಮತ್ತೆ ಯಂತ್ರವನ್ನು ಬಿಡಿಸಿ ಸರಿಪಡಿಸಲು ಅಗಾಧ ಸಮಯಬೇಕು. ಯಂತ್ರವನ್ನು ಬಿಚ್ಚದೆಯೇ ಈ ನ್ಯೂನತೆಯನ್ನು ಸರಿಪಡಿಸುವ ಹಾಗಿದ್ದರೆ ಹೇಗೆ?

ಇಂತಹ ಜಟಿಲ ಸಮಸ್ಯೆಗಳಿಗೆ ಸದ್ಯದಲ್ಲೇ ಉತ್ತರ ಹುಡುಕುವ ದಿಸೆಯಲ್ಲಿ ಜಗತ್ತಿನ ವಿಜ್ಞಾನಿಗಳೀಗ ಮಗ್ನರಾಗಿದ್ದಾರೆ. ಸೂಕ್ಷ್ಮಾತಿಸೂಕ್ಷ್ಮ ಯಂತ್ರಗಳ ನಿರ್ಮಾಣದಲ್ಲಿ ವಿಜ್ಞಾನಿಗಳು ತಮ್ಮನ್ನು ತಾವೇ ತೊಡಗಿಸಿಕೊಂಡಿದ್ದಾರೆ.

1981ರಲ್ಲಿ ಬೋಸ್ಟನ್ನಿನಲ್ಲಿ ನಡೆದ ಒಂದು ಸಭೆಯಲ್ಲಿ ಈ ಸೂಕ್ಷ್ಮಾತಿಸೂಕ್ಷ್ಮ ಯಂತ್ರಗಳ ಬಗ್ಗೆ ಚರ್ಚೆ ನಡೆಯಿತು. ಚರ್ಚೆಯಲ್ಲಿ ಕೆಲವು ಕಾರ್ಯಕ್ರಮಗಳನ್ನು ವಿಜ್ಞಾನಿಗಳು ಯೋಚಿಸಿದರು. ಈ ಕಾರ್ಯಕ್ಷೇತ್ರದಲ್ಲಿ ಈವರೆಗೆ ನಡೆಸಲಾಗಿರುವ ಪ್ರಯೋಗಗಳ ಪಟ್ಟಿಯನ್ನು ಕರ್ಟ್ ಪೀಟರ್‌ಸನ್ ಎನ್ನುವ ವಿಜ್ಞಾನಿಯೊಬ್ಬರು ಇಲೆಕ್ಟ್ರಿಕಲ್ ಹಾಗೂ ಇಲೆಕ್ಟ್ರಾನಿಕ್ಸ್ ಇಂಜನಿಯರರ ಸಮ್ಮೇಳನದಲ್ಲಿ ಮಂಡಿಸಿದರು.

ಅತಿ ಸೂಕ್ಷ್ಮ ಸಂಪರ್ಕಜಾಲ ಕಲ್ಪಿಸುವಲ್ಲಿ ಸಿಲಿಕಾನ್ (ಮರಳಿನಲ್ಲಿ ದೊರೆಯುವ ಒಂದು ಲೋಹ)ನ ಮಹತ್ವ ಹೇಳತೀರದ್ದು. ಅರೆವಾಹಕಗಳಾದ ಇವುಗಳ ತೆಳುಪದರಗಳ ಮೇಲೆ (ಕಣ್ಣಿಗೆ ಗೋಚರವಾಗುವುದೂ ಕಷ್ಟ ಇವುಗಳು) ಮೊದಲು ವಿದ್ಯುತ್ ಸಂಪರ್ಕ ನಕ್ಷೆಗಳನ್ನು ತಯಾರಿಸಿಕೊಳ್ಳುತ್ತಾರೆ. ಇದಕ್ಕಾಗಿ ಎಲೆಕ್ಟ್ರಾನಿಕ್ ಸೂಕ್ಷ್ಮದರ್ಶಕ ಯಂತ್ರಗಳ ನೆರವನ್ನು ಪಡೆಯಲಾಗುತ್ತದೆ. ನಂತರ ಅದರ ಮೇಲೆ ಸೂಕ್ಷ್ಮವಾಗಿ ಎಲ್ಲೆಲ್ಲಿ ಸಂಧಿಸುವಿಕೆಯ ಜಾಗಗಳುಂಟೋ ಅಂಥವುಗಳನ್ನು ನಿಷ್ಕರ್ಷಿಸಿಗೊಳ್ಳಲಾಗುತ್ತದೆ. ಈ ರೀತಿಯ ತೆಳು ಪದರಗಳ ಮೇಲೆ ಸಂಪರ್ಕ ಜಾಲಗಳನ್ನು ನಿರ್ಮಿಸಿದನಂತರ ಬೇಡವಾದ ಮಿಕ್ಕ ಪದರಗಳು ತಮ್ಮಷ್ಟಕ್ಕೆ ತಾವೇ ಕರಗುವಂತೆ ರಾಸಾಯನಿಕ ಚಿಕಿತ್ಸೆ ನೀಡಲಾಗುತ್ತದೆ. ಈ ಸೂಕ್ಷ್ಮ ಪದರಗಳ ದಪ್ಪ ಎಷ್ಟಿರುತ್ತದೆ ಗೊತ್ತೆ? ಈ ವಾಕ್ಯದ ಕೊನೆಯಲ್ಲಿನ 'ಫುಲ್ ಸ್ಟಾಪ್' ಗಮನಿಸಿ. ಚುಕ್ಕೆಯ ಇನ್ನೂರ ಒಂದನೆಯ ಭಾಗ ಈ ಪದರಗಳ ದಪ್ಪ ಎಂದರೆ ಈ ಕೆಲಸ ಎಷ್ಟು ಸೂಕ್ಷ್ಮವಾಗಿದೆಯೆಂಬುದರ ಅರಿವು ಬರುವುದು. ಈ ಪದರಗಳು ಬರೇ ಕೆಲವು ಮೈಕ್ರಾನುಗಳಷ್ಟು 'ದಪ್ಪ' ಇರುತ್ತವೆ. (ಒಂದು ಮೈಕ್ರಾನ್ ಎಂದರೆ ಒಂದು ಮೀಟರಿನ ದಶಲಕ್ಷದ ಒಂದು ಭಾಗ ಮತ್ತು ಸಾಧಾರಣವಾಗಿ ಆರೋಗ್ಯವಂತ ಮನುಷ್ಯನ ಕೂದಲು 75 ಮೈಕ್ರಾನುಗಳಷ್ಟು ದಪ್ಪವಾಗಿ

ರುತ್ತದೆ!) ಅತಿ ಸೂಕ್ಷ್ಮ ಸ್ಥಿತಿಯಲ್ಲಿ ಸಿಲಿಕಾನ್ ಕಬ್ಬಿಣಕ್ಕಿಂತಲೂ ಶಕ್ತಿಶಾಲಿಯಾಗಿರುವುದಲ್ಲದೆ ಏಕಕಣಗಳಿಂದಾದ ವಸ್ತು ಇದು. ಇದರ ಮತ್ತೊಂದು ವೈಶಿಷ್ಟ್ಯವೆಂದರೆ ಹೆಚ್ಚು ಒತ್ತಡದಲ್ಲಿ ಇದರ ವಿದ್ಯುತ್ ನಿರೋಧಕತ್ವವು ಬದಲಾಗುತ್ತದೆ. ಈ ಗುಣ ಅತಿ ಸೂಕ್ಷ್ಮ ಉಪಕರಣಗಳಲ್ಲಿ ಅಗತ್ಯ ಇರಲೇಬೇಕಾದ ಗುಣಗಳಲ್ಲೊಂದು.

ಈಗಾಗಲೇ ಈ ದಿಸೆಯಲ್ಲಿ ಉತ್ಪಾದನೆಗಳು ನಡೆದಿದ್ದು ಕೆಲವು ಪದಾರ್ಥಗಳನ್ನು ಮಾರುಕಟ್ಟೆಗೆ ತರಲಾಗಿದೆ. ನೊಣದ ಕಾಲಿನ ಪಾದದಷ್ಟೇ ಇರುವ ಸಂವೇದಕಗಳು ಈಗಾಗಲೇ ವೈದ್ಯಕೀಯ ಹಾಗೂ ತಾಂತ್ರಿಕ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಜಿರಳೆಯು ಮೀಸೆ ಹಿಂದೆ ಮುಂದೆ ಆಡಿ ವಾಸನೆಯನ್ನು ಗ್ರಹಿಸುವ ರೀತಿಯಲ್ಲೇ ಈ ಸಂವೇದಕಗಳೂ ಕಾರ್ಯನಿರ್ವಹಿಸುತ್ತವೆ. ಈಗಾಗಲೇ ಒತ್ತಡ, ವೇಗ, ಶಾಖ, ವಾಸನೆ ಮುಂತಾದವುಗಳನ್ನು ಪರಿಶೀಲಿಸುವುವಲ್ಲಿ ಇವು ಕಾರ್ಯಪ್ರವೃತ್ತವಾಗಿವೆ. ಹೃದಯ ಕವಾಟದ ಬಳಿ ಅಳವಡಿಸುವ ಮೂಲಕ ರಕ್ತದ ಒತ್ತಡಗಳನ್ನು ಶಬ್ದ ತರಂಗಗಳ ಮೂಲಕ ಅಳೆಯಲು ಮತ್ತು ಹೃದಯದ ಕಾರ್ಯವೈಖರಿಯನ್ನು ಅರಿಯಲು ಸಂವೇದಕಗಳನ್ನು ಬಳಸಲಾಗುತ್ತಿದೆ. ಮೋಟಾರು ಉದ್ದಿಮೆಯಲ್ಲೂ ಈ ಸಂವೇದಕಗಳನ್ನು ಉಪಯೋಗಿಸಲಾಗುತ್ತಿದೆ. ಕಂಪ್ಯೂಟರ್ ನಿಯಂತ್ರಿತ ಕಾರುಗಳಲ್ಲಿ ಸಂವೇದಕಗಳನ್ನು ಅಳವಡಿಸಿ ಕಾರುಗಳ ವೇಗ, ಚಲಿಸುವಾಗ ಗಾಳಿಯ ಒತ್ತಡ, ಟೈರುಗಳಲ್ಲಿನ ವೇಗೋತ್ಕರ್ಷತೆ ಇವುಗಳನ್ನು ತಿಳಿಯಲಾಗುತ್ತಿದೆ. ಈ ರೀತಿಯ ಸಂವೇದಕಗಳು ಉತ್ಕೃಷ್ಟವೆನಿಸಿರುವುದೇ ಅಲ್ಲದೆ ಅತ್ಯುತ್ತಮ ಕಾರ್ಯನಿರ್ವಾಹಕಗಳೆಂದೂ ದೃಢಪಟ್ಟಿದೆ.

ಈ ರೀತಿಯ ಸೂಕ್ಷ್ಮ ಸಂವೇದಕಗಳಿಂದ ಆಚೆಯಿಂದಲೇ ನಿಯಂತ್ರಿಸಲು ಸಾಧ್ಯವಾಗಬಹುದಾದ ಅತಿ ಸೂಕ್ಷ್ಮ ರೋಬೋಟ್ (ಯಂತ್ರ ಮಾನವ)ಗಳನ್ನು ತಯಾರಿಸಲು ಪ್ರಯತ್ನ ನಡೆದಿದೆ. ಈ ದಿಸೆಯಲ್ಲಿ ಕೆಲವು ಪ್ರಯೋಗಗಳು ನಡೆದಿದ್ದು ಪರಿಣಾಮಗಳು ಉತ್ತೇಜಕವಾಗಿವೆ.

ನಾಲ್ಕು ಅತಿ ಚಿಕ್ಕದಾದ ಪಿಂಗಾಣಿಯ ಪದರಗಳನ್ನು ಚೌಕಾಕಾರದಲ್ಲಿ ಜೋಡಿಸಿದರು ವಿಜ್ಞಾನಿಗಳು. ಅವುಗಳಿಗೆ ನಾಲ್ಕು ಸಿಲಿಕಾನ್ ಕಾಲುಗಳನ್ನು ನಾಲ್ಕೂ ಮೂಲೆಗಳಲ್ಲಿ ಸಿಕ್ಕಿಸಿದರು. ನಂತರ ಇದನ್ನು ಸಿಲಿಕಾನ್ ಪದರಗಳ ಮೇಲೆ ಇರಿಸಿ ವಿದ್ಯುತ್ ಲೇಪನ ನೀಡಿದರು. ಕಡಿಮೆ ಪ್ರಮಾಣದ ವಿದ್ಯುತ್ ಹರಿಸಿದರೂ ಸಾಕು, ಈ ಕಾಲುಗಳು ಹಿಂದೆ ಮುಂದೆ ಚಲಿಸಲು ಆರಂಭಿಸಿದವು. ಈ ಕಾಲುಗಳ ಮೇಲಿನ ವಿದ್ಯುತ್ತನ್ನು ನಿಯಂತ್ರಿಸುವುದರಿಂದ ಈ ತೆಳು ಹಲಗೆಯ ಮೇಲೆ ಈ ವಸ್ತು ನಡೆದಾಡುವಂತೆ ಮಾಡಬಹುದು! ಈ ಪ್ರಯೋಗ ನಡೆಸಿದ ಬಾಂ ಪೊಲಿಯಾರ್ ಮತ್ತು ವಿಲಿಯಂ ಟ್ರಿಮ್ಮರ್ ಎನ್ನುವ ವಿಜ್ಞಾನಿಗಳು ಈ ಸೂತ್ರವನ್ನು ಕೆಲವು ಉಪಕರಣಗಳಲ್ಲಿ ಯಶಸ್ವಿಯಾಗಿ ಅಳವಡಿಸಿದ್ದಾರೆ. ಹಿರೋ ಹೋಟಿ ಫ್ಯೂಜಿತಾ ಎಂಬ ಜಪಾನಿ ವಿಜ್ಞಾನಿ ಒಂದು ಅತಿ ಸೂಕ್ಷ್ಮವಾದ ದುಂಡು ಕಡ್ಡಿಯ ಒಂದು ತಳಭಾಗದಲ್ಲಿ ಅತಿ ಸೂಕ್ಷ್ಮ ವಿದ್ಯುತ್ ವಾಹಕಗಳನ್ನು ಇರಿಸಿದ. ದುಂಡು ಕಡ್ಡಿಯ ಒಂದು ಭಾಗಕ್ಕೆ ವಿದ್ಯುತ್ ಹರಿಸಿದಾಗ ಕೊಳವೆ ಮುಂದೆ ಹೋಯಿತು; ಈ ಪ್ರಯೋಗ ಒಂದು ರೀತಿಯಲ್ಲಿ ಮುಂದಿನ ಪ್ರಯೋಗಗಳಿಗೆ 'ಪಾಯ' ನಿರ್ಮಿಸಿತು.

ಡೇವಿಡ್ ಕರ್ನ್ಸ್ ಸ್ವಯಂ ಈಜಬಲ್ಲ ಯಂತ್ರಮಾನವನ ಜೋಡಣೆಯಲ್ಲಿ ನಿರತರಾಗಿದ್ದಾರೆ. ಹೊರಗಿನ ಅಯಸ್ಕಾಂತ ಸುರುಳಿಗಳ ಮೂಲಕ ವಿದ್ಯುತ್ತನ್ನು ಹರಿಸುವ ಮೂಲಕ ಈ ರೋಬೋಟ್‌ಅನ್ನು ಈಜುವಂತೆ ಮಾಡಬಹುದು.

ಗಾತ್ರದಲ್ಲಿ ನೊಣಕ್ಕಿಂತಲೂ ಚಿಕ್ಕದಾದ ಯಂತ್ರಮಾನವರನ್ನು ನಿರ್ಮಿಸಲು ಅತಿ ವೇಗದಲ್ಲಿ ತಿರುಗುವ ಮೋಟಾರು ಬೇಕಾಗುತ್ತದೆ. ಈವರೆಗೆ ಅತಿ ಸೂಕ್ಷ್ಮವಾದ ಮೋಟಾರುಗಳನ್ನು ತಯಾರಿಸಲು ಸಾಧ್ಯವಾಗಿರಲಿಲ್ಲ. ಸಾಂಪ್ರದಾಯಕವಾದ ಅಯಸ್ಕಾಂತ ಮೋಟಾರುಗಳಂತೆ ವಿದ್ಯುತ್ತಿನಿಂದ ಚಲಿಸಬಹುದಾದ ಸೂಕ್ಷ್ಮೋಪಕರಣಗಳು ಲಭ್ಯವಿಲ್ಲದಿರುವುದೂ ಇದಕ್ಕೆ ಕಾರಣವಾಗಿತ್ತು. ಸಾಂಪ್ರದಾಯಕ ಮೋಟಾರುಗಳ ಮೇಲೆ ಸುತ್ತಲಾಗುವ ತಂತಿಗಳು ಹಾಗೂ ಅಯಸ್ಕಾಂತ ಶಕ್ತಿಯುಳ್ಳ ಕಬ್ಬಿಣ ಅಥವಾ ನಿಕ್ಕಲ್‌ಗಳ ಲೋಹಗಳೇ ಬೇಕಾಗಿದ್ದುದು. ಅದರೊಂದಿಗೆ ಸಿಲಿಕಾನ್ ಪದರಗಳ ಮೇಲೆ ಇವುಗಳನ್ನು ಅಳವಡಿಸುವುದು ಸಾಧ್ಯವಾಗಿರಲಿಲ್ಲ.

ಈ ನಿಟ್ಟಿನಲ್ಲಿ ಲಾಂಗ್ ಶಿಂಗ್ ಫ್ಯಾನ್ ಮತ್ತು ಯು ಚೋಂಗ್‌ಬೈ ಎನ್ನುವ ವಿಜ್ಞಾನಿಗಳು ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯದಲ್ಲಿ ಒಂದು ಪ್ರಯೋಗ ನಡೆಸಿ ಯಶಸ್ವಿಯಾದರು. ಈ ಪ್ರಯೋಗ ಜಗತ್ತಿನ ಸೂಕ್ಷ್ಮಾತಿಸೂಕ್ಷ್ಮ ಯಂತ್ರತಯಾರಿಕೆಯಲ್ಲಿ ಒಂದು ದೊಡ್ಡ ಬಿರುಗಾಳಿಯನ್ನೇ ಎಬ್ಬಿಸಿದೆ. ತಲೆಗೂದಲಿನ ಅಡ್ಡಲಾಗಿ ಮೂರನೇ ಎರಡು ಭಾಗದಷ್ಟು ಮಾತ್ರ ಆಕ್ರಮಿಸಿಕೊಳ್ಳಬಹುದಾದ ಮೋಟಾರ್ ಒಂದನ್ನು ಇವರು ತಯಾರಿಸಿದ್ದಾರೆ. ಈ ರೀತಿಯ ಹತ್ತು ಸಾವಿರ ಮೋಟಾರುಗಳನ್ನು ಬರೇ ಒಂದು ಬಟಾಣಿ ಕಾಳಿನ ಮೇಲೆ ಇರಿಸಬಹುದು!

ಈ ಮೋಟಾರು ಹೇಗಿದೆ?: ಅಪ್ಪ ಬಾಹುಗಳ ಮೋಟಾರಿನ ರೋಟಾರ್ (ತಿರುಗು

ಚಕ್ರ)ದ ವ್ಯಾಸ 0.005 ಸೆಂಟಿಮೀಟರಿನಷ್ಟು, ಅದರ ಪ್ರತಿಬಾಹುವೂ ಒಂದು ಕೆಂಪು ರಕ್ತಕಣದಷ್ಟು ಮಾತ್ರ ಅಗಲವಿದೆ. ಸಂಪೂರ್ಣ ಮೋಟಾರಿನ ವ್ಯಾಸ 0.007 ಸೆಂ.ಮೀ. ಸಾಂಪ್ರದಾಯಿಕ ಮೋಟಾರುಗಳಲ್ಲಿಯಂತೆ ಅಯಸ್ಕಾಂತಗಳನ್ನು ಬಳಸದೇ ಈ ಮೋಟಾರುಗಳಲ್ಲಿ ವಿದ್ಯುತ್ತನ್ನು ಹರಿಸುವ ಪ್ರಯತ್ನ ನಡೆದಿದೆ. 'ಋಣ' ಮತ್ತು 'ಧನ' ವಿದ್ಯುತ್ತನ್ನು ಸಮಾನಾಂತರವಾಗಿ, ಅಂದರೆ ತಲಾ 180 ಅಂಶಗಳಲ್ಲಿ ಇರಿಸಲಾಗಿರುವ ರೋಟಾರಿನ ಬಾಹುಗಳಿಗೆ ಹರಿಸಬಹುದು. ಮಿಕ್ಕ ಬಾಹುಗಳಿಗೆ ವಿದ್ಯುತ್ ಹರಿಯುವುದಿಲ್ಲ. ಈ ಎರಡು ಬಾಹುಗಳಿಗೆ ವಿದ್ಯುತ್ತು ಹಾಯಿಸಿದಂತೆಯೇ ಋಣ ವಿದ್ಯುತ್ತಿರುವ ಬಾಹು ಧನ ವಿದ್ಯುತ್ತಿರುವ ಬಾಹುವಿನ ಕಡೆಗೂ ಮತ್ತು ಧನ ವಿದ್ಯುತ್ತಿರುವ ಬಾಹು ಋಣ ವಿದ್ಯುತ್ತಿರುವ ಬಾಹುವಿನ ಕಡೆಗೂ ತಿರುಗುತ್ತದೆ. ಈ ರೀತಿ ಅವು ತಿರುಗಲು ಆರಂಭಿಸಿದಂತೆ 'ರೋಟಾರು' ಚಾಲೂ ಆಗುತ್ತದೆ. ವಿದ್ಯುತ್ತು ಹರಿಸುವುದನ್ನು ಏರುಪೇರು ಗೊಳಿಸಿ ಈ ರೋಟಾರುಗಳನ್ನು ಹಿಮ್ಮುಖವಾಗಿ ಅಥವಾ ಮುಮ್ಮುಖವಾಗಿ ತಿರುಗಿಸಬಹುದು.

ಈ ರೀತಿ ತಯಾರಿಸಿದ ಮೋಟಾರುಗಳಿಗೆ ಗಾಳಿ ಘರ್ಷಣೆ ಮತ್ತಿತರ ಅಪಾಯಗಳು ಇರುವುದಿಲ್ಲ; ಅಲ್ಲದೆ ಬೇರಿಂಗುಗಳು ಬೇಕಾಗಿಯೇ ಇಲ್ಲ. ಈ ರೀತಿಯ ಮೋಟಾರುಗಳ ಪ್ರೊಪೆಲ್ಲರುಗಳು ಹೇಗಿರುತ್ತವೆ ಗೊತ್ತೆ? ಅವುಗಳ ಗಾತ್ರವನ್ನು ಸೂಕ್ಷ್ಮದರ್ಶಕದ ಮೂಲಕ ಹಿಗ್ಗಿಸಿದರೆ ಬರೇ ಒಂದು ಚುಕ್ಕೆಯಂತೆ ಕಾಣಬಹುದು ಅಷ್ಟೆ. ಇದು 160 ಮೈಕ್ರಾನ್ ವ್ಯಾಸದಷ್ಟಿರುವ ಗೇರ್‌ಚಕ್ರಗಳಿಗೆ (ಸೈಕಲ್ಲಿನ ಪೆಡಲು ತುಳಿಯುವ ಗೇರ್ ಚಕ್ರ ನೆನೆಸಿಕೊಳ್ಳಿ, ಇದನ್ನು ಅತಿ ಚಿಕ್ಕದಾಗಿ ಮಾಡಿದರೆ ಹೇಗಿರುತ್ತದೆ ಎಂದು ನೆನೆಸಲು ಸಾಧ್ಯವೇ?) ಒಂದು ಟ್ಯೂಬಿನಿಂದ ಗಾಳಿಯ ಮೂಲಕ ಚಾಲನೆ ನೀಡಿದಾಗ ವೇಗವಾಗಿ ತಿರುಗಿತು. ಈ ವೇಗದ ಅಳತೆ ಎಷ್ಟು ಗೊತ್ತೆ? ನಿಮಿಷಕ್ಕೆ 24,000 ಸುತ್ತು! ಈ ವೇಗದಲ್ಲಿ ಗೇರ್‌ಚಕ್ರಗಳು ತಿರುಗಿದಲ್ಲಿ ಎಂತಹ ಕಷ್ಟಕರವಾದ ಕೆಲಸಗಳೂ ಸುಲಭ ಸಾಧ್ಯ. ಇದರಲ್ಲಿನ ಮುಖ್ಯ ತೊಂದರೆಯೆಂದರೆ ಈ 160 ಮೈಕ್ರಾನ್ ವ್ಯಾಸದ ಗೇರ್ ಚಕ್ರಗಳು ಆ ವೇಗದಲ್ಲಿ ತಿರುಗಿದರೆ ಅವುಗಳ ಆಕಾರ ಕೆಡುತ್ತದೆ. ಆದರೆ ಸಿಲಿಕಾನಿನಿಂದ ಮಾಡಲಾದ ಗೇರ್ ಚಕ್ರಗಳು ಗಾಳಿಯ ಘರ್ಷಣೆಯನ್ನು ತಡೆಯುತ್ತವೆ ಎಂದು ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಈ ರೀತಿ ಸೂಕ್ಷ್ಮ ಮೋಟಾರುಗಳಿಗೆ ವಿದ್ಯುತ್ತನ್ನು ಹೇಗೆ ಒದಗಿಸಬೇಕೆಂಬುದು ಒಂದು ಸಮಸ್ಯೆ. ಈ ಬಗ್ಗೆ ಈಗ ವಿಜ್ಞಾನಿಗಳು ಚಿಂತಿಸುತ್ತಿದ್ದಾರೆ. ಗಾಳಿಯಿಂದ ಅಥವಾ ಮೈಕ್ರೋಬ್ಯಾಟರಿಗಳಿಂದ ಅಥವಾ ಅತಿ ಸೂಕ್ಷ್ಮ ಸೌರವಿದ್ಯುತ್ಕೋಶಗಳಿಂದ ವಿದ್ಯುತ್ತನ್ನು ಹಾಯಿಸುವ ಪ್ರಯತ್ನ ಈಗ ನಡೆದಿದೆ.

ವಿಜ್ಞಾನಿಗಳ ಈ ಪ್ರಯತ್ನಗಳು ಯಶಸ್ವಿಯಾದ ನಂತರ ಜಗತ್ತಿನ ವೈದ್ಯಕೀಯ ಮತ್ತು ವೈಜ್ಞಾನಿಕ ಸಮಸ್ಯೆಗಳು ಅತಿ ಶೀಘ್ರದಲ್ಲಿ ಪರಿಹಾರವಾಗುವ ಸಾಧ್ಯತೆಗಳಿವೆ. ರಕ್ತ ಧಮನಿಗಳಲ್ಲಿನ ಕೊಲೆಸ್ಟರಾಲನ್ನು ಕೊಚ್ಚಿ ಹಾಕಲು ಸೂಕ್ಷ್ಮಾತಿಸೂಕ್ಷ್ಮ ರೋಬೋಟುಗಳನ್ನು ದೇಹಕ್ಕೆ ಇಂಜೆಕ್ಷನ್ನುಗಳ ಮೂಲಕ ನೀಡಿ ಹೊರಗಡೆಯಿಂದ ಅದಕ್ಕೆ ಸೂಚನೆ ನೀಡಿದರೆ ಸಾಕು, ಅವು ತಮ್ಮ ಕೆಲಸ ಮುಗಿಸಿ ಯಾರ ಅರಿವಿಗೂ ಬಾರದಂತೆ ದೇಹದ ಕಲ್ಮಶಗಳ ಸಂಗಡವೇ ಆಚೆ ಹೋಗಿಬಿಡುತ್ತವೆ! ಅದೇ ರೀತಿ ಅತಿಸೂಕ್ಷ್ಮ ರೀತಿಯ ಕೊಯ್ಯುವಿಕೆ, ಬೆಸುಗೆ, ಜೋಡಣೆ ಇತ್ಯಾದಿ ಕೆಲಸಗಳಲ್ಲಿಯೂ ಈ ರೀತಿಯ ಮೈಕ್ರೋ ರೋಬೋಟುಗಳು ಅತ್ಯುಪಯುಕ್ತ. ದೇಹದ ಮಧ್ಯಭಾಗದಲ್ಲಿನ ಒಂದೇ ಒಂದು ನರದಲ್ಲಿನ ನ್ಯೂನ

ತೆಯನ್ನು ಸರಿಪಡಿಸಲು ದೇಹದ ಯಾವ ಅಂಗವನ್ನೂ ಗಾಯಗೊಳಿಸದೆ ನೇರವಾಗಿ ಆ ನರಕ್ಕೆ ಈ ರೋಬೋಟುಗಳನ್ನು ಸಾಗಿಸಬಹುದು. ಅಂದರೆ ಮಧುಸೂದನನಂಥವರು ಚಿಂತಿಸಬೇಕಿಲ್ಲ!

ಜಗತ್ತಿನಲ್ಲಿ ಈ ಸೂಕ್ಷ್ಮಾತಿಸೂಕ್ಷ್ಮ ಯಂತ್ರಗಳ ಆವಿಷ್ಕಾರಕ್ಕೆ ಎಲ್ಲಾ ಮುಂದುವರೆದ ರಾಷ್ಟ್ರಗಳೂ ಧುಮುಕಿದ್ದು ಸದ್ಯಕ್ಕೆ ಅಮೇರಿಕವು ಮುಂಚೂಣಿಯಲ್ಲಿದೆ. ಈ ಹೊಸ ಕ್ಷೇತ್ರದಲ್ಲಿ ಮೊದಲು ಯಶ ಪಡೆಯುವ ದೇಶ ಮಿಕ್ಕ ದೇಶಗಳ ಮೇಲೆ ಹಿಡಿತ ಸಾಧಿಸಬಹುದೆಂಬ ಭಯ ಇರುವುದಾದರೂ ವೈಜ್ಞಾನಿಕ ಆವಿಷ್ಕಾರಗಳನ್ನು ರಹಸ್ಯವಾಗಿ ಇಡಲು ಸಾಧ್ಯವಿಲ್ಲದ ಈ ಕಾಲದಲ್ಲಿ ಈ ರೀತಿಯ ಭಯಕ್ಕೆ ಅವಕಾಶವಿರಲಾರದು.

ಈ ಮೈಕ್ರೋ ಮಶೀನುಗಳು ತಯಾರಾದೊಡನೆ ಅವುಗಳನ್ನು ರೋಬೋಟುಗಳಲ್ಲಿ ಅಳವಡಿಸಿ ವೈದ್ಯಕೀಯ ರಂಗದಲ್ಲಿ ಕೊಲೆಸ್ಟರಾಲ್ ಕರಗಿಸಲು, ಶ್ವಾಸಕೋಶವನ್ನು ಶುದ್ಧೀಕರಿಸಲು, ಕ್ಯಾನ್ಸರಿನ ಕೋಶಗಳನ್ನು ನಾಶಪಡಿಸಲು ಮುಂತಾಗಿ ನಿಯೋಜಿಸಬಹುದು ಎಂದು ವಿಜ್ಞಾನಿಗಳು ನಂಬಿದ್ದಾರೆ. ಅಲ್ಲದೆ ತಮ್ಮ ತಮ್ಮ ನಿಯಮಿತ ಕೆಲಸಗಳು ಮುಗಿದ ನಂತರ ದೇಹದ ಕಲ್ಮಶಗಳೊಂದಿಗೆ ಇವೂ ಹೊರಬರುವುದರಿಂದ ಯಾವ ರೀತಿಯ ಉಪ ಪರಿಣಾಮಗಳೂ ಇರಲಾರವು. ಜೊತೆಗೆ ಇವುಗಳ ತಯಾರಿಕಾ ವೆಚ್ಚ ಕೂಡ ಕಾಲ ಕಳೆದಂತೆ ಅಗ್ಗವಾಗುತ್ತದೆ. ಈಗ ಎಲೆಕ್ಟ್ರಾನಿಕ್ ವಾಚುಗಳು ದೊರೆಯುವಂತೆ ಅಗ್ಗದ ದರದಲ್ಲಿ ಮುಂದೊಂದು ದಿನ ಈ ಯಂತ್ರಮಾನವರೂ ದೊರೆತರೆ ಆಶ್ಚರ್ಯವಿಲ್ಲ.

ಈ ಅದೃಶ್ಯ ಯಂತ್ರಗಳ ಆವಿಷ್ಕಾರ ಮನುಷ್ಯನ ಕಟ್ಟ ಕಡೆಯ ಆವಿಷ್ಕಾರ ಎಂದು ಕೆಲ ವಿಜ್ಞಾನಿಗಳು ಈಗಲೇ ಹೇಳಲಾರಂಭಿಸಿದ್ದಾರೆ. ಇದು ಒಂದು ಯಶಸ್ಸಿನ ಮುಖವಾದರೆ ಮತ್ತೊಂದು ಮುಖ ಈ ಆವಿಷ್ಕಾರವನ್ನು ಶತ್ರುಗಳ ಮೇಲೆ ಬಳಸಲು ಯೋಚಿಸುವುದು. ಕಣ್ಣಿಗೆ ಕಾಣಿಸದ ಸೂಕ್ಷ್ಮ ಸುದರ್ಶನ ಚಕ್ರಗಳು ರಾತ್ರಿ ಹೊತ್ತು ನಿದ್ರಿಸುತ್ತಿರುವಾಗ ನಿಮ್ಮ ಕತ್ತು ಕೊಯ್ದರೆ ಹೇಗೆ? ನೆನೆದರೇ ಎದೆ ಝಲ್ ಅನಿಸುತ್ತದೆಯಲ್ಲವೆ? ಒಟ್ಟಿನಲ್ಲಿ ಜಗತ್ತು ಒಂದು ಹೊಸ ವೈಜ್ಞಾನಿಕ ಯುಗಕ್ಕೆ ಕಾಲಿಟ್ಟಿದೆ! ●

(ಆಧಾರ: 'ಸ್ಪಾನ್')

ಹೊಸ ಬಿಳಿ ರಕ್ತ ಕಣದ ಪಂಗಡ

ಚೀನದ ಶಾಂಘಾಯ್ ನಗರದ ವಿಜ್ಞಾನಿಗಳು ಹೊಸ ಬಿಳಿ ರಕ್ತ ಕಣದ ಪಂಗಡವನ್ನು ಕಂಡುಹಿಡಿದಿದ್ದಾರೆ.

ಇದರ ಹೆಸರನ್ನು ಸಿ.ಎಸ್.ಹೆಚ್.2. ಇದನ್ನು ಶಾಂಘಾಯಿಯ ರಕ್ತ ಸಂಕ್ರಮಣ ಕೇಂದ್ರದಲ್ಲಿ 18 ಕುಟುಂಬಗಳಿಗೆ ಸೇರಿದ 119 ಜನರನ್ನು ಪರೀಕ್ಷಿಸಿದ ನಂತರ ಕಂಡು ಹಿಡಿಯಲಾಯಿತು.

ಪ್ರಪಂಚದಲ್ಲಿ ಇದುವರೆಗೆ 92 ಬಿಳಿಯ ರಕ್ತ ಕಣದ ಪಂಗಡಗಳನ್ನು ಕಂಡು ಹಿಡಿಯಲಾಗಿದ್ದು ಇದು 93ನೇಯದು. ರೋಗದ ನಿರೋಧಕವಾಗಿ ಕೆಲಸ ಮಾಡುವ ಈ ಬಿಳಿಯ ಕಣಗಳು ನಮ್ಮ ದೇಹವನ್ನು ಕಾಪಾಡಲು ಅತಿ ಮುಖ್ಯವಾದ ಅಂಶಗಳು. ●

– ಟಿ. ಗೋಪಾಲಕೃಷ್ಣ



ಲಾಟ್ವಿಯದ ಜಾನಪದ ಕಥೆ

ಸೊಗಸಾದ ಹೂವಿನ ಗಿಡಗಳು

ಅನಿತಾ ತಂದೆಯ ಕೈಯನ್ನು ಬಿಗಿಯಾಗಿ ಹಿಡಿದುಕೊಂಡು ಹೂಗಿಡಗಳನ್ನು ನೋಡಲು ಹೋಗುತ್ತಿದ್ದಳು.

ಪೊದೆಗಳ ಆಚೆ ಕಗ್ಗತ್ತಲು ದಟ್ಟವಾಗುತ್ತಾ ಬರುತ್ತಿದ್ದಂತೆ ಅವಳು ತಂದೆಯ ಕೈಯನ್ನು ಇನ್ನು ಬಿಗಿಯಾಗಿ ಹಿಡಿದುಕೊಂಡಿದ್ದಳು. ಕ್ರಮೇಣ ಅವಳ ಕಣ್ಣುಗಳು ತಾವು ತಾವೇ ಕತ್ತಲೆಗೆ ಹೊಂದಿಕೊಂಡವು. ಸದಾ ಹಸುರಾಗಿರುವ ಕಂಟಿಗಳ ಪೊದೆಗಳು ಕಪ್ಪು ಹೊದಿಕೆಯಿಂದ ಮುಚ್ಚಲ್ಪಟ್ಟದ್ದುವು. ಮುಳ್ಳುಗಳು ಆ ಕಪ್ಪು ಪರದೆಯಲ್ಲಿ ಅವಿತುಕೊಂಡಿದ್ದವು.

ಅವರು ತಮ್ಮ ಗುರಿಯನ್ನು ಮುಟ್ಟುತ್ತಲೇ ಕೆಳಗೆ ಬಗ್ಗಿ ನೋಡಿದಾಗ ಸೂಕ್ಷ್ಮವಾದ ರೆಂಬೆಯುಳ್ಳ ಹೂವಿನಗಿಡಗಳು ಕಾಣುತ್ತಿರಲಿಲ್ಲ. ಚಿಕ್ಕ ಹಾಗು ಸೂಕ್ಷ್ಮವಾದ ನಕ್ಷತ್ರಗಳಂತೆ ಬಿಳಿಯ ಹೂಗಳು ಕತ್ತಲಲ್ಲಿ ಹೊಳೆಯುತ್ತಿದ್ದವು. ಅನಿತಾ ಅದರ ಮೇಲೆ ಬಗ್ಗಿದಳು. ಹೂವುಗಳಿಗೆ ಮತ್ತೇರಿಸುವಂತಹ ಸುವಾಸನೆ ಇತ್ತು. ಅನಿತಾ ಸಂತೋಷದಿಂದ ಕಣ್ಣುಗಳನ್ನು ಮುಚ್ಚಿ, "ನಾನು ಅದನ್ನು ಕಿತ್ತುಕೊಳ್ಳಬಹುದೇ?" ಎಂದು ಮೃದುವಾಗಿ ಕೇಳಿದಳು.

"ಅವುಗಳನ್ನು ಹಾಗೇ ಬಿಡುವುದು ಒಳ್ಳೆಯದು, ಅವುಗಳನ್ನು ಕಿತ್ತುಕೊಂಡರೆ, ನಾಳೆಯೊಳಗೆ ಒಣಗಿ ಹೋಗುವುವು. ಮತ್ತು ಅವು ಕುರೂಪಗೊಂಡು ಕೆಟ್ಟವಾಸನೆ ಕೊಡುವುವು. ಅವುಗಳನ್ನು ಇಲ್ಲೇ ಅರಳಲು ಬಿಡು," ತಂದೆ ಶಾಂತವಾಗಿ ಹೇಳಿದರು.

ಅನಿತಾ ಜಾಗರೂಕತೆಯಿಂದ ಒಂದು ಹೂವನ್ನು ಬೆರಳಿನಿಂದ ಮುಟ್ಟಿದಳು.

"ಡ್ಯಾಡೀ, ಚಿಕ್ಕ ಮೊಲಗಳಿಗೆ ಇವು ಇಷ್ಟವೇ?"

ತಂದೆ ತಲೆಯಲ್ಲಾಡಿಸಿ, "ಮೊಲಗಳಿಗೆ, ಜಿಂಕೆ ಹಾಗೂ ದುಂಬಿಗಳಿಗೆ ಕಾಡಿನಲ್ಲಿ ವಾಸಿಸುವ ಎಲ್ಲಾ ಪ್ರಾಣಿಗಳಿಗೂ ಇಷ್ಟ," ಎಂದರು.

"ಹಾಗಾದರೆ ಇವುಗಳನ್ನು ಅರಳಲು ಬಿಡುವುದು ಒಳ್ಳೆಯದು. ಚಿಕ್ಕ ಮೊಲಗಳೆಲ್ಲ ಇವುಗಳ ವಾಸನೆಯನ್ನು ಸವಿಯಬಹುದು," ಎಂದಳು ಅನಿತಾ.

ಅವರು ತಮ್ಮ ಬಿಡಾರಕ್ಕೆ ಕೈಹಿಡಿದುಕೊಂಡು ವಾಪಸಾದರು. ಹುಲ್ಲು ಕಾಲ ಕೆಳಗೆ ನಿದ್ರೆಯಲ್ಲಿ ಶಬ್ದ ಮಾಡಿತು.

ಅನಿತಾ ಸುತ್ತಲೂ ನೋಡಿದಳು. ಬಿಳಿಯ ಹೂವುಗಳು ನಕ್ಷತ್ರದಂತೆ ಮುಚ್ಚು ಮರೆಯಿಲ್ಲದೆ ಕಾಣುತ್ತಿದ್ದಾಗಲೂ ಹೂವಿನ ಗಿಡಗಳು ಕೃತಜ್ಞತೆಯಿಂದ ತಲೆಯಲ್ಲಾಡಿಸುತ್ತಿವೆಯೆಂದು ಅನಿತಾ ಭಾವಿಸಿದಳು. ●

– ಎಸ್.ಕೆ.ರಮಾದೇವಮ್ಮ

ನಿಮ್ಮ ಶಬ್ದಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳ ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

1. ಆಂತರ್ಯ
   (ಅ) ಕರುಳಿನ
   (ಆ) ಕೊನೆಯಿಲ್ಲದ
   (ಇ) ಒಳಗಿನದು
   (ಈ) ಕೊನೆಯ

2. ಆಗಂತುಕ
   (ಅ) ದೊಡ್ಡ ವ್ಯಕ್ತಿ
   (ಆ) ಒಳಗಿನ
   (ಇ) ಹೋಗತಕ್ಕ
   (ಈ) ಅನಿರೀಕ್ಷಿತವಾಗಿ ಬಂದ

3. ಉರುವ
   (ಅ) ಶ್ರೇಷ್ಠ
   (ಆ) ರಾಶಿ
   (ಇ) ಕಟ್ಟಿಗೆ
   (ಈ) ಕಡೆಯುವಿಕೆ

4. ಕಾಪಥ
   (ಅ) ಕಾವಲುಗಾರ
   (ಆ) ಕೆಟ್ಟದಾರಿ
   (ಇ) ಕಾಡುದಾರಿ
   (ಈ) ಮುಸ್ಲಿಮನಲ್ಲದವ

5. ಕಾಫರ
   (ಅ) ನಾಸ್ತಿಕ
   (ಆ) ಕೆಮ್ಮು
   (ಇ) ರೋಮದ ಅಂಗಿ
   (ಈ) ಕೃತಕ ಕೂದಲು

6. ಪವನು
   (ಅ) ಉಪಾಯ
   (ಆ) ಒಂದು ಬಂಗಾರದ ನಾಣ್ಯ
   (ಇ) ಪವಿತ್ರ
   (ಈ) ಸುವ್ಯವಸ್ಥೆ

7. ಹಲ್ಲೆ
   (ಅ) ಕೃಷ್ಣಮೃಗ
   (ಆ) ಸೇವಕಿ
   (ಇ) ಚುಚ್ಚುವ ಆಯುಧ
   (ಈ) ದಾಳಿ

8. ಮೋಳಿಗೆ
   (ಅ) ಧಾನ್ಯದ ಕಸ
   (ಆ) ಮುಚ್ಚಳ
   (ಇ) ಸೌದೆಯ ಹೊರೆ
   (ಈ) ಬೆಲೆಗೊತ್ತುಪಡಿಸುವುದು

9. ಮಾಹಿತಿ
   (ಅ) ದೊಡ್ಡತನ
   (ಆ) ವಿವರ
   (ಇ) ಸದ್ಬುದ್ಧಿ
   (ಈ) ಸಂದರ್ಭ

10. ಭವ್ಯ
    (ಅ) ಸಂಸಾರ
    (ಆ) ನೆಲದ
    (ಇ) ವಿಚಾರಶೀಲ
    (ಈ) ಉತ್ಕೃಷ್ಟ

11. ಕಾಳಜಿ
    (ಅ) ಚಿಂತೆ
    (ಆ) ಕಪ್ಪುತನ
    (ಇ) ಮಳೆಮೋಡ
    (ಈ) ಕೈದೀಪ

12. ಸಮಾವೇಶ
    (ಅ) ಭೂತದ ಪ್ರತಾಪ
    (ಆ) ನೆರೆಯುವಿಕೆ
    (ಇ) ಸ್ನೇಹ
    (ಈ) ಒಂದೇತರಹದ ಬಟ್ಟೆ

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

1. ಆಂತರ್ಯ
(ಇ) ಒಳಗಿನದು, ಒಳಗುಟ್ಟು, ಮನಸ್ಸು, ಅಂತರಂಗದ ಪ್ರೀತಿ. ಉದಾ:- ತೋರಿಕೆ ಹೇಗಿದ್ದರೂ ಅವನ ಆಂತರ್ಯ ಬೇರೆ ಇತ್ತು. (ಸಂ. ಅಂತರ್=ಒಳಗೆ)

2. ಆಗಂತುಕ
(ಈ) ಅನಿರೀಕ್ಷಿತವಾಗಿ ಬಂದ, ಕರೆಯದೆ ಬಂದ ಅತಿಥಿ. ಉದಾ:- ಆಗಂತುಕ ಕಾರಣಗಳಿಂದ ಕೆಲಸ ಕೆಟ್ಟಿತು.
(ಸಂ. ಆ+ಗಮ್=ಬಾ-ಎಂಬುದರಿಂದ)

3. ಉರುವ
(ಅ) ಶ್ರೇಷ್ಠ, ಉತ್ತಮ, ಸಮರ್ಥ, ಪ್ರಸಿದ್ಧ. ಉದಾ:- ಉರುವ ಕಾಳಗದಲಿ (ದೇಶ್ಯ. ಉರು=ಬಲಗೊಳ್ಳು)

4. ಕಾಪಥ
(ಆ) ಕೆಟ್ಟದಾರಿ, ದುರ್ಮಾರ್ಗ, ಕೆಟ್ಟ ನಡತೆ, ಕಷ್ಟಕರವಾದ ದಾರಿ. ಉದಾ:- ಸದಾ ಕಾಪಥವನ್ನೇ ಅನುಸರಿಸುತ್ತಾನೆ. (ಸಂ.)

5. ಕಾಫರ
(ಅ) ನಾಸ್ತಿಕ, ದೇವರನ್ನು ನಂಬದವ, ವಿಶೇಷವಾಗಿ ಮುಸಲ್ಮಾನ ಧರ್ಮವನ್ನು ಒಪ್ಪದವ, ಕೃತಘ್ನ (ಅರಬ್ಬಿ-ಕಾಫಿರ)

6. ಪವನು
(ಆ) ಒಂದು ಬಂಗಾರದ ನಾಣ್ಯ, ಇಂಗ್ಲಂಡಿನ ಸೊವರೀನ್ ಎಂಬ ಚಿನ್ನದ ನಾಣ್ಯ, ಅದಕ್ಕೆ ಸಾಮ್ಯವಾದ ಸುರ್ವಾಂಶವುಳ್ಳ ಬಂಗಾರ. ಉದಾ:- ಪವನುಸರ, ಪವನು ಬಂಗಾರ. (ಇಂಗ್ಲೀಷ್ - ಪೌಂಡ್)

7. ಹಲ್ಲೆ
(ಈ) ದಾಳಿ, ಆಕ್ರಮಣ. ಉದಾ:- ಅವನ ಹಲ್ಲೆಯನ್ನು ಹಿಮ್ಮೆಟ್ಟಿಸಿ. (ಹಿಂದಿ - ಹಲ್ಲಾ)

8. ಮೋಳಿಗೆ
(ಇ) ಹೊರೆ, ಸೌದೆಯ ಹೊರೆ, ಕಟ್ಟು. ಉದಾ:- ಅಡವಿಯಿಂದ ಕಟ್ಟಿಗೆ ಕಡಿದು ಮೋಳಿಗೆ ಮಾಡಿ. (ದೇಶ್ಯ - ಮೂಟೆ, ಮೂಡೆ, ಮೊಟ್ಟೆ - ಇತ್ಯಾದಿಗಳಿಗೆ ಸಂಬಂಧಿ)

9. ಮಾಹಿತಿ
(ಆ) ವಿವರ, ತಿಳಿವಳಿಕೆ, ಸಮಾಚಾರ. ಉದಾ:- ಶತ್ರುಗಳ ಚಟುವಟಿಕೆಯ ಮಾಹಿತಿ ಪಡೆದ, (ಮರಾಠಿ, ಅರಬ್ಬಿಯಿಂದ - ಮಾಹಿಯತ್=ತತ್ತ್ವ, ವಿವರಣೆ)

10. ಭವ್ಯ
(ಈ) ಉತ್ಕೃಷ್ಟ, ಯೋಗ್ಯ, ಪ್ರಭಾವ ವುಂಟುಮಾಡುವ. ಉದಾ:- ಭವ್ಯವಾದ ಅರಮನೆ. (ಸಂ.)

11. ಕಾಳಜಿ
(ಅ) ಚಿಂತೆ, ಗೊಡವೆ, ಜಾಗ್ರತೆ, ಜೋಕೆ. ಉದಾ:- ಕಾಳಜಿವಹಿಸಿ ಕೆಲಸ ಮಾಡಿ. (ಮರಾಠಿ)

12. ಸಮಾವೇಶ
(ಆ) ಸೇರಿಯುವುದು, ಒಟ್ಟುಗೂಡುವುದು, ಕೂಟ, ಸೇರುವಿಕೆ. ಉದಾ:- ಸಂಸತ್ತಿನ ಸಮಾವೇಶ. (ಸಂ. ಸಂ+ಆ+ವೇಶ=ಕೂಡಿ ಸೇರುವುದು)

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ನಿಮ್ಮ ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

6- 8 ಸರಿಯುತ್ತರ ... ಸಾಧಾರಣ
9-10 " ... ಉತ್ತಮ
11-12 " ... ಅತ್ಯುತ್ತಮ

ರಶಿಯನ್ ಕಥೆ

ನೆಲ-ಮುಗಿಲುಗಳ ಮಧ್ಯೆ

ಕೆಲವೊಂದು ತಾಂತ್ರಿಕ ಕಾರಣಗಳಿಂದಾಗಿ ವಿಮಾನ ಹೊರಡಲು ಮೂರು ಗಂಟೆಗಳಷ್ಟು ವಿಳಂಬವಾಗುತ್ತದೆಂದು ಲೌಂಜಿನ ಸ್ಪೀಕರ್ ಘೋಷಿಸಿದಾಗ ನತಾಶಾ ಅಲ್ಲಿಯ ಕುರ್ಚಿಯ ಮೇಲೆ ಕುಳಿತಳು. ಈಗ ಪುನಃ ನಾಲ್ಕು ಗಂಟೆ ವಿಳಂಬ! ಇದೇ ವಿಮಾನಿನಿಂದ ಬಲ್ಗೇರಿಯದ ಸರ್ಕಸ್ ಕಂಪೆನಿಯೊಂದು ಪ್ರಯಾಣ ಮಾಡಲಿತ್ತು. ಸರ್ಕಸ್ ತಂಡದವರೆಲ್ಲ ಜಿಪ್ಸಿ ಜನರಂತೆ ನಿಲ್ದಾಣದ ಲೌಂಜಿನಲ್ಲಿ ಅಲ್ಲಲ್ಲಿ ಚದುರಿ ಹೋಗಿದ್ದರು. ಕೆಲವರು ಕುರ್ಚಿಯ ಮೇಲೆ ಕುಳಿತು ಹರಟುತ್ತಿದ್ದರೆ, ಇನ್ನು ಕೆಲವರು ನೆಲಕ್ಕೆ ಕುಳಿತು ಹರಟುತ್ತಿದ್ದರು. ಅವರ ಸಮೀಪ ಒಂದೇ ಜಾತಿಗೆ ಸೇರಿದ ವಿಭಿನ್ನ ವಯಸ್ಸಿನ ನಾಯಿಗಳು. ಬಹುತೇಕ ಇವುಗಳ ಕಾರ್ಯಕ್ರಮವೂ ಸರ್ಕಸ್ಸಿನಲ್ಲಿರಬೇಕು.

ನಾಯಿಗಳ ಬಗ್ಗೆ ಯೋಚಿಸುತ್ತಿರುವಾಗಲೇ ಗಂಡಸೊಬ್ಬ ನತಾಶಾಳ ಎದುರಿನಿಂದ ಹಾದು ಹೋದ. ಆತ ಸ್ವಲ್ಪ ದೂರ ಹೋದ ಮೇಲೆ ನತಾಶಾ ಅವನತ್ತ ನೋಡಿದಳು. ಹಿಂಬದಿಯಿಂದ ನೋಡಿದರೆ ತನ್ನ ಮೊದಲನೆಯ ಗಂಡನಂತೆಯೇ ಕಾಣುತ್ತಿದ್ದಾನೆ. ಅವನ ನೆನಪಾಗುತ್ತಲೇ ಹಳೆಯ ಸ್ಮೃತಿಗಳೆಲ್ಲ ಸುರುಳಿ ಬಿಚ್ಚಿಕೊಳ್ಳತೊಡಗಿದವು.

ಮದುವೆಯಾದಾಗ ಆಕೆಗೆ ಹದಿನೆಂಟಾದರೆ ಅವನಿಗೆ ಇಪ್ಪತ್ತು. ಗಾರ್ಹಸ್ಥ್ಯ ಜೀವನ ನಡೆಸಿದ ಎಂಟೇ ತಿಂಗಳ ನಂತರ ವಿವಾಹ ವಿಚ್ಛೇದನ. ಮದುವೆಯಾದ ತರುಣದಲ್ಲೆ ಅವರ ಪ್ರೇಮ ನದಿ ಬತ್ತತೊಡಗಿತ್ತು. ಕಾರಣವಿಲ್ಲದೆಯೇ ಜಗಳವಾಡತೊಡಗಿದ್ದರು. ತನ್ನ ಸೌಂದರ್ಯದ ಬಗ್ಗೆ ನತಾಶಾಳಿಗೆ ವಿಪರೀತ ಹೆಮ್ಮೆ. ಯಾರನ್ನೂ ಸೂಜಿಗಲ್ಲಿನಂತೆ ಆಕರ್ಷಿಸುವ ಸೌಂದರ್ಯ ತನ್ನದೆನ್ನುವ ಗರ್ವ. ''ಸೌಂದರ್ಯ ಶಾಶ್ವತವಲ್ಲ, ಅದರ ಬಗ್ಗೆ ಹೆಮ್ಮೆ ಪಡುವುದು ಒಳ್ಳೆಯದಲ್ಲ. ಪ್ರಾಮಾಣಿಕತೆ ಹಾಗಲ್ಲ. ಅದು ನಿತ್ಯ ನೂತನ, ಅದಕ್ಕೆ ನಶ್ವರತೆಯೇ ಇಲ್ಲ'' ಎಂದು ಅವಳ ಗಂಡ ವಾದಿಸುತ್ತಿದ್ದ. ಹೆಂಡತಿಯ ಸೌಂದರ್ಯ ಹೊಗಳದವನು, ಅದನ್ನು ಆರಾಧಿಸದವನು ಗಂಡನಾಗಿರಲು ಅನರ್ಹ ಎಂದೇ ನತಾಶಳ ನಂಬಿಕೆ.

ಪರಿಣಾಮ, ವಿವಾಹ ವಿಚ್ಛೇದನ. ವಿಚ್ಛೇದನ ಪಡೆದ ಇಪ್ಪತ್ತು ವರ್ಷಗಳ ನಂತರ ಆತನ ಭೇಟಿಯಾಗಿತ್ತು. ಆತ ಇನ್ನೊಂದು ಮದುವೆಯಾಗಿದ್ದ. ಈ ಮದುವೆಯಿಂದ

ಮೂಲ: *ವಿಕ್ಟೋರಿಯಾ ತೋಕೆರೆವಾ*

ರೂಪಾಂತರ: *ಜೆ. ಜೆ. ಹೆಗಡೆ*

ಹುಟ್ಟಿದ ಮಗಳಿಗೆ ನತಾಶಾ ಎಂದೇ ಹೆಸರಿಟ್ಟಿದ್ದ. ಆತ ವಾಸವಾಗಿದ್ದ ಊರಿಗೆ ಯಾವುದೋ ಕೆಲಸಕ್ಕೆಂದು ಹೋದವಳು ಅವನ ಫೋನ್ ನಂಬರಿಗೆ ಡಯಲ್ ಮಾಡಿದಳು. ಅತ್ತ ಕಡೆಯಿಂದ 'ಹಲೋ' ಎನ್ನುವ ಧ್ವನಿ. ತುಂಬ ಪರಿಚಿತ ಧ್ವನಿ. ಹೌದು. ಅವನದೇ ಧ್ವನಿ ಧ್ವನಿ ಆತ್ಮದ ಪ್ರತಿಬಿಂಬವಂತೆ. ಆತ್ಮಕ್ಕೆ ಎಂದಿಗೂ ವಯಸ್ಸಾಗುವುದಿಲ್ಲ. ಇದೇ ಕಾರಣಕ್ಕಾಗಿಯೋ ಏನೋ ಇಬ್ಬರೂ ತರುಣರಂತೆ ಸಂಭಾಷಿಸತೊಡಗಿದರು.

"ನಮಸ್ಕಾರ, ಆಶ್ಚರ್ಯ ಆಗ್ತಾ ಇಲ್ಲ ತಾನೆ?" ಫೋನಿನಲ್ಲಿ ಪ್ರಶ್ನಿಸಿದಳು ನತಾಶಾ.

"ತಾವು ಯಾರು?" ಆತನ ಕಿವಿ ಒಮ್ಮೆಲೆ ಚುರುಕಾಗಿದ್ದವು.

"ನಿಮ್ಮ ಒಂದನೇ ನಂಬರಿನ ಹೆಂಡತಿ."

ಫೋನಿನಿಂದ ಯಾವ ಉತ್ತರವೂ ಬರಲಿಲ್ಲ. ಫೋನ್ ಸ್ತಬ್ಧವಾಯಿತೇ ಎನ್ನುವ ಸಂಶಯ.

"ಹಲೋ.... ಹಲೋ," ನತಾಶಾ ಗಾಬರಿಯಿಂದ ಕೂಗಿದಳು.

"ಹಲೋ, ಎಲ್ಲಿಂದ ಮಾತನಾಡ್ತಾ ಇದೀಯ?" ಆತ ಕೇಳಿದ.

ನತಾಶಾ ತಾನು ಇಳಿದುಕೊಂಡಿದ್ದ ಹೊಟೆಲ್ ಹೆಸರು ಹಾಗೂ ರೂಮಿನ ನಂಬರು ಹೇಳಿದಳು.

ರಿಸೀವರ್ ಇಟ್ಟ ಮೇಲೆ ಆಕೆಗೆ ಒಂದು ಬಗೆಯ ನಡುಕ, ಭಯ ಆವರಿಸಿತು. ತಾನು ಫೋನು ಮಾಡಬಾರದಿತ್ತು. ಫೋನು ಮಾಡಿದರೂ ತಾನಿರುವ ಸ್ಥಳ ಹೇಳಬಾರದಿತ್ತು. ಅದನ್ನು ಹೇಳಿದ್ದರೂ ಇಲ್ಲಿಗೆ ಬರಬೇಡವೆಂದು ಹೇಳಬೇಕಿತ್ತು ಅಂದುಕೊಂಡಳು.

ನತಾಶಾ ಉಡುಪು ಬದಲಾಯಿಸಿ ಸಿದ್ಧಳಾಗತೊಡಗಿದಳು. ಬಿಳಿಯ ಬಣ್ಣದ ಫ್ರೆಂಚ್ ಬ್ಲೌಜ್ ತೊಟ್ಟವಳು, ಅದೇನೋ ಬೇರೆ ಯೋಚನೆ ಬಂದು, ಅದನ್ನು ತೆಗೆದು ಹಾಕಿ ಕಪ್ಪು ಬಣ್ಣದ ಕುಪ್ಪುಸ ಧರಿಸಿದಳು. ಈ ಬಣ್ಣ ಆಕೆಯ ಸೌಂದರ್ಯವನ್ನು ವರ್ಧಿಸುತ್ತಿತ್ತು.

ಕೆಲವೇ ನಿಮಿಷಗಳಲ್ಲಿ ಬಾಗಿಲು ಬಡಿಯುತ್ತಿರುವ ಶಬ್ದ ಕೇಳಿಸಿತು. ಆದರೆ ಆತ ಇಷ್ಟು ಶೀಘ್ರದಲ್ಲಿ ಬರಬಹುದೆನ್ನುವ ಕಲ್ಪನೆ ಆಕೆಗೆ ಇರಲಿಲ್ಲ. ಬಾಗಿಲು ತೆರೆದಾಗ ಎದುರಿಗೆ ಆತನೇ ನಿಂತಿದ್ದ. ಈ ಇಪ್ಪತ್ತು ವರ್ಷಗಳಲ್ಲಿ ಕೊಂಚ ದಪ್ಪವಾಗಿದ್ದನ್ನಷ್ಟು ಬಿಟ್ಟರೆ ಆತನಲ್ಲಿ ಇನ್ನಾವ ಬದಲಾವಣೆಯೂ ಉಂಟಾಗಿರಲಿಲ್ಲ. ಅವನ ಮೋರೆ, ಹಾವಭಾವ, ನಿಲ್ಲುವ, ಮಾತನಾಡುವ ಶೈಲಿ ಎಲ್ಲವೂ ಮುಂಚಿನಂತೆಯೇ. ಕಣ್ಣುಗಳಲ್ಲಿಯ ಆಕರ್ಷಣೆ ಸ್ವಲ್ಪವೂ ಕುಂದಿರಲಿಲ್ಲ.

"ತುಂಬಾ ಬದಲಾಯಿಸಿ ಬಿಟ್ಟಿಯಲ್ಲಾ!" ಹೌದು, ಆತ ಸತ್ಯವನ್ನೇ ಹೇಳುತ್ತಿದ್ದ. ಕಾಲ ಬದಲಾದಂತೆ ಸೌಂದರ್ಯ ಮಾಸುತ್ತ ಹೋಗುತ್ತದೆ. ಪ್ರಯಾಣದಲ್ಲಿ ಊರುಗಳು ಹಿಂದಕ್ಕೆ ಹೋಗುವಂತೆಯೇ ಜೀವನ ಯಾತ್ರೆಯಲ್ಲಿ ಸೌಂದರ್ಯದ ಪಕಳೆಗಳು ಒಂದೊಂದಾಗಿ ಕಳಚಿ ಹೋಗುತ್ತವೆ.

"ಆದರೆ ನೀನು ಮಾತ್ರ ಹೇಗಿದ್ದಿಯೋ ಹಾಗೆಯೇ ಇದ್ದೀಯಲ್ಲ!"

ಮೊದಲು ಕತ್ತೆಯಂತೆಯೇ ಇದ್ದೆ, ಈಗಲೂ ಅಷ್ಟೆ ಎನ್ನುವ ವ್ಯಂಗ್ಯ ಆಕೆಯದು. ಕತ್ತೆಗೆ ಪ್ರಾಯ ಹೋದರೂ ನೋಡುವವರಿಗೆ ಗೊತ್ತಾಗುವುದಿಲ್ಲ. ಅದೇನೇ ಇದ್ದರೂ ನತಾಶಾ ಮುಂಚಿನಂತೆ ಇರಲಿಲ್ಲ. ಈ ಮೊದಲು ಹಸಿರು ತುಂಬಿದ ಮೈದಾನದಂತಿದ್ದರೆ ಈಗ ಗದ್ದೆಯಂತಿದ್ದಾಳೆ. ಮೈದಾನ ಒಳ್ಳೆಯದೋ ಅಥವಾ ಗದ್ದೆ ಒಳ್ಳೆಯದೋ ಯಾರಿಗೆ ಗೊತ್ತು?

ಕೆಲ ಸಮಯದ ನಂತರ ಇಬ್ಬರೂ ಊಟಕ್ಕೆ ತೆರಳಿದರು. ನತಾಶಾ ತನ್ನ ಥೀಸಿಸ್ ಬಗ್ಗೆ, ವಿದ್ವತ್ತಿನ ಬಗ್ಗೆ ಹೇಳಿದಳು. ಆತ

ಕೂಡ ತನ್ನ ಉದ್ಯೋಗದ ಬಗ್ಗೆ ಹೇಳಿಕೊಂಡ. ಆತ ಈಗ ಓರ್ವ ಹಳ್ಳಿನ ಡಾಕ್ಟರ್, ವಿದೇಶಗಳಿಂದ ತರಿಸಿರುವ ಹಲವು ಉಪಕರಣಗಳಿಂದಾಗಿ, ದವಾಖಾನೆ ಸದಾ ಗಿರಾಕಿಗಳಿಂದ ತುಂಬಿರುತ್ತಿದೆ. ಸಂಪತ್ತು ತುಂಬಿ ತುಳುಕುತ್ತಿದೆ. ತನ್ನನ್ನು ತೊರೆದು ನತಾಶಾ ದೊಡ್ಡ ತಪ್ಪು ಮಾಡಿದ್ದಾಳೆಂದು ಆತ ಅಪರೋಕ್ಷವಾಗಿ ಹೇಳುತ್ತಿದ್ದ.

''ಬೇರೆ ಲಗ್ನ ಮಾಡಿಕೊಂಡಿರುವೆಯಾ?''

''ಆಂ..... ಹೌದು....'' ನತಾಶಾ ಸುಳ್ಳು ಹೇಳಿದಳು.

ಏಕೆಂದರೆ ನಿಜವಾದ ಅರ್ಥದಲ್ಲಿ ಆಕೆಯದು 'ಮದುವೆ' ಆಗಿರಲಿಲ್ಲ.

''ಅಥವಾ.. ಬೇರೆ ಗಂಡಸರ ಜೊತೆ ಸಂಬಂಧ....?''

''ಥೂ, ಇಂಥಾ ಪ್ರಶ್ನೆ ಕೇಳಲಿಕ್ಕೆ ನಾಚಿಕೆ





''ನಮ್ಮ ಅಂತಸ್ತಿಗೆ ತಕ್ಕ ವರಬೇಕು ಅಂತಿದ್ರಿ ಅಲ್ವಾ.. ಅಗೋ ನೋಡಿ ಅವನು, ಆಗ್ಬಹುದಾ?''

ಆಗ್ತಾ ಇಲ್ವೇನು?''

''ಹೌದು ಅಥವಾ ಇಲ್ಲ ಇಷ್ಟೇ ಉತ್ತರ ಹೇಳು.''

''ಇಲ್ಲ.''

ಒಮ್ಮೆಲೆ ಆತ ವಿಮನಸ್ಕನಾದ. ಶಾಂತವಾಗಿದ್ದ ನೀರಿಗೆ ಕೋಲಿನಿಂದ ಬಡಿದು ತಳದ ರಾಡಿಯನ್ನೆಲ್ಲ ಎಬ್ಬಿಸಿದಂತಾಗಿತ್ತು ಅವರಿಬ್ಬರ ಮನಃಸ್ಥಿತಿ. ಇಬ್ಬರ ನಡುವೆ ಮೌನದ ಗೋಡೆ ಆವರಿಸಿತು. ವಿವಾಹ ವಿಚ್ಛೇದನೆಯ ನಂತರ ನತಾಶಾಳಿಗೆ ಮದುವೆಯಾಗುವುದೇನೂ ಕಷ್ಟಕರವಾಗಿರಲಿಲ್ಲ. ಮನೆಯ ಅಂಗಳದಲ್ಲಿ ನಿಂತು, ''ನಾನು ಮದುವೆಯಾಗಬಯಸುತ್ತೇನೆ,'' ಎಂದು ಒಂದು ಬಾರಿ ಕೂಗಿ ಹೇಳಿದ್ದರೂ ಸಾಕಿತ್ತು - ಗಂಡುಗಳ ದೊಡ್ಡ ಸಾಲೇ ನಿಲ್ಲುತ್ತಿತ್ತು. ಆದರೆ ಆಕೆ ಹಾಗೆ ಮಾಡಲಿಲ್ಲ. ಇನ್ನೂ ಯೌವನದ ಹುರುಪು ಇತ್ತು; ಅತ್ಯುತ್ತಮವಾದುದನ್ನೇ ಆಯ್ಕೆ ಮಾಡುವ ಹುಮ್ಮಸ್ಸು ಇತ್ತು. ನತಾಶಾ ಬಯೋಕೆಮಿಸ್ಟ್ರಿಯ ಪ್ರೊಫೆಸರ್ ರೆತಾಯುವನನ್ನು ಪ್ರೇಮಿಸಿದಳು. ಆತ ಹದಿನಾಲ್ಕು ಡಾಕ್ಟರೇಟು ಪಡೆದಿದ್ದ. ಇವನ ತಲೆಯಲ್ಲಿ ಮಿದುಳಿನ ಬದಲು ಪವರ್‌ಹೌಸ್ ಇದೆ; ಅದಕ್ಕಾಗಿಯೇ ಹೊಸ ಹೊಸ ವಿಚಾರಗಳು ಅವನ ತಲೆಯಲ್ಲಿ ಉದ್ಭೂತವಾಗುತ್ತವೆಂದು ಜನರು ಮಾತನಾಡುತ್ತಿದ್ದರು. ತನ್ನ ಸಂಶೋಧನೆ ನಾಲ್ಕು ಜನರಿಗೆ ಉಪಯೋಗವಾಗಲೆಂದು ಅವುಗಳನ್ನು ಬಳಸಿಕೊಳ್ಳಲು ಧಾರಾಳವಾದ ಅವಕಾಶ ನೀಡುತ್ತಿದ್ದ. ಜನ ಇವನನ್ನು ಬಂಗಾರದ ಮೊಟ್ಟೆ ಇಡುವ ಕೋಳಿಗೆ ಹೋಲಿಸುತ್ತಿದ್ದರು. ಕೋಳಿಗೆ ತನ್ನ ಮೊಟ್ಟೆಯ ಬಗ್ಗೆ ಎಂದಿಗೂ ಲಾಲಸೆ ಇರುವುದಿಲ್ಲ. ಏಕೆಂದರೆ ಮರುದಿನ ತಾನು ಹಾಕಲಿರುವ ಮೊಟ್ಟೆಯೂ ಬಂಗಾರದ್ದೆಂದು ಅದಕ್ಕೆ ಗೊತ್ತಿರುತ್ತದೆ.

ರೆತಾಯುವ ಸ್ಫುರದ್ರೂಪಿಯಲ್ಲ, ದೃಢಕಾಯನೂ ಅಲ್ಲ. ಬೋಳು ತಲೆ, ತೆಳ್ಳನೆಯ ಶರೀರ, ಬತ್ತಿ ಹೋದ ಮೋರೆ. ಮುದುಕನಂತೆ ಕಂಡು ಬರುತ್ತಿದ್ದ. ರೆತಾಯುವ ಮುದುಕನೆಂದು ನತಾಶಾ ಬೇಸರಿಸಿಕೊಳ್ಳಲಿಲ್ಲ. ಸ್ಫುರದ್ರೂಪಿ ಯುವಕನ ಜೊತೆ ಕನಿಷ್ಟ ಎಂಟು ತಿಂಗಳ ಕಾಲವಾದರೂ ಸಂಸಾರ ನಡೆಸಿದ್ದಳು. ರೆತಾಯುವನ ಬುದ್ಧಿವಂತಿಕೆಯ ಎದುರು ಎಲ್ಲ ಯುವಕರೂ ಉತ್ತರಕುಮಾರರಿಗೆ ಸಮಾನರೆಂದು ಅವಳ ಅನಿಸಿಕೆ.

ರಸಪುರಿ ಹಣ್ಣಿನಂತಿರುವ, ಯೌವನದಿಂದ ತುಳುಕಾಡುತ್ತಿರುವ ಈ ಚೆಲುವೆ ನತಾಶಾ ತನ್ನನ್ನು ಪ್ರೀತಿಸುತ್ತಿದ್ದಾಳೆಂದು ಆತ ಮೊದಮೊದಲು ನಂಬಲೇ ಇಲ್ಲ. ಆದರೆ ವಿಶ್ವಾಸ ಮೂಡಿದ ನಂತರದಿಂದ ಅವರಿಬ್ಬರೂ ಪತಿ - ಪತ್ನಿಯರಂತೆಯೇ ಜೀವಿಸತೊಡಗಿದರು. ಆತ ನತಾಶಾಳ ಜೊತೆ ಮದುವೆ ಮಾಡಿಕೊಳ್ಳಲಿಲ್ಲ. ಅವನಿಗೆ ಮದುವೆಯಾದ ಪತ್ನಿ ಇದ್ದಳು. ಅವಳು ಇವರೀರ್ವರ ನಡುವೆ ಎಂದಿಗೂ ಪ್ರವೇಶಿಸಲಿಲ್ಲ. ಮದುವೆ

ಮಾಡಿಕೊ ಎಂದು ನತಾಶಾ ಕೂಡ ಒತ್ತಾಯಿಸಲಿಲ್ಲ. ಯಾವುದೇ ಏರುಪೇರುಗಳಿಲ್ಲದೆ ಜೀವನ ಚಕ್ರ ತಿರುಗತೊಡಗಿತ್ತು. ನಾಳೆಯೇ ವಿವಾಹದ ರಜಿಸ್ಟರ್ ಮಾಡಿಕೊಳ್ಳಲು ಒತ್ತಾಯಿಸಬೇಕೆಂದು ನತಾಶಾ ಕೆಲವೊಮ್ಮೆ ಯೋಚಿಸುತ್ತಿದ್ದಳು. ಆ ನಾಳೆ ಮಾತ್ರ ಇದುವರೆಗೂ ಬಂದಿರಲಿಲ್ಲ.

ಏಶಿಯಾ - ಆಫ್ರಿಕಾ ದೇಶಗಳ ಸೆಮಿನಾರಿನಲ್ಲಿ ಭಾಗವಹಿಸಲು ರೆತಾಯವ ಬಾಕೂಗೆ ಬಂದಿದ್ದ. ಎರಡು ದಿನಗಳ ಮಟ್ಟಿಗೆ ಬಾರೆಂದು ಆತ ಇಂದು ಮುಂಜಾನೆ ನತಾಶಾಳಿಗೆ ಫೋನಿನಲ್ಲಿ ಹೇಳಿದ್ದ. "ಯಾಕೆ?" ಎಂದು ನತಾಶಾ ತಿರುಗಿ ಪ್ರಶ್ನೆ ಕೇಳಿರಲಿಲ್ಲ. ನತಾಶಾ ಇಲ್ಲದೆ ಕಾಲ ಕಳೆಯುವುದು ಅವನಿಗೆ ಕಷ್ಟವಾಗಿರಬೇಕು. ಈಗ ಆಕೆ ಹೊರಟಿರುವುದು ಅಲ್ಲಿಗೆ. ಕಳೆದ ಆರೇಳು ಘಂಟೆಗಳಿಂದ ವಿಮಾನಿಗಾಗಿ ಕಾದು ಕುಳಿತಿದ್ದಾಳೆ. ವೇಳೆ ವ್ಯರ್ಥವಾಗಿ ಹಾಳಾಗುತ್ತಿದೆ.

ಲೌಡ್ ಸ್ಪೀಕರಿನ ಕರೆ ಕೇಳುತ್ತಲೂ ಆಕೆ ಮೇಲಕ್ಕೆದ್ದಳು. ವಿಮಾನಿನಲ್ಲಿ ತನ್ನ ಸೀಟಿನಲ್ಲಿ ಕುಳಿತುಕೊಂಡು ಬೆಲ್ಟ್ ಕಟ್ಟಿಕೊಂಡಳು. ವಿಮಾನ ಒಮ್ಮೆಲೆ ಮೇಲಕ್ಕೇರಿದ್ದಾಗ ಹೊಟ್ಟೆ ತೊಳೆಸಿದಂತಾಯಿತು. ಎದೆಯ ಬಡಿತ ಒಮ್ಮೆಲೆ ಹೆಚ್ಚಾಯಿತು. ವಿಮಾನ ಮೇಲಕ್ಕೆ ಬಂದು ತನ್ನ ದಾರಿಯನ್ನು ಉಪಕ್ರಮಿಸಲು ಆರಂಭಿಸಿದಾಗ ಆಕೆಯಲ್ಲಿ ಉದ್ವಿಗ್ನತೆ, ಸಂಕಟ ಎಲ್ಲವೂ ಕಡಿಮೆಯಾಗಿ ಸಾಮಾನ್ಯ ಸ್ಥಿತಿಗೆ ಮರಳಿದ್ದಳು. ವಿಮಾನದ ತುಂಬ ಒಮ್ಮೆ ದೃಷ್ಟಿ ಹಾಯಿಸಿದಳು. ಎಲ್ಲರೂ ನಿದ್ರೆ ಮಾಡುತ್ತಿದ್ದಾರೆ. ನತಾಶಾಳ ಪಕ್ಕದಲ್ಲಿ ಓರ್ವ

ನವ ಯುವಕ. ನೋಡಿದರೆ ಫುಟ್‌ಬಾಲ್ ಆಟಗಾರನಂತೆ ಕಾಣುತ್ತಿದ್ದಾನೆ. ನತಾಶಾ ಕಿಟಕಿಯಿಂದ ಹೊರಕ್ಕೆ ನೋಡಿದಳು. ವಿಮಾನಿನ ರೆಕ್ಕೆಯ ಹತ್ತಿರ ಬೆಂಕಿ! ಸಾವಿನ ಬಗ್ಗೆ ಆಕೆಗೆ ಹೆದರಿಕೆ ಇರಲಿಲ್ಲ. ಆದರೆ ಅಪಘಾತದಲ್ಲಿ ಒಂದೇ ಬಾರಿಗೆ ಸತ್ತರೆ ಅಡ್ಡಿ ಇಲ್ಲ. ನರಳಿ ನರಳಿ ಸಾಯುವ ಪ್ರಸಂಗ ಬಂದರೆ? ಆಕೆಗೆ ಒಡಲಿನಲ್ಲಿ ಬೆಂಕಿ ಹತ್ತಿದ ಅನುಭವ. ತಲೆ ಸುತ್ತತೊಡಗಿತು. ಕಣ್ಣಮುಂದೆ ಕತ್ತಲು ಕವಿಯಿತು. ''ಇದು ಸರಿಯಲ್ಲ, ಸರಿಯಲ್ಲ,'' ಎಂದು ಯಾರೋ ಪದೇ ಪದೇ ಹೇಳಿದಂತೆ. ಗಾಬರಿಯಲ್ಲಿ ಪಕ್ಕದಲ್ಲಿ ಕುಳಿತ ಯುವಕನ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡು, ''ವಿಮಾನಿಗೆ ಬೆಂಕಿ ಬಿದ್ದಿದೆ,'' ಎಂದು ಉದ್ವಿಗ್ನತೆಯಿಂದ ಹೇಳಿದಳು. ಆತನೂ ಕಿಡಕಿಯಿಂದ ಬಗ್ಗಿ ನೋಡಿದ.

''ಬೆಂಕಿಯಲ್ಲ, ಸಿಗ್ನಲ್ ತೋರುವ ಕೆಂಪು ದೀಪ,'' ಯುವಕ ನಸುನಗುತ್ತ ಹೇಳಿದ.

''ಅಂಥ ಕೆಂಪು ದೀಪದ ಅವಶ್ಯಕತೆಯಾದರೂ ಏನು?''

''ಬೇರೆ ವಿಮಾನ ಬಂದು ಈ ವಿಮಾನಿಗೆ ಡಿಕ್ಕಿ ಹೊಡೆಯಬಾರದು ಎಂದು ಮುನ್ನೆಚ್ಚರಿಕೆ.''

ನತಾಶಾ ಪುನಃ ನೋಡಿದಳು. ಹೌದು, ಬೆಂಕಿಯಂತೆ ಹೊತ್ತಿಕೊಳ್ಳುವ ಅದು ಒಂದು ಲಯಕ್ಕೆ ಅನುಗುಣವಾಗಿ ಆರುತ್ತದೆ, ಹತ್ತುತ್ತದೆ. ಅದೇ ವೇಳೆಗೆ ಹೋಸ್ಟೆಸ್ ಬಂದಳು. ಅವಳು ಶಾಂತ ಚಿತ್ತದಿಂದ ಇದ್ದಾಳೆ. ವಿಮಾನಿಗೆ ಬೆಂಕಿ ಬಿದ್ದುದೇ ಆದರೆ ಆಕೆ ಹೀಗೆ ಇರಲು ಸಾಧ್ಯವಿಲ್ಲ.

ರಾತ್ರಿಯ ನಿದ್ರೆಗೆ ಪ್ರಯಾಣಿಕರಿಗೆ ತೊಂದರೆಯಾಗಬಾರದು ಎನ್ನುವ ಉದ್ದೇಶ ಇರಬೇಕು, ವಿಮಾನದೊಳಗಿನ ದೀಪಗಳನ್ನೆಲ್ಲ ಆರಿಸಿದರು. ಪಕ್ಕದಲ್ಲಿದ್ದ ಯುವಕ ನಿದ್ರೆ ಮಾಡಲೆಂದು ಸೀಟನ್ನು ಹಿಂದಕ್ಕೆ ಒರಗಿಸಿಕೊಂಡ. ಅವನ ತಲೆ ನತಾಶಾಳ ತಲೆಗೆ ಸಮೀಪ ಬಂದಿತ್ತು. ತರುಣನ ಬಿಸಿಯುಸಿರು ಆಕೆಯ ಕದಪುಗಳನ್ನು ಸ್ಪರ್ಶಿಸತೊಡಗಿತ್ತು. ಆತ ಇನ್ನೂ ಸಮೀಪ ಬರಬಾರದೇ! ಇವನ ಸಾಮೀಪ್ಯ, ನೆಲ-ಮುಗಿಲುಗಳ ಮಧ್ಯೆ ತನ್ನಲ್ಲಿರುವ ಏಕಾಕಿತನವನ್ನು ದೂರ ಮಾಡುವುದು ಖಂಡಿತ. ಯುವಕನ ಹೃದಯದ ಬಡಿತ ನತಾಶಾಳಿಗೆ ಕೇಳತೊಡಗಿತ್ತು. ಆಕೆಯ ತಲೆ ಒಮ್ಮೆಲೆ ಅವನ ಹೆಗಲ ಮೇಲೆ ವಾಲಿತ್ತು. ಆತನೂ ತನ್ನ ತಲೆಯನ್ನು ನತಾಶಾಳ ಕೋಮಲ ಕುರುಳಗಳ ಮೇಲೆ ಇರಿಸಿದ್ದ. ಇಬ್ಬರಿಗೂ ಹೃದಯ ಒಂದಾದ ಅನುಭವ. ವಿಮಾನವೀಗ ನೆಲಕ್ಕೆ ಅಪ್ಪಳಿಸಿದರೂ ನತಾಶಾಳಿಗೆ ಭಯವಿರಲಿಲ್ಲ. ಮುಗಿಲಲ್ಲಿ ಜೊತೆಗಾರನೊಬ್ಬ ಸಿಕ್ಕಿದ್ದ.

''ನೀನು 'ಬಾಕೂದವನಾ?'' ನತಾಶಾ ಪ್ರಶ್ನಿಸಿದಳು.

''ಹೌದು.''

''ಆದರೆ, ರಶಿಯುದವನಂತೆ ಕಾಣ್ತಾ ಇದ್ದೀಯಲ್ಲ.''

''ಅಲ್ಲಿ ರಶಿಯನ್ನರೂ ಇದ್ದಾರೆ.''

''ಏಕೆ?''

''ಅದೊಂದು ಸುಂದರ ಪಟ್ಟಣ!''


''ಮಾಸ್ಕೋಗೆ ಹೋಗಿದ್ದು ಯಾಕೆ?''

''ಆಟಗಾರರ ಶಿಬಿರ ಇತ್ತು.''

''ಬಾಸ್ಕೆಟ್ ಬಾಲ್ ಆಡ್ತೀಯಾ?''

''ಹೌದು.''

ತಮ್ಮ ಮಾತು ಬೇರೆಯವರಿಗೆ ಕೇಳದ ರೀತಿಯಲ್ಲಿ ಈಗ ಪಿಸುಮಾತಿನಲ್ಲಿ ಅವರೀರ್ವರೂ ಸಂಭಾಷಿಸತೊಡಗಿದ್ದರು. ಇಬ್ಬರೂ ಪ್ರೇಮದ ಸಮ್ಮೋಹನಕ್ಕೆ ಒಳಗಾಗಿದ್ದರು. ಆದರೆ ಅದನ್ನು ತೋರಗೊಡಬಾರದೆನ್ನುವ ನಿರ್ಧಾರದಿಂದ ಏನೇನೋ ಮಾತನಾಡುತ್ತಿದ್ದರು. ಆದರೆ ಪ್ರೇಮ ಸಮ್ಮೋಹನದ ಮೇಲೆ ನಿಯಂತ್ರಣ ಸಾಧಿಸುವುದು ಇಬ್ಬರಿಗೂ ಕಷ್ಟ



ಫೆರೆಕ್ಸ್-ಎಗ್
ಹಾಲಿನಷ್ಟೇ
ಸುಲಭವಾಗಿ
ಪಚನವಾಗುತ್ತದೆ!
ನಿಮ್ಮ ಮಗುವಿಗೆ ಆರು ತಿಂಗಳು ತುಂಬುತ್ತಲೇ ಅದಕ್ಕೆ ಮೊಟ್ಟೆ ಮತ್ತು ಹಾಲಿನ ಪ್ರೋಟೀನ್ ಸಂಪನ್ನತೆಯನ್ನು ಒಟ್ಟೊಟ್ಟಿಗೆ ಒಂದೇ ಉತ್ಪಾದನೆಯಲ್ಲಿ ನೀಡಿರಿ.
ಅದೇ ಫೆರೆಕ್ಸ್-ಎಗ್ ಇದು ನಿಮ್ಮ ಮಗುವಿನ ಕೋಮಲ ಪಾಚನ ವ್ಯವಸ್ಥೆಗೆ ಅನುಕೂಲವಾಗುವಂತೆ ಮೊದಲೇ ಬೇಯಿಸಲ್ಪಟ್ಟಿರುತ್ತದೆ.
PROTEIN-RICH
Farex-egg
WITH CEREAL, EGGS AND MILK
ಪ್ರೋಟೀನ್ ಸಮೃದ್ಧ
ಫೆರೆಕ್ಸ್:
ಬೆಳೆಯಲು ರುಚಿಕರ ಸಾಧನ.
Gx/188.90 Kn



"ನನಗಿವತ್ತು ತುಂಬಾ ಖುಷಿ ಆಗಿದೇರಿ.. ನನ ಗಿಂತ್ಲೂ ದಪ್ಪ ಇರೋ ಒಬ್ಬರನ್ನ ಇವತ್ತು ಮದುವೆ ಮನೇಲಿ ನೋಡ್ದೆ.."

ವಾಗತೊಡಗಿತ್ತು.

ಯುವಕ ಸ್ವಲ್ಪ ಬಗ್ಗಿದವನೇ ನತಾಶಾಳ ಮೋರೆಯನ್ನು ತನ್ನ ಅಂಗೈಯಲ್ಲಿ ಹಿಡಿದು ಕೊಂಡು ಲಘುವಾಗಿ ಚುಂಬಿಸಿದ. ದೇಹದ ನರನರಗಳಲ್ಲಿ ಬೆಂಕಿ ಹರಿದ ಅನುಭವ ನತಾಶಾಳಿಗೆ. ಹೃದಯದ ಬಡಿತ ಒಮ್ಮೆಲೆ ಹೆಚ್ಚಿತು. ವಿಮಾನಿನಂತೆ ತಾನೂ ಗಾಳಿಯಲ್ಲಿ ತೇಲುತ್ತಿರುವ ಅನಿಸಿಕೆ. ಇಬ್ಬರು ಗಂಡಂದಿರ ದೈಹಿಕ ಸಾಮೀಪ್ಯದ ಅನುಭವ ಹೊಂದಿದ್ದರೂ ಇಂತಹ ರೋಮಾಂಚಕ ಅನುಭವ ಆಕೆಗೆ ಆಗಿರಲಿಲ್ಲ.

"ನಿನಗೆ ಯಾರೂ ಇಲ್ಲವೆ?" ಯುವಕ ಪ್ರಶ್ನಿಸಿದ.

"ಪ್ರೇಮಿಯೊಬ್ಬ ಇದ್ದಾನೆ, ಅವನ ಭೇಟಿಗೆಂದೇ ಹೊರಟಿದ್ದೇನೆ."

"ಹೌದಾ? ಹಾಗಾದರೆ ನೀನಿನ್ನೂ ತರುಣಿ ಅಂತಾಯ್ತು."

ಕತ್ತಲೆಯಲ್ಲಿ ನತಾಶಾಳ ವಯಸ್ಸಿನ ಬಗ್ಗೆ ಅಂದಾಜು ಮಾಡುವುದು ಸಾಧ್ಯವಾಗುತ್ತಿರಲಿಲ್ಲ.

"ನಿನಗೂ ಯಾರಾದರೂ ಪ್ರೇಯಸಿ..."

"ಹಾಂ ಇದ್ದಾಳೆ.... ಸ್ನೇಝೂನಾ."

"ಬಲ್ಗೇರಿಯದವಳಾ?"

"ಹೌದು. ದೇವರು ನನಗಾಗಿ ಸೃಷ್ಟಿಸಿದ ಹೆಣ್ಣು ಎಂದು ಇದುವರೆಗೆ ಭಾವಿಸಿದ್ದೆ. ಆದರೆ ಈಗ ನಿನ್ನ ಜೊತೆ ದೊರೆತ ಅನುಭವ, ಅನುಭೂತಿ...."

"ಎಂತಹ ಅನುಭೂತಿ....?"

"ಅದನ್ನು ವರ್ಣಿಸಲಿಕ್ಕೆ ಆಗ್ತಾ ಇಲ್ಲ, ಮೈಯಲ್ಲೆಲ್ಲ ವಿದ್ಯುತ್ ಪ್ರವಾಹ ಹರಿದಂತೆ...."

ನತಾಶಾ ಅವನಿಂದ ಸ್ವಲ್ಪ ದೂರ ಸರಿದು ಕುಳಿತು ಅವನನ್ನೇ ನೋಡತೊಡಗಿದಳು. ದಪ್ಪ - ಪುಷ್ಟ ಶರೀರ. ಕಣ್ಣುಗಳಲ್ಲಿ ಒಂದು ಬಗೆಯ ಹೊಳಪು, ಕಾತರ. ಯುವಕನ ಮೋರೆಯನ್ನು ತನ್ನ ಅಂಗೈಯಲ್ಲಿ ಹಿಡಿದು ಕೊಂಡು ಕುರುಡಿಯಂತೆ ಅವನ ಮೋರೆಯ ಮೇಲೆಲ್ಲ ಕೈಯಾಡಿಸಿದಳು. ಯುವಕ ಗಲಿಬಿಲಿಗೊಳ್ಳಲಿಲ್ಲ, ಪ್ರೇಮದ ಈ ಹಂತದಲ್ಲಿ ಅದೊಂದು ಸ್ವಾಭಾವಿಕವಾದ ಕ್ರಿಯೆಯಾಗಿತ್ತು.

"ಜೀವನ ಹೇಗೆ ಅನಿಸುತ್ತಿದೆ?" ನತಾಶಾಳ ಪ್ರಶ್ನೆ.

"ಬರೀ ದುಃಖದಿಂದ ತುಂಬಿದೆ."

"ಯಾಕೆ ಹಾಗೆ ಹೇಳ್ತಿ?"

"ಮತ್ತೇನು ಹೇಳಬೇಕು? ತಾಯಿ ಸತ್ತರೂ ಆಕೆಯನ್ನು ತರಲಿಕ್ಕೆ ಮರೆಯಲಿಕ್ಕೆ ಆಗ್ತಾ ಇಲ್ಲ, ಆಕೆಗೆ ಪುನಃ ಜೀವ ತರೋಕೆ ಆಗುತ್ತದೆಯಾ?"

"ಇಲ್ಲ."

"ನಿನಗೆ ಹ್ಯಾಗೆ ಗೊತ್ತು?"

"ನಾನು ಜೀವ ವಿಜ್ಞಾನ ತಜ್ಞಳು. ಜಗತ್ತಿನಲ್ಲಿ ಇದುವರೆಗೆ ಎಲ್ಲ ಕಾರ್ಯವನ್ನು ಸಾಧಿಸಲಾಗಿದೆ. ಆದರೆ ಸತ್ತವರಿಗೆ ಪುನಃ ಜೀವ ತರಿಸಲಿಕ್ಕೆ ಮಾತ್ರ ಸಾಧ್ಯವಾಗಿಲ್ಲ."

ಗಾಂಧೀ ಪಾಠ

ಒಂದು ದಿನ ಗಾಂಧೀಜಿ ಕುಳಿತು ಏನೋ ಬರೆಯುತ್ತಿದ್ದರು. ಪಕ್ಕದಲ್ಲಿ ಕಾಕಾ ಕಾಲೇಲ್ಕರರು ಯಾವುದೋ ಒಂದು ಪುಸ್ತಕ ಓದುತ್ತಿದ್ದರು. ಅದನ್ನು ಗಾಂಧೀಜೀ ನೋಡಿ, "ಏನು ಓದುತ್ತಿದ್ದೀರಿ?" ಎಂದು ಕೇಳಿದರು. ಕಾಕಾ ಕಾಲೇಲ್ಕರರು, "ಉಮರನ ಒಸಗೆ; ಫಿಟ್ಜೆರಾಲ್ಡ್ ಅನುವಾದ" ಎಂದರು, ಮತ್ತೆ "ಚೆನ್ನಾಗಿದೆ," ಎಂದು ಓದತೊಡಗಿದರು. ಗಾಂಧೀಜಿ, "ನಾನೂ ಒಮ್ಮೆ ಇಂಗ್ಲಿಷ್ ಕವಿತೆಗಳನ್ನು ಬಹಳ ಓದುತ್ತಿದ್ದೆ. ಆದರೆ ಆಮೇಲೆ, 'ನನಗೆ ಇಂಗ್ಲಿಷ್ ಕವಿತೆ ಓದುವುದಕ್ಕೆ ಏನು ಅಧಿಕಾರ? ಇದೇ ಸಮಯವನ್ನು ಗುಜರಾತಿ ಓದಿ ಬರೆಯಲು ಏಕೆ ವಿನಿಯೋಗಿಸಬಾರದು?' ಎಂದುಕೊಂಡೆ. ಹಾಗೇ ಮಾಡಿದೆ," ಎಂದರು. ಅಂದಿನಿಂದಲೇ ಕಾಕಾ ಸಾಹೇಬರು ಗುಜರಾತಿ ಅಭ್ಯಾಸ ಮಾಡತೊಡಗಿದರು. ಮರಾಠೀ ಭಾಷಾ ವಿಶಾರದರಾದ ಅವರು ಸ್ವಲ್ಪ ಕಾಲದಲ್ಲೇ ಗುಜರಾತಿ ಭಾಷೆಯ ಶ್ರೇಷ್ಠ ಲೇಖಕರಲ್ಲಿ ಒಬ್ಬರಾದರು. ●

– ಶ್ರೀಕಾಂತ ಹಾದಿಮನಿ

"ಹಿಂದಿನ ಕಾಲದಲ್ಲಿ ಅದನ್ನು ಸಾಧಿಸಿದ್ದರಂತೆ."

"ಅದು ಕೇವಲ ಅಂತೆ - ಕಂತೆ. ಜನ ಹುಟ್ಟುತ್ತಾರೆ, ಬೆಳೆಯುತ್ತಾರೆ, ವೃದ್ಧರಾಗುತ್ತಾರೆ, ಹೊಸ ಪೀಳಿಗೆಗೆ ಅವಕಾಶ ಕೊಡಲೆಂದು ಸಾಯುತ್ತಾರೆ. ಕಾಲಚಕ್ರಕ್ಕೆ ವಿರುದ್ಧವಾದದ್ದನ್ನು ವಿಜ್ಞಾನ ಸಾಧಿಸಲಾರದು."

"ನನ್ನ ತಾಯಿಯೇನೂ ಮುದುಕಿಯಾಗಿರಲಿಲ್ಲ. ಇನ್ನೂ ತಾರುಣ್ಯದ ಹೊಸ್ತಿಲಲ್ಲಿ ಇರುವಾಗಲೇ ತೀರಿಕೊಂಡಳು."

"ಯಥಾರ್ಥದೊಂದಿಗೆ ಒಪ್ಪಂದ ಮಾಡಿಕೊಳ್ಳಲೇಬೇಕು."

"ಅದು ಹೇಗೆ ಸಾಧ್ಯ?"

ಕೆಲವರು ತಮ್ಮ ಸಮೀಪದ ವ್ಯಕ್ತಿ ಸತ್ತಾಗ ಕ್ರಮೇಣ ಅವರನ್ನು ಮರೆತುಬಿಡುತ್ತಾರೆ. ಇನ್ನು ಕೆಲವರು ಸತ್ತರೂ ಮರೆಯುವುದಿಲ್ಲ, ಯುವಕ ಎರಡನೆಯ ಸಾಲಿಗೆ ಸೇರಿದವನು. ತಾಯಿ ಸತ್ತರೂ ಇನ್ನೂ ಆಕೆಯನ್ನು ಮರೆತಿಲ್ಲ.

•

"ಈ ಜಗತ್ತಿನಲ್ಲಿ ಆಕೆಯ ಹೊರತು ನನಗೆ ಇನ್ನಾರೂ ಇರಲಿಲ್ಲ. ತಂದೆ ನಮ್ಮನ್ನು ಬಿಟ್ಟು ಹೋದಾಗ ನನಗೆ ಒಂದು ತಿಂಗಳು, ತಾಯಿಗೆ ಕೇವಲ ಹತ್ತೊಂಭತ್ತೇ ವರ್ಷ. ನಾನು ಅವನನ್ನು ನೋಡಿಲ್ಲ. ಆಗ ನಾವು ತುಂಬ ಬಡವರಾಗಿದ್ದೆವು. ಚಳಿಗಾಲದ ಒಂದು ದಿನ. ಚಳಿ ತಡೆಯುವ ಬಟ್ಟೆ ಇರದೆ ಮನೆಯಿಂದ ಹೊರಕ್ಕೆ ಬಂದಿರಲಿಲ್ಲ."

ಯುವಕನ ನಿಟ್ಟುಸಿರು ನತಾಶಾಳವರೆಗೆ ಬರತೊಡಗಿತ್ತು. ಆತ ತನ್ನ ತಾಯಿಯ ಬಗ್ಗೆ ಹೇಳತೊಡಗಿದ್ದ. ತಾಯಿ ನಾಟಕ ಕಂಪೆನಿ ಸೇರಿದ್ದು, ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದು, ಹಗಲು - ರಾತ್ರೆ ಆಕೆಯ ಬಳಿಯೇ ಇದ್ದದ್ದು, ಆಸ್ಪತ್ರೆಯಲ್ಲಿ ಕೊನೆಯುಸಿರು ಎಳೆದರೂ ಆಕೆ ಸತ್ತಿದ್ದಾಳೆಂದು ತಾನು ನಂಬದೇ ಇದ್ದದ್ದು, ಎಲ್ಲವನ್ನೂ ಹೇಳಿದ.

"ಮತ್ತೆ ಸ್ನೇರ್ಝೂನಾ?" ನತಾಶಾ ಪ್ರಶ್ನಿಸಿದಳು.

"ಆಕೆಯ ಬಗೆಗೆ ಯೋಚಿಸಲೂ ನನಗೆ

ಆಗ ವೇಳೆ ಇರಲಿಲ್ಲ. ತಾಯಿಯ ಎದುರು ಆಕೆ ಅರ್ಥಹೀನಳಾಗಿದ್ದಳು.''

ಇಬ್ಬರೂ ಕೆಲಹೊತ್ತು ಮೌನವಾಗಿದ್ದರು.

''ನನಗೆ ಹುಚ್ಚು ಹಿಡಿದಿದೆಯೆಂದು ನಿನಗೆ ಅನ್ನಿಸುತ್ತದಾ?'' ಯುವಕ ಕೇಳಿದ.

''ಊಂ ಹುಂ. ನೀನಿನ್ನೂ ಚಿಕ್ಕವನು. ದುಃಖವನ್ನು ಸಹಿಸಿಕೊಳ್ಳುವ ಶಕ್ತಿ ನಿನಗಿನ್ನೂ ಬಂದಂತೆ ತೋರುತ್ತಿಲ್ಲ.''

''ನೀನು ಹೇಳುವುದು ನಿಜವಿರಬಹುದು, ಆದರೆ ತಾಯಿ ಅಷ್ಟು ಬೇಗನೇ ಸಾಯಬಾರದಿತ್ತು. ಜೀವನದಲ್ಲಿ ಆಕೆ ಸುಖವನ್ನೇ ಅನುಭವಿಸಲಿಲ್ಲ, ಓರ್ವ ಅಭಿನೇತ್ರಿಯಂತೆ... ಸ್ತ್ರೀಯಂತೆ ಅಪಮಾನ ಸಹಿಸಿಕೊಂಡಳು. ಅದಕ್ಕೆ ಪ್ರತಿಫಲವಾಗಿ ಆಕೆಗೆ ದೊರೆತಿದ್ದು ಏನು?.... ಸಾವು!''

''ಪ್ರತಿಯೊಬ್ಬನೂ ತಾನು ಬಿತ್ತಿದ್ದನ್ನು ಬೆಳೆಯುತ್ತಾನೆ, ಇದೊಂದು ಕಟು ಸತ್ಯ.''

''ನನ್ನ ತಾಯಿ ಸರಳತೆ ಹಾಗೂ ಸ್ನೇಹವನ್ನು ಬಿತ್ತಿದ್ದಳು.''

''ಆದರೆ ಎಲ್ಲಿ ಯಾವುದನ್ನು ಬಿತ್ತಬೇಕಿತ್ತೋ ಅಲ್ಲಿ ಅದನ್ನು ಬಿತ್ತಿರಲಿಲ್ಲವೆಂದು ಇದರ ಅರ್ಥ.''

''ಅಂದರೆ?''

''ಅಂದರೆ ನಿನ್ನ ತಾಯಿ ಆಯ್ಕೆ ಮಾಡಿದ ಕೆಲಸ ಹಾಗೂ ಪತಿ ಎರಡೂ ಯೋಗ್ಯವಾಗಿರಲಿಲ್ಲವೆಂದು ಅದರ ಅರ್ಥ.''

''ಅದು ನಿಜವಿದ್ದಿರಬಹುದು. ಆದರೆ ಮಗನ ಆಯ್ಕೆ ಮಾತ್ರ ಸರಿಯಾಗಿತ್ತು. ನಾನು ಆಕೆಯನ್ನು ತುಂಬಾ ಪ್ರೀತಿಸುತ್ತಿದ್ದೆ, ಈಗಲೂ ಪ್ರೀತಿಸುತ್ತಿದ್ದೇನೆ.''

''ಎಲ್ಲವೂ ದೈವೇಚ್ಛೆ.''

''ದೈವೇಚ್ಛೆ, ದೈವೇಚ್ಛೆ... ಅನ್ಯಾಯ ತುಂಬ ಅನ್ಯಾಯ,'' ತನ್ನ ಕೆಳದುಟಿಗಳನ್ನು ಕಚ್ಚಿ ಹಿಡಿದು ಆ ಯುವಕ ಅಳತೊಡಗಿದ.

ನತಾಶಾ ಇದುವರೆಗೆ ಗಂಡಸು ಅತ್ತಿದ್ದನ್ನು ನೋಡಿರಲಿಲ್ಲ. ಅವಳ ಮೊದಲಿನ ಗಂಡ ಕುಡಿದ ಅಮಲಿನಲ್ಲಿ ಅಳುತ್ತಿದ್ದ. ಆದರೆ ಅದೇ ಬೇರೆ, ಇದೇ ಬೇರೆ. ನತಾಶಾ ಅವನ ಕೈಗಳನ್ನು ತೆಗೆದುಕೊಂಡು ಮುಷ್ಟಿ ಬಿಡಿಸಿ ಅದರಲ್ಲಿ ತನ್ನ ಮೋರೆಯನ್ನಿರಿಸಿದಳು.

''ನೀನು ಸ್ನೇಝಾನಾಳ ಸಂಗಡ ಬೇಗ ಮದುವೆಯಾಗಿ ಒಂದು ಹೆಣ್ಣು ಮಗುವನ್ನು ಪಡೆದು ಅದಕ್ಕೆ ತಾಯಿಯ ಹೆಸರು ಇಡು. ತಾಯಿಯ ಹೆಸರೇನಿತ್ತು?''

''ಅಲೆಕ್ಸಾಂಡರಾ.''

''ಅಲೆಕ್ಸಾಂಡರಾ ಎಂದೇ ಮಗಳಿಗೆ ಹೆಸರಿಡು. ಹೆಸರು ತುಂಬ ಚೆನ್ನಾಗಿದೆ. ಅಲ್ಲದೆ ಮಗಳಿಗೆ ಪ್ರೀತಿಯಿಂದ ಅಲ್ಫಾ, ಸಾಂದರಾ, ಶೂರಾ, ಸಾರಾ.... ಎಂದೆಲ್ಲಾ ಕರೆಯಬಹುದು. ಆಗ ನೀನು ನಿನ್ನ ತಾಯಿಯ ರೂಪವನ್ನು ಮಗಳಲ್ಲಿ ಕಾಣಬಹುದು.''

''ನಿನ್ನ ಹೆಸರೇನು?''

''ನತಾಶಾ.''

''ವಿಮಾನು ಇನ್ನು ಕೆಲವೇ ನಿಮಿಷಗಳಲ್ಲಿ ಕೆಳಕ್ಕಿಳಿಯಲಿದೆ. ದಯವಿಟ್ಟು ಎಲ್ಲರೂ ಬೆಲ್ಟ್ ಕಟ್ಟಿಕೊಳ್ಳಿ,'' ಎನೌನ್ಸ್‌ಮೆಂಟ್ ಆಗುತ್ತಿದ್ದಂತೆಯೇ ವಿಮಾನದ ದೀಪಗಳೆಲ್ಲ ಹತ್ತಿಕೊಂಡವು. ಪ್ರಯಾಣಿಕರೆಲ್ಲ ಎಚ್ಚೆತ್ತು ಬೆಲ್ಟ್ ಕಟ್ಟಿಕೊಳ್ಳತೊಡಗಿದರು.

''ನಾವಿಬ್ಬರು ಪುನಃ ಭೇಟಿಯಾಗುವುದು ಸಾಧ್ಯವಿಲ್ಲವೆ?'' ಯುವಕ ಪ್ರಶ್ನಿಸಿದ.

''ಇಲ್ಲ, ಏಕೆಂದರೆ ಆಗಲೇ ನನಗೊಬ್ಬ ಕಾಯುತ್ತಿದ್ದಾನೆ,'' ನತಾಶಾ ಉತ್ತರಿಸಿದಳು.

''ಆದರೇನಾಯ್ತು? ನನಗಾಗಿ ಸ್ವಲ್ಪ ವೇಳೆ ವ್ಯಯ ಮಾಡಿದರೆ ಆಯ್ತಲ್ಲ.''

''ಅದರಿಂದ ಲಾಭವೇನು?''

ಯುವಕ ಸುಮ್ಮನಾಗಿಬಿಟ್ಟ. ಆತ ಏನೆಂದು ಉತ್ತರಿಸಿಯಾನು?

ರೆತಾಯವ ನತಾಶಾಳಿಗಾಗಿ ಕಾದು ನಿಂತಿದ್ದ. ದೂರದಿಂದ ನೋಡಿದರೆ



"ಇದೇನ್ಸಾರ್! ನಿಮ್ಮ ಮೆದುಳಿನ ಎಕ್ಸ್‌ರೇ ಖಾಲಿ!?"

ಯಾವುದೋ ಪ್ರಾಣಿ ನಿಂತಂತೆ ಕಾಣುತ್ತಿತ್ತು. ನತಾಶಾ ಆತನ ಹಿಂಬದಿಗೆ ಬಂದು "ರೆತಾಯವ" ಎಂದು ಕರೆದಳು. ಆತ ಹಿಂದಕ್ಕೆ ತಿರುಗಿದವನೇ ನತಾಶಾಳನ್ನು ಬರಸೆಳೆದು ಚುಂಬಿಸಿದ. ನತಾಶಾಳಲ್ಲಿ ಯಾವುದೇ ಭಾವನೆ ಸ್ಫುರಿಸಲಿಲ್ಲ, ವಿಮಾನದಲ್ಲಿ ಯುವಕ ನೀಡಿದ ಚುಂಬನಕ್ಕೂ ಈಗಿನ ಚುಂಬನಕ್ಕೂ ಅಜಗಜಾಂತರ! ದೈಹಿಕವಾಗಿ ರೆತಾಯವನ ಎದುರು ನಿಂತಿದ್ದರೂ ಮಾನಸಿಕವಾಗಿ ಆಕೆ ಯುವಕನ ಬಳಿ ಓಡಿದ್ದಳು.

ಪ್ರಯಾಣಿಕರ ಲಗ್ಗೇಜ್ ಒಳಕ್ಕೆ ಬಂದಿದ್ದವು. ಎಲ್ಲರೂ ತಮ್ಮ ತಮ್ಮ ಸೂಟ್‌ಕೇಸು, ಬ್ಯಾಗುಗಳಿಗಾಗಿ ಕಾದು ನಿಂತಿದ್ದರು. ಆಕಸ್ಮಿಕವಾಗಿ ನತಾಶಾಳ ದೃಷ್ಟಿ ತನ್ನ ಜೊತೆ ಪಯಣಿಸಿದ ಯುವಕನತ್ತ ಹೋಯಿತು. ಯುವಕ ತುಂಬ ಸುಂದರನಾಗಿದ್ದ. ಕಾರ್ಟೂನ್ ಫಿಲಂನಲ್ಲಿ ಬರುವ-ಲೋಫರನಂತೆ ಕಾಣುತ್ತಿದ್ದ. ಯುವಕನೂ ಇತ್ತ ನೋಡಿದ. ಕಣ್ಣುಗಳು ಪರಸ್ಪರ ಸಂಧಿಸಿದವು. ಆತ ನತಾಶಾಳ ಬಳಿ ನಿಂತಿದ್ದ ರೆತಾಯವನನ್ನು ನೋಡಿದ. ಯಾಕಾಗಿ ಈ ತರುಣಿ ಹಸಿರು ಮೈದಾನವನ್ನು ತ್ಯಜಿಸಿ ಬಂಜರು ಭೂಮಿಯತ್ತ ಹೋಗುತ್ತಿದ್ದಾಳೆ? ಈ ಮುದುಕನಲ್ಲಿ ಯಾವ ಆಕರ್ಷಣೆ ಕಂಡಿದ್ದಾಳೆ? ಈ ರಾಜಕುಮಾರಿಯನ್ನು ಮುದಿ ರಾಕ್ಷಸನಿಂದ ಕಾಪಾಡಲು ಸಾಧ್ಯವಿಲ್ಲವೆ? ಎಂದು ಅವನ ಮೋರೆಯ ಮೇಲೆ ಆಶ್ಚರ್ಯ. ತನ್ನ ಬ್ಯಾಗ್ ತಿರುಗು ಪಟ್ಟಿಯ ಮೇಲೆ ಅನೇಕ ಬಾರಿ ಬಂದು ಹೋದರೂ ಅವನಿಗೆ ಅದರತ್ತ ಗಮನವಿಲ್ಲ.

ರೆತಾಯವ ನತಾಶಾಳ ಸೂಟ್‌ಕೇಸನ್ನು ಕೈಗೆತ್ತಿಕೊಂಡ. ಹೊರಕ್ಕೆ ಹೋಗುವ ಮುಂಚೆ ಒಂದು ಬಾರಿ ನತಾಶಾ ತಿರುಗಿ ನೋಡಿದಳು. ಯುವಕನ ಕಣ್ಣುಗಳಲ್ಲಿ ಅದೆಂತಹದೋ ಪ್ರತೀಕ್ಷೆ, ಆಸೆ, ಆ ಭಿಕ್ಷುಕಿಯ ಮಗನ ಕಣ್ಣುಗಳಲ್ಲಿ ಕಂಡಂತಹದೇ ಆಸೆ.....

ಅನೇಕ ವರ್ಷಗಳ ಹಿಂದೆ.... ಭಿಕ್ಷುಕಿಯೋರ್ವಳು ತನ್ನ ಚಿಕ್ಕ ಮಗನೊಂದಿಗೆ ಬೇಡಲು ಬಂದಿದ್ದಳು. ನತಾಶಾಳ ತಾಯಿ ಹಳೆಯ ಗೌನು, ಹಣ ಎಲ್ಲ ಕೊಟ್ಟಳು. ಆಕೆಯ ಮಗನ ಕೈಮೇಲೆ ಅದೇ ತಾನೆ ಕರಿದ ಬಿಸಿ ಬಿಸಿ ಬೋಂಡಾ ಇಟ್ಟಳು. ಮಗುವಿನ ಕೈಸುಟ್ಟೀತೆಂದು ಹೆದರಿದ ನತಾಶಾಳ ತಾಯಿ ಮಗುವಿನ ಕೈಯಿಂದ ಬೋಂಡಾ ಕಸಿದಳು. ಕೈಗೆ ಸಿಕ್ಕಿದ್ದು ದೊರೆಯದೇ ಹೋಯಿತಲ್ಲವೆಂದು ಮಗು ಭಾವಿಸಿ, ಒಂದು ಬಗೆಯ ನಿರಾಸೆಯಿಂದ ಅಳತೊಡಗಿತು. ಆದರೆ ಅವನ ಒಳಿತಿಗಾಗಿಯೇ ಬೋಂಡಾ ಕಸಿಯಲಾಯಿತೆಂದು ಅವನಿಗೆ ತಿಳಿಯಲೇ ಇಲ್ಲ. ಈ ಯುವಕನೂ ತನ್ನ ಸಮೀಪ ಬಂದ ನತಾಶಾ ದೂರ ಹೊರಟು ಹೋಗುತ್ತಿದ್ದಾಳೆಂದು ಕಸಿವಿಸಿಗೊಳ್ಳುತ್ತಿದ್ದಾನೆ, ಆದರೆ ಅವನ ಒಳಿತಿಗಾಗಿಯೇ ನತಾಶಾ ದೂರ ಹೋಗುತ್ತಿದ್ದಾಳೆಂದು ಆತನಿಗೆ ಗೊತ್ತಿಲ್ಲ. ಆತ ಇನ್ನೂ ಪ್ರಾಯದ ಹೊಸ್ತಿಲಲ್ಲಿ ಇದ್ದರೆ ಆಕೆ ವೃದ್ಧಾಪ್ಯವನ್ನು ಸಮೀಪಿಸುತ್ತಿದ್ದಳು. ಮುಗಿಲಲ್ಲಿ ಅರಳಿದ ಪ್ರೇಮ ನೆಲಕ್ಕಿಳಿಯುವುದು ಅಸಾಧ್ಯವೆಂದು ಅವನಿಗೆ ಗೊತ್ತಿರಲಿಲ್ಲ. ಹೌದು, ಮುಗಿಲಲ್ಲಿ ತೇಲುವ ಮೋಡ ನೆಲಕ್ಕೆ ಬರುವುದು ಸಾಧ್ಯವೆ? ●


ಓ ಲವರ್!
ರವಿರಾಜ ಹಾಲಂಬಿ

26

ಜೀವನದರ್ಶನ

ಕೆ.ಟಿ. ಪಾಂಡುರಂಗಿ

ನಮ್ಮವರು - ಪರಕೀಯರು

ಎಲ್ಲ ಮಾನವರೂ ಒಂದೇ ಗುಂಪಿಗೆ ಸೇರಿದವರು, ಎಲ್ಲರೂ ಪರಸ್ಪರ ಸಹಕಾರದಿಂದ ವರ್ತಿಸಬೇಕು ಎಂಬುದನ್ನು ತತ್ವತಃ ಎಲ್ಲರೂ ಒಪ್ಪಿದರೂ ಮನುಷ್ಯನ ಜೀವನದಲ್ಲಿ ನಮ್ಮವರು ಪರಕೀಯರು ಎಂಬ ವಿಭಾಗ ಇದ್ದೇ ಇರುತ್ತದೆ. ಇದು ಮೂರು ಹಂತಗಳಲ್ಲಿ ಇರುತ್ತದೆ. ಪ್ರತಿಯೊಂದು ಹಂತಗಳಲ್ಲಿಯೂ ಇದಕ್ಕೆ ಬೇರೆ ಬೇರೆ ಪರಿಧಿಗಳು ಇರುತ್ತವೆ.


ವೈಯಕ್ತಿಕ, ಕೌಟುಂಬಿಕ ಮತ್ತು ಸಾಮಾಜಿಕ ಇವು ಮೂರು ನಮ್ಮವರು ಪರಕೀಯರು ಎಂಬ ವಿಭಾಗದ ಹಂತಗಳು. ವೈಯಕ್ತಿಕ ನೆಲೆಯಲ್ಲಿ ನಮ್ಮ ಮೇಲೆ ಪ್ರೀತಿ, ವಿಶ್ವಾಸ, ಅಭಿಮಾನ ಇದ್ದವರೆಲ್ಲ ನಮ್ಮವರು. ನಮ್ಮ ಕಷ್ಟಕಾಲದಲ್ಲಿ ತಮ್ಮ ಕಷ್ಟ ಶ್ರಮಗಳನ್ನು ಲೆಕ್ಕಿಸದೆ ನಮಗೆ ನೆರವಾಗುವವರು. ನಮ್ಮ ಅಭಿವೃದ್ಧಿಗೆ ಸಹಾಯ ಮಾಡುವವರು, ನಮ್ಮ ಅಭಿವೃದ್ಧಿಯನ್ನು ಕಂಡು ಸಂತೋಷಪಡುವವರು ನಮ್ಮವರು. ಇಂಥ ಮನೋಭಾವವನ್ನು ಅವರು ನಮ್ಮಲ್ಲಿ ತಳೆದಿರುವುದು ನಾವು ಅವರಲ್ಲಿ ತಳೆದಿರುವುದು ನಮ್ಮಿಬ್ಬರ ನಮ್ಮತನದ ತಳಹದಿ.

ಕೌಟುಂಬಿಕ ನೆಲೆಯಲ್ಲಿ ತಂದೆ - ತಾಯಿ ಅಣ್ಣ ತಮ್ಮ ಅಕ್ಕ ತಂಗಿ ಸೋದರಮಾವ ಸೋದರತ್ತೆ ಮಕ್ಕಳು ಇವರೆಲ್ಲ ರಕ್ತ ಸಂಬಂಧದಿಂದ ನಮ್ಮವರು. ಇವರು ಸಾಮಾನ್ಯವಾಗಿ ಮೇಲೆ ಹೇಳಿದ ಭಾವನೆಗಳನ್ನು ಪರಸ್ಪರರ ವಿಷಯದಲ್ಲಿ ತಾಳಿರುವರು. ಅದು ಇಲ್ಲದಿದ್ದರೆ ಕೌಟುಂಬಿಕ ದೃಷ್ಟಿಯಿಂದ ಇವರು ನಮ್ಮವರಾದರೂ ವೈಯಕ್ತಿಕ ದೃಷ್ಟಿಯಿಂದ ಪರಕೀಯರು. ಪರಸ್ಪರರ ಸದ್ಭಾವನೆಯ ಪ್ರಮಾಣ ಮತ್ತು ಏರಿಳಿತಗಳಂತೆ ಈ ನಮ್ಮತನ ಮತ್ತು ಪರಕೀಯತೆಗಳ ಸಂಬಂಧ ರೂಪುಗೊಳ್ಳುವದು.

ಸಾಮಾಜಿಕ ನೆಲೆಯಲ್ಲಿ ಅನೇಕ ಪರಿಧಿಗಳಿರುವವು. ಒಂದೇ ಧರ್ಮದವರು, ಒಂದೇ ಜಾತಿಯವರು, ಒಂದೇ ವೃತ್ತಿಯವರು, ಒಂದೇ ಭಾಷೆಯವರು, ಒಂದೇ ದೇಶ, ಪ್ರಾಂತ, ಊರುಗಳವರು ಹೀಗೆ ಸಮಾಜದ ವಿವಿಧ ಸಂಪರ್ಕ ಆಸಕ್ತಿಗಳನ್ನು ಆಧರಿಸಿ ನಮ್ಮವರು ಅಥವಾ ಪರಕೀಯರು ಎಂಬ ಭಾವಗಳು ಉಂಟಾಗುವವು. ಹೀಗೆ ನಮ್ಮವರು ಮತ್ತು ಪರಕೀಯರು ಎಂದೆನಿಸುವವರೊಡನೆ ವರ್ತಿಸುವಾಗ ಸಾಮಾಜಿಕ ನೀತಿಸಂಹಿತೆ ಆಯಾ ಕಾರ್ಯಕ್ಷೇತ್ರಗಳ ನೀತಿಸಂಹಿತೆಗೆ ಒಳಪಟ್ಟು ವರ್ತಿಸಬೇಕಾಗುವುದು.

ಯಾವದೇ ಆಧಾರದ ಮೇಲೆ ನಮ್ಮವರು ಎನಿಸಿದವರ ವಿಷಯದಲ್ಲಿ ನಮ್ಮ ವರ್ತನೆಯು ಸಹಕಾರ ಪ್ರೇಮ ವಿಶ್ವಾಸಗಳಿಂದ ಕೂಡಿರುವುದು. ಇದಕ್ಕೆ ಧಕ್ಕೆ ಬಂದಾಗ ನಮ್ಮತನ ಕಡಿಮೆಯಾಗುವದು, ಉದಾಸೀನತೆ ಅಥವಾ ವಿರೋಧಗಳು ಬರುವವು. ಸಹಕಾರ ಪ್ರೇಮ ವಿಶ್ವಾಸವು ಏಕಮುಖವಾಗಿದ್ದರೂ ನಮ್ಮತನ ಕುದುರುವುದಿಲ್ಲ. ಇದು ಉಭಯತರಲ್ಲಿಯೂ ಇರಬೇಕು. ನಮ್ಮತನದ ಭಾವನೆಗಳು ಹಂತಗಳೂ ಪರಿಧಿಗಳೂ ಇದ್ದರೂ ಇವುಗಳ ವ್ಯಾಪ್ತಿಗಳನ್ನು ಆಯಾ ಆಸಕ್ತಿ ಮತ್ತು ಕಾರ್ಯಗಳಿಗೆ ಸೀಮಿತಗೊಳಿಸಿ ಎಲ್ಲರ ವಿಷಯದಲ್ಲಿಯೂ ಸಹಕಾರ ಪ್ರೇಮ ವಿಶ್ವಾಸಗಳಿಂದ ವರ್ತಿಸುವುದೇ ಸುಸಂಸ್ಕೃತತೆ, ನಾಗರಿಕತೆ. ಇಂಥ ವಿಶಾಲ ಮನೋಭಾವದವರು ಹೆಚ್ಚಿದ್ದ ಸಮಾಜ, ಹೆಚ್ಚಿದ್ದ ವ್ಯಕ್ತಿ ಸುಖಿಯಾಗಿರುವರು. ●





ಬಂಗಾಲಿ
ಕಥೆ

ಅದೊಂದು ಸಣ್ಣ ಹಳ್ಳಿ. ಹೆಸರು ಕಾಶೀಪುರ. ಅದರ ಜಮೀನುದಾರ ಗುಣದಲ್ಲಿ ತೀರಾ ಸಣ್ಣವನು. ಅವನ ಗೇಣೀದಾರರಲ್ಲಿ ಯಾರೊಬ್ಬರಿಗೂ ಅವನ ಸಮ ನಿಲ್ಲುವ ಧೈರ್ಯವಿರಲಿಲ್ಲ. ಅವನು ಅಷ್ಟು ಕ್ರೂರಿ.

ಅಂದು ಅವನ ಕಿರಿಯ ಮಗನ ಹುಟ್ಟುಹಬ್ಬ. ಮಧ್ಯಾಹ್ನದ ಸಮಯವಾಗಿತ್ತು. ಪುರೋಹಿತ ತರ್ಕರತ್ನ ಜಮೀನುದಾರರ ಮನೆಯಲ್ಲಿ ಪೂಜೆ ತೀರಿಸಿಕೊಂಡು ತನ್ನ ಮನೆಯ ಹಾದಿ ಹಿಡಿದಿದ್ದ. ಮೇ ತಿಂಗಳ ಕೊನೆಯ ದಿನಗಳಾದರೂ ಆಕಾಶದಲ್ಲಿ ಒಂದು ತುಣುಕು ಮೋಡವೂ ಕಾಣಸಿಗುತ್ತಿರಲಿಲ್ಲ. ಆಗಸ ಬೆಂಕಿಯನ್ನು ಸುರಿಯುತ್ತಿತ್ತು.

ಹೊಲದ ತುದಿಯಲ್ಲಿ ರಸ್ತೆಯ ಪಕ್ಕದಲ್ಲಿ ಕಾಣುವುದೆ ನೇಕಾರ ಗಫೂರನ ಮನೆ. ಈಗ [illegible] ಮಣ್ಣಿನ ಗೋಡೆಗಳ ಬಹುಪಷ್ಟು ಭಾಗ ಕುಸಿದಿದ್ದು, ಒಳಾಂಗಣ ಸಾರ್ವಜನಿಕ ಪ್ರವೇಶಕ್ಕೆ ತೆರೆದುಕೊಂಡಿದೆ. ಒಳಗಿನ ಖಾಸಗಿ ಬದುಕನ್ನು ಸಲ್ಲದ ಕುತೂಹಲದಿಂದ ನೋಡುವುದು ಅಥವಾ ಬಿಡುವುದು ದಾರಿಹೋಕರ ಕೈಯಲ್ಲಿದೆ.

"ಲೋ! ಗಫೂರ್! ಯಾರಿದ್ದೀರೋ ಒಳಗೆ?" ತರ್ಕರತ್ನ ರಸ್ತೆಯ ಪಕ್ಕದ ಮರದ ನೆರಳಿನಲ್ಲಿ ನಿಲ್ಲುತ್ತ ಕೂಗಿ ಕರೆದ.

"ಏನು ಬೇಕಾಗಿತ್ತು? ಅಪ್ಪಾಜಿ ಜ್ವರ ಬಂದು ಮಲಗಿದ್ದಾರೆ," ಬಾಗಿಲಲ್ಲಿ ಕಾಣಿಸಿಕೊಂಡ ಗಫೂರನ ಹತ್ತು ವರ್ಷದ ಸಣ್ಣ ಮಗಳು ಉತ್ತರಿಸಿದಳು.

"ಜ್ವರ! ಎಲ್ಲಿಯ ಜ್ವರ? ಕರೆ ಆ ದಗಾಕೋರನ್ನ!"

ಅವನ ಕೂಗಾಟ ಜ್ವರದಿಂದ ನಡುಗುತ್ತಿದ್ದ ಗಫೂರನನ್ನು ಹೊರತಂದಿತು. ಕುಸಿದ ಗೋಡೆಯ ಮೇಲೆ ಬಾಗಿ ಬೆಳೆದಿದ್ದ ಮುದಿ ಜಾಲಿಯ ಮರಕ್ಕೆ ಎತ್ತೊಂದನ್ನು ಕಟ್ಟಲಾಗಿತ್ತು.

ಮೂಲ: ಶರತ್ಚಂದ್ರ ಚಟರ್ಜಿ
ಕನ್ನಡಕ್ಕೆ: ಎ. ಪ್ರಾಣೇಶ್‌ರಾವ್

''ಅದೇನಯ್ಯ ಅಲ್ಲಿ ಕಾಣ್ತಾ ಇರೋದು? ಇದೊಂದು ಹಿಂದೂ ಗ್ರಾಮ. ಇಲ್ಲಿರುವ ಜಮೀನುದಾರ ಬ್ರಾಹ್ಮಣ ಅಂತ ನಿಂಗೆ ಗೊತ್ತಿದೆ ತಾನೆ?'' ತರ್ಕರತ್ನ ಎತ್ತಿನ ಕಡೆ ಬೆರಳು ಮಾಡುತ್ತ ಕೇಳಿದ. ಅವನ ಮುಖ ಕೋಪ ಹಾಗೂ ಬಿಸಿಲಿನ ಝಳದಿಂದ ಕೆಂಪಾಗಿತ್ತು. ಆದರೆ ಗಫೂರ್ ಅವನ ಮಾತುಗಳನ್ನು ಗ್ರಹಿಸಲಾಗದೆ ಸುಮ್ಮನೆ ಅವನತ್ತ ನೋಡುತ್ತಿದ್ದ.

''ಸರಿ, ಮುಂಜಾನೆಯಿಂದ ನೋಡ್ತಾ ಇದ್ದೀನಿ. ಅದನ್ನು ಅಲ್ಲೇ ಕಟ್ಟಿ ಹಾಕಿದ್ದೀಯಲ್ಲ. ಎತ್ತು ಸತ್ತರೆ ನಿನ್ನ ಯಜಮಾನ ನಿನ್ನ ಸುಮ್ಮನೆ ಬಿಡ್ತಾನೆ ಅಂತ ತಿಳಿದೆಯಾ? ಜೀವಂತವಾಗಿ ನಿನ್ನ ಚರ್ಮ, ಚರ್ಮ ಸುಲೀತಾನೆ. ಅವನೇನು ಸಾಮಾನ್ಯ ಬ್ರಾಹ್ಮಣನಲ್ಲ! ತಿಳೀತೆ?'' ಅಂದ ತರ್ಕರತ್ನ.

''ನಾ ಏನ್ ಮಾಡ್ಲಿಯಪ್ಪಾ? ಈಗ್ಗೆ ಕೆಲವು ದಿನಗಳಿಂದ ಜ್ವರ ಬರ್ತಾ ಇದೆ. [illegible] ಮೇಯ್ಸೋಣ ಅಂದ್ರೆ ಮೈಯ್ಯಾಗೆ ತ್ರಾಣಾನೆ ಇಲ್ಲಂಗದೆ!''

''ಅದರ ಪಾಡಿಗ್ ಅದು ಮೇಯ್ತದೆ. ಅದನ್ನು ಬಿಡೋಕೂ ನಿನ್ ಕೈಲಿ ಆಗೋಲ್ವಾ?''

''ಯಾವ್ ಕಡೆ ಅಂತ ಅದನ್ನ ಹೊಡೀಲಿ ತಂದೆ? ಜನ ಇನ್ನೂ ಭತ್ತದ ಕಾಳು ಬಡಿದಿಲ್ಲ. ಗದ್ದೆಗಳಲ್ಲಿ ಭತ್ತ ಇನ್ನೂ ಹಾಗೇ ಬಿದ್ದಿದೆ. ಒಣ ಹುಲ್ಲನ್ನು ಒಟ್ಟು ಮಾಡಿಲ್ಲ. ಒಂದೆಳೆ ಹುಲ್ಲು ಸಹ ಎಲ್ಲೂ ಕಾಣ್ತಿಲ್ಲ. ಬಿಸಿಲಲ್ಲಿ ಎಲ್ಲ ಸುಟ್ಟು ಕರಕಲಾಗಿದೆ. ಅದರ ಹಗ್ಗವನ್ನು ಹೇಗೆ ಬಿಚ್ಚಿಬಿಡಲಿ? ಯಾರ ಗದ್ದೆಗಾದರೂ ಬಾಯಿ ಹಾಕಿ ಭತ್ತವನ್ನೋ ಮೇವನ್ನೋ ಮೆದ್ದರೆ ಏನ್ ಗತಿ?''

ತರ್ಕರತ್ನ ಸ್ವಲ್ಪ ಮೆದುವಾದ. ''ಆದರೆ ಅದನ್ನ ನೆರಳಲ್ಲಿ ಲ್ಲಾದ್ರೂ ಕಟ್ಟಿಹಾಕಿ ಒಂದಿಷ್ಟು ಸೊಪ್ಪೊ ಸದೇನೊ ಬಾಯಾಡೋಕೆ ಹಾಕ್ಬೋದಲ್ಲ. ನಿನ್ ಮಗಳು ಅನ್ನ [illegible]? [illegible] ಮೇಲಿನ ಗಂಜಿ ನೀರ



ನ್ನಾದರೂ ತಂದ್ ಸುರಿಪೋದಲ್ಲ. ಅದನ್ನಾದರೂ ಕುಡೀಲಿ!''

ಗಫೂರ್ ಉತ್ತರಿಸಲಿಲ್ಲ. ಬದಲು ತರ್ಕರತ್ನನತ್ತ ಅಸಹಾಯಕತೆಯಿಂದ ನೋಡಿದ. ಅವನಿಂದ ಒಂದು ದೀರ್ಘ ನಿಟ್ಟುಸಿರು ಈಚೆ ಬಂತು.

''ಓಹೋ! ನಿನ್ನಲ್ಲಿ ಅಷ್ಟೂ ಇಲ್ಲ ಅಲ್ವೆ? ನಿನ್ನ ಪಾಲಿನ ಹುಲ್ಲನ್ನು ಏನ್ ಮಾಡ್ದೆ? ನಿನ್ನ ಹೊಟ್ಟೆ ಹೊರಕೊಳ್ಳೋಕೆ ಅಂತ ಅದನ್ನೂ ಮಾರಿದೆ ಅಲ್ವೆ? ಎತ್ತಿಗೆ ಅಂತ ಒಂದು ಹೊರೆಯನ್ನೂ ಉಳಿಸಲಿಲ್ಲ ಅಲ್ವ? ನೀನೆಷ್ಟು ಕಠಿಣ ಅಂತೀನಿ!''

ಇಷ್ಟು ನಿಷ್ಠುರ ಬಯ್ಗುಳನ್ನು ಕೇಳಿದ ಗಫೂರನಿಗೆ ಮಾತಿನ ಶಕ್ತಿಯೇ ಉಡುಗಿಹೋದಂತಾಯಿತು. ''ಈ ವರ್ಷ ನನ್ನ ಪಾಲಿನ ಹುಲ್ಲು ನಂಗೆ ಬರಬೇಕಾಗಿತ್ತು. ಆದರೆ ಕಳೆದ ವರ್ಷದ ನನ್ನ ಹಣದ ಗೇಣಿ ಲೆಕ್ಕಕ್ಕೆ ಅಂತ ಪಣ ಅದನ್ನ ಎತ್ತಿಟ್ರು. ಅಯ್ಯ, ತಾವೆ ನಮ್ಮ ದಣೇರು ಹಾಗೂ ಒಡೇರು. ನಿಮ್ಮ ಜಾಗ ಬಿಟ್ಟು ನಾನೆಲ್ಲಿ ಹೋಗಲಿ ದಣಿ? ನನ್ನ ಪಾಲಿನ ಹುಲ್ಲಾದರೂ ನಂಗೆ ಕೊಡಿ. ನನ್ನ ಮನೆ ಮಾಡಿನ ಮೇಲೆ ಸ್ವಲ್ಪವಾದರೂ ಹುಲ್ಲಿಲ್ಲ. ನಮಗಿರೋದು ಒಂದೇ ಒಂದು ಗುಡ್ಲು. ಅದರಲ್ಲಿ ನಾವಿಬ್ರು ತಂದೆ, ಮಗಳು ಇರೋದು. ಮನೆ ಮಾಡಿಗೆ ತಾಳೆಗರಿ ಹೊದಿಸಿ ಹೇಗೊ ಈ ಮಳೆಗಾಲ ಕಳೀತೀವಿ. ಆದರೆ ಹೊಟ್ಟೆಗೇನೂ ಇಲ್ದೆ ನಮ್ ಮಹೇಶನ ಗತಿ ಏನು? ಅಂತ ಅವರ ಪಾದಕ್ಕೆ ಬಿದ್ದು ಬೇಡಿಕೊಂಡೆ.''

''ಹೌದಾ! ಎತ್ತಿನ್ನ ಮಹೇಶ್ ಅಂತ ಕರೆಯುವಷ್ಟು ಪ್ರೀತಿ ಇದೆ ಅಂದ ಹಾಗಾಯಿತು! ಇದೊಳ್ಳೆ ತಮಾಷೆ ನೋಡಯ್ಯ!''

ಅವನ ವ್ಯಂಗ್ಯ ಗಫೂರನನ್ನು ತಾಕಲಿಲ್ಲ. ''ಆದರೆ ದಣಿಗಳು ನನ್ನ ಮೇಲೆ ಕರುಣೆ ತೋರಲಿಲ್ಲ. ಬರೀ ಎರಡು ತಿಂಗಳಿಗಾಗುವಷ್ಟು ಬತ್ತವನ್ನು ಅವರು ಕೊಟ್ಟರು. ನನ್ನ ಪಾಲಿನ ಹುಲ್ಲನ್ನು ತಮ್ಮ ದಾಸ್ತಾನಿಗೇ ಸೇರಿಸಿಕೊಂಡರು. ಮಹೇಶ್‌ಗೆ ಅದರ ಒಂದು ಹಿಡಿಯಷ್ಟೂ ಸಹ ಸಿಗಲಿಲ್ಲ!'' ಅವನು ತನ್ನ ಮಾತನ್ನು ಮುಂದುವರಿಸಿದ.

''ಸರಿ, ಸರಿ. ನೀನು ಅವರಿಗೆ ಹಣ ಕೊಡಬೇಕಾಗಿಲ್ವೇನಯ್ಯ? ಅದನ್ಯಾಕೆ ಕೊಡಬಾರದು? ದಣಿಗಳು ನಿನ್ನ ಸಾಕಬೇಕು ಅಂತ ನಿನ್ನ ಲೆಕ್ಕಾನಾ?'' ಸ್ವಲ್ಪವೂ ವಿಚಲಿತನಾಗದೆ ತರ್ಕರತ್ನ ನುಡಿದ.

''ಆದರೆ ಅವರಿಗೆ ನಾನೇನು ಕೊಡಬಲ್ಲೆ? ನಾವು ಅವರಿಗಾಗಿ ನಾಲ್ಕು ಎಕರೆ ಜಮೀನನ್ನು ಉಳ್ತೀವಿ. ಆದರೆ ಕಳೆದೆರಡು ವರ್ಷಗಳ ಕ್ಷಾಮದಲ್ಲಿ ಗದ್ದೆಗಳಲ್ಲಿ ಭತ್ತ ಬತ್ತಿ ಹೋಗಿದೆ. ನಂಗೂ ನನ್ ಮಗಳಿಗೂ ತಿನ್ನೋಕೆ ಸಾಕಷ್ಟಿಲ್ಲ. ಈ ಗುಡಿಸಲು ನೋಡಿ ಒಡೆಯ! ಮಳೆ ಹೊಯ್ಯುವಾಗ ನಾನು ಅವಳು ಮೂಲೇಲಿ ಮುದುರ್ಕೊಂಡು ರಾತ್ರಿ ಕಳೀತೀವಿ. ಆರಾಮವಾಗಿ ಕಾಲು ಚಾಚೋಕೂ ಜಾಗವಿಲ್ಲ. ಮಹೇಶನ್ನ ನೋಡಿ! ಅವನ ಪಕ್ಕೆಲುಬುಗಳನ್ನು ಯಾರಾದರೂ ಎಣಿಸಬಹುದು. ತಾವು ಒಂದು ಹಿಡಿ ಹುಲ್ಲನ್ನಾದರೂ ಕೊಡಬೇಕು. ಹಾಗಾದರೆ ಒಂದೆರಡು ದಿನ ತಿಂದಾನು!'' ಎನ್ನುತ್ತಾ ಗಫೂರ್ ಬ್ರಾಹ್ಮಣನ ಪಾದಗಳ ಮುಂದೆ ನೆಲದ ಮೇಲೆ ಕುಸಿದು ಕುಳಿತ.

''ಇಲ್ಲ, ಇಲ್ಲ! ಪಕ್ಕಕ್ಕೆ ಸರಿ. ಈಗ ನಾನು ಮನೆಗೆ ಹೋಗ್ಬೇಕು. ತಡ ಆಗ್ತಾ ಇದೆ. ಅಯ್ಯೋ ದೇವರೆ! ನನ್ನ ತಿವಿಯೊ ಹಾಗೆ ಕೋಡುಗಳನ್ನು ಆಡಿಸ್ತಾ ಇದಾನಲ್ಲ! ಹಾಯ್ಬೇ ಬಿಡ್ತಾನೊ ಹೇಗೆ?'' ಎಂದು ತರ್ಕರತ್ನ ಸರಕ್ಕನೆ ಎತ್ತಿನಿಂದ ಸರಿದು ಹಿಂದೆ ಹೆಜ್ಜೆ ಹಾಕುತ್ತ ದಿಗಿಲು ಮತ್ತು ಕೋಪದಿಂದ ಕೂಗುಹಾಕಿದ.

ಗಫೂರ್ ಹೆಜ್ಜೆ ತಡವರಿಸಿದ. ತರ್ಕರತ್ನನ



ಕೈಯಲ್ಲಿದ್ದ ಹಣ್ಣು ಮತ್ತು ಅಕ್ಕಿಯ ಒದ್ದೆಯ ಗಂಟಿನತ್ತ ಬೆರಳು ಮಾಡಿ ತೋರುತ್ತ, ''ಅವನು ಒಂದು ಹಿಡಿ ತಿನ್ಬೇಕು ಅಂತಾನೆ,'' ಎಂದ ಗಫೂರ್.

''ನಿಜವಾಗ್ಲೂ! ತಿನ್ಬೇಕೂ ಅಂತಾನೇನು? ತಿನ್ನೋಕೆ ಒಂದು ಹಿಡಿ ಹುಲ್ಲು ಗತಿಯಿಲ್ಲದಿದ್ದರೂ ಇದಕ್ಕೆ ಅಕ್ಕಿ, ಹಣ್ಣು ಆಗ್ಬೇಕು. ಕರಕೊಂಡ್ಹೋಗು. ಆಚೆ ಎಲ್ಲಾದರೂ ಕಟ್ಟಿ ಬಿಟ್ಟು ಬಾ! ಏನು ಕೋಡುಗಳು! ಅಬ್ಬಾ! ಒಂದು ದಿನ ಇದು ಯಾರನ್ನಾದರೂ ತಿವಿದು ಸಾಯಿಸೋದು ಖಂಡಿತ!'' ಅಲ್ಲಿಂದ ಸ್ವಲ್ಪ ಸರಿದವನೆ ಪುರೋಹಿತ ಅವಸರದಿಂದ ಹೊರಟು ಹೋದ.

ಅವನಿಂದ ಇತ್ತ ತಿರುಗುತ್ತ ಗಫೂರ್ ಮಹೇಶನನ್ನು ಮೌನವಾಗಿ ವೀಕ್ಷಿಸಿದ. ಅವನ ಆಳವಾದ ಕಂದು ಬಣ್ಣದ ಕಣ್ಣುಗಳಲ್ಲಿ ಹಸಿವು ಮತ್ತು ನೋವುಗಳು ತುಂಬಿದ್ದವು. ''ಒಂದು ಹಿಡಿ ಸಹ ಕೊಡಲಿಲ್ಲ,'' ಎಂದು ಅವನು ಪೇಚಾಡಿದ. ''ನೀನು ನನ್ನ ಮಗ ಮಹೇಶ್,'' ಅವನು ಪಿಸುಗುಟ್ಟಿದ. ''ಎಂಟು ವರ್ಷ ನಮಗಾಗಿ ದುಡಿದ ನಿನಗೆ ಈಗ ವಯಸ್ಸಾಗಿದೆ. ಆದರೆ ನಿನಗೆ ಹೊಟ್ಟೆ ತುಂಬುವಷ್ಟು ಕೊಡಲು ಆಗುತ್ತಿಲ್ಲ. ಆದರೆ ನಾನು ನಿನ್ನ ಅದೆಷ್ಟು ಪ್ರೀತಿಸ್ತೀನಿ ಅಂತ ನಿಂಗೆ ಗೊತ್ತು ತಾನೆ?'' ಎಂದ ಗಫೂರ್, ಎತ್ತಿನ ಕತ್ತು ಮತ್ತು ಬೆನ್ನನ್ನು ನೇವರಿಸುತ್ತ.

ಮಹೇಶ್ ಕೇವಲ ತನ್ನ ಕತ್ತನ್ನು ಚಾಚಿ ಸುಖದ ಸಂವೇದನೆಯಿಂದ ತನ್ನ ಕಣ್ಣೆವೆಗಳನ್ನು ಮುಚ್ಚಿದ.

''ಹೇಳು ಮಹೇಶ್,'' ಗಫೂರ್ ತನ್ನ ಮಾತು ಮುಂದುವರಿಸಿದ, ''ಭಯಾನಕವಾದ ಈ ಸಂವತ್ಸರದಲ್ಲಿ ನಾನು ನಿನ್ನನ್ನು ಹೇಗೆ ಜೀವಂತವಾಗಿ ಇಡಬಲ್ಲೆ? ನಿನ್ನ ಹೊರಗೆ ಬಿಟ್ಟರೆ ಬೇರೆಯವರ ಭತ್ತವನ್ನು ತಿನ್ನೋಕೆ ಹೋಗ್ತಿಯಾ. ಇಲ್ಲ ಅವರ ಬಾಳೆ ಎಲೆಗೆ ಬಾಯಿ ಹಾಕ್ತಿಯಾ. ನಿನ್ನ ಕಟ್ಕೊಂಡು ನಾನೇನ್ಮಾಡ್ಲಿ ಹೇಳು? ನಿನ್ನ ಮೈಯಲ್ಲಿ ಪ್ರಾಣವೇ ಉಳಿದಿಲ್ಲ. ಅವರು ನಿನ್ನ ದನದ ಬಾಜಾರಿನಲ್ಲಿ ಮಾರು ಅಂತಾರೆ....'' ಆ ವಿಚಾರ ಬರುತ್ತಲೂ ಅವನ ಕಣ್ಣುಗಳು ಮತ್ತೊಮ್ಮೆ ನೀರಿನಿಂದ ತುಂಬಿ ಹೋದವು. ಮುಂಗೈಯಿಂದ ತನ್ನ ಕಣ್ಣೀರನ್ನು ತೊಡೆಯುತ್ತ ಆಕಡೆ, ಈಕಡೆ ನೋಡಿದವನೆ ಗುಡಿಸಲಿನ ಹಿಂಭಾಗಕ್ಕೆ ಹೋಗಿ ಒಂದು ಸಣ್ಣ ಕಂತೆ ಬಣ್ಣಗೆಟ್ಟ ಹಳೆಯ ಹುಲ್ಲನ್ನು ತಂದು ಮಹೇಶನ ಮುಂದೆ ಹಾಕುತ್ತ, ''ಬೇಗ ತಿನ್ನು ನನ್ನ ಮಗು, ಇಲ್ಲಿದ್ರೆ....'' ಎಂದು ಮೃದುವಾಗಿ ನುಡಿದ.

''ಅಪ್ಪಾ.....''

''ಏನಮ್ಮಾ ಅದು?''

''ಊಟಕ್ಕೆ ಬಾಪ್ಪಾ,'' ಬಾಗಿಲಿನಿಂದ ಹೊರಗೆ ನೋಡುತ್ತಾ ಗಫೂರನ ಮಗಳು ಕರೆದಳು. ''ಮಹೇಶನಿಗೆ ಮತ್ತೆ ಮಾಡಿನಿಂದ ಹುಲ್ಲು ತೆಗೆದುಹಾಕಿದ್ದು ಯಾಕೆ?''

ಅವಳಷ್ಟೆ ಅವನಿಗೂ ದಿಗಿಲಾಗಿತ್ತು. ''ಅದು ಹಳೇ ಹುಲ್ಲು; ಸುಮ್ನೇ ಕೊಳೆತು

ಹೋಗ್ತಾಯಿತ್ತು," ಅವನು ಸಂಕೋಚದಿಂದ ಉತ್ತರಿಸಿದ.

"ಅಪ್ಪಾ, ನೀ ತೆಗೀತಾ ಇದ್ದದ್ದನ್ನ ನಾ ಕೇಳ್ದೆ."

"ಇಲ್ಲ ಮಗಳೆ ಅದು ಅಲ್ಲಿಂದ್ಲೇ. ಅಲ್ಲಿ...."

"ಅಪ್ಪಾ ಹಾಗೆ ಮಾಡಿದ್ರಿಂದ ಗೋಡೆ ಕುಸಿಯೋದಂತೂ ಖಂಡಿತ...."

ಗಫೂರ್ ಮೌನವಾಗಿದ್ದ. ಅವನಿಗೆ ಈ ಗುಡಿಸಲಿನ ಹೊರತು ಬೇರೇನೂ ಉಳಿದಿರಲಿಲ್ಲ. ಅವನು ಎಚ್ಚರಿಕೆಯಿಂದ ಇರದೆ ಇದ್ದರೆ, ಅದು ಇನ್ನೊಂದು ಮಳೆಗಾಲಕ್ಕೂ ಬರುವುದಿಲ್ಲ ಅಂತ ಬೇರೆಯವರಿಗಿಂತ ಅವನಿಗೇ ಚೆನ್ನಾಗಿ ಮನವರಿಕೆಯಾಗಿತ್ತು. ಆದರೂ ಅವನಿಗೆ ಹಾಗೆ ಗೊತ್ತಿದ್ದೂ ಏನು ಪ್ರಯೋಜನ?

"ಕೈ ತೊಳೆದು ಉಣ್ಣೋಕೆ ಬಾ," ಆ ಸಣ್ಣ ಹುಡುಗಿ ಕರೆದಳು.

"ಅನ್ನದ ಗಂಜಿ ಕೊಡು. ಅವನಿಗೆ ಕುಡಿಯೋಕೆ ಕೊಡ್ತೋಣ."

"ಏನೂ ಉಳಿದಿಲ್ಲಪ್ಪ ಗಡಿಗೇಲಿ, ಎಲ್ಲ ನೀರು ಇಂಗಿ ಹೋಗಿದೆ."

"ಇದಾಗಿ ಸುಮಾರು ಒಂದು ವಾರ ಕಳೆದಿರಬಹುದು. ಗಫೂರ್ ಅಂಗಳದಲ್ಲಿ ಕುಳಿತಿದ್ದ. ಬೇನೆಯಿಂದ ಕೃಶವಾದ ಶರೀರದಲ್ಲಿ ಆತಂಕ ಅಡಗಿ ಕುಳಿತಿತ್ತು. ಹಿಂದಿನ ದಿನದಿಂದ ಮಹೇಶ್ ಮನೆಗೆ ಬಂದಿರಲಿಲ್ಲ. ಅವನು ಅಸಹಾಯಕನಾಗಿದ್ದ. ಅಮೀನಾ ಹೊತ್ತಾರೆಯಿಂದ ಎತ್ತಿಗಾಗಿ ಎಲ್ಲೆಡೆ ಹುಡುಕಾಡುತ್ತಿದ್ದಳು. ಅವಳು ಮನೆಗೆ ಬಂದಾಗ ಆಗಲೆ ಸಂಜೆಯ ನೆರಳು ಬಿದ್ದಿತ್ತು. "ಸುದ್ದಿ ಕೇಳಿದ್ರೀರಾ ಅಪ್ಪಾ? ಮಾಣಿಕ್ ಘೋಷ್ ಮಹೇಶನನ್ನು ಪೋಲೀಸ್ ಕೊಂಡವಾಡಕ್ಕೆ ಕಳಿಸಿದ್ದಾರಂತೆ," ಅವಳು ಹೇಳಿದಳು.

"ಹುಚ್ಚುಚ್ಚಾರ ಏನೇನೊ ಹೇಳ್ಬೇಡ."

"ಹೌದಪ್ಪಾ ... ನಿಜವಾಗ್ಲೂನೂವೆ. ಎತ್ತನ್ನು ದರಿಯಾಪುರದಲ್ಲಿ ನೋಡ್ತೋಕೆ ನಿನ್ನ ಅಪ್ಪನಿಗೆ ಹೇಳು, ಅಂತ ಅವರ ಮನೆ ಆಳೇ ನಂಗೆ ಹೇಳಿದ."

"ಮಹೇಶ್ ಏನ್ ಮಾಡಿದನಂತೆ?"

"ಅವರ ತೋಟದಲ್ಲಿ ಹೊಕ್ಕಿದ್ದನಂತೆ ಅಪ್ಪಾ."

ಗಫೂರ್ ಉತ್ತರಿಸಲಿಲ್ಲ.

"ಅಪ್ಪಾಜಿ, ಮೂರು ದಿನ ಆದ್ಮೇಲೆ ಪೋಲೀಸರು ಅವನನ್ನು ದನದ ಬಾಜಾರಿನಲ್ಲಿ ಮಾರ್ತ್ತಾರೆ ಅಂತ ಅಂತಾರೆ."

"ಮಾರಲೇಳು," ಗಫೂರ್ ಉತ್ತರಿಸಿದ.

ಅಮೀನಾಗೆ 'ದನದ ಬಾಜಾರು' ಎಂದರೇನು ಅಂತ ಗೊತ್ತಿರಲಿಲ್ಲ. ಆದರೆ ಮಹೇಶನಿಗೆ ಸಂಬಂಧಿಸಿದಂತೆ ಅದನ್ನೂ ಹೆಸರಿಸಿದಾಗೆಲ್ಲ ತಂದೆ ಚಡಪಡಿಸುತ್ತಿದ್ದುದನ್ನು ಅವಳು ಅನೇಕ ಬಾರಿ ಗಮನಿಸಿದ್ದಳು. ಆದರೆ ಈ ದಿನ ಅವನು ಒಂದು ಮಾತನ್ನೂ ಆಡದೆ ಹೊರಗೆ ಹೊರಟು ಹೋದ.

ರಾತ್ರಿ ಕತ್ತಲೆಯ ಮರೆಯಲ್ಲಿ ಗಫೂರ್ ರಹಸ್ಯವಾಗಿ ಬನ್ಸಿಯ ಅಂಗಡಿಯ ಬಳಿ ಬಂದ.

"ಚಿಕ್ಕಪ್ಪಾ, ನೀನು ಒಂದು ರೂಪಾಯಿ ಕೊಡಬೇಕಾಗುತ್ತೆ," ಎಂದು ಹಿತ್ತಾಳೆ ತಟ್ಟೆಯೊಂದನ್ನು ಅವನ ಮುಂದೆ ಸರಿಸುತ್ತ ಹೇಳಿದ. ಬನ್ಸಿಗೆ ಆ ವಸ್ತು ಚಿರಪರಿಚಿತ. ಅದನ್ನು ಒತ್ತೆಯಿಟ್ಟುಕೊಂಡು ಈಗ್ಗೆ ಎರಡು ವರ್ಷಗಳಲ್ಲಿ ಐದು ಬಾರಿ ಒಂದು ರೂಪಾಯಿಯನ್ನು ಸಾಲವಾಗಿ ಕೊಟ್ಟಿದ್ದಾನೆ. ಆದ್ದರಿಂದಲೇ ಈ ದಿನವೂ ಅವನು ಯಾವ ಆಕ್ಷೇಪಣೆಯನ್ನೂ ಎತ್ತಲಿಲ್ಲ.

ಮರುದಿನ ಮಹೇಶ್ ಮತ್ತೆ ತನ್ನ ಮಾಮೂಲು ಜಾಗದಲ್ಲಿ ಕಂಡುಬಂದ. ಹಿರಿಯ ಮಹಮ್ಮದೀಯನೊಬ್ಬ ಅವನನ್ನು ಸೂಕ್ಷ್ಮವಾಗಿ ಪರೀಕ್ಷಿಸುತ್ತಿದ್ದ. ಸ್ವಲ್ಪ ದೂರ

ದಲ್ಲಿ ಒಂದು ಪಕ್ಕಕ್ಕೆ ನೆಲದ ಮೇಲೆ ಮೈಯೆಲ್ಲ ಮುದುರಿಕೊಂಡು ಗಫೂರ್ ಕುಳಿತಿದ್ದ. ಪರೀಕ್ಷೆ ಮುಗಿಯಿತು. ಆ ಮುದುಕ ತನ್ನ ಮೈಮೇಲೆ ಹೊದ್ದ ಶಾಲಿನ ತುದಿಯ ಗಂಟನ್ನು ಬಿಚ್ಚಿ ಅದರಿಂದ ಹತ್ತು ರೂಪಾಯಿಯ ನೋಟೊಂದನ್ನು ಹೊರದೆಗೆದು ಅದರ ಮಡಿಕೆಗಳನ್ನು ಬಿಡಿಸಿ, ಮತ್ತೆ ಮತ್ತೆ ತೀಡುತ್ತ ಹೇಳಿದ: ''ಇದೋ ತಕೋ, ಇದರಲ್ಲಿ ನಾನು ಏನನ್ನೂ ಹಿಡಿದುಕೊಂಡಿಲ್ಲ.



ಋಣವನ್ನು ಕೊಡ್ತಾಯಿದ್ದೇನೆ.''

ಗಫೂರ್ ತನ್ನ ಕೈ ಚಾಚುತ್ತ ಮೌನವಾಗಿ ಹಣ ತೆಗೆದುಕೊಂಡ. ಆ ಮುದುಕನ ಹಿಂದೆ ಬಂದಿದ್ದ ಇಬ್ಬರು ಎತ್ತಿನ ಕತ್ತಿನ ಸುತ್ತ ಇದ್ದ ಹಗ್ಗವನ್ನು ಇನ್ನೇನು ತೆಗೆಯಬೇಕು ಎನ್ನುವಾಗ ಅವನು ಇದ್ದಕ್ಕಿದ್ದ ಹಾಗೆ ಅವರೆದುರು ಮಿಂಚು ಹೊಡೆದಂತೆ ಸೆಟೆದು ನಿಲ್ಲುತ್ತ, ''ಆ ಹಗ್ಗ ಮುಟ್ಟಬೇಡಿ, ಹುಷಾರ್. ಇನ್ನೊಮ್ಮೆ ಹೇಳ್ತಾ ಇದ್ದೇನೆ. ಎಚ್ಚರ!'' ಎಂದು ಒರಟಾಗಿ ಕೂಗು ಹಾಕಿದ.

ಅವರು ಬೆಚ್ಚಿ ಬಿದ್ದರು. ''ಏಕೆ?'' ಅಂತ ಕೇಳಿದ ಮುದುಕ ಆಶ್ಚರ್ಯದಿಂದ.

''ಅದಕ್ಕೆ ಏಕೆ ಎಂಬುದಿಲ್ಲ. ಅವನು ನನ್ನ ಆಸ್ತಿ. ಅವನನ್ನು ನಾನು ಮಾರುವುದಿಲ್ಲ; ಅದು ನನ್ನ ಮರ್ಜಿ'' ಅವನು ಅದೇ ಧ್ವನಿಯಲ್ಲಿ ಉತ್ತರಿಸಿ ನೋಟನ್ನು ಎಸೆದು ಬಿಟ್ಟ.

''ಆದರೆ ನೀನು ನಿನ್ನೆ ಇದಕ್ಕಾಗಿ ಲೇವಣಿ ಪಡೆದುಕೊಂಡೆ,'' ಮೂವರೂ ಒಟ್ಟಿಗೆ ಹೇಳಿದರು.

''ಇಗೊಳ್ಳಿ ವಾಪಸ್,'' ಅವನು ಎರಡು ರೂಪಾಯಿ ನೋಟನ್ನು ಅವರ ಮುಂದಿನಿಂದ ಅವರಿಗೆ ಎಸೆಯುತ್ತ ಹೇಳಿದ.

ಗಫೂರ್ ತನ್ನ ನೆರೆಹೊರೆಯವರಿಂದ ಅನ್ನದ ಗಂಜಿಯನ್ನು ಬೇಡಿ ತಂದು ಮಹೇಶನ ಮುಂದಿಟ್ಟು ಅವನ ತಲೆ ಮತ್ತು ಕೋಡುಗಳನ್ನು ನೇವರಿಸುತ್ತ ಪ್ರೀತಿಸೂಚಕ ಶಬ್ದಗಳನ್ನು ಅಸ್ಪಷ್ಟವಾಗಿ ಉಸುರಿದ.

ಆಗ ಜೂನ್ ತಿಂಗಳ ಮಧ್ಯಭಾಗ. ಬೇಸಿಗೆಯ ಆಗಸವನ್ನು ನೋಡಿ ಬಲ್ಲವರು ಮಾತ್ರ ಅದರ ಭೀಕರ ತಾಪವನ್ನು ಅರಿಯಬಲ್ಲರು. ಎಲ್ಲೂ ಒಂದಿನಿತು ಕರುಣೆಯ ಗುರುತಿಲ್ಲ! ಮುಂದೊಂದು ದಿನ ಆಗಸದ ಪ್ರಸ್ತುತ ಸ್ವರೂಪ ಬದಲಾಗಿ ಅಲ್ಲೆಲ್ಲ ಮೃದುವಾದ ನೀರಿನ ಪಸೆಯಿಂದ ತುಂಬಿದ ಮೋಡಗಳು ದಟ್ಟೈಸುತ್ತವೆ ಎಂಬ ಯೋಚನೆ ಕೂಡ ಇಂದು ದುಸ್ಸಾಧ್ಯ, ಧಗಧಗಿಸುವ ಇಡೀ ಆಗಸ ಹೀಗೆ ಕೊನೆಯಿಲ್ಲದೆ ಉರಿಯುತ್ತ ಹೋಗುತ್ತದೇನೊ ಎನಿಸಿಬಿಟ್ಟಿತ್ತು.

ಗಫೂರ್ ಮಧ್ಯಾಹ್ನ ಮನೆಗೆ ಮರಳಿ ಬಂದ. ಅವನಿಗೆ ಕೂಲಿಗಾಗಿ ದುಡಿಯುವ ಅಭ್ಯಾಸವಿರಲಿಲ್ಲ. ಅಲ್ಲದೆ ಅವನ ದೇಹದ ಜ್ವರದ ತಾಪ ಇಳಿದು ನಾಲ್ಕೈದು ದಿನಗಳಾಗಿದ್ದುವು. ಅವನ ದೇಹದಲ್ಲಿ ಇನ್ನೂ ನಿತ್ರಾಣ, ಬಳಲಿಕೆ ತುಂಬಿತ್ತು.

ಅವನು ಕೆಲಸ ಹುಡುಕಿಕೊಂಡು ಹೊರಗೆ ಹೋಗಿದ್ದ. ಅವನ ಶೋಧನೆ ವ್ಯರ್ಥವಾಗಿತ್ತು. ಹಸಿವು ಬಾಯಾರಿಕೆಗಳಿಂದಾಗಿ ಕಣ್ಣುಕತ್ತಲಿಡುತ್ತಿತ್ತು. ''ಊಟ ಸಿದ್ಧವಾಗಿದೆಯಾ, ಅಮೀನಾ?'' ಅಂಗಳದಿಂದಲೆ ಕೂಗಿ ಕೇಳಿದ.

ಏನನ್ನೂ ಉತ್ತರಿಸದೆ ಮೆಲ್ಲನೆ ಹೊರಬಂದ ಅವನ ಮಗಳು ಗೋಡೆಗೆ ಆತು ನಿಂತುಕೊಂಡಳು.

''ಊಟ ಸಿದ್ಧವಾಗಿದೆಯಾ? ಉತ್ತರ ಬಾರದಿದ್ದುದಕ್ಕೆ ಗಫೂರ್ ಮತ್ತೆ ಅದೇ ಪ್ರಶ್ನೆ ಕೇಳಿದ.

''ಅಕ್ಕಿ ಎಲ್ಲ ತೀರಿದೆ, ಅಪ್ಪಾ.''

''ಅಕ್ಕಿ ಇಲ್ಲ? ಮುಂಜಾನೆ ಯಾಕೆ ಹೇಳ್ಲಿಲ್ಲ?''

''ಯಾಕೆ ಅಪ್ಪಾಜಿ! ನಾನು ನಿನ್ನೆ ರಾತ್ರೀನೇ ಹೇಳಿದ್ನೆಲ್ಲ!''

ಅಣಕವಾಡಿದ ಗಫೂರ್, ''ನಿನ್ನೆ ರಾತ್ರಿ ನೀನೇನು ಹೇಳಿದ್ದೆ ಅನ್ನೋದು ನನಗೆ ತಾನೆ ಹೇಗೆ ಜ್ಞಾಪಕ ಇರ್ಬೇಕು?'' ತನ್ನ ಬಿರುಸು ದನಿಯನ್ನೆ ಅವನು ಕೇಳಿದಾಗ ಅವನ ಕೋಪ ಹೆಚ್ಚೆಚ್ಚು ಉಗ್ರ ರೂಪ ತಾಳಿತು. ''ಸರಿ, ಅಕ್ಕಿ ಇಲ್ಲ!'' ಅವನು ತನ್ನ ಮುಖವನ್ನು ಎಂದಿಗಿಂತಲೂ ಹೆಚ್ಚು ಕಿವಿಚುತ್ತ ಗುರುಗುಟ್ಟಿದ. ''ನಿಮ್ಮಪ್ಪ ಉಂಡರೇನು ಬಿಟ್ಟರೇನು? ಅದನ್ನು ಕಟ್ಟಿಕೊಂಡು ನಿನಗೇನಾಗಬೇಕಾಗಿದೆ? ಆದರೆ ಈ ಮಹಾರಾಣಿಗೆ ಮೂರು ಹೊತ್ತು ಊಟವಾಗಬೇಕು. ಇನ್ನು ಮುಂದೆ ನಾನು ಹೊರಗೆ ಹೋಗುವಾಗ ಅಕ್ಕಿಯನ್ನು ಎತ್ತಿಟ್ಟು ಬೀಗ ಹಾಕಿಕೊಂಡು ಹೋಗುತ್ತೇನೆ. ಕುಡಿಯೋಕೆ ಅಷ್ಟು ನೀರು ಕೊಡು. ಬಾಯಾರಿಕೆಯಿಂದ ನಾನು ಸಾಯ್ತಾ ಇದ್ದೇನೆ... ನೀರೂ ಸಹ ಇಲ್ಲವೊ?''

ಅಮೀನಾ ಮೊದಲಿನಂತೆ ತಲೆ ತಗ್ಗಿಸಿಕೊಂಡು ನಿಂತೇಇದ್ದಳು. ಮನೆಯಲ್ಲಿ ಒಂದೇ ಒಂದು ಹನಿ ನೀರೂ ಇಲ್ಲ ಎಂಬುದು ಮನವರಿಕೆಯಾಗುತ್ತಿದ್ದಂತೆ ಆತ ತನ್ನ ಮೇಲಿನ ಹಿಡಿತವನ್ನು ಕಳೆದುಕೊಂಡು ಅವಳತ್ತ ಧಾವಿಸಿದವನೆ ಅವಳ ಮುಖದ ಮೇಲೆ ಛಟೀರನೆ ಒಂದು ಬಾರಿಸಿದ. ''ದರಿದ್ರದವಳೆ! ಹಗಲೆಲ್ಲ ಏನ್ ಮಾಡ್ತಾ ಇರ್ತೀಯೆ? ಅದೆಷ್ಟು ಜನ ಸಾಯ್ತಾರೆ ನೀನೂ ಸಾಯಬಾರದೆ?''

ಹುಡುಗಿ ಪ್ರತಿಯಾಗಿ ಒಂದು ಮಾತನ್ನೂ ಆಡದೆ ಖಾಲಿ ಮಣ್ಣಿನ ಕೊಡವನ್ನು ಎತ್ತಿಕೊಂಡು ಕಣ್ಣೀರನ್ನು ತೊಡೆದುಕೊಳ್ಳುತ್ತಾ ಮಧ್ಯಾಹ್ನದ ಸುಡುಬಿಸಿಲಿನಲ್ಲಿ ಹೊರನಡೆದಳು.

ಅವಳು ಕಣ್ಮರೆಯಾದ ಮರುಕ್ಷಣ ಅವಳ ತಂದೆಗೆ ತಾನು ಅವಳನ್ನು ನೋಯಿಸಿದ್ದಕ್ಕಾಗಿ ಅವಳ ಬಗ್ಗೆ ಅಪಾರವಾದ ಮರುಕತುಂಬಿ ಬಂತು. ತಾಯಿಯಿಲ್ಲದ ಅವಳನ್ನು ತಾನು ಅದ್ಹೇಗೆ ಬೆಳೆಸಿದೆನೆಂಬುದು ಅವನೊಬ್ಬನಿಗೇ ಗೊತ್ತಿತ್ತು. ತನ್ನನ್ನು ಅಷ್ಟಾಗಿ ಪ್ರೀತಿಸುವ,



ಮನೆಗೆಲಸವನ್ನೂ ಅಚ್ಚುಕಟ್ಟಾಗಿ ನಿಭಾಯಿಸಿಕೊಂಡು ಹೋಗುತ್ತಿದ್ದ ಶಾಂತ ಸ್ವಭಾವದ ತನ್ನ ಮಗಳನ್ನು ಯಾವ ರೀತಿಯಲ್ಲೂ ನಿಂದಿಸುವಂತಿಲ್ಲ ಎಂಬುದು ಅವನಿಗೆ ಗೊತ್ತಿತ್ತು. ಅವರಿಗೆ ಉಣ್ಣಲು ಎಂದೂ ಸಾಕಷ್ಟಿರಲಿಲ್ಲ. ಅಂಥಾದ್ದರಲ್ಲಿ ದಿನಕ್ಕೆ ಮೂರು ಹೊತ್ತು ಉಣ್ಣುವುದೆಂದರೆ ಸಾಧ್ಯವಿಲ್ಲದ ಮಾತು. ಮತ್ತೆ, ಇಷ್ಟೇ ಅಲ್ಲದೆ ನೀರಿನ ಅಭಾವಕ್ಕೆ ಕಾರಣವೇನು ಎಂಬ ವಿಚಾರವೂ ಅವನಿಗೆ ಗೊತ್ತಿರಲಿಲ್ಲವೇನು? ಹಳ್ಳಿಯಲ್ಲಿದ್ದ ಎರಡು ಮೂರು ಕೆರೆಗಳೂ ಬತ್ತಿ ಹೋಗಿದ್ದವು. ಷಿಬೂ ಬಾಬು ಅವರ ಖಾಸಗಿ ಕೆರೆಯಲ್ಲಿ ಇನ್ನೂ ಉಳಿದಿದ್ದ ಅಲ್ಪ ಸ್ವಲ್ಪ ನೀರು ಸಾರ್ವಜನಿಕರ ಉಪಯೋಗಕ್ಕಾಗಿ ಇರಲಿಲ್ಲ. ಇತರ ಕೆರೆಗಳ ತಳದಲ್ಲಿ ಕೆಲವು ಕುಳಿಗಳನ್ನು ತೆಗೆದಿದ್ದರಾದರೂ ಅಲ್ಲಿ ದೊರಕಬಹುದಾದ ಅಲ್ಪ ಸ್ವಲ್ಪ ನೀರಿಗಾಗಿ ಅದೆಷ್ಟು ನೂಕು ನುಗ್ಗಲು, ಅದೆಷ್ಟು ಕಿತ್ತಾಟ! ಎಲ್ಲರ ಉಪೇಕ್ಷೆಗೊಳಗಾದ ಈ ಪಾಪದ ಹುಡುಗಿಗೆ ತಾವಾಗಿಯೆ ಯಾರು ತಾನೆ ನೀರು ಕೊಟ್ಟಾರು? ಹಾಗೆಂದೇ ಅವಳು ಗಂಟೆಗಟ್ಟಲೆ ನಿಂತೇ ಇರುತ್ತಿದ್ದಳು. ಅವಳು ಹಾಗೇ ಗಂಟೆಗಟ್ಟಲೆ ನಿಂತಿದ್ದು ಆ ನಂತರ ಅವರಲ್ಲಿ ಕಾಡಿ, ಬೇಡಿ ಗೋಗರೆದಾಗ ಯಾರಾದರೂ ಮರುಕ ತೋರಿದ್ದಾದಲ್ಲಿ ಅಲ್ಪಸ್ವಲ್ಪ ನೀರಿನೊಂದಿಗೆ ಮನೆಗೆ ಹಿಂದಿರುಗುತ್ತಿದ್ದಳು. ಅವನಿಗೆ ಇದೆಲ್ಲವೂ ಗೊತ್ತಿತ್ತು. ಬಹುಶಃ ಇಂದು ಇಲ್ಲಿ ನೀರು ಇದ್ದಿರಲಿಕ್ಕಿಲ್ಲ ಅಥವಾ ಇವಳ ಮೇಲೆ ಮರುಕ ತೋರಲು ಯಾರಿಗೂ ಸಮಯ ಸಿಕ್ಕಿರಲಿಕ್ಕಿಲ್ಲ. ಇಂಥದ್ದೇನಾದರೂ ಆಗಿರಬೇಕು ಅಂತ ಅವನು ಚಿಂತಿಸಿದ. ಅವನ ಕಣ್ಣುಗಳಲ್ಲಿ ನೀರು ತುಂಬಿ ಬಂತು.

''ಒಳಗಿದ್ದೀಯಾ ಗಫೂರ್?'' ಅಂಗಳದಿಂದ ಯಾರೊ ಕೂಗಿ ಕರೆದರು. ಜಮೀನುದಾರನ ಆಳು ಬಂದಿದ್ದ.

''ಹೌದು ಒಳಗೇ ಇದ್ದೇನೆ. ಏಕೆ?'' ಗಫೂರ್ ಕಹಿಯಾಗಿ ಉತ್ತರಿಸಿದ.

''ದಣಿ ಕರಿತಾರೆ. ಬರಬೇಕಂತೆ.''

''ಇನ್ನೂವರೆಗೂ ನಾನು ಏನನ್ನೂ ತಿಂದಿಲ್ಲ. ನಾನು ಆಮೇಲೆ ಬರ್ತೀನೆ ಹೋಗೊ,'' ಗಫೂರ್ ನುಡಿದ.

ಅವನ ಆ ಸೊಕ್ಕಿನ ಮಾತುಗಳು ಆಳಿಗೆ ಸಹನೆಯಾಗಲಿಲ್ಲ. ''ಲೊ! ನಿನ್ನ ಚೆನ್ನಾಗಿ ಒದ್ದು ಎಳಕಂಬಾ ಅಂತ ದಣೇರು ಹೇಳ್ಯಾರೆ ಗೊತ್ತೇನೋ?'' ಎಂದು ಅನೇಕ ಅವಾಚ್ಯ ಶಬ್ದಗಳನ್ನೂ ಉದುರಿಸಿದ.

ಗಫೂರ್ ಎರಡನೇ ಬಾರಿ ತನ್ನ ಮೇಲಿನ ಹಿಡಿತವನ್ನೂ ಕಳೆದುಕೊಂಡ.

''ನಾವು ಯಾರ ಗುಲಾಮರೂ ಅಲ್ಲ. ತಿಳಿತೇನೋ, ನಾವಿಲ್ಲಿರೋದಕ್ಕೆ ಬಾಡಿಗೆ ಬಿಸಾಕ್ತಿದ್ದೀವಿ. ನಾ ಬರಲ್ಲ ಹೋಗ್.''

ಆದರೆ ಈ ಪ್ರಪಂಚದಲ್ಲಿ ಬಡವನೊಬ್ಬ ಶ್ರೀಮಂತರಲ್ಲಿ ಮನವಿ ಮಾಡಿಕೊಳ್ಳುವುದು ವ್ಯರ್ಥವಷ್ಟೇ ಅಲ್ಲ, ಅಪಾಯಕರವೂ ಹೌದು. ಅದೃಷ್ಟವಿದ್ದರೆ ಮಾತ್ರ ಬಡವನ ಸಣ್ಣ ದನಿ ಬಹಳ ಅಪರೂಪವಾಗಿ ದೊಡ್ಡವರ ಕಿವಿ ಸೇರುತ್ತದೆ. ಆದರೆ ಅದರ ಪರಿಣಾಮ ಏನಾಗುವುದೊ ಬಲ್ಲವರಾರು?

ಗಫೂರ್ ಜಮೀನುದಾರನ ಕಡೆಯಿಂದ ಹಿಂದಿರುಗಿ ಬಂದು ತನ್ನ ಮನೆಯ ಮೂಲೆಯಲ್ಲಿ ಮೌನವಾಗಿ ಮುರುಟಿಕೊಂಡು ಬಿದ್ದುಕೊಂಡಾಗ ಅವನ ಮುಖ, ಕಣ್ಣು ಬಾತುಕೊಂಡಿದ್ದುವು. ಇಷ್ಟು ಬಾಧೆಯನ್ನು ಅನುಭವಿಸಲು ಮುಖ್ಯ ಕಾರಣ ಮಹೇಶ್. ಅಂದು ಮುಂಜಾನೆ ಗಫೂರ್ ಮನೆ ಬಿಟ್ಟು ಹೊರಟಾಗ ಮಹೇಶ್ ತನ್ನ ಬಂಧನವನ್ನು ಹರಿದುಕೊಂಡು ಜಮೀನುದಾರನ ಅಂಗಳವನ್ನು ಹೊಕ್ಕು, ಅಲ್ಲಿ ಬೆಳೆದಿದ್ದ ಹೂಗಳನ್ನು ತಿಂದು ಹಾಕಿ, ಬಿಸಿಲಲ್ಲಿ ಒಣ ಹಾಕಿದ್ದ ದವಸಧಾನ್ಯವನ್ನೆಲ್ಲ ಚೆಲ್ಲಾಪಿಲ್ಲಿಗೊಳಿಸಿ ಧ್ವಂಸ ಮಾಡಿದ್ದ. ಅಂತೂ ಇಂತೂ ಕೊನೆಗೆ ಅವರು ಅವನನ್ನು ಹಿಡಿಯಲು ಪ್ರಯತ್ನಿಸಿದಾಗ ಅವನು ಜಮೀನುದಾರನ ಕಿರಿಯ ಮಗಳನ್ನು ಗಾಯಗೊಳಿಸಿ ಅಲ್ಲಿಂದ ತಪ್ಪಿಸಿಕೊಂಡು ಓಡಿ ಹೋಗಿದ್ದ. ಹೀಗಾಗಿದ್ದು ಇದು ಮೊದಲನೆಯ ಸಲವಾಗಿರಲಿಲ್ಲವಾದರೂ ಗಫೂರ್ ಬಡವ ಅನ್ನೋ ಕಾರಣಕ್ಕೆ ಅವನನ್ನು ಕ್ಷಮಿಸಲಾಗಿತ್ತು. ಹಿಂದಿನಂತೆ ಈಗಲೂ ಅವನು ತನ್ನ ದಣಿಯ ಕ್ಷಮೆ ಕೇಳಿ ಅವನ ದಾರಿಗೆ ಹೋಗಿದ್ದಿದ್ದರೆ ಬಹುಶಃ ಅವನು ಕ್ಷಮಿಸಲ್ಪಡುತ್ತಿದ್ದ. ಅದು ಬಿಟ್ಟು ತಾನು ತನ್ನ ಮನೆಗೆ ಬಾಡಿಗೆ ಬಿಸಾಕಿದ್ದೇನೆ ಎಂದುದಲ್ಲದೆ ತಾನು ಯಾರ ಗುಲಾಮನೂ ಅಲ್ಲವೆಂದು ಅವನು ಧಿಮಾಕಿನಿಂದ ಅಂದದ್ದು ಜಮೀನುದಾರ ಶಿಬು ಬಾಬುಗೆ ಸಹಿಸಲಸಾಧ್ಯವಾಯಿತು. ಗಫೂರ್ ತನಗೆ ಬಿದ್ದ ಹೊಡೆತಗಳನ್ನು ಚಿತ್ರಹಿಂಸೆಯನ್ನು ಸ್ವಲ್ಪವೂ ಪ್ರತಿಭಟಿಸದೆ ಸಹಿಸಿದ್ದ. ಮನೆಯಲ್ಲೂ ಏನೊಂದು ಆಡದೆ ಮೂಲೆಯಲ್ಲಿ ಮುರುಟಿಕೊಂಡಿದ್ದ. ಹಸಿವು, ಬಾಯಾರಿಕೆಯನ್ನವನು ಮರೆತು ಬಿಟ್ಟಿದ್ದ. ಆದರೆ ಒಳಗೆ ಹೃದಯ ಹೊರಗೆ ಸುಡುತ್ತಿದ್ದ ಸೂರ್ಯನಂತೆ ತಾಪದಿಂದ ದಹದಹಿಸುತ್ತಿತ್ತು. ಸಮಯ ಹೇಗೆ ಸರಿಯುತ್ತಿದೆ ಎಂಬುದೂ ಅವನ ಗಮನದಲ್ಲಿರಲಿಲ್ಲ.

ಆಗ ಇದ್ದಕ್ಕಿದ್ದ ಹಾಗೆ ಹುಡುಗಿಯೊಬ್ಬಳು ಚೀರಿದ್ದು ಕೇಳಿ ಬಂದು ಅವನು ಹೊರಗೆ ಓಡಿ ಬಂದ. ಮಗಳು ನಿಡಿದಾಗಿ ನೆಲದ ಮೇಲೆ ಬೋರಲು ಬಿದ್ದಿದ್ದಳು. ಅವಳು ತರುತ್ತಿದ್ದ ಮಡಕೆ ಮುಗುಚಿಬಿದ್ದಿದ್ದು ಕೆಳಕ್ಕೆ ಚೆಲ್ಲಿದ್ದ ನೀರು ನೆಲದ ಮೇಲೆ ಹರಿಯುತ್ತಿದ್ದಂತೆ ಮಹೇಶ್ ನೆಕ್ಕತೊಡಗಿದ್ದ. ಗಫೂರ್ ಸಂಪೂರ್ಣವಾಗಿ ಬುದ್ಧಿವಿಕಲ್ಪಕ್ಕೊಳಗಾಗಿದ್ದ. ಅವನು ಒಂದು ಕ್ಷಣವೂ ಕಾಯದೆ ಮುಂದೆ ಧಾವಿಸಿ ಹೋದವನೆ ರಿಪೇರಿ ಮಾಡಿಸಲೆಂದು ಹಿಂದಿನ ದಿನ ತಾನು ಅಲ್ಲಿ ಹಾಕಿದ್ದ ನೇಗಿಲ ಅಲಗನ್ನು ತೆಗೆದುಕೊಂಡವನೆ ಅದನ್ನು ತನ್ನೆರಡೂ ಕೈಗಳಲ್ಲಿ ಮೇಲಕ್ಕೆತ್ತಿ ಅಲ್ಲಿ ನಿಂತಿದ್ದ ಮಹೇಶನ ಬಾಗಿದ ತಲೆಯ ಮೇಲೆ ಬಲವಾಗಿ ಹೊಡೆದ. ಮಹೇಶ್ ಕೇವಲ ಒಂದು ಬಾರಿ ತನ್ನ ತಲೆಯೆತ್ತಲು ಪ್ರಯತ್ನಿಸಿದ. ಆದರೆ ಆ ಕ್ಷಣ ಅವನ ಅನ್ನಾಹಾರವಿಲ್ಲದ ಕೃಶ ಶರೀರ ನೆಲಕ್ಕೆ ಕುಸಿಯಿತು. ಅವನ ಕಿವಿಯಿಂದ ಕೆಲವು ಹನಿ ರಕ್ತ ಹೊರಕ್ಕೆ ಒಸರಿತು. ಅವನ ಇಡೀ ಶರೀರ ಒಂದೆರಡು ಬಾರಿ ನಡುಗಿತು. ನಂತರ ತನ್ನ ಹಿಂಗಾಲು, ಮುಂಗಾಲುಗಳನ್ನು ಎಷ್ಟು ಸಾಧ್ಯವೊ ಅಷ್ಟು ನಿಡಿದಾಗಿ ಚಾಚುತ್ತ ಸತ್ತು ಬಿದ್ದ ಮಹೇಶ್, "ಏನ್ ಮಾಡಿಬಿಟ್ಟೆ ಅಪ್ಪಾ? ಅಯ್ಯೊ, ನಮ್ಮ ಮಹೇಶ್ ಸತ್ತೇ ಹೋದನಲ್ಲ!" ಅಮೀನಾ ಅಬ್ಬರಿಸಿ ಅಳತೊಡಗಿದಳು.

ಗಫೂರ್ ಕದಲಿಲ್ಲ. ಅವಳಿಗೆ ಉತ್ತರವನ್ನೂ ಕೊಡಲಿಲ್ಲ. ಅವನು ಎವೆಯಿಕ್ಕದೆ ಒಂದೇ ಸಮನೆ ನೆಟ್ಟ ನೋಟದಿಂದ ಒಂದು ಜೊತೆ ನಿಶ್ಚಲ ಕಪ್ಪು ಮಣಿಗಣ್ಣುಗಳನ್ನು ನೋಡುತ್ತ ಇದ್ದುಬಿಟ್ಟ.

ಇದಾಗಿ ಎರಡು ಗಂಟೆ ಕಳೆಯುವಷ್ಟರಲ್ಲಿ ಹಳ್ಳಿಯ ತುದಿಯಲ್ಲಿ ವಾಸವಾಗಿದ್ದ ದನದ ಚರ್ಮ ಹದಮಾಡುವವರು ಗುಂಪಾಗಿ



ಒಂದು ಮಹೇಶನನ್ನು ಬಿದಿರಿನ ಗಳದ ಮೇಲೆ ಹೊತ್ತೊಯ್ದರು. ಹೊಳೆಯುವ ಚೂರಿಗಳನ್ನು ಅವರ ಕೈಗಳಲ್ಲಿ ಕಂಡು ಗಫೂರ್ ಭೀತಿಯಿಂದ ಕಣ್ಣು ಮುಚ್ಚಿದ.

ಗಫೂರ್ ತನ್ನ ಗದ್ದವನ್ನು ಮೊಳಕಾಲುಗಳ ಮೇಲೂರಿ ಮೌನವಾಗಿ ಕುಳಿತೇ ಇದ್ದ.

"ಅಮೀನಾ, ಚಿನ್ನಾ, ಏಳು ಹೋಗೋಣ," ಎಂದು ನಡುರಾತ್ರಿಯಲ್ಲಿ ತನ್ನ ಮಗಳನ್ನು ಎಬ್ಬಿಸುತ್ತಾ ನುಡಿದ ಗಫೂರ್.

ಅವಳು ಅಂಗಳದಲ್ಲಿ ಮಲಗಿ ನಿದ್ರಿಸುತ್ತಿದ್ದಳು. "ಎಲ್ಲಿಗೆ ಅಪ್ಪಾಜಿ?" ಕಣ್ಣುಜ್ಜುತ್ತಾ ಅವಳು ಕೇಳಿದಳು.

"ಫಲ್ಬರ್‌ನ ಸಣಬಿನ ಗಿರಣಿಯಲ್ಲಿ ಕೆಲಸ ಮಾಡಲು," ತಂದೆ ನುಡಿದ.

ಅಪನಂಬಿಕೆಯಿಂದ ಹುಡುಗಿ ಅವನತ್ತ ನೋಡಿದಳು. ತನ್ನೆಲ್ಲ ಕಷ್ಟಕೋಟಲೆಗಳಲ್ಲೂ ಅವನು ಫಲ್ಬರ್‌ಗೆ ಹೋಗುವುದನ್ನೂ ತೊರೆದಿದ್ದ. 'ಅಲ್ಲಿ ಮತವಿಲ್ಲ, ಮರ್ಯಾದೆ ಇಲ್ಲ, ಹೆಂಗಸರಿಗೆ ಏಕಾಂತ ಎಂಬೋದಿಲ್ಲ' ಎಂದು ಅವನು ಅನ್ನುತ್ತಿದ್ದುದನ್ನು ಅವಳು ಅನೇಕ ಸಲ ಈ ಹಿಂದೆ ಕೇಳಿದ್ದಳು.

"ತ್ವರೆ ಮಾಡು, ನನ ಕಂದ; ನಾವು ಬಹಳ ದೂರ ಹೋಗಲಿಕ್ಕಿದೆ," ನುಡಿದ ಗಫೂರ್.

ಅಮೀನಾ ಕುಡಿಯುವ ನೀರಿನ ಪಾತ್ರೆ, ಹಾಗೂ ತಂದೆಯ ಹಿತ್ತಾಳೆ ತಟ್ಟೆಯನ್ನು ಎತ್ತಿಕೊಳ್ಳಲು ಹೋದಳು. "ಅವನ್ನು ಬಿಟ್ಟು ಬಿಡು ನನ್ನ ಮುದ್ದು ಕಂದ, ಮಹೇಶನ ಹತ್ಯೆಯ ಪ್ರಾಯಶ್ಚಿತ್ತಕ್ಕೆ ಅವು ಸಂದಾಯವಾಗುತ್ತವೆ," ಎಂದ ಗಫೂರ್.

ಆ ನಡು ರಾತ್ರಿಯಲ್ಲಿ ಗಫೂರ್ ತನ್ನ ಮಗಳ ಕೈ ಹಿಡಿದು ನಡೆಯತೊಡಗಿದ. ಆ ಹಳ್ಳಿಯಲ್ಲಿ ಅವನಿಗೆ ತನ್ನವರು ಎಂದು ಕರೆದುಕೊಳ್ಳಲು ಯಾರೂ ಇರಲಿಲ್ಲ. ಅವನಿಗೆ ಯಾರಲ್ಲಿಯೂ ಏನನ್ನೂ ಹೇಳುವುದಿರಲಿಲ್ಲ. ಅಂಗಳವನ್ನು ದಾಟುತ್ತಾ, ಆತ ಆ ಜಾಲಿಯ ಮರದ ಹತ್ತಿರ ಬಂದಾಗ ಕಾಲು ಮುಂದೇಳದೆ ನಿಂತು ದುಃಖ ಉಮ್ಮಳಿಸಿ ಬರಲು ಗಟ್ಟಿಯಾಗಿ ಅಳತೊಡಗಿದ. ನಕ್ಷತ್ರ ಖಚಿತ ಕಪ್ಪನೆಯ ಆಗಸದೆಡೆ ತನ್ನ ಮುಖವನ್ನೆತ್ತುತ್ತ, "ನಿನಗೆ ಎಷ್ಟು ಬೇಕೆನಿಸುತ್ತದೋ ಅಷ್ಟು ನನ್ನನ್ನು ಶಿಕ್ಷಿಸು ಅಲ್ಲಾಹ್, ಮಹೇಶ್ ತನ್ನ ತುಟಿಗಳ ಮೇಲೆ ದಾಹವಿರಿಸಿಕೊಂಡೇ ಸತ್ತ. ಅವನು ಮೇಯಲೆಂದು ಯಾರೂ ಒಂದು ತುಂಡು ಭೂಮಿಯನ್ನೂ ಬಿಟ್ಟುಕೊಡಲಿಲ್ಲ. ಅವನಿಗೆ ಹುಲ್ಲು ಮೇಯಲಾದರೂ ಅಥವಾ ನೀನಿತ್ತ ನೀರು ಕುಡಿಯಲಾದರೂ ಬಿಡದ ಆ ಜಮೀನುದಾರನ ಪಾಪವನ್ನು ಎಂದಿಗೂ ಕ್ಷಮಿಸದಿರು ತಂದೆ!" ಎಂದು ಸಣಬಿನ ಗಿರಣಿಯೆಡೆಗೆ ನಡೆಯತೊಡಗಿದ.

●

ಬೆವರಿ ಬಿಟ್ಟು ಹೋಗಬೇಕಾದ ಜ್ವರವನ್ನು ತಣ್ಣೀರು ಹೊಯ್ದು ಇಳಿಸಹೋಗುವವನು ಮೂರ್ಖ.

ಮಾಘ

134

ಖಂಡತುಂಡ ಹೇಗೆ? ಮೆಣಸಿನ ಯಾತ್ರೆ

''ಖಂಡತುಂಡ''ವಾಗಿ ಮಾತಾಡಿದನು ಎನ್ನುವಾಗ ನಮ್ಮ ಅಭಿಪ್ರಾಯ ನಿರ್ದಾಕ್ಷಿಣ್ಯವಾಗಿ ಎಂಬುದು ಸ್ಪಷ್ಟ. ಅಂದರೆ ಈ ಜೋಡಿ ಪದಗಳಲ್ಲಿ ''ಖಂಡ'' ಎಂಬುದರ ಮೂಲ ನಿಶ್ಚಿತ: ಕಡಿದು ಚೂರು ಮಾಡಿದ್ದು ಎಂದು. ಯಾರಿಗಾದರೂ ಸಿಟ್ಟು ಅಥವಾ ಬೇಜಾರಿಗೆ ಕಾರಣವಾದೀತೆಂಬುದನ್ನು ಲೆಕ್ಕಿಸದೆ ಅಭಿಪ್ರಾಯ ಹೇಳುವುದು. ಇನ್ನೊಬ್ಬನ ಅಭಿಪ್ರಾಯದಲ್ಲಿರುವ ಕೊರತೆಗಳನ್ನು ನಿಷ್ಠುರವಾಗಿ ಎತ್ತಿ ತೋರಿಸುವುದೆಂದರೆ ಅದನ್ನು ಕತ್ತರಿಸಿದಂತೆಯೇ ಅಲ್ಲವೆ? ಆದರೆ ''ತುಂಡ'' ಎಂದರೇನು? ಪರಿಷತ್ತಿನ ನಿಘಂಟುಕಾರರ ಪ್ರಕಾರ ಅದು ತುಂಡು ಎಂಬ ದೇಶ್ಯ ಪದದ್ದೇ ರೂಪ. ಒಂದೇ ಅರ್ಥದ ಎರಡು ಪದಗಳನ್ನು ಜತೆಜತೆಯಾಗಿ ಬಳಸುವುದು ಭಾಷೆಯಲ್ಲಿ ಸಾಮಾನ್ಯ. ಅರ್ಥಕ್ಕೆ ಒತ್ತು ಕೊಡುವ ಸಲುವಾಗಿ ಹೀಗೆ ಮಾಡಲಾಗುತ್ತದೆ. ಆದರೆ ಇಲ್ಲಿ ಹಾಗಾಗಿದೆಯೆ? ಸಂಸ್ಕೃತದಲ್ಲಿ ''ತುಂಡ'' ಎಂಬ ಅಕಾರಾಂತ ಶಬ್ದವಿದ್ದು ಅದು ''ತೋಂಡ್'' ಎಂಬ ರೂಪದಲ್ಲಿ ಮರಾಠಿಯಲ್ಲಿರುವುದು. ಅದರ ಅರ್ಥ ಮೋರೆ, ಬಾಯಿ, ಮುಖ ಇತ್ಯಾದಿ. ಹಿಂದಿಯಲ್ಲಿ ''ಮುಹತೋಡ್ ಜವಾಬ್'' (ಮುಖ ಕಡಿದು ಉತ್ತರಿಸುವುದು) ಎಂಬ ಪ್ರಯೋಗವಿದೆ. ಖಂಡ ತುಂಡ ಎಂಬುದು ಮುಹತೋಡ್‌ಗೆ ಸಂವಾದಿಯಾದ ವಾಗ್ವಿಲಾಸವೆ? ಪರಿಷತ್ ನಿಘಂಟಿನಲ್ಲಿ ''ಖಂಡತುಂಡು'' ಎಂಬ ಇನ್ನೊಂದು ರೂಪವನ್ನು ಸೋದಾಹರಣವಾಗಿ ಕೊಟ್ಟಿದ್ದಾರೆ. ಇದು ನನ್ನ ಸಂದೇಹವನ್ನು ತೀರ್ಮಾನಿಸುತ್ತದೆಂಬ ಸಮಾಧಾನಕ್ಕೆ ಆಸ್ಪದವಿದೆ. ಪುರಂದರದಾಸರ ''ಖಂಡತುಂಡನೆ ಮಾಡಿ'' ಎಂಬ ಪ್ರಯೋಗ ಇದನ್ನು ಸಮರ್ಥಿಸೀತು. ಆದರೆ ''ಖಂಡತುಂಡ ಜವಾಬು'' ಎಂಬುದು ನನ್ನ ತರ್ಕಕ್ಕೆ ಬೆಂಬಲ ಕೊಡುತ್ತದೆ. ಖಂಡತುಂಡು, ಖಂಡತುಂಡ ಇವೆರಡು ಬೇರೆ ಬೇರೆಯೆ ತಾತ್ಪರ್ಯದ ಬೇರೆ ಬೇರೆ ಶಬ್ದಗಳೇ ಇರಬಹುದು.

★

ಕಾಳು ಮೆಣಸಿಗೆ ಇಂಗ್ಲಿಷಿನಲ್ಲಿ pepper ಎಂದು ಹೆಸರಿರುವುದು ಸರ್ವವಿದಿತ. ಈ ಕೋಡಿನ ಕಾಳು ಯುರೋಪ್ ಮೊದಲಾದ ದೇಶಗಳಿಗೆ ಬಹಳ ಪ್ರಾಚೀನ ಕಾಲದಿಂದ ರಫ್ತಾಗುತ್ತಿದ್ದದ್ದು ಭಾರತದಿಂದ - ಅದೂ ಕರ್ನಾಟಕ ಮತ್ತು ಕೇರಳದ ಕರಾವಳಿಯಿಂದ ಎನ್ನುವುದು ಪ್ರಸಿದ್ಧ. ದಕ್ಷಿಣದ ಭಾಷೆಗಳಲ್ಲೆಲ್ಲ ಮೆಣಸಿಗೆ ''ಮಿಳಗು'', ''ಮುಳಗು'' (ತಮಿಳು-ಮಲೆಯಾಳಿ), ''ಮೆಳಸು''. ''ಮೆಣಸು'' (ಕನ್ನಡ), ಮಣ್ಚ್, ಮೊಣಂಜಿ (ತುಳು) ಮಿರಿಯ (ತೆಲುಗು) ಎಂಬ ಪರಸ್ಪರ ಹೋಲಿಕೆಯುಳ್ಳ ಪದಗಳಿವೆಯಲ್ಲದೆ ಈ ಶಬ್ದಗಳಿಗೆ ಸಂವಾದಿಯಾದ ''ಮರಿಚ'' ಎಂಬುದು ರಾಮಾಯಣದಷ್ಟು ಹಿಂದೆಯೇ (ಅರಣ್ಯ ಕಾಂಡ, 35, 23) ಸಂಸ್ಕೃತದಲ್ಲಿ ಪ್ರವೇಶಿಸಿದೆ. (ಸೀತಾಪಹರಣಕ್ಕೆ ನೆರವಾಗಲು ಮಾಯಾಮೃಗರೂಪ ಧರಿಸಿದ ಮಾರೀಚನ ಹೆಸರಿಗೂ 'ಮರಿಚ'

ಕ್ಕೂ ಸಂಬಂಧವಿರಬಹುದೆ? ಮಾರೀಚನು ಮೆಣಸಿನಂತೆ ತೀಕ್ಷ್ಣನಾಗಿದ್ದನೆಂಬುದರಿಂದ ಆ ಹೆಸರು ಇಟ್ಟಿರಬಹುದೆ? ಎಂಬುದು ಕಗ್ಗಂಟಾದ ಪ್ರಶ್ನೆ. ಅವನು ಮರೀಚಿಯ ಮಗನಾದ್ದರಿಂದ ಆ ಹೆಸರೆಂದು ಹೇಳಲಾಗಿದೆ. ಇದು ಸೂರ್ಯನ ಕಿರಣಗಳಿಗೆ ಸಂಬಂಧಿಸಿದ್ದು. ಆದರೂ ಎರಡೂ ತೀಕ್ಷ್ಣವಾಗಿವೆಯೆಂಬುದು ಕುತೂಹಲಕರ ಹೋಲಿಕೆ.)

ಆದರೆ ಈ ಕಾಳು ಪಶ್ಚಿಮ ದೇಶಗಳಿಗೆ ಹೋದಾಗ ಬೇರೆಯೆ ಹೆಸರು ಹೇಗೆ ಬಿತ್ತು? (ಲ್ಯಾಟಿನ್ piper, ಗ್ರೀಕ್ piperi, ಹಳೆ ಸ್ಯಾಕ್ಸನ್pipari, pepar, ಹಳೆ ಜರ್ಮನ್ pfeffar ಇಂಗ್ಲಿಷ್ pepper) ಇವೆಲ್ಲ ಶಬ್ದಗಳಿಗೆ ಮೂಲ ಸಂಸ್ಕೃತದ ''ಪಿಪ್ಪಲೀ'' ಎಂದು ಕೋಶಗಳು ಹೇಳುತ್ತವೆ. ''ಪಿಪ್ಪಲೀ'' ಎಂಬ ಹೆಸರು ಸಂಸ್ಕೃತದಲ್ಲಿ ಹಲವು ತೀಕ್ಷ್ಣ ರಸದ ವನಸ್ಪತಿಗಳಿಗೂ ಅವುಗಳಲ್ಲೊಂದರ ಬೇರಿಗೂ ನಡೆಯುತ್ತದೆ.

ಹೀಗೆ ನಮ್ಮ ಒಂದು ವನಸ್ಪತಿ ವಿದೇಶಕ್ಕೆ ಸಂಸ್ಕೃತದ ಒಂದು ಅನಿಶ್ಚಿತ ಹೆಸರು ಹೊತ್ತುಕೊಂಡು ಹೋಗಿದೆ. ಅಲ್ಲದೆ ಅಲ್ಲಿನ ನುಡಿಕಟ್ಟಿನಲ್ಲಿ ಸೇರಿಕೊಂಡಿದೆ. peppering ಎಂದರೆ ಮೆಣಸಿನಪುಡಿ ಹಾಕುವುದು, ಯಾವುದಾದರೂ ತಪ್ಪಿಗೆ ತೀಕ್ಷ್ಣವಾದ ಶಿಕ್ಷೆ ಕೊಡುವುದು; ಮತ್ತು ಯುದ್ಧದಲ್ಲಿ ಕ್ಷಿಪಣಿಗಳನ್ನು ಪುಂಖಾನುಪುಂಖವಾಗಿ ಸುರಿಸುವುದು.

ನಮ್ಮಲ್ಲಿ ಕೂಡ ತಲೆಯ ಮೇಲೆ ಮೆಣಸು ಅರೆಯುವುದು (ನಿರಂತರವಾಗಿ ಪೀಡಿಸುವುದು), ಕಣ್ಣಿಗೆ ಮೆಣಸಿನ ಪುಡಿ ಹಾಕುವುದು (ದಿಕ್ಕು ತಪ್ಪಿಸುವಂತೆ ವಿಸ್ಮಯವಾಗುವುದು), ಇತ್ಯಾದಿ ನುಡಿಕಟ್ಟುಗಳು ಉದ್ಭವಿಸಿವೆ. ''ಮುತ್ತಂ ಮೆಳಸುಂ ಕೋದಂತಿರೆ'' (ಮುತ್ತನ್ನೂ ಮೆಣಸನ್ನೂ ಒಂದೇ ಸರದಲ್ಲಿ ಪೋಣಿಸಿದಂತೆ) ಎಂಬ ಪ್ರಾಚೀನ ನುಡಿಕಟ್ಟು ಹೊಂದಿಕೆಯಿಲ್ಲದ ಜೋಡಣೆಯನ್ನು ನಿರ್ದೇಶಿಸುತ್ತದೆ.

ಒಂದು ವಿಶೇಷವೆಂದರೆ ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಈಗ ಮೆಣಸು ಎಂದರೆ ಕೆಂಪು ಮೆಣಸಿನ ಕಾಯಿಗೇ ಹೆಸರಾಗಿದೆ. ಇದು ದಕ್ಷಿಣ ಅಮೇರಿಕದಿಂದ ಪೋರ್ಚುಗೀಸರು ಇಲ್ಲಿಗೆ ತಂದ ಸಸ್ಯವಾಗಿದ್ದು ದಕ್ಷಿಣ ಭಾರತದವರ ನಾಲಗೆಯ ಮೇಲೆ ಪ್ರಭುತ್ವ ಸಾಧಿಸಿ ಹಿಂದೆ ಕಾಳು ಮೆಣಸನ್ನು ಬಳಸುತ್ತಿದ್ದ ಅಡಿಗೆ ಪದಾರ್ಥಗಳಲ್ಲೆಲ್ಲ ಸ್ಥಾನಾಪನ್ನವಾಗಿದೆ. ಇದಕ್ಕಿರುವ chili, chilli ಎಂಬ ಇಂಗ್ಲಿಷ್ ಹೆಸರು ದಕ್ಷಿಣ ಅಮೇರಿಕದ ಒಂದು ಮೂಲ ನಿವಾಸಿ ಭಾಷೆಯಾದ Aztec ನಿಂದ ಸ್ಪಾನಿಶ್ (chile)ಮೂಲಕ ಆಮದಾದ್ದು.

★

''ಕೃಷ್ಣದೇವರಾಯನ ದಿನಚರಿ''ಯೆಂಬ ಸ್ವಾರಸ್ಯಕರ ಪುಸ್ತಕದಲ್ಲಿ ಕೆಲ ವಿಶೇಷ ಶಬ್ದಗಳು ಬರುತ್ತವೆ. ಉದಾಹರಣೆಗೆ ''ತಿಗುಳಾಣ್ಯ'' ''ತುರುಕಾಣ್ಯ'' ಇತ್ಯಾದಿ. ಸನ್ನಿವೇಶದಿಂದ ಸ್ಪಷ್ಟವಾಗಿ ತಿಳಿಯುವಂತೆ, ಒಂದು ಜನವರ್ಗದ ಹೆಸರಿಗೆ ''ಆಣ್ಯ''ವೆಂಬ ಪ್ರತ್ಯಯ ಸೇರಿಸಿ ಆ ಜನಾಂಗಗಳ ವಾಸ ಅಥವಾ ಆಳ್ವಿಕೆಯ ಪ್ರದೇಶ ಎಂಬರ್ಥ ಬರಿಸುವ ಪದಗಳಿವು. ಕ್ರಮವಾಗಿ ತಮಿಳು ದೇಶ, ತುರುಕ ರಾಜ್ಯ ಎಂಬರ್ಥ ಈ ಪದಗಳಿಗೆ. ಈ ಪದಗಳಿಗೆ ಸಂವಾದಿಯಾಗಿ ಇಂದಿಗೂ ''ತೆಲಂಗಾಣಾ'' ಚಲಾವಣೆಯಲ್ಲಿದೆ. ಹಿಂದಿನ ಹೈದರಾಬಾದ್ ಸಂಸ್ಥಾನದ ತೆಲುಗು ಪ್ರದೇಶಗಳಿಗೆ ತೆಲಂಗಾಣ ಎಂಬ ಅಭಿಧಾನ ಇರುವುದು ನೋಡಿದರೆ ''ಆಣ್ಯ'' ಎಂಬುದರ ಒಂದು ರೂಪ ''ಆಣಾ'' ಎಂದು ವಿಶದವಾಗುತ್ತದೆ. ಆದರೆ ಈ ''ಆಣಾ'' ಎಲ್ಲಿಯದು? ಅದು ಪಾರಸೀಕ ಮೂಲದ್ದೆ ಇರಬೇಕು. ಅದಕ್ಕೆ ಸಂಬಂಧಿಸಿದ್ದು ಎಂಬರ್ಥದಲ್ಲಿ ''ಆನಾ'' ಪ್ರತ್ಯಯ ಪಾರಸೀಕ ಭಾಷೆಯಲ್ಲಿದೆ. ''ಸಾಲಾನಾ'' (ವಾರ್ಷಿಕ), ''ಮಾಹೆಯಾನಾ'' (ಮಾಸಿಕ) ಇತ್ಯಾದಿಗಳು ನೆನಪಿಗೆ ಬರುತ್ತವೆ. ಬಹಮನಿ ಮತ್ತು ಅದರ ತುಣುಕುಗಳಾದ ವಿಜಾಪುರ ಗೋಲ್ಕೊಂಡಾ ಮತ್ತು ಅನಂತರದ ಹೈದರಾಬಾದ್ ಸಂಸ್ಥಾನಗಳು ತಮ್ಮ ಆಡಳಿದಲ್ಲಿ ಈ ಪ್ರತ್ಯಯವನ್ನು ಪ್ರದೇಶಗಳಲ್ಲಿ ಬಳಕೆಗೆ ತಂದಿರಬೇಕು. ಪ್ರದೇಶಕ್ಕೆ ಅನ್ವಯಿಸಿದ ಉದಾಹರಣೆ ಉತ್ತರ ತುದಿಯ ''ಹರಿಯಾಣಾ'' ರಾಜ್ಯದ ಹೆಸರಲ್ಲಿ ಸಿಗುತ್ತದೆ.

●

– ಪಾವೆಂ.

ನಂಜಿನಿಂದ ಅಮೃತ

ಬಿ. ಆರ್. ಶ್ರೀನಿವಾಸ

★ ಲೇಖಕರು ಮಂಗಳೂರು ಆಕಾಶವಾಣಿ ಕೇಂದ್ರದಿಂದ 19-4-89ರಂದು ಮಾಡಿದ ಭಾಷಣದಿಂದ ಆಯ್ದ ಭಾಗಗಳು.

ನಿಸರ್ಗದ ಗರ್ಭ[illegible] [illegible]ಲಾಹಲ ಅನೇಕ ರೀತಿಯಲ್ಲಿ ಅಡಗಿ[illegible] [illegible]ನ್ನು ಮನುಕುಲದ ಪ್ರಯೋಜನಕ್ಕಾ[illegible] ಬಳಸಿಕೊಳ್ಳಬಹುದೆ? ಎಂಬುದು ಒಂದು ಜಟಿಲವಾದ ಸಮಸ್ಯೆಯಾಗಿತ್ತು. ಆದರೆ ಇತ್ತೀಚಿನ ಸಂಶೋಧನೆ ಈ ಒಗಟನ್ನು ಬಿಡಿಸಿದೆ. ಅತ್ಯಂತ ಘೋರವಾದ ಹಾಲಾಹಲವೂ ಅಮೃತವಾಗಿ ನಮಗೆ ವರಪ್ರದವಾಗಬಹುದು ಎಂದರೆ ಒಂದು ಸೋಜಿಗದ ಸಂಗತಿ.

ಸುಂದರವಾದ ನಯನಮನೋಹರವಾದ ಗುಲಾಬಿಯ ಹೂವು ಯಾರ ಮನಸ್ಸನ್ನಾದರೂ ಸೆಳೆಯುತ್ತದೆ. ಬಣ್ಣ ಬಣ್ಣಗಳಿಂದ ಕೂಡಿದ ಗುಲಾಬಿಯ ತೋಟ ಮನೆಗೆ ಒಂದು ಮೆರಗನ್ನು ಕೊಡುತ್ತದೆ. ಗುಲಾಬಿಯ ತೋಟ ಅದರ ಮಾಲಿಕನಿಗೆ ಐಶ್ವರ್ಯವನ್ನು ಕೊಡಬಹುದು. ಅದೇ ಗುಲಾಬಿಯ ಗಿಡದಲ್ಲಿ, ಹೂವಿನ ಸಮೀಪದಲ್ಲಿರುವ ಕಾಂಡದಲ್ಲಿರುವ ನಂಜು ಅವನ ರಕ್ತ ಪ್ರವೇಶಿಸಿ ಅವನ ಉಳಿವಿಗೇ ಮಾರಕವಾಗಬಹುದು. ಇದೇ ರೀತಿ ಸಸ್ಯವರ್ಗದಲ್ಲಿ ಅನೇಕ ರೀತಿಯ ಗಿಡಮರಗಳು ಕಾಡಿನಲ್ಲಿ ಬೆಳೆಯುವ ಗಿಡಮೂಲಿಕೆಗಳು, ಹೊಲದ ಬದಿಯಲ್ಲಿ ಬೆಳೆಯುವ ಪಾರ್ಥೇನಿಯಮ್ಮಿನಂತಹ ಹುಲ್ಲು, ಶೈವಲಗಳು ತಮ್ಮ ಜೀವಕೋಶದಲ್ಲಿ ಅನೇಕ ರೀತಿಯ ನಂಜನ್ನು ಸೃಷ್ಟಿಸುತ್ತವೆ.

ದೂರದ ತೋಟದಲ್ಲಿ, ಎತ್ತರವಾದ ಮರದ ಮೇಲೆ ಇರುವ ಜೇನುಗೂಡನ್ನು ನೋಡಿದರೆ ಬಾಯಲ್ಲಿ ನೀರೂರುತ್ತದೆ. ಅದರಲ್ಲಿ ಅಡಗಿರುವ ಜೇನುತುಪ್ಪವನ್ನು ಸವಿಯಬೇಕು ಎಂಬ ಹಂಬಲ ಮಕ್ಕಳಿಗೇನು, ದೊಡ್ಡವರಿಗೂ ಉಂಟಾಗುತ್ತದೆ. ಆದರೆ ಜೇನು ನೊಣದಲ್ಲಿರುವ ಮೈಕೋಟಾಕ್ಸಿನ್ ಎಂಬ ತೀಕ್ಷ್ಣ ರೀತಿಯ ನಂಜು ಅಪರೂಪ ಪ್ರಸಂಗಗಳಲ್ಲಿ ಜೇನುತುಪ್ಪದಲ್ಲಿ ಬೆರೆತು ನಮಗೆ ಮಾರಕವಾಗಬಹುದು ಎಂಬುದು ಎಷ್ಟು ಜನರಿಗೆ ಗೊತ್ತು?

ಅಲ್ಲದೆ ಜೇನುನೊಣ ನಮ್ಮನ್ನು ಕುಟುಕಿದಾಗ ಈ ನಂಜು ರಕ್ತವನ್ನು ಸೇರಿ ಅನೇಕ ರೀತಿಯ ಭೀಕರ ಪರಿಣಾಮ ಉಂಟಾಗುತ್ತದೆ. ಇದೇ ರೀತಿ ಜೀವಜಗತ್ತಿನಲ್ಲಿ ವೈವಿಧ್ಯ ರೂಪದಲ್ಲಿರುವ ಅನೇಕ ಕೀಟಗಳಲ್ಲಿ ನಾನಾ ತರಹದ ನಂಜು ಇದೆ. ಚೇಳು, ಹಲ್ಲಿ, ಜೇಡ, ಕಣಜ, ಮುಂತಾದ ವಿಷಜಂತುಗಳು ತಮ್ಮ ದೇಹದಲ್ಲಿ ನಂಜನ್ನು ತಯಾರಿಸುತ್ತವೆ.

ಮುಂಜಾನೆಯ ಬೆಳಕಿನಲ್ಲಿ ಹೂದೋಟ

ದಲ್ಲಿ ಓಡಾಡಲು ರಮ್ಯವಾಗಿರುತ್ತದೆ. ಎಳೆಯ ಸೂರ್ಯಕಿರಣ ಹೂದೋಟದಲ್ಲಿ ಮುಂದಹಾಸ ಬೀರುತ್ತಿರುವಾಗ ಬಣ್ಣ ಬಣ್ಣದ ಚಿಟ್ಟೆಗಳು ಹೂವಿನಿಂದ ಹೂವಿಗೆ ಹಾರಿ ಮಕರಂದ ಹೀರುವ ಸವಿಯನ್ನು ನೋಡುವುದು ಬಲು ಚೆಂದ. ಆದರೆ ಈ ಬಣ್ಣದ ಚಿಟ್ಟೆ ಕಂಬಳಿ ಹುಳವಾಗಿದ್ದಾಗ ಮೈ ಮೇಲೆ ಹರಿದು ಉಂಟಾಗುವ ತುರಿ ಮತ್ತು ನವೆ ನಮ್ಮ ಶತ್ರುವಿಗೂ ಬೇಡ ಅನ್ನಿಸುತ್ತದೆ. ಇದರ ನಂಜಿಗೂ ಜೇನಿನ ನಂಜಿಗೂ ಒಂದೇ ರೀತಿಯ ವಿನ್ಯಾಸ.

ಬೇಸಿಗೆಯ ಸಂಜೆ, ಸಮುದ್ರ ತೀರದ ಮರಳು ದಂಡೆಯಲ್ಲಿ ವಿಹರಿಸಲು ಬಲು ಸೊಗಸು. ಇಂಪಾದ ತಂಗಾಳಿ ಆಹ್ಲಾದ ತರುತ್ತದೆ. ಭೋರ್ಗರೆಯುವ ಸಮುದ್ರದ ಅಲೆಗಳ ಜೊತೆ ಹೊಯ್ದಾಡುತ್ತಿರುವ ಜಲಚರಗಳು ನಯನಮನೋಹರ. ಸಂಜೆಯ ಸೂರ್ಯಕಿರಣ ಹೊಯ್ದಾಡುತ್ತಿರುವ ಮೀನಿನ ಸಮುದಾಯದ ಮೇಲೆ ಬಿದ್ದು ಅವುಗಳ ವೈವಿಧ್ಯಮಯ ಬಣ್ಣಗಳನ್ನು ಇಮ್ಮಡಿಸುತ್ತದೆ. ಸಮುದ್ರದಲ್ಲಿನ ಮೀನು ಕಣ್ಣಿಗೆ ಆನಂದ ತರುವುದಷ್ಟೆ ಅಲ್ಲದೆ, ಹಲವಾರು ಜನಗಳಿಗೆ ಅತ್ಯುತ್ತಮವಾದ ಆಹಾರವೂ ಆಗಬಲ್ಲದು. ಆದರೆ ಹಲವಾರು ರೀತಿಯ ಮೀನುಗಳು ತಮ್ಮ ಗರ್ಭದಲ್ಲಿ ಅತ್ಯಂತ ಮಾರಕವಾದ ನಂಜನ್ನೂ ಹುದುಗಿಸಿಕೊಂಡಿವೆಯೆಂಬುದು ಬಹು ಜನರಿಗೆ ಗೊತ್ತಿಲ್ಲ. ಜಪಾನಿನಲ್ಲಿ ಹೂಗ್ಲು ಎಂಬ ಒಂದು ಜಾತಿಯ ಮೀನಿಗೆ ಅತ್ಯಂತ ಬೇಡಿಕೆ. ಇದರಿಂದ ತಯಾರಿಸಿದ ತಿಂಡಿ ತಿನಿಸುಗಳಿಗೆ ಅತಿ ದುಬಾರಿಯ ಬೆಲೆ. ಈ ಮೀನಿನಿಂದ ತಯಾರಿಸಿದ ದೋಸೆಯ ಬೆಲೆ ಸುಮಾರು 3000 ರೂಪಾಯಿಗಳಂತೆ. ಆದರೆ ಈ ಹೂಗ್ಲು ಮೀನಿನಲ್ಲಿ ಸೈನೈಡ್ ವಿಷಕ್ಕಿಂತ 300 ಪಟ್ಟು ಹೆಚ್ಚು ನಂಜಿರುವ ವಸ್ತುವಿದೆಯೆಂದರೆ ಮೈ ನವಿರೇಳುತ್ತದೆ. ಹೂಗ್ಲು ಮೀನಿನ ಯಕೃತ್ತು ಮತ್ತು ಕರುಳಿನಲ್ಲಿ ಈ ಭಯಂಕರ ನಂಜು ಇರುತ್ತದೆ. ಅಂದಮೇಲೆ ಈ ಮೀನಿನಿಂದ ತಿಂಡಿತೀರ್ಥಗಳನ್ನು ತಯಾರಿಸುವಾಗ ಅತಿ ಜಾಗ್ರತೆಯಿಂದಿರಬೇಕು. ಇಲ್ಲದಿದ್ದರೆ ಇದನ್ನು ತಿಂದವರಿಗೆ ಪರಲೋಕವೇ ಗತಿ.

ಇದೇ ರೀತಿ ಸಮುದ್ರದಲ್ಲಿ ಈಜುವ ಹಾವುಗಳು ಸಹ ಹಾಲಾಹಲವನ್ನು ಹೊರಸೂಸುತ್ತವೆ. ನೀರಮೇಲಿರುವ ಹಾವಲ್ಲದೆ, ಭೂಮಿಯ ಮೇಲಿರುವ ಹಲವಾರು ಜಾತಿಯ ಹಾವುಗಳಲ್ಲಿಯೂ ನಂಜಿದೆ. ಎಲ್ಲಾ ಹಾವುಗಳಲ್ಲಿಯೂ ವಿಷವಿರುವುದಿಲ್ಲ. ಆದರೆ ನಾಗರಹಾವಿನ ವಿಷ ಬಹಳ ಘೋರವಾದದ್ದು. ನಾಗರಹಾವು ಎಂದು ಹೇಳಿದ ತಕ್ಷಣ ನಮ್ಮ ಎದೆ ಝಲ್ ಎನ್ನುತ್ತದೆ. ಹೃದಯದಲ್ಲಿ ಕಂಪನ ಹುಟ್ಟಿ ಒಂದು ರೀತಿಯ ಭಯ ಉಂಟಾಗುತ್ತದೆ. ಆದ್ದರಿಂದಲೆ ರಾತ್ರಿಯ ವೇಳೆಯಲ್ಲಿ ಹಗ್ಗವನ್ನು ಎಡವಿ ಹಾವೆಂದು ಭ್ರಮಿಸಿ ಬರಿಯ ಭಯದಿಂದಲೇ ಅಸು ನೀಗಿದವರು ಹಲವಾರು ಮಂದಿ.

ಹಾವಿನ ಬಗ್ಗೆ ನಮ್ಮ ಕೆಲವು ನಂಬಿಕೆಗಳು ಆಧಾರವಿಲ್ಲದವು. ಬೆಳೆಯನ್ನು ನಾಶಮಾಡುವ ಅನೇಕ ಪ್ರಾಣಿಗಳನ್ನು ಇವು ತಿಂದು ಹಾಕುವುದರಿಂದ ಹಲವು ಹಾವುಗಳು ರೈತನಿಗೆ ಉಪಕಾರಿಗಳೇ ಸರಿ. ಅರ್ಬುದ ಮತ್ತು ಕುಷ್ಠ ರೋಗದ ನಿವಾರಣೆಯಲ್ಲಿ ಆಯುರ್ವೇದ ಪಂಡಿತರು ಹಲವು ಹಾವುಗಳ ವಿಷವನ್ನು ದುರ್ಬಲ ಪ್ರಮಾಣದಲ್ಲಿ ಉಪಯೋಗಿಸುತ್ತಾರೆ.

ಇದಲ್ಲದೇ ಅನೇಕ ಶೈವಲಗಳು, ಸೂಕ್ಷ್ಮಜೀವಿಗಳು ಮತ್ತು ಇತರ ಕ್ರಿಮಿಗಳು ನಂಜನ್ನು ತಯಾರಿಸುತ್ತವೆ. ನಂಜು, ಸಸ್ಯಜನ್ಯವಾಗಿರಬಹುದು, ಪ್ರಾಣಿಜನ್ಯವಾಗಿರಬಹುದು, ಕೀಟಜನ್ಯವಾಗಿರಬಹುದು ಅಥವಾ ಶೈವಲಜನ್ಯವಾಗಿರಲೂಬಹುದು.

ನಂಜಿನ ರಚನೆ, ವಿನ್ಯಾಸ ಮತ್ತು ರಾಸಾಯನಿಕ ಸ್ವರೂಪ ಅದು ಯಾವ ಜೀವರಾಶಿಯಿಂದ ತಯಾರಿಸಲ್ಪಟ್ಟಿದೆ ಎಂಬುದನ್ನು ಅವಲಂಬಿಸಿರುತ್ತದೆ. ಹಾವಿನ ನಂಜಿನಲ್ಲಿ ಸಸಾರಜನಕ ಮತ್ತು ಕಿಣ್ವಗಳೆಂಬ ಎರಡು ರೀತಿಯ ಘಟಕಗಳು ಇವೆ. ನಮ್ಮ ದೇಹದಲ್ಲಿ ಹರಿಯುವ ರಕ್ತದಲ್ಲಿ ಕೆಂಪು ರಕ್ತಕಣ ಮತ್ತು ಬಿಳಿಯ ರಕ್ತಕಣ ಎಂಬ ಎರಡು ಘಟಕಗಳಿವೆ. ಇದರ ಜೊತೆಗೆ ಇನ್ನೂ ಅನೇಕ ಜೀವಕಣಗಳಿವೆ. ನಮ್ಮ ಚರ್ಮಕ್ಕೆ ಗಾಯವಾದಾಗ ರಕ್ತ ಹೊರಗೆ ಬರುತ್ತದೆ. ಆದರೆ ಒಂದೇ ಸಮನೆ ರಕ್ತ ದೇಹದಿಂದ ಸೋರಿದರೆ ಮನುಷ್ಯ ಅಸುನೀಗುವುದು ಖಂಡಿತ. ರಕ್ತದಲ್ಲಿರುವ ಕೆಲವು ಘಟಕಗಳು ರಕ್ತ ಹೆಪ್ಪುಗಟ್ಟುವಂತೆ ಪ್ರಚೋದಿಸುತ್ತವೆ. ಇದರಿಂದ ರಕ್ತದಲ್ಲಿರುವ ಪ್ರೋಥ್ರೋಂಬಿನ್ ಎಂಬ ಪ್ರೋಟೀನಿನ ಕಣ ಥ್ರೋಂಬಿನ್ ಎಂಬ ಪ್ರೋಟೀನಿನ ಕಣವಾಗಿ ಮಾರ್ಪಾಡಾಗುತ್ತದೆ. ಥ್ರೋಂಬಿನ್ ನಾರಿನಂತಿದ್ದು ಕೊಯ್ದ ಭಾಗವನ್ನು ಮುಚ್ಚುವುದರಿಂದ ರಕ್ತ ಸೋರುವುದು ನಿಲ್ಲುತ್ತದೆ. ಆದರೆ ಹಾವಿನ ನಂಜು ರಕ್ತವನ್ನು ರಕ್ತನಾಳದಲ್ಲಿಯೇ ಹೆಪ್ಪುಗಟ್ಟುವಂತೆ ಮಾಡುತ್ತದೆ. ತತ್ಪರಿಣಾಮವಾಗಿ ರಕ್ತನಾಳದಲ್ಲಿಯೇ ರಕ್ತಹೆಪ್ಪುಗಟ್ಟಿ, ರಕ್ತ ಸಂಚಾರಕ್ಕೆ ಅಡಚಣೆ ಉಂಟಾಗುತ್ತದೆ. ಇದರಿಂದ ರಕ್ತದ ಒತ್ತಡ ಹೆಚ್ಚುತ್ತದೆ. ಇದಲ್ಲದೆ ನಾಗರಹಾವಿನ ವಿಷದಲ್ಲಿ ನ್ಯೂರೋಟೋಜಿನ್ ಎಂಬ ನಂಜು ಇರುತ್ತದೆ. ಇದು ರಕ್ತದ ಮೂಲಕ ನರಮಂಡಲ ಸೇರಿ ಪಾರ್ಶ್ವಘಾತವುಂಟಾಗುವಂತೆ ಮಾಡುತ್ತದೆ. ಕೊನೆಗೆ ಉಸಿರಾಟ ಸ್ಥಗಿತಗೊಳ್ಳುತ್ತದೆ. ಈ ರೀತಿಯ ಕಾರ್ಯಗಳು ಉಂಟಾಗಲು ನಂಜಿನಲ್ಲಿರುವ ಕಿಣ್ವಗಳೇ ಕಾರಣ. ಹಾವಿನ ವಿಷ ಅದರ ಹಲ್ಲುಗಳ ಹಿಂಭಾಗದಲ್ಲಿರುವ ಗ್ರಂಥಿಗಳಲ್ಲಿ ಶೇಖರವಾಗಿರುತ್ತದೆ. ಹಲ್ಲಿನ ಕೊಳವೆಯ ಮೂಲಕ ಅದು ರಕ್ತವನ್ನು ಸೇರಿ ಕೆಲವೇ ಸಮಯದಲ್ಲಿ ಮಿದುಳನ್ನು ತಲುಪಿ ತನ್ನ ಕಾರ್ಯ ಪ್ರಾರಂಭಿಸುತ್ತದೆ.

ಆದರೆ ಅದರಿಂದ ಪ್ರಯೋಜನವೂ ಉಂಟು. ಅಮೇರಿಕ, ಇಂಗ್ಲಂಡ್ ಮುಂತಾದ ದೇಶಗಳಲ್ಲಿ ಹಾವಿನ ನಂಜಿನ ಬಗ್ಗೆ ಎರಡು ಮೂರು ದಶಕಗಳಿಂದ ತೀವ್ರವಾದ ಸಂಶೋಧನೆ ನಡೆಯುತ್ತಿದೆ. ಅರ್ಬುದ ನಿವಾರಣೆಯಲ್ಲಿ ನಾಗರಹಾವಿನ ವಿಷ ಮಹತ್ತರವಾದ ಪಾತ್ರವನ್ನು ಹೊಂದಿದೆ. ಪ್ರಯೋಗಾಲಯದಲ್ಲಿ ನಾಗರದ ವಿಷವನ್ನು ಸಂಸ್ಕರಿಸಿ, ಹಲವು ಮಾರ್ಪಾಡು ಮಾಡಿ ಘನೀಕರಿಸಲಾಗುವುದು. ಇದನ್ನು ನಿರ್ದಿಷ್ಟಪ್ರಮಾಣದಲ್ಲಿ ಚುಚ್ಚುಮದ್ದಿನ ರೂಪದಲ್ಲಿ ಕೊಟ್ಟರೆ ಅದು ಅರ್ಬುದ ರೋಗ ಹರಡದಂತೆ ತಡೆಗಟ್ಟುತ್ತದೆ ಎಂದು ತಿಳಿದುಬಂದಿದೆ. ಅಂದ ಮೇಲೆ, ನಾಗರಹಾವು ಎಂದು ಕೇಳಿದ ತಕ್ಷಣ ಬೆಚ್ಚಿಬೀಳುವ ಪ್ರಮೇಯವಿಲ್ಲ. ಇದರ ವಿಷ ನಮಗೆ ಅಮೃತವಾಗಿ ಹಲವು ರೂಪದಲ್ಲಿ ಔಷಧಿಯ ಅಂಗಡಿಯಲ್ಲಿ ದೊರೆಯುವ ಸಮಯ ದೂರವಿಲ್ಲ. ಬೆಂಗಳೂರಿನಂತಹ ದೊಡ್ಡ ನಗರಗಳಲ್ಲಿ ಗುಲಾಬಿಯ ತೋಟ, ಹೂವಿನ ತೋಟ, ಬಾಳೆಯ ತೋಟ ಇರುವಂತೆ ಹಾವಿನ ತೋಟ ಕೂಡ ಇದೆ. ಅಲ್ಲಿ ನಾನಾ ರೀತಿಯ ಹಾವುಗಳನ್ನು ಸಾಕಿ, ಅವುಗಳಿಂದ ವಿಷವನ್ನು ಬೇರ್ಪಡಿಸಿ ಹೊರದೇಶಗಳಿಗೆ ರಫ್ತು ಮಾಡುತ್ತಾರೆ. ಅಲ್ಲಿ ಪ್ರಯೋಗಾಲಯದಲ್ಲಿ ನಂಜನ್ನು ಸಂಸ್ಕರಿಸಿ, ಅನೇಕ ಮಾರ್ಪಾಡು ಮಾಡಿ ಔಷಧದ ರೂಪದಲ್ಲಿ ಬಣ್ಣ ಬಣ್ಣದ ಗಾಜಿನ ಶೀಶೆಗಳಲ್ಲಿ ಕಳುಹಿಸುತ್ತಾರೆ.

ಇಂಗ್ಲಂಡಿನ ಲಿವರ್‌ಪೂಲ್ ವಿಶ್ವವಿದ್ಯಾಲಯದ ಸಂಶೋಧನೆಯಲ್ಲಿ ತೊಡಗಿಕೊಂಡ ವಿಜ್ಞಾನಿಗಳಲ್ಲಿ ರಾಬರ್ಟ್ ಜಾನ್‌ಸನ್ ಕೂಡ ಒಬ್ಬರು. ಇವರಿಗೆ ಕೀಟಗಳಲ್ಲಿ ಉತ್ಪತ್ತಿಯಾ

ಗುವ ನಂಜಿನ ಮೇಲೆ ಹೆಚ್ಚು ಆಸಕ್ತಿ. ಸುಮಾರು 10-15 ವರ್ಷಗಳಿಂದ ಈ ದಿಸೆಯಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ. ಇವರ ಸಂಶೋಧನೆ ಒಂದು ಹೊಸ ಬೆಳಕನ್ನು ಚೆಲ್ಲಿದೆ. ಶಸ್ತ್ರ ಚಿಕಿತ್ಸೆಗೆ ಮುಂಚೆ ಅರಿವಳಿಕೆ ಕೊಡುವುದು ಬಹಳ ಮುಖ್ಯ. ಆದರೆ ಕೆಲವೊಮ್ಮೆ ಇದರ ಪ್ರಮಾಣದಲ್ಲಿ ವ್ಯತ್ಯಾಸವಾದರೆ ಅಥವಾ ಇದರ ಗುಣಮಟ್ಟದಲ್ಲಿ ವ್ಯತ್ಯಾಸವಿದ್ದರೆ ರೋಗಿಯಲ್ಲಿ ಅನೇಕ ತೊಂದರೆಗಳು ತಲೆದೋರುತ್ತವೆ. ಹಲವಾರು ಬಾರಿ ರೋಗಿಗಳು ಅಸುನೀಗಿರುವ ಸಂದರ್ಭಗಳುಂಟು. ಹೀಗಾಗಿ ರೋಗಕ್ಕೆ ಜನರು ತುತ್ತಾಗದೆ ಅರಿವಳಿಕೆಗೆ ಜೀವಕೊಟ್ಟ ಪ್ರಸಂಗಗಳಿವೆ. ಜಾನ್‌ಸನ್ನರು ಕೀಟಗಳಿಂದ ಲಭ್ಯವಾಗುವ ನಂಜಿನಿಂದ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಕೀಟಗಳಲ್ಲಿರುವ ವಿಷದ ಪ್ರಮಾಣ ಬಹಳ ಕಡಿಮೆ. ಇದನ್ನು ಕೀಟದಿಂದ ಬೇರ್ಪಡಿಸಲು ಬಹಳಷ್ಟು ಪ್ರಯಾಸ ಪಡಬೇಕು. ಅಷ್ಟು ಪ್ರಯಾಸಪಟ್ಟರೂ ಶುದ್ಧವಾದ ನಂಜು ದೊರೆಕುವುದಿಲ್ಲ. ಇದನ್ನು ಸರಿಯಾಗಿಸಲು ಜಾನ್‌ಸನ್ನರು ಕೀಟಜನ್ಯ ನಂಜಿನ ವಿನ್ಯಾಸವನ್ನು ಕಂಡುಹಿಡಿದು ಅದನ್ನು ಪ್ರಯೋಗಾಲಯದಲ್ಲಿ ಕೃತಕವಾಗಿ ಸಂಶ್ಲೇಷಿಸಿದರು. ಈ ಕೃತಕ ನಂಜು ಕಾರ್ಯದಲ್ಲಿ ನೈಜ ನಂಜಿನಷ್ಟೇ ಪರಿಣಾಮಕರವಾಗಿದೆ. ಅದು ರಕ್ತದಲ್ಲಿ ಹಿಸ್ಟಮೈನ್ ಎಂಬ ಘಟಕದ ಜೊತೆಗೂಡಿ ನರಮಂಡಲವನ್ನು ಪ್ರವೇಶಿಸುವ ಮೂಲಕ ನಂತರ ನರಮಂಡಲ ಕೆಲ ಸಮಯ ಕುಂಠಿತವಾಗುವಂತೆ ಮಾಡುತ್ತದೆ. ಹೀಗಾಗಿ ಸ್ಮೃತಿಪಟಲ ನೋವಿನ ಅನುಭವವನ್ನು ಕಳೆದುಕೊಳ್ಳುತ್ತದೆ. ಇದರಿಂದ ಶಸ್ತ್ರ ಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಬಹುದು. ಕೆಲ ಕಾಲದ ನಂತರ ನರಮಂಡಲ ತನ್ನ ಮೊದಲಿನ ಸ್ಥಿತಿಗೆ ಬರುತ್ತದೆ. ಇದರಿಂದ ರೋಗಿಯು ನೋವನ್ನು ಅನುಭವಿಸದೇ ಶಸ್ತ್ರ ಚಿಕಿತ್ಸೆಗೆ ಒಳಗಾಗಬಹುದು. ಈ ಸಂಶೋಧನೆಯಿಂದ ಸ್ಫೂರ್ತಿಗೊಂಡ ವಿಜ್ಞಾನಿಗಳು ಜೀವಜಗತ್ತಿನಲ್ಲಿರುವ ಇನ್ನೂ ಅನೇಕ ಕೀಟಗಳ ನಂಜನ್ನು ರೋಗನಿವಾರಣೆಯಲ್ಲಿ ಬಳಸಿಕೊಳ್ಳುವಂತಾಗಲು ಶ್ರಮಿಸುತ್ತಿದ್ದಾರೆ. ●



"ನಮ್ಮ ಮನೆಗೆ ಬಾಡಿಗೆ ಬಂದಿರುವ ದಂಪತಿಗಳು ಆದರ್ಶ ಜೋಡಿ."

"ಹೌದಾ? ಏನು ವಿಶೇಷ?"

"ಗಂಡ ಒಂದು ಕಿಲೋಮೀಟರ್‌ವರೆಗೆ ಕೇಳಿಸುವ ಹಾಗೆ ಗೊರಕೆ ಹೊಡೀತಾನೆ. ಹೆಂಡತಿ ಹುಟ್ಟು ಕಿವುಡಿ."

ತಾಯ್ತನ ಮತ್ತು ಕಾನೂನು?

ಡಾ. ಸುನಂದಾ ಕುಲಕರ್ಣಿ

ಹುಡುಗಿಯ ಮದುವೆಯನ್ನು ಆಕೆಗೆ ಹದಿನೆಂಟು ತುಂಬುವುದರೊಳಗೇ ಮಾಡುವುದು ಕಾನೂನುಬಾಹಿರ ಎಂಬುದಂತೂ ಗೊತ್ತಿರುವ ವಿಚಾರ. ಆಕೆ ಪ್ರಾಪ್ತವಯಸ್ಕಳಾದಾಗ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳಲು, ಅಂದರೆ ತನ್ನ ಮದುವೆ, ತನ್ನ ಪಾಲಿನ ಆಸ್ತಿ ವ್ಯವಹಾರ ಕುರಿತು ತನಗೆ ಸರಿಯೆನಿಸಿದ್ದನ್ನು ಮಾಡಲು ಹಕ್ಕುದಾರಳಾಗುತ್ತಾಳೆ.

ಮದುವೆಯ ನಂತರದ ಬದುಕಿನಲ್ಲೂ ಗರ್ಭಧಾರಣೆ, ಪ್ರಸೂತಿ, ತಾಯ್ತನಗಳಂಥ ವಿಷಯದಲ್ಲೂ ಕಾನೂನು ಮಹತ್ತರ ಪಾತ್ರ ವನ್ನಾಡುತ್ತದೆ. ಹಾಗಾದರೆ ಈ ವಿಷಯಗಳಲ್ಲಿ ಕಾನೂನಿನ ವ್ಯಾಪ್ತಿ ಏನು?

ಒಂದು ಉದಾಹರಣೆಯನ್ನು ನೋಡಿ:

ಆಕೆ ಅತಿ ಶ್ರೀಮಂತ, ಶಿಷ್ಟಾಚಾರದ ಕುಟುಂಬದಿಂದ ಬಂದವಳು. ಆತ ಸಾಮಾನ್ಯ ಆದರೆ ಸುಶಿಕ್ಷಿತ ಕುಟುಂಬದವನು. ಪ್ರೀತಿಸಿ ಮದುವೆಯಾದರು. ಆತನಿಗೋ ಮಕ್ಕಳೆಂದರೆ ಅತಿ ಪ್ರೀತಿ. ಆಕೆಗೋ ಮಕ್ಕಳಾದರೆ ತನ್ನ ಸೌಂದರ್ಯ ಕೆಡುತ್ತದೆಂಬ ಭಯ. ಮೊದಲ ಬಾರಿಗೆ ಗರ್ಭಧರಿಸಿದಾಗ ಆಕೆ ನಯವಾಗಿ ಮಾತಾಡಿ, ''ಇಷ್ಟು ಬೇಗ ಮಕ್ಕಳಾಗುವುದು ಬೇಡ. ಗರ್ಭಪಾತ ಮಾಡಿಸಿಕೊಳ್ಳಲಾ?'' ಎಂದು ಕೇಳಿ ಪತಿ ಒಪ್ಪಿಗೆ ಪಡೆಯುತ್ತಾಳೆ. ಎರಡನೆಯ ಬಾರಿ ತಾನೇ ಈ ವಿಷಯದಲ್ಲಿ ನಿರ್ಧಾರ ತೆಗೆದುಕೊಳ್ಳುತ್ತಾಳೆ. ನಂತರದ ದಿನಗಳಲ್ಲಿ ಗರ್ಭನಿರೋಧಕ ಮಾತ್ರೆಗಳನ್ನು ಬಳಸತೊಡಗುತ್ತಾಳೆ. ಯಾಕೆಂದರೆ ಪದೇ ಪದೇ ಗರ್ಭಪಾತ ಮಾಡಿಸಿಕೊಳ್ಳುವುದು ತನ್ನ ಆರೋಗ್ಯಕ್ಕೆ ಮಾರಕ ಎಂಬುದು ಆಕೆಗೆ ಗೊತ್ತಾಗಿ ಬಿಡುತ್ತದೆ. ಪತಿ - ಪತ್ನಿಯರಲ್ಲಿ ಈ ವಿಷಯವಾಗಿ ಭಿನ್ನಾಭಿಪ್ರಾಯ ತಲೆದೋರುತ್ತದೆ. ಪರಿಣಾಮ? ಒಬ್ಬರಿಂದೊಬ್ಬರು ಬೇರ್ಪಡಲು - ವಿವಾಹ ವಿಚ್ಛೇದನಕ್ಕೆ ಅನುಮತಿ ಕೋರಿ ಕೋರ್ಟಿನ ಕಟ್ಟೆ ಹತ್ತಬಹುದು.

ಇಲ್ಲಿ ಒಂದು ಸೂಕ್ಷ್ಮವನ್ನು ನಾವು ಗಮನಿಸಬೇಕು. ಗರ್ಭಧರಿಸಿದ ಮೇಲೆ ಅದನ್ನು ಹೊತ್ತು ಹೆರುವವರೆಗಿನ ಜವಾಬ್ದಾರಿ ಹೆಣ್ಣಿನ ದಷ್ಟೆ. ಗರ್ಭಪಾತದ ಕಾನೂನಿನ ವಿಷಯದಲ್ಲಿ ಹೆಣ್ಣಿಗೆ ಇಲ್ಲಿ ಪ್ರಾಮುಖ್ಯ ಬರುತ್ತದೆ. ನಮ್ಮ ದೇಶದಲ್ಲಿ 1972ರಲ್ಲಿ ಜಾರಿಗೆ ಬಂದ ಗರ್ಭಪಾತ ಕಾನೂನಿನ ಕೆಲವು ನಿಯಮಾವಳಿಗಳನ್ನು ನೋಡೋಣ:

ಗರ್ಭಪಾತ ಸಿಂಧುವಾಗಲು ಕಾರಣಗಳು:

1) ಗರ್ಭದಿಂದ ಆಕೆಯ ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಧಕ್ಕೆ ಬರುತ್ತಿದ್ದರೆ...

2) ಹುಟ್ಟಲಿರುವ ಮಗು ವಿಕೃತವಾಗಿರಬಹುದೆಂಬ ಸಂಶಯವಿದ್ದರೆ...

3) ಕುಟುಂಬ ಕಲ್ಯಾಣದಿಂದ ದೃಢೀಕರಿಸಿದ ಸಂತಾನ ನಿರೋಧಕ ಕ್ರಮಗಳನ್ನು ಅನುಸರಿಸಿಯೂ ಗರ್ಭಧರಿಸಿದ್ದರೆ...

4) ಅತ್ಯಾಚಾರ, ಬಲಾತ್ಕಾರಗಳ ಫಲವಾಗಿ ಗರ್ಭಧಾರಣೆಯಾಗಿದ್ದರೆ...

- ಈ ಮೇಲಿನ ಕಾರಣಗಳಿಂದಾಗಿ ಗರ್ಭಪಾತ ಮಾಡಿಕೊಳ್ಳಲು ಕಾನೂನು ಅವಕಾಶ ಮಾಡಿಕೊಟ್ಟಿದೆ. ಯಾಕೆಂದರೆ, ಇದರಲ್ಲಿ ಮುಖ್ಯವಾಗಿ ಅತ್ಯಾಚಾರಕ್ಕೊಳಗಾದ ಮಹಿಳೆ ಗರ್ಭಧರಿಸಿದ ಸಂದರ್ಭಗಳಲ್ಲಿ ಸಮಾಜದ ಅವಕೃಪೆಗೆ ಈಡಾಗಿ, ಅವಮಾನಿತಳಾಗಿ ಜೀವ

ಕ್ಕಿರವಾಗುವ ಪ್ರಸಂಗಗಳನ್ನು ಇದರಿಂದ ತಪ್ಪಿ ಸಬಹುದು.

ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಅಪ್ರಾಪ್ತ ವಯಸ್ಕರ ವಿವಾಹ ಇನ್ನೂ ಜಾರಿಯಲ್ಲಿರುವ ಜನಾಂಗಗಳಲ್ಲಿ, ಹದಿನೆಂಟರೊಳಗಿನ ಹುಡುಗಿಯ ಗರ್ಭಪಾತಕ್ಕೆ ಆಕೆಯ ಗಂಡ ಇಲ್ಲವೆ ತಂದೆ ಅಥವಾ ಆಶ್ರಯದಾತನ ಸಹಿ ಅವಶ್ಯವೆ ವಿನಾ ಆಕೆಯದಲ್ಲ. ಆಕೆಗೆ ಮನಸ್ಸಿದ್ದರೂ ಆಕೆಯು ಮನಸ್ಸಿನಂತೆ ನಡೆಯುವುದಿಲ್ಲ. ಅದೇ ಸಂದರ್ಭದಲ್ಲಿ ಗರ್ಭಪಾತ ಆಕೆಗೆ ಬೇಡವಾಗಿದ್ದರೂ ಮನೆಯವರ ಒತ್ತಾಯಕ್ಕೆ ಆಕೆ ಮಣಿಯಲೇಬೇಕಾಗುತ್ತದೆ.

ಹದಿನೆಂಟು ದಾಟಿದ ಹೆಂಗಸು ಮಕ್ಕಳ ಲಾಲನೆ - ಪಾಲನೆ ತನ್ನ ಜವಾಬ್ದಾರಿ, ತನಗೆ ಬೇಕೆನಿಸಿದಾಗ ಮಾತ್ರ ಮಗುವಾಗಲಿ ಎಂಬ ಕಾರಣವೊಡ್ಡಿ ಗರ್ಭಪಾತ ಮಾಡಿಸಿಕೊಂಡು ಮುಂದೆ ದುರ್ದೈವವಶಾತ್ ಅವಳ ಡಿಂಭನಾಳಗಳು ನಂಜಿನಿಂದ ಮುಚ್ಚಿಕೊಂಡವೆಂದುಕೊಳ್ಳೋಣ. ಇದರಿಂದ ಆಕೆಗೆ ಮುಂದೆಂದೂ ಮಕ್ಕಳಾಗುವ ಸಂಭವವಿರುವುದಿಲ್ಲ. ಇಂಥ ಪ್ರಸಂಗಗಳಲ್ಲಿ ನಿರ್ದೋಷಿಯಾಗಿಯೂ ಗಂಡ ಪರಿತಪಿಸಬೇಕಾಗುತ್ತದೆ. ಅನ್ಯವಿಧಿಯಿಲ್ಲದೆ ವಿವಾಹವಿಚ್ಛೇದನಕ್ಕೋ, ಪತ್ನಿಯ ಒಪ್ಪಿಗೆಯೊಂದಿಗೆ ಎರಡನೆ ವಿವಾಹಕ್ಕೋ ಆತ ಸಿದ್ಧನಾಗಬೇಕಾಗುತ್ತದೆ.

ಸಂತಾನ ನಿರೋಧ ಶಸ್ತ್ರಚಿಕಿತ್ಸೆಗೂ ಕಾನೂನಿನ ಪರಿಮಿತಿಯಿದೆ. ಹೆಂಡತಿ ಸಂತಾನ ನಿರೋಧಕ ಶಸ್ತ್ರಕ್ರಿಯೆಗೊಳಗಾಗಲು ಗಂಡನ ಸಹಿ ಅಥವಾ ಒಪ್ಪಿಗೆ ಅವಶ್ಯ. ಆದರೆ ಗಂಡ [illegible] ನಿರ್ಧರಿಸಿದಾಗ ವಸೆಕ್ಟಮಿ ಮಾಡಿಸಿಕೊಳ್ಳಲು ಹೆಂಡತಿಯ ಒಪ್ಪಿಗೆಯೇನೂ ಬೇಕಾಗುವುದಿಲ್ಲ.

ಇತ್ತೀಚಿನ ದಿನಗಳಲ್ಲಿ ಕೆಲವೊಂದು ವಿವಾದಕ್ಕೊಳಗಾದ ಅಂತಾರಾಷ್ಟ್ರೀಯ ಪ್ರಕರಣಗಳಲ್ಲಿ ತಂದೆ ಅಥವಾ ತಾಯಿ ಯಾರೆಂಬ ನಿರ್ಧಾರಕ್ಕೆ ಬರುವುದಕ್ಕೆ ನ್ಯಾಯಾಲಯಗಳ ಮೊರೆ ಹೋಗಬೇಕಾದ ಸಂದರ್ಭಗಳುಂಟಾದವು. ಗಂಡನ ದೋಷವಿದ್ದ ಸಂದರ್ಭದಲ್ಲಿ ವೀರ್ಯಬ್ಯಾಂಕಿನಿಂದ ಬೇರೊಬ್ಬರ ವೀರ್ಯ ಪಡೆದು ಮಕ್ಕಳನ್ನು ಪಡೆದ ಸಂದರ್ಭಗಳಂತೆಯೇ, ಹೆಂಗಸು, ತನ್ನ ದೈಹಿಕ ಅಶಕ್ತಿಯ ಪರಿಣಾಮವಾಗಿ ಗರ್ಭಧಾರಣೆ ಅಸಾಧ್ಯವಾಗುವ ಸಂದರ್ಭಗಳಲ್ಲಿ ಬಾಡಿಗೆ ತಾಯ್ತನವನ್ನನುಭವಿಸುವ ಪ್ರಕರಣಗಳೂ ಇವೆ. ಇಲ್ಲಿ ನಿಜವಾದ ತಂದೆ ಅಥವಾ ತಾಯಿ ಮತ್ತು ಮಗುವಿನ ಸಂಬಂಧದ ಕುರಿತು ನ್ಯಾಯಾಲಯಗಳೇ ತೀರ್ಮಾನ ಕೊಟ್ಟಂಥ ಉದಾಹರಣೆಗಳುಂಟು.

ಪ್ರಸೂತಿ ವಿಜ್ಞಾನ ಎಷ್ಟು ಮುಂದುವರಿದಿದೆಯೆಂದರೆ ಎಂಥ ನಪುಂಸಕರೂ ಈಗ ಮಕ್ಕಳನ್ನು ಪಡೆಯಬಹುದು. ಆದರೆ ಇದು ಅವರಿಗೆ ಒಂದೆಡೆ ಸಂತಸದಾಯಕ, ಇನ್ನೊಂದೆಡೆ ಸಂತಾಪದಾಯಕ ಪ್ರಸಂಗ. ಅದೇ ವೇಳೆಗೆ ತಮ್ಮ ನಿಜವಾದ ತಂದೆ ಅಥವಾ ತಾಯಿ ಯಾರು ಎಂಬ ಮಾನಸಿಕ ತುಮುಲಕ್ಕೆ ಒಳಗಾಗುವ ಪೀಳಿಗೆಯ ಸೃಷ್ಟಿಯೂ ಆಗುತ್ತವಲ್ಲ?

ಕಾನೂನು ಇದಕ್ಕೂ ಪರಿಹಾರ ನೀಡದೇ [illegible]

ಕೇಂದ್ರ ಸರಕಾರದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರಿಗೆ ಸಂಬಂಧಿಸಿದಂತೆ ಒಂದು ಕಾನೂನಿದೆ. ಆ ಪ್ರಕಾರ ಮಹಿಳಾ ನೌಕರರು 90 ದಿನಗಳವರೆಗೆ ಹೆರಿಗೆಯ ರಜಾ ಸೌಲಭ್ಯವನ್ನು ಪಡೆಯಬಹುದು. ಇದರಲ್ಲೇನು ವಿಶೇಷ ಎನ್ನುತ್ತೀರಾ? ಹಾಗಾದರೆ ಮುಂದೆ ಓದಿ: "ಅವಿವಾಹಿತ ಅಥವಾ ವಿವಾಹಿತ ನೌಕರಳು ಹೆರಿಗೆಗೆ ಹೋದಾಗ......" ಅನ್ನುತ್ತದೆ ಕಾನೂನು.

ವಾಸುದೇವ್ ರಾ. ಕಲಘಟಗಿ



ರಾಷ್ಟ್ರವನ್ನೇ ಹಾಳು ಮಾಡಿದ ಒಂದು ಹೂ

"ಸವ್ಯಸಾಚಿ"

ಸತ್ಯ ಘಟನೆ

ಟ್ಯೂಲಿಪ್... ಸುಂದರವಾದ ಮನಮೋಹಕ ಹೂ.. ಹಲವಾರು ಬಣ್ಣ ಹಾಗೂ ಜಾತಿಗಳಲ್ಲಿ ಕಾಣಸಿಗುವ ಹೂ. ಹೊರನೋಟಕ್ಕೆ ಇದೊಂದು ಸಾಮಾನ್ಯ ಹೂವಾದರೂ ಇದರ ಪ್ರಭಾವ ವಿಶಿಷ್ಟವಾದುದು. ಈ ಸುಂದರ ಹೂವು ಒಮ್ಮೆ ರಾಷ್ಟ್ರದ ಅರ್ಥವ್ಯವಸ್ಥೆಯನ್ನೇ ಹದಗೆಡಿಸಿ ಬಿಟ್ಟಿತ್ತು ಎಂದರೆ ನಂಬುತ್ತೀರೋ ? ವಾಸ್ತವವಾಗಿ ಆಗ ಈ ಹೂವಿನ ಆಕರ್ಷಣೆಗೆ ಮನಸೋತು ಜನ ತಮ್ಮ ಬುದ್ಧಿ ಹಾಗು ವಿವೇಕವನ್ನು ಕಳೆದುಕೊಂಡರು; ತಮ್ಮ ಸರ್ವಸ್ವವನ್ನು ಇದಕ್ಕೆ ಸಮರ್ಪಿಸಲೂ ಮುಂದಾದರು. ಲಕ್ಷಾಂತರ ಜನ ರಾತ್ರಿ ಬೆಳಗಾಗುವುದರೊಳಗೆ ಲಕ್ಷಾಧೀಶರಾದರು. ಎಷ್ಟೋ ಲಕ್ಷಾಧೀಶರು ಭಿಕಾರಿಗಳಾದರು. ಇದರಿಂದಾಗಿ ರಾಷ್ಟ್ರದ ಅರ್ಥವ್ಯವಸ್ಥೆ ತತ್ತರಿಸಿ ಹೋಯಿತು.

ಟ್ಯೂಲಿಪ್ ಗುಲಾಬಿಗಿಂತಲೂ ಹೆಚ್ಚು ಜನಪ್ರಿಯ ಹಾಗೂ ಮನಮೋಹಕವಾದ ಹೂವು. ಇಂದಿಗೂ ಪ್ರತಿವರ್ಷ ವಸಂತಮಾಸದಲ್ಲಿ ಕೋಟ್ಯಂತರ ಟ್ಯೂಲಿಪ್‌ಗಳನ್ನು ಬೆಳೆಸಲಾಗುತ್ತದೆ. ಆದರೆ ಸುಮಾರು 400 ವರ್ಷಗಳ

ಹಿಂದೆ ಅದರ ಹೆಸರನ್ನೂ ಯುರೋಪಿಯನ್ನರು ಕೇಳಿರಲಿಲ್ಲ. ಏಕೆಂದರೆ ಆಗ ಅಲ್ಲಿ ಟ್ಯೂಲಿಪ್ ಇರಲೇ ಇಲ್ಲ.

ಸುಮಾರು 400 ವರ್ಷಗಳ ಹಿಂದೆ 'ಓಗಿಯೇರ್‌ದೇ ಬುಸ್ಬೇಕ್ಯೂ' ಎಂಬೊಬ್ಬ ಉತ್ಸಾಹಿ ವನಸ್ಪತಿ ಶಾಸ್ತ್ರಜ್ಞ ಕುಸ್ತುಂತುನಿಯಾದಿಂದ ಮೊದಲ ಬಾರಿ ಟ್ಯೂಲಿಪ್‌ನ್ನು ಯುರೋಪಿಗೆ ತಂದಿದ್ದ. ತುಂಬ ಆಕರ್ಷಕವಿದ್ದುದರಿಂದ ಜನಕ್ಕೆ ಅಚ್ಚುಮೆಚ್ಚಿನದಾಯಿತು. ಅಲ್ಪಾವಧಿಯಲ್ಲೇ ಈ ಹೂ ಶ್ರೀಮಂತಿಕೆಯ ಹಾಗೂ ವೈಭವದ ಪ್ರತೀಕ ಎನಿಸಿತು. ಹಾಲೆಂಡಿನ ಸಾಮಂತರೂ ಆಢ್ಯ ವರ್ಗದ ಜನರೂ ಹೆಚ್ಚು ಹೆಚ್ಚು ಬೆಲೆ ತೆತ್ತು ಟ್ಯೂಲಿಪ್ ಹೂಗಳನ್ನು ಕೊಳ್ಳತೊಡಗಿದರು.

ಹಾಲೆಂಡಿನ ವಿಖ್ಯಾತ ವನಸ್ಪತಿಶಾಸ್ತ್ರಜ್ಞನಾದ ಕರೋಲಮ್ ಕ್ಲೂಸಿಯಸ್ ಟ್ಯೂಲಿಪ್‌ದ ಹೊಸ ಹೊಸ ಜಾತಿಗಳನ್ನು ವಿಕಾಸಪಡಿಸಿದ್ದು ಆಗದೆ ಆತ ಓಗಿಯೇರದೇ ಬುಸ್ಬೇಕ್ಯೂನ ಟ್ಯೂಲಿಪ್‌ದ ಬೀಜಗಳಿಂದ ಹೊಸ ಹೊಸ ಜಾತಿಯ ಟ್ಯೂಲಿಪ್‌ಗಳನ್ನು ತಯಾರಿಸಿದ. ಆತ ಈ ಹೊಸ ಹೂಗಳಿಗೆ ಕೈಗೆಟುಕದಷ್ಟು ಬೆಲೆಯನ್ನು ಗೊತ್ತುಪಡಿಸಿದ್ದುದರಿಂದ ಯಾರೂ ಅವನ್ನು ಕೊಳ್ಳಲು ಮುಂದೆ ಬರಲಿಲ್ಲ. ಆದರೆ ಈ ಹೊಸ ಹೂಗಳು ತುಂಬಾ ಮನಮೋಹಕವಿದ್ದುದರಿಂದ ಒಂದು ರಾತ್ರಿ ಸಂದರ್ಭಸಾಧಿಸಿ ಕಳ್ಳರು ಎಲ್ಲ ಹೂಗಳನ್ನು ಕದ್ದೊಯ್ದರು.

ಕ್ರಿಸ್ತಶಕ 1600ರವರೆಗೆ ಹಾಲೆಂಡಿನಲ್ಲಿ ಟ್ಯೂಲಿಪ್ ತನ್ನದೆಂದು ನಿಶ್ಚಿತ ಸ್ಥಾನ ಗಳಿಸಿಕೊಂಡಿತ್ತು. ಅದು ಉಚ್ಚವರ್ಗದ ಜನರ ಫ್ಯಾಶನ್ ಎನಿಸಿಬಿಟ್ಟಿತ್ತು. ಮನೆಯಲ್ಲಿ ಟ್ಯೂಲಿಪ್ ಇದೆಯೆಂದರೆ ಆ ಮನೆ ಧನಾಢ್ಯವೂ ಅದರ ನಿವಾಸಿಗಳು ಸೌಂದರ್ಯ ಪ್ರಿಯರೂ ಆಗಿದ್ದಾರೆ ಎಂಬುದು ಆಗ ಸಾರ್ವತ್ರಿಕ ಭಾವನೆಯಾಗಿತ್ತು. ಆ ಹೂವಿನ ಬೆಲೆ ದಿನದಿನಕ್ಕೆ ಏರುತ್ತ ಹೋಯಿತು. ದುರ್ಲಭ ಜಾತಿಯ ಟ್ಯೂಲಿಪ್‌ಗಳ ಬೆಲೆ ಇನ್ನಷ್ಟು ಹೆಚ್ಚಿತು. ತಮ್ಮ ಶ್ರೀಮಂತಿಕೆಯ ಪ್ರದರ್ಶನಕ್ಕಾಗಿ ಜನ ಹೆಚ್ಚು ಹೆಚ್ಚು ಬೆಲೆ ತೆತ್ತು ಟ್ಯೂಲಿಪ್‌ಗಳನ್ನು ಕೊಂಡುಕೊಳ್ಳುತ್ತಿದ್ದರು. ಎಂತಲೇ ಅವುಗಳ ಬೆಲೆ ಅಸಾಧಾರಣವಾಗಿ ಹೆಚ್ಚಿತು.

1634ರಲ್ಲಿ ಹಾಲೆಂಡ್ ನಿವಾಸಿಗಳು ಟ್ಯೂಲಿಪ್ ಹೂಗಳ ಮೇಲೆ ಸಟ್ಟಾ ಆಡತೊಡಗಿದರು. ಸಾವಿರಾರು ಜನ ತಮ್ಮ ಉದ್ದಿಮೆಗಳನ್ನು ಮರೆತರು; ಆಸ್ತಿಪಾಸ್ತಿಗಳನ್ನು ಅಡವಿಟ್ಟು ಸಿಕ್ಕಷ್ಟು ಹಣ ಸಂಗ್ರಹಿಸಿ ಸಟ್ಟಾ ಆಡಲು ಮುಂದಾದರು. ಎಷ್ಟೋ ತಿಂಗಳ ಬಳಿಕ ಬರುವಂತಹ ಟ್ಯೂಲಿಪ್ ಬೆಳೆಯ ಮೇಲೆ ಸಟ್ಟಾ ಆಡಲಾರಂಭಿಸಿದರು.

ಟ್ಯೂಲಿಪ್‌ದ ಈ ಮೋಡಿ ಉಚ್ಚ ವರ್ಗೀಯರಿಗಷ್ಟೇ ಸೀಮಿತವಾಗಿರಲಿಲ್ಲ. ನೇಕಾರ, ಬಡಗಿ, ಕುಂಬಾರ, ಚರ್ಮಕಾರ ಹಾಗೂ ಕಾರ್ಮಿಕರು ತಮ್ಮ ಉದ್ಯೋಗ ಮರೆತು ಟ್ಯೂಲಿಪ್ ಹೂಗಳ ವ್ಯವಸಾಯ ಆರಂಭಿಸಿದರು. ಟ್ಯೂಲಿಪ್‌ದ ಬೆಲೆ ಒಂದೇ ಸವನೆ ಏರುತ್ತಿದ್ದುದರಿಂದ ಅವರು ಗಳಿಸಿದ್ದ ಎಲ್ಲ ಹಣವನ್ನು ಟ್ಯೂಲಿಪ್‌ದ ಮೇಲೆಯೇ ಹಾಕುತ್ತಿದ್ದರು. ಜನ ಬಹುಬೇಗನೆ ಲಕ್ಷಾಧೀಶರಾಗಲು ತಿಳಿಸಿದರು. ಆ್ಯಮಸ್ಟರ್ಡಮ್, ರೋಟರಡ್ಯಾಮ್‌ಗಳಂತಹ ದೊಡ್ಡನಗರಗಳ ಷೇರು ಪೇಟೆಯಲ್ಲಿ ಕುಸಿದು ಹೋಗುವಷ್ಟು ಟ್ಯೂಲಿಪ್ ಸಟ್ಟಾ ಪ್ರಭಾವಶಾಲಿಯಾಯಿತು.

ಟ್ಯೂಲಿಪ್‌ದ ಈ ವ್ಯಾಪಾರ ದೊಡ್ಡ ಊರುಗಳಿಗಷ್ಟೇ ಸೀಮಿತವಾಗಿರದೆ ಸಣ್ಣ ಸಣ್ಣ ಹಳ್ಳಿಗಳಿಗೂ ಹರಡಿತು. ಎಲ್ಲ ದಿನಗಳಲ್ಲೂ ವ್ಯಾಪಾರ ನಡೆಯುತ್ತಿತ್ತು. ಜನರ ಆಹಾರ, ನಿದ್ರೆ ಹಾಗೂ ವಿಶ್ರಾಂತಿ ತಪ್ಪಿ ಹೋಯಿತು. ಸಟ್ಟಾ ಆದುದರಿಂದ ಈ ಎಲ್ಲ ವ್ಯವಹಾರವೂ ಕಾಗದಗಳಲ್ಲಷ್ಟೇ ನಡೆಯು



ತ್ತಿತ್ತು.

ಇತ್ತ ಟ್ಯೂಲಿಪ್‌ದ ಜನಪ್ರಿಯ ಹಾಗೂ ದುರ್ಲಭ ಜಾತಿಗಳ ಒಂದೊಂದು ಹೂವಿನ ಬೆಲೆ ಕಲ್ಪನಾತೀತವಾಗಿ ಹೆಚ್ಚಿತು. ವೈಸ ರಾಯ್ ಎಂಬ ಒಂದು ಟ್ಯೂಲಿಪ್ ಹೂವು 2500 ಫ್ಲೋರಿನ್ (ಹಾಲೆಂಡ್ ನಾಣ್ಯ)ಗಳಿಗೆ ಮಾರಾಟವಾಯಿತು. ಗೋಂಡಾ ಜಾತಿಯ ಹೂ 2000ಕ್ಕೆ ಮಾರಾಟವಾದರೆ 'ಎಡ್ಮಿರಲ್ ಲೀಫ್ ಕೇಸ್'ದ ಒಂದು ಹೂ ಸಾರ್ವಜನಿಕ ಹರಾಜಿನಲ್ಲಿ 4400 ಫ್ಲೋರಿನ್‌ಗಳಿಗೆ ಮಾರಿ ಹೋಯಿತು. 1636ರಲ್ಲಿ ಅತಿ ಶ್ರೇಷ್ಠ ಜಾತಿಯ 'ಸೇಂಪರ್ ಅಗಸ್ಟಸ್' ಹೂವೊಂದಕ್ಕೆ 5500 ಫ್ಲೋರಿನ್ ದೊರೆಯಿತು.

ಈ ಆಕಸ್ಮಿಕ ಲಾಭದಿಂದ ಹುಚ್ಚೆದ್ದ ಜನ ಹೆಚ್ಚು ಹೆಚ್ಚಾಗಿ ಈ ವ್ಯಾಪಾರದಲ್ಲಿ ಮಗ್ನರಾದರು. ಆದರೆ 1636ರಲ್ಲಿ ಪರಿಸ್ಥಿತಿ ಒಮ್ಮೇಲೆ ಬದಲಾಯಿತು. ವ್ಯಾಪಾರಿಗಳು ಯಾವುದೋ ಸಂಚು ಹೂಡಿದುದರಿಂದ 1629ರಲ್ಲಿ ಒಮ್ಮೆಲೇ ಗಗನಕ್ಕೇರಿದ್ದ ಟ್ಯೂಲಿಪ್ ಬೆಲೆ ಅದೇ ವೇಗದಲ್ಲಿ ಇಳಿಯತೊಡಗಿತು. ಪರಿಸ್ಥಿತಿ ಅದೆಷ್ಟು ಹದಗೆಟ್ಟಿತೆಂದರೆ ಟ್ಯೂಲಿಪ್ ಬೆಳೆಸಿದ ಜನ ತಮ್ಮ ಹೂಗಳನ್ನು ಮಾರಲು ಮುಂದಾಗಿದ್ದರೂ ಕೊಳ್ಳುವವರೇ ಇಲ್ಲವಾದರು. 5500 ಫ್ಲೋರಿನ್‌ಗೆ ಮಾರಾಟವಾಗಿದ್ದ 'ಸೇಂಪರ್ ಅಗಸ್ಟಸ್' ಹೂವನ್ನು 50 ಫ್ಲೋರಿನ್‌ಗೂ ಕೊಳ್ಳುವವರಿಲ್ಲ!

ಕಾಗದದ ಮೇಲೆ ನಡೆಸಲಾದ ವ್ಯಾಪಾರವನ್ನಾಧರಿಸಿ ರಾತ್ರಿ ಬೆಳಗಾಗುವುದರೊಳಗೆ ಲಕ್ಷಾಧೀಶರಾಗಿದ್ದ ಜನ ಮತ್ತೆ ಭಿಕ್ಷಾಧೀಶರಾದರು. ಈಗ ಅವರ ಕೈಯಲ್ಲಿ ಕೆಲವೇ ಹೂಗಳಿದ್ದು ಅವನ್ನಾರೂ ಕೊಳ್ಳುವವರಿಲ್ಲ. ವ್ಯಾಪಾರದ ಒಪ್ಪಂದದ ಪ್ರಕಾರ ಹಣ ಕೊಡಬೇಕಾದವರು ಹಣ ಕೊಡಲಿಲ್ಲ. ಏಕೆಂದರೆ ಅವರಿಗೂ ಇತರರಿಂದ ಬರಬೇಕಿದ್ದ ಹಣ

ಬಂದಿರಲಿಲ್ಲ.

ಜನ ನ್ಯಾಯಾಲಯಕ್ಕೆ ಹೋದರು. ಆದರೆ ಅಲ್ಲಿಯೂ ಇವರಿಗೆ ಹಣ ಸಿಗಲಿಲ್ಲ. ಒಪ್ಪಂದದ ಕರಾರಿನ ಮೇರೆಗೆ ಹಣದ ಬದಲು ಟ್ಯೂಲಿಪ್ ಹೂಗಳನ್ನು ಕೊಡಬೇಕಾಗಿತ್ತು. ಆದರೆ ಈಗ ಆ ಹೂಗಳಿಗೆ ಬೆಲೆಯಿರದಿದ್ದುದರಿಂದ ಅವುಗಳನ್ನು ಕೊಳ್ಳುವವರಾದರೂ ಯಾರು? ಒಪ್ಪಂದ ಉಲ್ಲಂಘಿಸಿದ ಅಪರಾಧಕ್ಕಾಗಿಯೂ ದಂಡ ವಿಧಿಸುವಂತಿರಲಿಲ್ಲ. ಏಕೆಂದರೆ ಒಪ್ಪಂದದ ಕಾಗದ ಪತ್ರಗಳೆಲ್ಲವೂ ಸಟ್ಟಾ ವ್ಯಾಪಾರಕ್ಕೆ ಸಂಬಂಧಿಸಿದ್ದು ಅವೆಲ್ಲವೂ ಕಾನೂನಿಗೆ ವಿರುದ್ಧವಾಗಿದ್ದವು.

ಪರಿಣಾಮವಾಗಿ, ಒಮ್ಮೆಲೇ ಶ್ರೀಮಂತರೆನಿಸಿದ್ದ ಹಲವಾರು ಮಂದಿ ಅಷ್ಟೇ ರಭಸವಾಗಿ ಭಿಕಾರಿಗಳಾದರು. ಟ್ಯೂಲಿಪ್ ಬೇಸಾಯವೊಂದನ್ನೇ ನಡೆಸುತ್ತಿದ್ದವರ ಬಳಿ ಟ್ಯೂಲಿಪ್ ಹೂಗಳಷ್ಟೇ ಉಳಿದವು. ಸಟ್ಟಾದಲ್ಲಿ ತಮ್ಮ ಎಲ್ಲ ಹಣ ತೊಡಗಿಸಿದ ಕಾರ್ಮಿಕರೂ ಇತರ ಉದ್ಯೋಗಿಗಳೂ ಮೊದಲಿಗಿಂತ ಕೆಟ್ಟ ಸ್ಥಿತಿಗೆ ತಲುಪಿದರು. ಈಗ ಟ್ಯೂಲಿಪ್‌ದ ಹುಚ್ಚು ಅವರ ತಲೆಯಿಂದ ಪೂರ್ತಿ ಇಳಿದುಹೋಯಿತು.

ಹುಚ್ಚೇನೋ ಇಳಿಯಿತು. ಆದರೆ ಟ್ಯೂಲಿಪ್‌ದ ಆಕರ್ಷಣೆ ಇಂದಿಗೂ ಉಳಿದಿದೆ. ಈಗಲೂ ಹಾಲೆಂಡಿನಲ್ಲಿ ಟ್ಯೂಲಿಪ್ ಹೂಗಳನ್ನು ವಿಪುಲವಾಗಿ ಬೆಳೆಸಲಾಗುತ್ತಿದೆ. ಅಲ್ಲಿನ ಜನ ಅವುಗಳ ವ್ಯಾಪಾರ ಮಾಡಿ ಸಾಕಷ್ಟು ವಿದೇಶಿ ವಿನಿಮಯ ಗಳಿಸುತ್ತಿದ್ದಾರೆ. ●

ಪ್ರೊಫೆಸರ್‌ಗಿರಿ

ಆಗಿನ್ನೂ ನಾನು ಉಪನ್ಯಾಸಕನಾಗಿ ಕೆಲಸಕ್ಕೆ ಸೇರಿದ ಹೊಸದು. ನನ್ನ ಧ್ವನಿ ಸಣ್ಣದು. ಇನ್ನೊಬ್ಬ ಹಿರಿಯ ಸಹೋದ್ಯೋಗಿಗಳ ಧ್ವನಿ ತುಂಬಾ ದೊಡ್ಡದು. ಅವರು ಕ್ಲಾಸ್ ರೂಂನಲ್ಲಿ ಪಾಠ ಮಾಡಲು ತೊಡಗಿದರೆ ನಾಲ್ಕೈದು ಕೋಣೆಗಳ ಆಚೆಗೂ ಅವರ ವಾಕ್ ಪ್ರವಾಹ ಹರಿದು ಬರುತ್ತಿತ್ತು. ಆಚೆ ಈಚೆಯ ರೂಮಿನಲ್ಲಿ ಇದ್ದ ಉಪನ್ಯಾಸಕರು ಅವರಿಗೆ ಮನಸ್ಸಿನಲ್ಲೇ ಶಪಿಸುತ್ತಿದ್ದರು.

ದೊಡ್ಡ ಗಂಟಲಿನ ಆ ಸಹೋದ್ಯೋಗಿಗಳು ತಮ್ಮ ಹಿರಿತನದ ಗಾಂಭೀರ್ಯದಿಂದ ನನ್ನೊಂದಿಗೆ, "ಏನಪ್ಪಾ, ನೀನು ಅಷ್ಟು ಸಣ್ಣ ಧ್ವನಿಯಲ್ಲಿ ಪಾಠ ಮಾಡಿದರೆ ಲಾಸ್ಟ್ ಬೆಂಚಿನಲ್ಲಿ ಕುಳಿತ ಹುಡುಗರಿಗೆ ಕೇಳ್ತದ್ಯಾ?" ಅಂದರು.

ನಾನು ಏನೂ ಹೇಳಲಿಲ್ಲ. ಅದರಿಂದ ಉತ್ತೇಜಿತರಾದ ಅವರು, "ನಾನು ನೋಡು ಹೇಗೆ ಕೂಗ್ತೇನೆ. ನಮ್ಮ ಬಾಯಿಂದ ಹೊರಡುವ ಶಬ್ದ ಅಂದರೆ ಪಿಸ್ತೂಲಿನಿಂದ ಗುಂಡು ಹೊಡೆದ ಹಾಗೆ ಇರಬೇಕು. ಇಲ್ಲವಿದ್ದರೆ ಹುಡುಗರ ತಲೆಗೆ ಹೋಗುವುದಿಲ್ಲ," ಎಂದರು.

"ಹೌದು ಸಾರ್, ನೀವು ಅವರ ತಲೆಗೆ ಶಬ್ದಗಳನ್ನು ವರ್ಗಾಯಿಸುತ್ತೀರಿ. ನಾನು ಅವರ ತಲೆಗೆ ವಿಚಾರಗಳನ್ನು ವರ್ಗಾಯಿಸುತ್ತೇನೆ. ಅದಕ್ಕೇ ನನ್ನ ಧ್ವನಿ ಸ್ವಲ್ಪ ಸಣ್ಣಗೆ," ಅಂದೆ.

ಮಾರನೆ ದಿನದಿಂದ ಅವರ ಗಂಟಲಿನ ಧ್ವನಿಯೂ ಸಣ್ಣದಾಯಿತು.

- ವಾಸುದೇವ ಶೆಟ್ಟಿ, ಜಲವಳ್ಳಿ

ಅರಕಲಗೂಡು ನೀಲಕಂಠಮೂರ್ತಿ

ಶೇಕ್ ಅಬ್ಬಾ ನೋಡಿದೆ!

1981ರ ಹೊತ್ತಿಗೆ ನಾನು ಸೋಮಾಲಿಯದಲ್ಲಿದ್ದು ಐದು ವರ್ಷವೇ ಆಗಿತ್ತು. 1976ರ ಅಕ್ಟೋಬರಿನಿಂದ 1977ರ ಅಕ್ಟೋಬರ್‌ವರೆಗೆ ಹಾರ್ಗೀಸಾ (ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಶರ ಆಳ್ವಿಕೆಯಲ್ಲಿದ್ದ ಉತ್ತರ ಸೋಮಾಲಿ ಲ್ಯಾಂಡಿನ ರಾಜಧಾನಿ)ದಲ್ಲಿ ಕೆಲಸ ಮಾಡಿ, 77ರಲ್ಲಿ ಸೋಮಾಲಿಯ-ಇಥಿಯೋಪಿಯ ದೇಶಗಳ ನಡುವೆ ಯುದ್ಧ ಆರಂಭವಾದಾಗ, ಸ್ವಾತಂತ್ರ್ಯಾನಂತರ ಒಂದಾದ ಸೋಮಾಲಿಯಾ (ಉತ್ತರ, ದಕ್ಷಿಣ) ರಾಜಧಾನಿಯಾಗಿರುವ ಮೊಗದಿಷು ನಗರಕ್ಕೆ ವರ್ಗ ಮಾಡಿಸಿಕೊಂಡು ಬಂದೆ. ಹಾರ್ಗೀಸಾದಲ್ಲಿದ್ದಾಗಲೂ ಜನರು ಭಯ-ಭಕ್ತಿಯಿಂದ ಉಚ್ಚರಿಸುತ್ತಿದ್ದ ಶೇಕ್ ಅಬ್ಬಾ ಎಂಬ ಎರಡು ಪದಗಳು ನನ್ನ ಕಿವಿಗೆ ಆಗೊಮ್ಮೆ-ಈಗೊಮ್ಮೆ ಬಿದ್ದಿದ್ದವು. ಮೊಗದಿಷುವಿಗೆ ಬಂದ ನಂತರವಂತೂ ನನ್ನ ಆಸ್ಪತ್ರೆಯ ಕೆಲಸದ ಮಧ್ಯೆ ದಿನಂಪ್ರತಿ ಈ ಎರಡು ಪದಗಳ ಹೆಸರು ಅನೇಕಾನೇಕ ಬಾರಿ ಬಂದು ಕಿವಿತಟ್ಟುತ್ತಿದ್ದವು. ನನ್ನ ಸಹಾಯಕ್ಕೆಂದಿದ್ದ ಸೋಮಾಲಿಗಳು ಕೂಡ ಆ ವ್ಯಕ್ತಿಯ ಬಗ್ಗೆ ಕೊರೆಯುತ್ತಿದ್ದರಲ್ಲದೆ ಕೆಲವೊಮ್ಮೆ ಶೇಕ್ ಅಬ್ಬಾ ಹತ್ತಿರ ಒಮ್ಮೆ ಹೋಗಿ ನೋಡಿ ಎಂದು ನನ್ನೆದುರಿಗೇ ರೋಗಿಗಳಿಗೆ ತಮ್ಮ 'ಅಮೂಲ್ಯ' ಸಲಹೆಯನ್ನು ಕೊಡುತ್ತಿದ್ದರು! ಆದರೂ ನನಗೆ ಆ ಶೇಕ್ ಅಬ್ಬಾ ಎಂಬ ವ್ಯಕ್ತಿಯ ಬಗ್ಗೆ ಕುತೂಹಲ ಕೆರಳಿರಲಿಲ್ಲ. ಅಲ್ಲದೆ, ನನಗೆ ಮೊದಲಿನಿಂದಲೂ ಸಂತರು, ಸದ್ಗುರುಗಳು ಎಂದರೆ ಅಷ್ಟಕ್ಕಷ್ಟೆ.

1981ರಲ್ಲಿ, ವಯಸ್ಸಿನಲ್ಲಿ ನನಗಿಂತ ಸುಮಾರು ಇಪ್ಪತ್ತು ವರ್ಷ ಹಿರಿಯರಾಗಿದ್ದ ಹಾಗೂ ಅಷ್ಟರಲ್ಲಿ ತಮ್ಮ ಮೂವತ್ತು ವರ್ಷಗಳ ದೀರ್ಘ ಸೇವೆಯನ್ನು ಸೋಮಾಲಿಯಾ ದೇಶಕ್ಕೆ ಸಲ್ಲಿಸಿದ್ದ ಶ್ರೀಮಾನ್ ಚೇನಂದ ಮುದ್ದಪ್ಪನವರು, ತಮ್ಮ ಐವತ್ತೊಂದನೇ ವಯಸ್ಸಿನಲ್ಲಿ ಹೃದಯಾಘಾತದಿಂದ ಅಸು ನೀಗಿದ್ದರಿಂದ, ಎರಡು ಗಂಡುಮಕ್ಕಳ ತಾಯಿಯಾದ ಶ್ರೀಮತಿ ನಿರ್ಮಲ ಮುದ್ದಪ್ಪನವರು (ಈಗಲೂ ನಮ್ಮೆಲ್ಲರ ನಲ್ಮೆಯ 'ಆಂಟಿ'), ನಾನು, ಮತ್ತು ನನ್ನ ಹೆಂಡತಿ ಕಮಲ ಒಪ್ಪುವುದಾದರೆ ಅಲ್ಲೇ ಕೆಲಸ ಹುಡುಕುವುದಾಗಿಯೂ, ಸಿಕ್ಕಿದರೆ ನಮ್ಮ ಜೊತೆಯೇ ಇರುವು

ದಾಗಿಯೂ ತಮ್ಮ ಆಸೆಯನ್ನು ವ್ಯಕ್ತಪಡಿಸಿ ದಾಗ ನಮಗಾದ ಆನಂದ ಅಷ್ಟಿಷ್ಟಲ್ಲ! ಪುಟ್ಟ ಅನಿರುದ್ಧ, ಆರಾಧನರಿಗೆ (ನನ್ನ ಮಕ್ಕಳು) ಅವರು ಅಷ್ಟು ಹೊತ್ತಿಗಾಗಲೇ ಸರ್ವಸ್ವವಾಗಿ ಬಿಟ್ಟಿದ್ದರು. ಅಂತೂ ನಿರ್ಮಲ ಆಂಟಿಯವ ರಿಗೆ ಸೋಮಾಲಿ ಗೆಳೆಯರ ಸಹಾಯ ದಿಂದ ಅಲ್ಲಿನ ರಾಷ್ಟ್ರೀಯ ವಿಶ್ವವಿದ್ಯಾಲಯ ದಲ್ಲಿ ಆಂಗ್ಲ ಭಾಷಾ ಅಧ್ಯಾಪಕಿ ಯಾಗಿ ಕೆಲಸವೂ ದೊರಕಿ, ನಮ್ಮ ಅವರ ಸಹಜೀವನ ಆರಂಭವಾಗಿತ್ತು.

ನಿರ್ಮಲ ಆಂಟಿಯವರಿಗೆ ಸೋಮಾಲಿ ಜನಗಳೊಡನೆ (ಅದರಲ್ಲೂ ಹೆಂಗಸರ) ನಮಗಿಂತ ಹೆಚ್ಚು ನಿಕಟವಾದ ಸಂಬಂಧ ವಿತ್ತು. ಇದಕ್ಕೆ ಹೆಚ್ಚಿನ ವರ್ಷಗಳ ಅನುಭವದ ಜೊತೆಗೆ, ಬೇರೆಯವರಲ್ಲಿ, ಎಲ್ಲರೊಡನೆ ಬೆರೆಯುವ ಗುಣವೂ ಇತ್ತು. ಈ ಗುಣದಿಂ ದಲೇ ನಾವೂ ಅವರಿಗೆ ಎಲ್ಲರಿಗಿಂತ ಮಿಗಿ ಲಾಗಿ ಅಂಟಿಕೊಂಡಿದ್ದು ಎಂದರೆ ಉತ್ಪ್ರೇಕ್ಷೆ ಯಲ್ಲ. ಮೇಲಾಗಿ, ಅವರಿಗೆ ಸೋಮಾಲಿ ಭಾಷೆಯ ಮೇಲೆ ನಿರರ್ಗಳವಾದ ಹಿಡಿತ



ವಿದ್ದುದೂ ಅನುಕೂಲವಾಗಿತ್ತು. ಒಮ್ಮೆ ಆಂಟಿಯುವರೊಡನೆ ಭಾರತೀಯ ಮೂಲದ ಅಕ್ಕಸಾಲಿಗ ಹುಸೇನ್‌ನ ಮನೆಗೆ ಹೋಗಿದ್ದೆವು; ಆಗ ಹುಸೇನನ ತಂದೆ ಭಾರತದಿಂದ ವ್ಯಾಪಾರಕ್ಕೆಂದು ಹೋಗಿದ್ದ ಹಿಂದು. ಆತ ಅಲ್ಲಿಯೇ 'ಶೇಕಾಲ್' ಎಂಬ ಒಂದು ಪಂಗಡದ ಹೆಣ್ಣನ್ನು ಮದುವೆಯಾಗಿ ಇಸ್ಲಾಂ ಧರ್ಮ ಆಲಿಂಗಿಸಿಕೊಂಡಿದ್ದ. ಈಗ ಆತನಿಲ್ಲದಿದ್ದರೂ, ಸಾಕಾದಷ್ಟು ಮಕ್ಕಳನ್ನು ಹೆತ್ತು ಭಾರೀ ದೊಡ್ಡ ಸಂಸಾರವನ್ನೇ ಬೇರಿಳಿಸಿ ಹೋಗಿದ್ದಾನೆ.

ಹುಸೇನನಿಗೆ - ಆತನ ಇತರ ಸಹೋದರರಂತೆ ಡಜನ್ನುಗಟ್ಟಲೆ ಅಲ್ಲ - ಒಬ್ಬನೇ ಒಬ್ಬ ಮಗ ಆವಾಗ ಇದ್ದವನು. ಆದ್ದರಿಂದ, ಆತನ ಹೆಂಡತಿ ಬಹಳವಾದ ಮೂದಲಿಕೆಗಳಿಗೆ ಒಳಗಾಗಿ, ಅನೇಕ ವೇಳೆ ಸಹೋದರರ ಮಾತಿಗೆ ಎಂದೆಂದೂ ಮರುಳಾಗುತ್ತಿದ್ದ ಗಂಡನಿಂದಲೂ ತೀರ ತಾತ್ಸಾರ ನಡವಳಿಕೆಯಿಂದ ಜರ್ಜರಿತವಾಗಿದ್ದ ಹೆಣ್ಣು ಕುಸುಮ್. ಪುತ್ರ ಸಂಪತ್ತಿಗಾಗಿ, ಗಂಡನ ಎರಡನೇ ಮದುವೆಯ ತದೇಕ ಭಯದ ನಿವಾರಣೆಗಾಗಿ, ಆಕೆ ಕಾಣದ ಪಂಡಿತರುಗಳಿಗೆ, ವೈದ್ಯರುಗಳಿಗೆ, 'ಅಲ್ಲಾ'ನ 'ದುವಾ'ಕ್ಕಾಗಿ ಇಡುತ್ತಿದ್ದ ಮೊರೆಗಳಿಗೆ ಲೆಕ್ಕವಿರಲಿಲ್ಲ. ನಾವು ಹೋಗಿದ್ದ ಆ ದಿನ, ಕುಸುಮ್ ಆಗ ತಾನೆ ಶೇಕ್ ಅಬ್ಬಾನ ಮನೆಗೆ ಹೋಗಿ ಬಂದದ್ದು ಗೊತ್ತಾಯಿತು. ಆಕೆ ಶೇಕ್‌ನನ್ನು ಬಣ್ಣಿಸಿದ ರೀತಿಯಲ್ಲಿ ಆತನ ಬಗ್ಗೆ ಅವಳಿಗೆ ಮತ್ತು ಅವಳಂಥ ಇತರರಿಗೆ ಇದ್ದ ಭಕ್ತಿ, ಭಯ ವ್ಯಕ್ತವಾಗುತ್ತಿದ್ದವು 'ಅಲ್ಲಾ' ಬಿಟ್ಟರೆ ಅವನೇ ಎಂಬಂತೆ! ಇದರಿಂದ, ಮಕ್ಕಳಿಲ್ಲದವರಿಗೆ ಮಕ್ಕಳ ಕರುಣೆಯನ್ನೂ ದಯಪಾಲಿಸುವ ಆ ಶೇಕ್‌ನ ಬಗ್ಗೆ ಕುತೂಹಲ ತಾನೇ ತಾನಾಗಿ ಉಕ್ಕಿದ್ದರಿಂದ, ಆಂಟಿಯುವರಲ್ಲಿ ಆತನ ಬಗ್ಗೆ ಗೊತ್ತಿರಬಹುದಾದ ಮಾಹಿತಿಗಾಗಿ ವಿಚಾರಿಸಿದೆ.

ಮೊಗದಿಷುವಿನಲ್ಲಿ ಮುಖ್ಯವಾಗಿ ಎರಡು ಪ್ರಮುಖ ಶೇಖರ ತಾಣಗಳಿದ್ದುದು ತಿಳಿಯಿತು. ಪ್ರಥಮವಾಗಿ ಶೇಕ್ ಸೂಫಿ; ಈಗ ಅವರಿಲ್ಲ ಅವರ ಸಮಾಧಿಯಿದೆ. ಆ ಸಮಾಧಿ ಮುಸಲ್ಮಾನರ ಆರಾಧನಾ ತಾಣ. ಕೇವಲ ಮುಸಲ್ಮಾನರಷ್ಟೇ ಅಲ್ಲದೆ, ಮೊಗದಿಷು ನಗರದಲ್ಲಿ ತಲೆಮಾರುಗಳಿಂದ ನೆಲೆಸಿರುವ ಇತರ ಧರ್ಮದವರಿಗೂ ಆ ಸಮಾಧಿಯ ಬಗೆಗೆ ಬಹಳ ಭಕ್ತಿ. ಜೈನರು, ಹಿಂದುಗಳು ಕೂಡಿದಂತೆ ಗುಜರಾತಿ ವ್ಯಾಪಾರಿಗಳೂ ಇದನ್ನು ರೂಢಿಸಿಕೊಂಡಿದ್ದಾರೆ. ಯಾವುದೇ ಮುಖ್ಯ ಕೆಲಸವಾಗಬೇಕಾದರೆ, ಇಲ್ಲವೆ ಎಂಥ ಕಾಯಿಲೆಯಾದರೂ ಹುಷಾರಾಗಬೇಕಾದರೆ, ಎಲ್ಲದಕ್ಕೂ ಶೇಕ್ ಸೂಫಿ ಸಮಾಧಿಯ ಮುಂದೆ ನಿಂತು ಪ್ರಾರ್ಥಿಸುವುದು, ಕಾಣಿಕೆ ಅರ್ಪಿಸುವುದು ರೂಢಿ. ಅಷ್ಟೊಂದು ಜನರ ಭಕ್ತಿಗೆ ಪಾತ್ರನಾದ ಆ ಶೇಕ್ ಸೂಫಿಯನ್ನು ಬದುಕಿದ್ದಾಗ ಕಾಣಬೇಕಿತ್ತು ಎನ್ನುವ ವಾಂಛೆ ನನ್ನಲ್ಲಿ ಎಷ್ಟೋ ಬಾರಿ ಮೂಡಿದೆ ಕೂಡ.


ಶೇಕ್ ಸೂಫಿ ಸಮಾಧಿಯನ್ನುಳಿದು, ಜೀವಂತವಿರುವ ಶೇಕ್ ಅಬ್ಬಾನೇ ಬಹಳ ಮುಖ್ಯವಾದ ಹಾಗೂ ಭಕ್ತರ ದೇಗುಲದಂತಿರುವ ಮತ್ತೊಂದು ನೆಲೆ. ಅನೇಕರ ಪ್ರತಿಯೊಂದು ಕಾರ್ಯಕ್ಕೂ ಶೇಕ್ ಅಬ್ಬಾ ಹೆಚ್ಚು ಕಮ್ಮಿ ಅನಿವಾರ್ಯ. ಮದುವೆಗೆ, ನಿಶ್ಚಿತಾರ್ಥಕ್ಕೆ, ಸತ್ತದ್ದಕ್ಕೆ, ಯಾವುದೇ ಥರದ ಕಾಯಿಲೆ ಗುಣಪಡಿಸುವುದಕ್ಕೆ, ಮಕ್ಕಳಿಲ್ಲದವರಿಗೆ ಹೀಗೆ... ಶೇಕ್ ಅಬ್ಬಾ ಅಲ್ಲಾನ ನಾಮಗಳನ್ನು, ಮಂತ್ರಗಳನ್ನು ಜಪಿಸಿ ಏನೇ ಕೊಟ್ಟರೂ ಅದೇ ಮಹಾಪ್ರಸಾದ, ಅದೇ ಸಿದ್ಧೌಷಧ. ಆತನ ಉಗುಳೂ ಶ್ರೇಷ್ಠವಾದದ್ದು! ನಮ್ಮಲ್ಲಿ ಶನಿಚರಿತ್ರೆ, ಪುರಾಣ, ಭಾರತ, ರಾಮಾಯಣ ಪಠಣ ಮಾಡಿಸುವ ಹಾಗೆ, ಸೋಮಾಲಿ ಮನೆಗಳಲ್ಲಿ, ಒಳ್ಳೆ

ಕಾರ್ಯದ ಆರಂಭಕ್ಕೆ ಮುನ್ನ, ಕಷ್ಟ ಪರಿಹಾರಾರ್ಥವಾಗಿ ಹಾಗೂ ಅನಾರೋಗ್ಯಗಳ ಸಂದರ್ಭಗಳಲ್ಲಿ ಪವಿತ್ರ ಕುರಾನ್ ಪಠಣ ಮಾಡಿಸುವುದು ರೂಢಿ. ಈ ಕಾರ್ಯಕ್ಕಾಗಿ ಅನೇಕ ಶೇಕರಿದ್ದಾರೆ. ಆದರೆ ಶೇಕ್ ಅಬ್ಬಾನ ಬಾಯಿಯಿಂದ ಓದಿಸುವುದು ಮಹಾಪುಣ್ಯ. ಆದರೆ ಅದು ಎಲ್ಲರಿಗೂ ಎಟುಕದ ಸ್ಥಿತಿ- ಬಹುಶಃ ಎಟುಕದ ಸಿರಿವಂತಿಕೆ ಎಂದರೂ ಆದೀತು. ಮೇಲಾಗಿ ಶೇಕ್ ಅಬ್ಬಾ ಅಧ್ಯಕ್ಷ ಮಹಮ್ಮದ್ ಸೈಯ್ಯದ್ ಬರ್ರೆಯ ನಿಕಟವರ್ತಿ ಕೂಡ!

ಆಗಾಗ್ಗೆ ಶೇಕ್ ಅಬ್ಬಾ ಸೌದಿ ಅರೇಬಿಯಾಕ್ಕೆ ಹೋಗಿ ಬರುವುದುಂಟು. ಇಸ್ಲಾಂ ಧರ್ಮದ ಪ್ರಚಾರಕಾರ್ಯದಂತಹ ಪುಣ್ಯ ಕೆಲಸವನ್ನು ತನ್ನ ಹೆಗಲ ಮೇಲೆ ಹೊತ್ತ ಈತನನ್ನು ಸೌದಿ ಅರೇಬಿಯದ ಆಳುವ ರಾಜವಂಶವೇ ವಿಶೇಷವಾದ ಟಿಕೆಟ್ಟುಗಳಿಗೆ ಅವಕಾಶ ಕಲ್ಪಿಸಿಕೊಟ್ಟು ಪ್ರಯಾಣಕ್ಕೆ ಅನುಕೂಲ ಮಾಡಿಕೊಡುವುದೆಂಬ ಪ್ರತೀತಿಯೂ ಇದೆ.

ಕುಸುಮ್ ಅವರು ಶೇಕ್ ಅಬ್ಬಾನಿಂದ ಆಶೀರ್ವಾದವನ್ನೋ ವರವನ್ನೋ ಅಥವಾ ಔಷಧೋಪಚಾರವನ್ನೋ ಪಡೆದು ಬಂದದ್ದು ತಿಳಿದ ನಂತರ ಉಂಟಾದ ಕುತೂಹಲ ನನ್ನಲ್ಲಿ ಬೆಳೆಯುತ್ತಲೇ ಇತ್ತು. ಹೀಗಾಗಿ ನನ್ನ ಆಸ್ಪತ್ರೆಯ ರೋಗಿಗಳು, ಇನ್ನಿತರರು ಆ ದೈವಾಂಶಸಂಭೂತ ವ್ಯಕ್ತಿಯ ಬಗ್ಗೆ ಹೇಳುವುದನ್ನು ಗಮನವಿಟ್ಟು ಕೇಳತೊಡಗಿದೆ. ಹಾಗೆಯೇ ಆತನನ್ನು ನೋಡುವ ಹಂಬಲವೂ ನನ್ನ ಮನಸ್ಸಿನಲ್ಲಿ ಟಿಸಿಲೊಡೆಯತೊಡಗಿತ್ತು! ಒಬ್ಬ ವಯೋ ವೃದ್ಧ; ಸೋಮಾಲಿಗಳನೇಕರಿಗೆ ಸಾಮಾನ್ಯವಾದ ಆರಡಿ ಎತ್ತರ; ಬಹುಶಃ ಕಪ್ಪು ಬಣ್ಣ; ಬಿಳಿಯ ನಿಲುವಂಗಿ; ಬೋಳು ತಲೆಯ ಮೇಲೆ ಶೇಕ್‌ಗಳು ಕೂರಿಸಿಕೊಳ್ಳುವ ಇಸ್ಲಾಂ ಟೊಪ್ಪಿ; ಹುಲುಸಾಗಿ ಬೆಳೆದ ಗಡ್ಡ, ಮೀಸೆ ಬಹುಶಃ ಬೆಳ್ಳಿಯ ಹಾಗೆ ಹೊಳೆವ ಬಣ್ಣ ಅಥವಾ ಶೇಕ್‌ಗಳಿಗೆ ಸಾಮಾನ್ಯವಾದಂತೆ 'ಹೆನಾ' ಹಚ್ಚಿ ಕೆಂಚಾಗಿದ್ದುದು; ಹೊದೆಯಲೊಂದು ಶಾಲು ಹೀಗೆಲ್ಲ ಆತನ ನಿಲುವನ್ನು, ಆಕಾರವನ್ನು, ನಾನು ಕಂಡ ಶೇಕ್‌ರ ರೂಪಗಳಿಂದ, ಮನಸ್ಸಿನಲ್ಲೇ ಕಲ್ಪಿಸಿಕೊಂಡು ಚಿತ್ರಿಸಿಕೊಳ್ಳತೊಡಗಿದೆ.

ನಾವಿದ್ದ ಬಾಡಿಗೆ ಮನೆಯ ಒಡೆಯ ಮಿಸ್ಟರ್ ಆಲಿ. ನಾವಿದ್ದುದು ಮಹಡಿ ಮನೆ.




ಕೆಳಗೆ ಆಲಿಯ ತಂದೆ, ಮಲತಾಯಿಯ ವಾಸ. ಅಕ್ಕಪಕ್ಕ ಎಲ್ಲ ಆಲಿಯ ರಕ್ತಸಂಬಂಧಿಗಳೇ. ಈ ಶೇಕ್ ಅಬ್ಬಾ ವಿಚಾರ ನನ್ನ ಮನಸ್ಸಿನಿಂದ ಹೆಚ್ಚು ಕಮ್ಮಿ ಮರೆತಂತಾಗುವಷ್ಟು ವೇಳೆ ಸಂದುಹೋಗಿತ್ತು. ಅಂತಹ ಸಮಯಕ್ಕೆ ಸರಿಯಾಗಿ ನಮ್ಮ ಪಕ್ಕದ ಮನೆ ಹುಡುಗನ ಮದುವೆ ನಿಶ್ಚಯವಾಯಿತು. ಆ ಮದುವೆಯ 'ನಿಕಾ' ಮಾಡುವುದಕ್ಕಾಗಿ, ಸುತ್ತ ಹೆಚ್ಚಿನ ಸ್ಥಳಾವಕಾಶವಿಲ್ಲದುದರಿಂದ, ಮಿಸ್ಟರ್ ಆಲಿ ಬಂದು, ನಮ್ಮ ಮನೆಯ ಛಾವಣಿ ಮೇಲೆ ಆ ಶುಭ ಕಾರ್ಯ ಮಾಡುವುದಕ್ಕಾಗಿ ನಮ್ಮ ಅಭ್ಯಂತರವಿಲ್ಲದಿದ್ದರೆ ನಮ್ಮ ಒಪ್ಪಿಗೆ ಬೇಕೆಂದು ಕೇಳಿದ! ಅವರ ಮನೆ; ನಮ್ಮ ಒಪ್ಪಿಗೆ ಎಂಥ ನಾಗರಿಕತೆ! 'ನಿಕಾ' ದಿನ ನಮ್ಮ ಮನೆಯೇ ಮದುವೆ ಮನೆಯಾಗಿತ್ತು. ನಮಗೇ ಕೂರಲು, ನಿಲ್ಲಲು ಸ್ಥಳವಿಲ್ಲ. ರಾಶಿ ರಾಶಿ ಹಲ್ವ, ಬಿಸ್ಕತ್ತುಗಳು, ಕೋಕಾಕೋಲ, ಫ್ಯಾಂಟಾ ಸೀಸೆಗಳು, ಎಲ್ಲ ನಮ್ಮ ಹಜಾರದಲ್ಲೇ ಶೇಖರಣೆ. ಜೊತೆಗೆ ಎಲ್ಲೆಲ್ಲೂ ಧೂಪ. ಈ ಮಧ್ಯೆ, ಸಂಜೆ ಏಳರ ಹೊತ್ತಿಗೆ, ನಿರ್ಮಲ ಆಂಟಿಯವರು ಆತುರದಲ್ಲಿ ಬಂದು ನಿಕಾ ಮಾಡಿಸಲು ಬರುವವರು ಶೇಕ್ ಅಬ್ಬಾ ಎಂಬ ಸಿಹಿ ಸುದ್ದಿ ತಿಳಿಸಿದರು.

ಶೇಕ್ ಅಬ್ಬಾ ಬಂದಾಗ— ರಾಜ ಮರ್ಯಾದೆ. ಸುತ್ತಲೂ ಕೋಟೆಯಂತೆ ಜನ. ಆತನನ್ನು ಮುತ್ತಿಕೊಂಡು ಮುತ್ತಿಟ್ಟುಕೊಳ್ಳುವವರೂ, ಆತನ ಯಾವುದಾದರೂ ಒಂದೇ ಒಂದು ಭಾಗವಾದರೂ ತಮ್ಮ ಶರೀರ ಮುಟ್ಟಿದರೆ, ತಟ್ಟಿದರೆ ಕೃತಾರ್ಥರಾದೇವೆಂಬ ಆಶಾಭಾವುಕರೂ ನೂರಾರುಗಟ್ಟಲೆ ನೆರೆದಿದ್ದ ಆ ಸಂದಣಿಯಲ್ಲಿ, ಶೇಕ್ ಅಬ್ಬಾನನ್ನು ದೂರದಿಂದಾದರೂ ನೋಡಬಯಸಿದ್ದ ನನಗೆ ಸಂಪೂರ್ಣ ನಿರಾಸೆಯೇ ಕಾದಿತ್ತು. ಮಹಡಿಯ ಮೇಲೆ ಹೋಗಿಯೂ ಪ್ರಯತ್ನಿಸಿದೆ. ಸುತ್ತ ಗೋಡೆಯಾಗಿದ್ದ ಜನರ ಜೊತೆಗೆ ಶೇಕ್ ಕುಳಿತ ಶಾಮಿಯಾನದ ಒಳಗೆ ಸಂತೆ; ಅಲ್ಲಿದೆ ದೀಪದ ಬೆಳಕು, ಮೋಡವಾಗಿದ್ದ ಧೂಪ. ಅಂತೂ ಕೈಗೆ ಬಂದ ಸಂದರ್ಭ ಕಳಚಿ ಕೈಯಿಂದ ಬಿದ್ದು ಮಾಯವಾಗಿ ಹೋಗಿತ್ತು...!

ಮತ್ತೆ ಕೆಲವು ತಿಂಗಳುಗಳೇ ಉರುಳಿಹೋದವು. ಅಷ್ಟರಲ್ಲಿ ಮೊದಲ ಮಗನನ್ನು ಪೆತ್ತು ಹದಿನಾರು ದೀರ್ಘ ವರ್ಷಗಳ ನಂತರ ಗರ್ಭಿಣಿಯಾಗಿದ್ದ ಹುಸೇನನ ಹೆಂಡತಿ ಕುಸುಮ್ ಹಡೆಯಬೇಕೆಂಬ ತನ್ನ ಮಹದಾಸೆಯನ್ನು ಇನ್ನೊಂದು ಗಂಡು ಮಗುವಿಗೆ ಜನನವಿತ್ತು ಪೂರೈಸಿಕೊಂಡಿದ್ದಳು. ಮತ್ತು ತಾನು ಬಂಜೆಯಲ್ಲದುದನ್ನು ತನ್ನ ವಠಾರದ ಎಲ್ಲ ರಕ್ತಸಂಬಂಧಿಗಳಿಗೂ ಹೆರಿಗೆ ನೋವಿನ ಮರೆಯಲ್ಲಿ ಬಲವಾಗಿ ಚೀರಿಯೇ ಸಾಬೀತುಮಾಡಿದ್ದಳು. ಶೇಕ್‌ನ ಮೇಲಿನ ಭಕ್ತಿ ಅವಳಿಗೆ ಫಲವಿತ್ತಿತ್ತೇ?

ಮಹಮ್ಮದ್ ಉರುಫ್ 'ತಿಮಹ ಅದ್ದೆ' (ಬಿಳಿ ಕೂದಲು) ನನಗೆ ಬಹಳ ವರ್ಷಗಳ ಪರಿಚಯ.+ ಈತ ಮೊದಲು ಆರೋಗ್ಯ ಇಲಾಖೆಯಲ್ಲಿ ಕೆಲಸಕ್ಕಿದ್ದು - ಡ್ರೆಸರ್ ಆಗಿ

+ ಈ ಸಮಯದಲ್ಲಿ ಸೋಮಾಲಿಯದ ಇನ್ನೊಂದು ವಿಶೇಷ ತಿಳಿಸಬೇಕೆಂದು ನನಗೆ ಕಾತರ: ಸಾಮಾನ್ಯವಾಗಿ ಅಲ್ಲಿ ಎಲ್ಲರಿಗೂ ಒಂದೊಂದು ಅಡ್ಡಹೆಸರಿರುತ್ತದೆ. ಒಬ್ಬೊಬ್ಬರ ಅಭ್ಯಾಸ, ಮುಖ ಚಹರೆ, ಯಾವುದಾದರೂ ಗುರುತು ಹಿಡಿದು ಹೆಸರು ಕಟ್ಟಿಬಿಡುವುದು ವಾಡಿಕೆ ಮತ್ತು ಅದರಲ್ಲವರು ನಿಸ್ಸೀಮರು. ಹೀಗೆ 'ಲಂಗಡೆ' - ಕುಂಟನಿಗೆ, 'ಆನೋಗೇಲ್'(= ಒಂಟೆಹಾಲು), ಬಹುಶಃ ಈತ ಒಂಟೆಹಾಲಿನಲ್ಲೇ ಬದುಕಿದವನಿರಬಹುದು, ಸಿಕ್ಕಿದ್ದೆಲ್ಲ ತನಗೇ ಬೇಕೆಂದು ದೋಚುವವನಿಗೆ, 'ಹಬ್ಸದೆ' ಈ ಎಲ್ಲವುಗಳಿಗಿಂತ ಮಿಗಿಲಾಗಿ ಪ್ರಚಾರದಲ್ಲಿರುವ 'ಅಫ್ ವೇನ್' ಅಂದರೆ (ದೊಡ್ಡ ಬಾಯಿಯವ) ಯಾರು ಗೊತ್ತೆ? ದೇಶದ ಅಧ್ಯಕ್ಷ ಸೈಯ್ಯದ್ ಬರ್ರೆ. ಮಹಮ್ಮದನಿಗೆ 'ತಿಮಹ ಅದ್ದೆ' ಎಂಬ ಹೆಸರು ಬಂದದ್ದೂ ಹೀಗೆಯೆ.



"ಇದು ನನ್ನ ಮಗಳ ಜಾತಕ ಸ್ವಾಮಿ.. ವರಾನ್ವೇಷಣೆಗೆ ನಿಮ್ಮ ಕಡೆ ಬಂದಿರೋಣ್ವಾನು.. ದಯವಿಟ್ಟು ಕೈ ಮೇಲೆ ತನ್ನಿ.."

(ನಮ್ಮ ಕಂಪೌಂಡರುಗಳಂತೆ) ನಂತರ ಕೆಲಸ ಬಿಟ್ಟು, 'ಪರಿವಾರ್ತೋ' (ಖಾಸಗಿಯಾಗಿ) ರೋಗಿಗಳನ್ನು ವೈದ್ಯರಲ್ಲಿಗೆ ಕರೆದುಕೊಂಡು ಹೋಗಿ, ತಪಾಸಣೆ ಮಾಡಿಸಿ, ಬೇಕಾದ ಪರೀಕ್ಷೆಗಳನ್ನೂ ಮಾಡಿಸಿ, ರೋಗಿಗಳ ಮನೆಗೇ ಹೋಗಿ ಇಂಜಕ್ಷನ್ ಕೊಡುವುದು, ಡ್ರಿಪ್ ಹಾಕುವುದು ಮುಂತಾದ ಸೇವೆಯನ್ನು ಸಲ್ಲಿಸಿ, ನಾಲ್ಕು ಕಾಸು ಮಾಡಿಕೊಂಡು ಜೀವನ ಸಾಗಿಸುತ್ತಿರುವ ವ್ಯಕ್ತಿ. ಈತನ ಪರಿಚಯಸ್ಥರಲ್ಲಿ ಮಂತ್ರಿಗಳಿದ್ದಾರೆ; ರಾಯಭಾರಿ ಕಚೇರಿಗಳಲ್ಲಿ ಕೆಲಸ ಮಾಡುವವರಿದ್ದಾರೆ. ಎಲ್ಲೆಂದರಲ್ಲಿ ದಿಗಿಲಿಲ್ಲದೆ ಹೋಗಿ ಯಾರನ್ನಾದರೂ ಮಾತನಾಡಿಸಿ ರೋಗವಿರುವುದನ್ನು ಅವರಿಗೆ ಮನದಟ್ಟು ಮಾಡಿಸಿ ಸೇವೆ ಸಲ್ಲಿಸುವುದು ಅವನ ಒಂದು ವೈಶಿಷ್ಟ್ಯ.

ಒಂದು ದಿನ ತಿಮಹ ಅದ್ದೆ ನಮ್ಮ ಮನೆಗೆ ಬಂದು ರೋಗಿಯನ್ನು ನೋಡಲು ಬರಬೇಕಾಗಿ ಕೇಳಿದ; ಬಹಳ ಮುಖ್ಯವಾದ ವ್ಯಕ್ತಿಯೆಂದೂ ಸೇರಿಸಿದ. ನಾನವನಿಗೆ ಸಾಮಾನ್ಯವಾಗಿ ನಕಾರ ಹೇಳಿದವನಲ್ಲ. ಆ ದಿನವೂ ಹೇಳಲಿಲ್ಲ. ಹೊರಡುವ ಮುನ್ನ 'ಶಾಯ್' (ಟೀ) ಕುಡಿಯುತ್ತ, ರೋಗಿ ಯಾರು, ಮನೆ ಎಲ್ಲಿ ಎಂದು ವಿಚಾರಿಸಿದೆ. ಆಶ್ಚರ್ಯ ಕಾದಿತ್ತು: ಸ್ವತಃ ಶೇಕ್ ಅಬ್ಬಾನೇ ಆ ರೋಗಿ! ತರಾತುರಿಯಿಂದ ಹೊರಟೆ.

ಅಷ್ಟೊಂದು ಪ್ರಸಿದ್ಧವಾಗಿದ್ದ, ಶೇಕ್ ಅಬ್ಬಾ, ಭವ್ಯ ಬಂಗಲೆಯಲ್ಲೇ ವಾಸವಾಗಿದ್ದಿರಬೇಕೆಂದು ಲೆಕ್ಕಾಚಾರಿಸಿದ್ದ ನನಗೆ, ಮಹಮ್ಮದ್ 'ಹಮರ್‌ವೇನ್'ನಲ್ಲಿ ಮನೆ ಎಂದು ಹೇಳಿ ಪ್ರಥಮ ನಿರಾಸೆ ತಂದಿದ್ದ,. 'ಹಮರ್ ವೇನ್' ಎಂಬುದು (ಹಮರ್ ಮೊಗದಿಷು ವಿನ ಹಳೆಯ ಹೆಸರು. 'ವೇನ್' ಎಂದರೆ ದೊಡ್ಡದು ಎಂದರ್ಥ. ಈಗಲೂ ಸೋಮಾಲಿಗಳು ಮೊಗದಿಷುವನ್ನು 'ಹಮರ್' ಎಂದೇ ಕರೆಯುತ್ತಾರೆ) ಈಗಿನ ಮೊಗದಿಷು - ಸೋಮಾಲಿಯದ ರಾಜಧಾನಿ - ಈಗಿನಂತೆ ಬೆಳೆದಿರದ, ಸುಮಾರು ದಶಕಗಳ ಹಿಂದೆ ಹಮರ್ ಎಷ್ಟಿತ್ತೋ ಅಷ್ಟಕ್ಕೆ ಮಾತ್ರ ಈಗ ಉಳಿದುಕೊಂಡಿರುವ ಹೆಸರು. ಹಿಂದೂ ಮಹಾಸಾಗರದ ತೀರದಲ್ಲೇ ಇದೆ. ಶತಮಾನಗಳ ಹಳೆಯ ಕಟ್ಟಡಗಳು ಒಮ್ಮೆ ಭೂಕಂಪವಾದರೆ ಇಡೀ ಹಮರ್‌ವೇನ್ ಇಲ್ಲದಂತಾಗುವಷ್ಟು—ಶಿಥಿಲಗೊಂಡಿರುವ 'ಹಾಫದ' (ನಮ್ಮ ಬಡಾವಣೆಗೆ ಸರಿಹೊಂದುವ ಪದ). ಸಣ್ಣ ಸಣ್ಣ ಗಲ್ಲಿಗಳು, ಭಾರೀ ತಿರುವು ಮುರುವುಗಳು ನಮ್ಮ ಬೆಂಗಳೂರಿನ ಚಿಕ್ಕಪೇಟೆಯಂತೆ ಜನಸಂದಣಿ, ಅಂಥದೇ ಸಗಟು ವ್ಯಾಪಾರವಿರುವ ಅಂಗಡಿಗಳು ಯಾವಾಗಲೂ ಜೇನುಗೂಡಿನಂತೆ ಚಟುವಟಿಕೆ. ಅಂಥ ಕಡೆ ಶೇಕ್ ಅಬ್ಬಾ ವಾಸ! ನನಗೋ ಆಶ್ಚರ್ಯ.

ಅಂತೂ ಹೋದೆ. ತಿಮಹ ಅದ್ದೆ ರಸ್ತೆಯುದ್ದಕ್ಕೂ ಶೇಕ್ ಅಬ್ಬಾನ ಗುಣಗಾನದ ಮಳೆಗರೆಯುತ್ತಲೇ ನಡೆದ. ದೀರ್ಘವಾಗಿ ತಪಾಸಣೆ ಮಾಡಬೇಕೆಂದೂ ಸೇರಿಸಿದ. ಅಲ್ಲದೆ, ಎಲ್ಲರಿಗೂ, ಅದರಲ್ಲೂ ಹೆಚ್ಚಾಗಿ ಹೆಂಗಸರಿಗೇ ಔಷಧ ಮಾಡುವ ಈ ಧರ್ಮ

ಗುರುವಿಗೂ ನಿಮ್ಮಂಥ ವೈದ್ಯರೇ ಬೇಕಾಯಿತು ನೋಡಿ, ಎಂದು ವಿಚಿತ್ರವಾಗಿ, ಬಹುಶಃ ಕುಹಕ ತುಂಬಿದ ವ್ಯಂಗ್ಯದಿಂದ ಒಂದು ಕಿರುನಗೆಯ ಬಾಣ ಬಿಟ್ಟ.

ಹಮರ್‌ವೇನ್‌ನ ಅನೇಕ ಮನೆಗಳಂತೆ ಅದೂ ಕಿರಿದಾದ ಮನೆ; ಮಹಡಿ ಮೇಲೆ ಹಜಾರವೆಂಬ ಎರಡೇ ಸೋಫಾ ಇಟ್ಟ ಜಾಗವಲ್ಲದೆ ಸ್ವಲ್ಪ ಮಾತ್ರ ಸ್ಥಳವಿದ್ದ ಕೊಠಡಿಗೆ ಕರೆದೊಯ್ದು ನನ್ನನ್ನು ಕೂರಿಸಿ, ಶೇಕ್ ಮನೆಯಲ್ಲಿ ಇಲ್ಲದುದನ್ನು ನನಗೆ ತಿಳಿಸಿ, ಮಸೀದಿಯಲ್ಲಿರುತ್ತಾನೆ ಕರೆತರುತ್ತೇನೆಂದು ಹೋದ. ನಾನು ಕೂತ ಕೊಠಡಿಯಲ್ಲಿ ಇನ್ನಿಬ್ಬರು ಮಜಬೂತಾದ ಸೋಮಾಲಿ ಹೆಂಗಸರು ದೊಡ್ಡದಾಗಿ ಆಸೀನರಾಗಿ ಸೋಮಾಲಿಗಳಿಗೆ ಸಾಮಾನ್ಯವಾದಂತೆ- ವ್ಯಕ್ತಿ, ತಾಣ ಲೆಕ್ಕಕ್ಕಿಲ್ಲದೆ- ದೊಡ್ಡ ಗಂಟಲಲ್ಲೇ ಹರಟುತ್ತಿದ್ದರು; ನಗುತ್ತಿದ್ದರು. ಆ 'ಹಜಾರ'ದ ಒಳಬಾಗಿಲು, ನಾನು ಕೂತ ಜಾಗಕ್ಕೆ ಎದುರಾಗಿದ್ದ ಬಾಗಿಲು, ಇನ್ನೊಂದು ಕೊಠಡಿಗೆ ದಾರಿಯಾಗಿತ್ತು- ಅದು ಶಯ್ಯಾಗೃಹವೆಂದು ಹೇಳಲು ಪುರಾವೆಗಳಿದ್ದವು. ಆ ಬಾಗಿಲಿಗೊಂದು ಐಶ್ವರ್ಯದ ಗುರುತಾಗಿದ್ದಂತಹ ಬೆಲೆ ಬಾಳುವ ಬಿಳಿಯ ತೆಳುವಾದ ತೆರೆ. ಆ ಕೊಠಡಿಯ ಮೂರನೇ ಎರಡು ಭಾಗದಷ್ಟು ಜಾಗವನ್ನು ಆಕ್ರಮಿಸಿಕೊಂಡಿದ್ದ ಎರಡು ಹಾಸಿಗೆಗಳ ಮಂಚ; ಅದರ ಮೇಲೆ ಅಷ್ಟೇ ವಿಶಾಲವಾದ ಮೆತ್ತನೆಯ ಹಾಸಿಗೆ - ಎಲ್ಲಕ್ಕೂ ಆಮದಾದ ಚಹರೆ. ಮೆಕ್ಕಾದ ಮಸೀದಿ ಚಿತ್ರ. 'ಕಾಬಾ' ಕಲ್ಲಿನ ಚಿತ್ರ, ಪವಿತ್ರ ಕುರಾನ್ ಶ್ಲೋಕ ಮುದ್ರಿಸಿದ ಚಿತ್ರಗಳು, ಹೀಗೆ ಎಲ್ಲೆಲ್ಲೂ, ಗೋಡೆಗಳಲ್ಲೆಲ್ಲ ಧರ್ಮದ ದರ್ಶನವೇ. ಜೊತೆಗೆ ನಾವು ಕೂತಿದ್ದ ಕೊಠಡಿಯ ಹೊರಗೆ ರಾಜೇಶ್ ಖನ್ನನ ಮತ್ತು ಹೇಮಾಮಾಲಿನಿಯ ಕ್ಯಾಲೆಂಡರುಗಳು - ಮನೆಯಲ್ಲಿದ್ದಿರಬಹುದಾದ ಹರೆಯದ ಅಭಿರುಚಿ!

ಅಂತೂ ಶೇಕ್ ಅಬ್ಬಾ ಬಂದ - ಗಾಳಿಯ ಥರ. ಆತನ ಸಂಗಡವೇ ಅವನ ಸುತ್ತ ಮಿರುಗುವ ಪ್ರಭಾವಳಿಯ ರೀತಿ ಬಂದು ಮೂಗಿಗ ಪ್ಪಳಿಸಿದ ವಿದೇಶೀ ಸೆಂಟಿನ ವಾಸನೆ ಅಷ್ಟರಲ್ಲಾಗಲೇ ಹಬ್ಬಿದ್ದ ಆ ಸೋಮಾಲಿ ಹೆಂಗಸರ ಸೆಂಟಿನ ವಾಸನೆಯನ್ನೂ ತಿಂದುಬಿಟ್ಟು ತನ್ನತನವನ್ನು ಬೀಸುತ್ತಿತ್ತು. ಶೇಕ್ ಬಂದಾಗ ಸೋಮಾಲಿ ಹೆಂಗಸರೂ ಎದ್ದೇಳಲಿಲ್ಲ; ನಾನೂ ಏಳಲಿಲ್ಲ. ಇವೆಲ್ಲ ಸೋಮಾಲಿ ಸಂಪ್ರದಾಯವಲ್ಲ. ಮಂತ್ರಿಗಳ ಕಚೇರಿಯಲ್ಲಿ ಕಾಯುತ್ತಾ ಕೂತಿದ್ದಾಗ, ಮಂತ್ರಿ, ವರ್ಜಿರ ಆಗಮನವೇ ಆದಾಗಲೂ ಏಳದ ಜನ ಅವರು!

''ದತೋರ್ (ಡಾಕ್ಟರ್) ಮೂರ್ತಿ,'' ಎಂದು ನನ್ನನ್ನು ತಿಮಹ ಅದ್ದ ಭಯ-ಭಕ್ತಿಯಿಂದ ಪರಿಚಯಿಸಿದಾಗ, ''ಅಹಲಸ್ ವಸಲಹನ್'' ಎನ್ನುತ್ತಾ ಏಳಲು ಆರಂಭಿಸಿದ್ದ ನನ್ನನ್ನು ಅರ್ಧಕ್ಕೇ ತಡೆದು, ''ಅಸ್ಸಲಾಮಾಲೆಕುಂ'' ಹೇಳಿ, ಶೇಕ್ ಆ ಹೆಂಗಸರ ಕಡೆ ತಿರುಗಿದ. ಅವರಿಗೂ ಸಲಾಂ ಹೇಳಿ ಕೈ ಕುಲುಕಿದ. ಸೋಮಾಲಿಯದಲ್ಲಿ ಹೆಂಗಸರು - ಗಂಡಸರೆಂಬ ಲಿಂಗಭೇದವಿಲ್ಲದೆ ಕೈಕುಲುಕಿ ಮಾತನಾಡಿಸುವುದು ಸಂಸ್ಕೃತಿ - ಆಗಂತುಕರೊಡನೆ ಕೂಡ. ಆಶ್ಚರ್ಯವೆಂದರೆ, ನಮ್ಮ ಭಾರತೀಯ ಹೆಂಗಸರು ಸೋಮಾಲಿ ಹಾಗೂ ಇತರೇ ವಿದೇಶಿಯರೊಡನೆ ಧಾರಾಳವಾಗಿ ಕೈಕುಲುಕಿ ಮಾತನಾಡುವುದಿದ್ದರೂ, ಭಾರತೀಯ ಗಂಡಸರನ್ನು ಕಂಡಾಗ ಮಾತ್ರ ಕೈಮುಗಿದಂತೆ ಮಾಡುವುದೋ ಅಥವಾ 'ಹಲೋ'ಗೆ ಮೀಸಲಾಗುವುದೋ ನಮ್ಮ ಆಷಾಢಭೂತಿತನದ ದ್ಯೋತಕವಾಗಿರುವಂತೆ ನನಗನ್ನಿಸುತ್ತದೆ! ಕೈ ಕುಲುಕಿದ ನಂತರ ಅವರ ಮತ್ತೊಂದು ಸಂಸ್ಕೃತಿಯಂತೆ ದೀರ್ಘ ಕುಶಲ ವಿಚಾರಣೆ, ವಿನಿಮಯದಲ್ಲಿ ತೊಡಗಿದ ಶೇಕ್: ಪ್ರಥಮವಾಗಿ ವೈಯಕ್ತಿಕ ಆರೋಗ್ಯ

- 'ಇಸ್ಕವರ್ನ' ಅಥವಾ 'ಸೇ ವಾಯ್' ಅಥವಾ 'ನ ಐದ್ ಸೋಮಾ' ಮುಂತಾಗಿ (ಸಾಪು ಆರೋಗ್ಯವೇ ಅನ್ನುವಂತೆ); ನಂತರ ಹೆಂಡತಿ ಗಂಡ ಮಕ್ಕಳ ಬಗ್ಗೆ; ತಂದೆ ತಾಯಿಯರ ಬಗ್ಗೆ; ''ರೇರ್' ಅಂದರೆ ಪಂಗಡ (tribe) ದ ಬಗ್ಗೆ; ಅವರು ಮತ್ತವರ ಪಂಗಡದವರು ಕಟ್ಟಿ ಸಾಕುವ ಒಂಟೆ, ಕುರಿ, ದನಕರುಗಳ ಬಗ್ಗೆ; ಹೀಗೆ ಹಂತಹಂತವಾಗಿ ವಿನಿಮಯವಾದ ನಂತರವೇ ಮುಖ್ಯ ವಿಷಯ!

ಪ್ರಥಮವಾಗಿ ಶೇಕ್ ತನ್ನ ಗಿರಾಕಿಗಳತ್ತ ಗಮನವಿತ್ತ. ತಿಮಹ ಅದ್ದೆಯ ಮೂಲಕ ಅರಬ್ಬೀ ಭಾಷೆಯಲ್ಲಿ ಸ್ವಲ್ಪ ಹೊತ್ತು ಕೂರುವಂತೆ ನನ್ನನ್ನು ಕೇಳಿಕೊಂಡ. ಇಬ್ಬರಲ್ಲೊಬ್ಬ ಹೆಂಗಸು ಕಷ್ಟದಿಂದ ಸೋಫಾದಿಂದ ತನ್ನ ಜೊಜ್ಜನ್ನೆತ್ತಿಕೊಂಡು, ತನ್ನ ನಾಲ್ಕು ಗಜದ ಸೀರೆಯಂತೆ ಸುತ್ತಿಕೊಳ್ಳುವ ವಸ್ತ್ರವನ್ನು ಮತ್ತೆ ಬಿಗಿದುಕೊಂಡು, 'ಗರ್ಭಸಾರಾ' (ದಾವಣಿ) ವನ್ನು ಹೆಗಲ ಮೇಲೆ ಸರಿಪಡಿಸಿಕೊಂಡು, ಶೇಕ್‌ನ ಹಿಂದೆ ಪಕ್ಕದ ಶಯ್ಯಾಕೊಠಡಿಗೆ ನುಗ್ಗಿದಳು. ಶೇಕ್ ಬಾಗಿಲು ಹಾಕಲಿಲ್ಲವಾದ್ದರಿಂದ, ಎದುರಿಗೇ ಕೂತಿದ್ದ ನನಗೆ ಗಾಜಿನಂತಿದ್ದ ಬಿಳಿ ತೆರೆಯ ಮೂಲಕ ಅಲ್ಲಿ ನಡೆಯುತ್ತಿದ್ದುದೆಲ್ಲ ತೆರೆದಿಟ್ಟ ಪುಸ್ತಕವಾಗಿತ್ತು. ಅಬ್ಬಾ ಆಕೆಯೊಡನೆ ಸ್ವಲ್ಪ ಹೊತ್ತು ಮಾತನಾಡಿ, ಪಕ್ಕದ ಮೀಜ್ (ಮೇಜ)ನಿಂದ ವಿನಸ್ಕೋ ತೆಗೆದು ಮಂತ್ರಿಸಿದಂತೆ ಮಾಡಿ, ಥು... ಥು... ಥು... ಎಂದು ಮೂರು ಬಾರಿ ಉಗಿದು ಅದನ್ನಾಕೆಯ ಹಸ್ತಕ್ಕಿಟ್ಟು, ತಕ್ಷಣ ತನ್ನ ಮಣಿಸರವನ್ನು ಕೈಗೆತ್ತಿಕೊಂಡು ಎಣಿಸತೊಡಗಿದ. ಆ ಹೆಣ್ಣು ತನ್ನ ಜಂಭದ ಚೀಲದಿಂದ ಸ್ವಲ್ಪ ತೆಗೆದು ಮೇಜಿನ ಮೇಲಿಟ್ಟು ತನ್ನ ಸ್ನೇಹಿತೆಯೊಂದಿಗೆ ನಿರ್ಗಮಿಸಿದಳು.

ತದನಂತರ ನನಗೆ ಕರೆ ಬಂತು! ಶೇಕ್ ಅಬ್ಬಾ, ನಾನು ಕಲ್ಪಿಸಿಕೊಂಡಿದ್ದ ವ್ಯಕ್ತಿಯಾಗಿರಲಿಲ್ಲ. ವಾಸ್ತವವಾಗಿ ಅವನ ಮುಖದಲ್ಲಾಗಲೀ, ತಲೆಯಲ್ಲಾಗಲೀ ಕೂದಲೇ ಇರಲಿಲ್ಲ. ಸಂಪೂರ್ಣ ಕ್ಷೌರ ಮಾಡಿಸಿಕೊಂಡಿದ್ದ. ವಯಸ್ಸು ಸುಮಾರು ನಲವತ್ತೆಂಟು-ಐವತ್ತಿರಬಹುದು. ಆತನೇ ಹೇಳಿದ್ದು ನಲವತ್ತೈದೆಂದು. ಎತ್ತರ ಐದಡಿ ಎಂಟಂಚು. ಅರಬ್ಬೀ ಜನರಂತೆ ಬೆಳ್ಳಗೆ ಹೊಳೆವ ಬಣ್ಣ. ಮುಖದಲ್ಲಿ, ಕಣ್ಣುಗಳಲ್ಲಿ ಎದ್ದು ತೋರುವ ಹೊಳಪು, ಆಳ. ನಿಜವಾದ, ಧರ್ಮಾಧಿಕಾರಿಯ ವರ್ಚಸ್ಸು. ನೋಡಿದೊಡನೆಯೇ ಆತನ ಕಟ್ಟುಮಸ್ತಾದ ಮೈಯ್ಯಿಗೂ, ಪೌರೋಹಿತ ವರ್ಚಸ್ಸಿಗೂ ಮಾರುಹೋಗದೆ, ನಂಬಿಗಸ್ತರಿಗೆ ಭಕ್ತಿ ಉಕ್ಕಿ ಬರದೆ ಇರದು! ನಾನೂ ನನ್ನ ಕಲ್ಪನೆ ತಲೆಬುಡ ಮೇಲಾಗಿಯೂ ನಿರಾಶನಾಗದೆ ಅವಾಕ್ಕಾದೆ. ಒಂದು ಕ್ಷಣ, ಈತನಲ್ಲಿಗೆ ಬರುವ ಹೆಣ್ಣುಗಳ



''ನಿನ್ನೆ ರಾತ್ರಿ ಬೆಣ್ಣೆಯನ್ನು ತಿನ್ನುತ್ತಿದ್ದ ಕನಸು ಕಂಡೆ. ಬೆಳಗ್ಗೆದ್ದು ನೋಡಿದ್ರೆ ವಿಕ್ಸ್ ಬಾಟ್ಲಿ ಪೂರ್ಣ ಖಾಲಿ!''

ಗತಿಯೇನು ಅನ್ನಿಸಿಯೂ ಬಿಟ್ಟಿತು!

ಶೇಕ್ ಅಬ್ಬಾ, ಸೋಮಾಲಿ ಹಾಗೂ ಅರಬ್ಬೀ ಭಾಷೆಗಳನ್ನು ನಿರರ್ಗಳವಾಗಿ ಮಾತನಾಡುತ್ತಾನೆ. ಮೊಗದಿಷುವಿನಲ್ಲೇ ಹುಟ್ಟಿ ಬೆಳೆದದ್ದರಿಂದ ಇಟಾಲಿಯನ್ ಭಾಷೆಯೂ ಗೊತ್ತಿದ್ದಿರಬಹುದು. ಆದರೆ ಇಂಗ್ಲೀಷು ಜ್ಞಾನ ಸೊನ್ನೆ. ಆರಂಭದಲ್ಲಿ ತುರ್ಜುಮೆಗಾಗಿ ತಿಮಹ ಅದ್ವೆಯ ಕಡೆ ತಿರುಗಿದ ಶೇಕ್‌ಗೆ ನನ್ನ ಸೋಮಾಲಿ ಕೇಳಿ ಖುಷಿಯಾಯಿತು; ನಾನು ಆತನ ರೋಗದ ಚರಿತ್ರೆಯನ್ನೆಲ್ಲ ಕೇಳಿ, ನಂತರ ತಪಾಸಣೆ ಮಾಡಿದೆ. ವಾಸ್ತವವಾಗಿ ಆತನಿಗೆ ಅಂಥ ದೀರ್ಘವಾದ ಘೋರ ರೋಗವೇನೂ ಇರಲಿಲ್ಲ. ಸ್ವಲ್ಪವೇ ರಕ್ತದ ಒತ್ತಡ ಹೆಚ್ಚಾಗಿತ್ತು ಅಷ್ಟೆ. ಅದಕ್ಕೂ ಆಗಾಗ್ಗೆ ಸೌದಿ ಅರೇಬಿಯಾಕ್ಕೆ ಹೋಗುತ್ತಿದ್ದುದರಿಂದ, ಅಲ್ಲಿಯೇ ವೈದ್ಯರನ್ನು ಕಾಣುವ ಲಭ್ಯವಿತ್ತು. ಅಲ್ಲಿಂದಲೇ ಔಷಧಿಗಳನ್ನೂ ತಂದಿದ್ದ. ನಾನು ಅವನ್ನೇ ಮುಂದುವರೆಸುವಂತೆ ಮಾತ್ರ ಹೇಳಿದೆ. ಶೇಕ್ ಅಬ್ಬಾ ಕೂಡ ನನಗೆ 'ಫೀಸು' ಕೊಟ್ಟ. ಐನೂರು ಶಿಲ್ಲಿಂಗು! (ಆಗ ಸುಮಾರು ನಲವತ್ತು ಡಾಲರು!)

ಹೊರಡುವ ಮುನ್ನ ಹಾಗೇ ಮಾತನಾಡುತ್ತ ನಿಂತಿದ್ದಾಗ ಆತ ಅರಬ್ಬೀ ಭಾಷೆಯಲ್ಲಿ ಮಹಮ್ಮದ್‌ಗೆ ಹೇಳಿದ್ದು ನನಗೆ ಗೊತ್ತಾಗದಿದ್ದರೂ ಶೇಕ್‌ಗೆ ಇನ್ನೊಂದು ಸಮಸ್ಯೆ ಮುಂದಿಡುವುದಿದೆ ಎಂದು ಗೊತ್ತಾಯಿತು. ತಿಮಹ ಅದ್ವೇ, ಹೇಳಿ ಹೇಳಿ, ಪರವಾಗಿಲ್ಲ ಎಂದು ಸೋಮಾಲಿಯಲ್ಲಿ ಪುಸಲಾಯಿಸಿದ್ದರಿಂದ, ಶೇಕ್ ಹೇಳಿದ:

ಆತ ಮೊದಲು ಬಹಳ ಬಲಿಷ್ಠನಾಗಿದ್ದನಂತೆ. ಇನ್ನೂ ಕಟ್ಟುಮಸ್ತಾಗಿದ್ದನಂತೆ. ಇತ್ತೀಚೆಗೆ, ಈ ಕಾಯಿಲೆ ಸ್ವಲ್ಪವೇ ರಕ್ತದೊತ್ತಡ ಹೆಚ್ಚಾದುದು ಆತನ ಶಕ್ತಿಯನ್ನು ಬಹಳಷ್ಟು ಹೀರಿಬಿಟ್ಟಿದೆಯಂತೆ... ಮತ್ತೆ ಸ್ವಲ್ಪ ತಡೆದು ನೇರವಾಗಿ ವಿಷಯಕ್ಕೆ ಬಂದ. "ನೋಡಿ, ಅಲ್ಲಿ ಭಕ್ತರಿಗೆ ನಂಬಿಕೆ ಅನ್ನುವುದು ಅತಿ ದೊಡ್ಡದು. ಅದೂ ಕೂಡ ಅಲ್ಲಾನ ದಯೆ; ಅಲ್ಲಾ ದಯಾಮಯ. ಹಾಗಾಗಿ ನಮ್ಮ ಮೇಲೆ ಭಕ್ತಿ ಹೇಗೋ ಹಾಗೆಯೇ ನಾವು ಮಾಡಿದ್ದುದರಲ್ಲಿ, ಕೊಟ್ಟಿದ್ದುದರಲ್ಲಿ ಗಾಢ ನಂಬಿಕೆ, ಭಕ್ತಿ ಎಲ್ಲವೂ ತುಂಬಿರುತ್ತವೆ. ನಮ್ಮಂಥವರಿಗಾಗಿ ಜನ ತುಂಬು ಮನಸ್ಸಿನಿಂದ ಎದುರು ನೋಡುತ್ತಿರುತ್ತಾರೆ. ನಮ್ಮ ಪ್ರತಿ ಕಾರ್ಯವೂ, ಹೆಜ್ಜೆಯೂ ದೈವದತ್ತವೆಂದು ನಂಬುತ್ತಾರೆ. ನಮ್ಮಿಂದ ಪ್ರತಿಯೊಂದನ್ನೂ ಬಯಸುತ್ತಾರೆ. ಆದ್ದರಿಂದ ನಾವು ನಮ್ಮಲ್ಲಿಗೆ ಬರುವ ಅನೇಕರ ಅನೇಕ ಥರದ ಬಯಕೆಗಳನ್ನು ತೃಪ್ತಿ ಪಡಿಸಬೇಕಾಗುತ್ತದೆ. ಹೆಂಗಸರೊಡನೆ ಸಂಭೋಗವೂ ಸೇರಿದಂತೆ! ಸುಮ್ಮಸುಮ್ಮನೆ ಮಂತ್ರದಿಂದ ಮಕ್ಕಳಾಗುವುದುಂಟೆ?... ಒಂದು ಕಾಲಕ್ಕೆ ಸುಮಾರು ಎಪ್ಪತ್ತೆಂಭತ್ತು ಹೆಂಗಸರು ನನ್ನ ದಾರಿ ಕಾಯುವವರಿದ್ದರು. ನಾನೂ ನನ್ನ ಶಕ್ತಿಯನ್ನೆಲ್ಲಾ ವ್ಯಯ ಮಾಡಿ ಅವರನ್ನೆಲ್ಲಾ ಸಂತೃಪ್ತಿಗೊಳಿಸುತ್ತಿದ್ದೆ; ಏನೋ ದೇವರ ದಯೆ. ಈಗಲೂ ಅನೇಕ ಹೆಂಗಸರು ನನ್ನಿಂದ ಅದನ್ನು ಬಯಸುತ್ತಾರೆ. ಹೊಸ ಹೊಸದಾಗಿ ಬಯಸುವವರು ಈ ಸಾಲಿಗೆ ಬಂದು ಸೇರುತ್ತಾರೆ. ಈಗಲೂ ನಾನು ಅವರಿಗೆ ಇಲ್ಲವೆನ್ನುವುದಿಲ್ಲ... ನಂಬಿ ಬಂದವರಿಗೆ ಹೇಗೆ ತಾನೆ ಇಲ್ಲ ಎನ್ನಲಾಗುತ್ತದೆ ಅಲ್ಲವೇ? ಆದರೆ... ವಯಸ್ಸೋ ಅಥವಾ ಕಾಯಿಲೆಯೋ ಕಾಣೆ, ಎಲ್ಲರನ್ನೂ ತೃಪ್ತಿಪಡಿಸುತ್ತಿದ್ದ ಆ ಶಕ್ತಿ ಈಗ ನನ್ನಲ್ಲಿ ಕುಗ್ಗುತ್ತಿದೆ. ಅದಕ್ಕೇನಾದರೂ ಒಳ್ಳೆ 'ವಿಟಮಿನು' ಇದ್ದರೆ ಬರೆದುಕೊಡಿ!"

ಮನೆಗೆ ಬಂದು ನಿರ್ಮಲ ಆಂಟಿಯವರಿಗೂ, ಕಮಲನಿಗೂ ಈ ವಿಷಯ ಹೇಳಿ ಆಶ್ಚರ್ಯಪಡಿಸಿದೆ. ಜೊತೆಗೆ ಆ ವ್ಯಕ್ತಿಯ ಸ್ಪಷ್ಟವಾದಿತನಕ್ಕೆ ಬೆರಗುಗೊಂಡೆ. ●

ಕಟ್ಟಬೇಕೇ ಹೊರತು ಕೆಡವಲು ಹೋಗಬಾರದು

ಮುಂದೆ ಪ್ರಸಿದ್ಧ ಛಾಯಾ ಚಿತ್ರಗಾರರಲ್ಲಿ ಒಬ್ಬನಾದ ಎಡ್ವರ್ಡ್ ಸ್ಟೀಚೆನ್ ಮೊದಲ ಬಾರಿಗೆ ಫೋಟೋ ತೆಗೆದ ದಿನ, ಮುಂದೆ ಫೋಟೋ ತೆಗೆಯಲೇಬಾರದು ಎಂದು ನಿರ್ಧರಿಸುವಂತಾಗಿತ್ತು ಆತನಿಗೆ! ಆಗ ಆತನಿಗೆ 16 ನಡೆಯುತ್ತಿತ್ತು. ಕ್ಯಾಮೆರಾವೊಂದನ್ನು ತಂದು 50 ಫೋಟೋಗಳನ್ನು ಆತ ತೆಗೆದಿದ್ದ. ಆ ಫೋಟೋಗಳಲ್ಲಿ, ಆತನ ಸೋದರಿ ಪಿಯಾನೋ ಬಾರಿಸುತ್ತಿದ್ದಾಗ ತೆಗೆದ ಫೋಟೋ ಮಾತ್ರ ಸರಿಯಾಗಿ ಬಂದಿತ್ತು; ಉಳಿದವೆಲ್ಲಾ ಕೆಟ್ಟು ಹೋಗಿದ್ದವು! ಇದರಿಂದ ಎಡ್ವರ್ಡ್‌ನ ತಂದೆಗೆ ತುಂಬಾ ಬೇಸರವಾಗಿ ಆತ, "ಫೋಟೋ ತೆಗೆಯುವುದರಲ್ಲಿ ನೀನೇನು ಪ್ರಯೋಜನವಿಲ್ಲ ಕಣಯ್ಯಾ," ಎಂದು ಮಗನನ್ನು ಹೀಯಾಳಿಸಿದ್ದ.

ಆದರೆ ಆತನ ತಾಯಿ ಮಾತ್ರ, "ನೀನು ತೆಗೆದಿರುವ ನಿನ್ನ ಸೋದರಿಯ ಫೋಟೋ ತುಂಬಾ ಚೆನ್ನಾಗಿ ಬಂದಿದೆ. ಉಳಿದ 49 ಫೋಟೋಗಳು ಕೆಟ್ಟು ಹೋದರೂ ಪರವಾಗಿಲ್ಲ. ಈ ಫೋಟೋವು ಒಂದೇ, ಆ 49 ಫೋಟೋಗಳು ಚೆನ್ನಾಗಿ ಬಂದಿದ್ರೆ ಅವೂ ಒಂದೇ, ಎಂದು ಹೇಳಿ, ಆತನನ್ನು ಸಮಾಧಾನಗೊಳಿಸಿ, ಹುರಿದುಂಬಿಸಿದಳು.

ಆಕೆಯ ಪ್ರೋತ್ಸಾಹ ಆತ ಛಾಯಾ ಚಿತ್ರ ತೆಗೆಯುವ ಹವ್ಯಾಸವನ್ನು ಮುಂದುವರೆಸಲು ಪ್ರೇರಣೆ ನೀಡಿತು. ಆತ ಮುಂದೆ ತನ್ನ ಜೀವಮಾನವಿಡಿ ಫೋಟೋಗಳನ್ನು ತೆಗೆಯುತ್ತಲೇ ಇದ್ದ.

ಇತರ ಪ್ರಕರಣಗಳಿಗೆ ಹೋಲಿಸಿದರೆ ಇಲ್ಲಿ ಆದ ವ್ಯತ್ಯಾಸವೇನು?

ಸೋಲುಗಳ ಮಧ್ಯದಲ್ಲಿ ಸ್ವಲ್ಪ ಶ್ರೇಷ್ಠತೆಯನ್ನು ಗುರುತಿಸುವಷ್ಟು ದೂರದೃಷ್ಟಿ, ವಿವೇಕಪೂರ್ಣ ಬುದ್ಧಿವಂತಿಕೆ ಇದ್ದ ಓರ್ವ ವ್ಯಕ್ತಿ; ಸ್ಪಷ್ಟವಾಗಿದ್ದ ಲೋಪದೋಷಗಳ ಬಗೆಗೆ, ಕುಂದುಕೊರತೆಗಳ ಬಗೆಗೆ ತಲೆಕೆಡಿಸಿಕೊಳ್ಳುವುದಕ್ಕೆ ಬದಲಾಗಿ ಸಣ್ಣ ಸಾಧನೆಗಳತ್ತ ಗಮನ ಹರಿಸುವ ವ್ಯಕ್ತಿ. ಆಲೋಚನೆ ಮಾಡದೆ ಒಬ್ಬನನ್ನು ಹೀಯಾಳಿಸುವುದಕ್ಕೆ ಬದಲಾಗಿ, ಆತನ ಸಣ್ಣ ಸಾಧನೆಗಳ ಬಗ್ಗೆ ಮೃದು ವಚನದ ಪ್ರೋತ್ಸಾಹ ನೀಡಿದ ವ್ಯಕ್ತಿ. ಸ್ವಸಾಮರ್ಥ್ಯದ ಬಗ್ಗೆ ಅನುಮಾನಗೊಳ್ಳುವ ಸಂದಿಗ್ಧ ಕಾಲದಲ್ಲಿ ಪ್ರೋತ್ಸಾಹದ ಸಣ್ಣ ಪದವೂ ಒಬ್ಬನ ಜೀವನವನ್ನು ಯಶಸ್ಸಿನ ದಾರಿಯಲ್ಲಿ ಮುನ್ನಡೆಸಬಲ್ಲದು. ಸಹಾನುಭೂತಿಯಿಂದ ಕೊಟ್ಟ ವಾಸ್ತವಿಕ ಸಲಹೆಗೆ ಜನ ಖಂಡಿತವಾಗಿಯೂ ಪ್ರತಿಸ್ಪಂದಿಸುತ್ತಾರೆ.

ನಾವೂ ಅಷ್ಟೆ, ಏನನ್ನೇ ಆದರೂ ಕಟ್ಟಬೇಕೇ ಹೊರತು, ಅದನ್ನು ಕೆಡವಲು ಹೋಗಬಾರದು. ●

– ಎಸ್.ವಿಶ್ವನಾಥ



ಬಾಬ್ ಹಾಕ್

ದ್ವಂದ್ವಗಳಿಗೆ ಇನ್ನೊಂದು ಹೆಸರು

ಎಂ. ಶಿವರಾಮ ಆಚಾರ್

ಕೆಲ ಸಮಯದ ಹಿಂದೆ ಭಾರತ ಸಂದರ್ಶಿಸಿದ ವಿದೇಶೀ ಗಣ್ಯರಲ್ಲಿ ಆಸ್ಟ್ರೇಲಿಯದ ಪ್ರಧಾನಿಯಾದ ಬಾಬ್ ಹಾಕ್ ರವರೂ ಒಬ್ಬರು. ತಮ್ಮ ದೇಶದಲ್ಲಿ ಮೂರು ವರ್ಷಗಳಿಗೊಮ್ಮೆ ಜರಗುವ ಚುನಾವಣೆಯಲ್ಲಿ ಸತತವಾಗಿ ಮೂರನೆ ಬಾರಿ ಗೆದ್ದ ಖ್ಯಾತಿ ಅವರದು. ಅವರಲ್ಲಿರುವ ಒಂದೇ ಒಂದು ದೋಷವೆಂದರೆ ತಾವೇ ಒಮ್ಮೆ ಟಿ.ವಿ.ಯಲ್ಲಿ ಹೇಳಿಕೆಯಿತ್ತಂತೆ ಕುಡುಕತನ. ಯುವಕರಾಗಿದ್ದಾಗ ಮಿತಿ ಮೀರಿ ಮದ್ಯಪಾನ ಮಾಡುತ್ತಿದ್ದ ಇವರು ಕುಡಿತದಲ್ಲಿ ಒಂದು ದಾಖಲೆಯನ್ನೇ ನಿರ್ಮಿಸಿದ್ದರಂತೆ. ಅವರು ಆರ್ಥಿಕ ತಜ್ಞರಾದರೂ ವೃತ್ತಿಯಲ್ಲಿ ವಕೀಲರು. ಅರವತ್ತರ ಹರೆಯದ, ದಷ್ಟಪುಷ್ಟ ಮೈಯ ಹಟಮಾರಿ ಸ್ವಭಾವದ ಬಾಬ್ ಹಾಕ್ ಸೂಕ್ಷ್ಮಮತಿ. ಯುವಕರಾಗಿದ್ದಾಗ ಕಾನೂನುಗಳನ್ನು ಉಲ್ಲಂಘಿಸುವಲ್ಲಿಯೆ ಸಂತಸಪಡುತ್ತಿದ್ದ ಅವರು ಮುಂದೆ ಜೀವನೋಪಾಯಕ್ಕಾಗಿ ಕಾನೂನನ್ನು ಅವಲಂಬಿಸಬೇಕಾಗಿ ಬಂದದ್ದು ವಿಧಿಯ ವೈಚಿತ್ರ್ಯ. ವಿದ್ಯಾರ್ಥಿವೇತನದ ಸಹಾಯದಿಂದ ವ್ಯಾಸಂಗ ಮಾಡಿದ ಸ್ವಪ್ರಯತ್ನದಿಂದಲೇ ಮೇಲ್ಮೆ ಸಾಧಿಸಿಕೊಂಡ ವ್ಯಕ್ತಿ. ದಕ್ಷಿಣ ಆಫ್ರಿಕದ ವರ್ಣದ್ವೇಷ ಧೋರಣೆಯನ್ನು ವಿರೋಧಿಸುವ ಅವರಿಗೆ ಭಾರತದ ಬಡತನದ ಬಗೆಗೆ ಮರುಕ. ಇಸ್ರೇಲಿನೊಡನೆ ವೈಚಾರಿಕ ಮನೋಭಾವದಿಂದ ವರ್ತಿಸುವ ಧೋರಣೆ. ಕೂಲಿಕಾರ ಪಕ್ಷದ ಮುಖಂಡರೂ ಹೌದು.

ಹತ್ತೊಂಬತ್ತರ ಹರೆಯದಲ್ಲೇ ಅದೇ ಪ್ರಾಯದ ಹಜೆಲ್ ಎಂಬಾಕೆಯೊಡನೆ ವಿವಾಹ. ಕಾಂಗ್ರಿಗೇಶನಲ್ ಯುತ್ ಫೆಲೋಶಿಪ್ ಎಂಬ ಯುವಜನ ಸಂಸ್ಥೆಯ ಅಧ್ಯಕ್ಷ. ಮಡದಿ ಹಜೆಲ್ ಕಾರ್ಯದರ್ಶಿ. ಅಧ್ಯಕ್ಷ ಕಾರ್ಯದರ್ಶಿಗಳೊಳಗೆ ವಿವಾಹ ಬಂಧನ. ಆಸ್ಟ್ರೇಲಿಯದಲ್ಲಿ ಇವರ ಪರಿಚಯವಿಲ್ಲದವರೇ ಇಲ್ಲ. ಒಮ್ಮೆ ಓರ್ವ ವರದಿಗಾರ್ತಿ ಬಾಬ್ ಹಾಕ್‌ನನ್ನು ಸಂದರ್ಶಿಸಿ ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸಿದಳು. ಆದರೆ ವರದಿ ಪ್ರಕಟವಾದಾಗ ಅವರು ಹೇಳಿದ್ದರ ಬದಲು

ವರದಿಯ ತುಂಬಾ ಅವರ ಕಾಲುಗಳ ವರ್ಣನೆಯೇ ಇತ್ತು. ಅವರ ಕಾಲುಗಳು ಕಂದುಬಣ್ಣವಾಗಿದ್ದು ಮಾಂಸಲವಾಗಿ ಸ್ವಚ್ಛವಾಗಿ ಕಂಗೊಳಿಸಿದ್ದರಿಂದಲೇ ತನ್ನ ಒಲವು ಅವರ ಕಾಲುಗಳ ಕಡೆಗೆ ಹರಿಯಿತೆಂದು ಆಕೆ ಬರೆದಿದ್ದಳು. ಒಳ್ಳೆಯ ದೇಹದಾರ್ಢ್ಯವಿದ್ದ ಅವರನ್ನು ಜನರು ರೋಮನ್ ಚಕ್ರವರ್ತಿ ಸೀಸರನಿಗೆ ಹೋಲಿಸುತ್ತಿದ್ದುದು ಆಶ್ಚರ್ಯವಲ್ಲ.

ಬಾಬ್ ಹಾಕ್ ಮತ್ತು ಹೆಜೆಲ್ ಇಬ್ಬರೂ ಒಳ್ಳೆಯ ಸಾಮಾಜಿಕ ಕಾರ್ಯಕರ್ತರು. ಆಕೆಯಂತೂ ಬಹಳ ಮಧುರ ಸ್ವಭಾವದ ಮಹಿಳೆ. ಗಂಡನ ಕುಡುಕತನವೊಂದನ್ನು ಬಿಟ್ಟರೆ ಗಂಡಹೆಂಡಿರಿಬ್ಬರಿಗೂ ಬೇರೇನೂ ಕೊರತೆಯಿರಲಿಲ್ಲ. ಆದರೆ ಕೊನೆಕೊನೆಗೆ ಅವರ ದಾಂಪತ್ಯ ಜೀವನದ ಸುಖವನ್ನು ದುಃಖಮಯವನ್ನಾಗಿರಿಸಿದುದು ಅವರ ಮಕ್ಕಳ ದುರಂತಮಯ ಜೀವನ. ಹಿರಿಯ ಮಗಳಾದ ಸೂಸನ್ನಳ ಭವಿಷ್ಯವು ಉತ್ತಮವಾಗಲೆಂದು ಬಾಬ್ ಹಾಕ್ ಆಕೆಯನ್ನು ಚಿಕ್ಕಂದಿನಿಂದಲೇ ಇಸ್ರೇಲಿನಲ್ಲಿರಿಸಿ, ಅಲ್ಲಿಯೇ ಜೀವಿಸುವಂತೆ ಎಲ್ಲ ವ್ಯವಸ್ಥೆಯನ್ನೂ ಮಾಡಿಕೊಟ್ಟಿದ್ದ. ಆದರೆ ಸೂಸನ್ನಳು ಮಾತ್ರ ತಂದೆಯ ಇಚ್ಛೆಗೆ ವಿರುದ್ಧವಾಗಿ ಅಲ್ಲಿನ ವಿಶ್ವವಿದ್ಯಾಲಯದ ವಿದ್ಯಾರ್ಥಿ ರಾಜಕೀಯದಲ್ಲಿ ಪ್ರವೇಶಿಸಿ ಶಿಕ್ಷಣವನ್ನು ಬಲಿಗೊಟ್ಟಳು. ಇದನ್ನರಿತು ತಂದೆ ಕೆಂಡಮುಂಡವಾದ. ಆಕೆ ಇದಾವುದನ್ನೂ ಗಮನಿಸದೆ ಗಾಂಜಾ ಸೇವನೆಗೆತೊಡಗಿದಳು. ಕೊನೆಗೆ ಮಾದಕ ದ್ರವ್ಯ ಸೇವನೆಯ ಅಪರಾಧಕ್ಕೂ ಗುರಿಯಾಗಿ ನ್ಯಾಯಾಲಯದ ಕೈಲಿ ಸಿಕ್ಕುಬಿದ್ದು ಪಾರಾಗಿ ಬರಬೇಕಾದರೆ ಸಾಕುಬೇಕಾಯಿತು. ಕೆಲವು ವರ್ಷಗಳ ಹಿಂದೆ ಆಕೆ ಇಸ್ರೇಲನ್ನು ತ್ಯಜಿಸಿ ಜಪಾನಿಗೆ ತೆರಳಿದಳು. ಅಲ್ಲಿ ಯೋಗವೂ ಪ್ರಕೃತಿ ಚಿಕಿತ್ಸೆಯೂ ಆಕೆಯನ್ನು ಆಕರ್ಷಿಸಿದವು. ಅದರ ಪರಿಣಾಮವಾಗಿ ಆಕೆ ಮಾಂಸಾಹಾರವನ್ನು ತ್ಯಜಿಸಿ ಶಾಕಾಹಾರಕ್ಕೆ ಅಂಟಿಕೊಂಡಳು. ಯೋಗ ಶಿಕ್ಷಕನಾದ ಬೆಲ್ಜಿಯಂ ದೇಶದ ಜೋನ್ ಪೀಟರ್ ಎಂಬಾತನನ್ನು ಸ್ನೇಹಿಸಿ ಅವನನ್ನೇ ವರಿಸಿದಳು.

ಹಾಕ್ ದಂಪತಿಗಳ ಇನ್ನೊಬ್ಬ ಮಗಳು ರೋಸಲಿನ್. ಆಕೆಯೂ ಮಾದಕದ್ರವ್ಯಗಳ ಚಟಕ್ಕೆ ಬಲಿಯಾಗಿ ತಂದೆತಾಯಿಗಳಿಗೆ ತಲೆನೋವಾದಳು. ಆಂತರಿಕ ಗೃಹ ಶೃಂಗಾರದ ಅಧ್ಯಯನ ಕೈಗೊಂಡಿದ್ದ ಇಪ್ಪತ್ತೇಳರ ಹರೆಯದ ಮ್ಯಾಟ್ ಡಿಲ್ಲನ್ ಎಂಬಾತನನ್ನು ಆಕೆ ವಿವಾಹವಾದಳು. ಮಾದಕ ದ್ರವ್ಯ 'ಹೆರ್ಯಿನ್' ಸೇವನೆಗೆ ಇಬ್ಬರೂ ಜತೆಯಾಗಿಯೇ ತೊಡಗಿದರು. ಇದರಿಂದಾಗಿ ಕೊನೆಗೆ ರೋಸಲಿನ್ನಳ ಸ್ಥಿತಿ ತೀರಾ ವಿಷಮಿಸಿದಾಗ ಬಾಬ್ ಹಾಕ್ ಅಳಿಯನನ್ನು ಆರೋಗ್ಯ ಕೇಂದ್ರದಲ್ಲಿರಿಸಿ ದಿನಗಳೆಯುವಂತೆ ವ್ಯವಸ್ಥೆ ಮಾಡಿದರು.

ಕಿರಿಯ ಮಗಳಾದ ರೋಸಿಯಾ ಹೆತ್ತವರಿಗೆ ಸಂತಸ ತರಲಿಲ್ಲ. ತಂದೆಯ ಪ್ರೀತಿಯ ಮಗಳಾದ ಈಕೆ ವಿದ್ಯಾಭ್ಯಾಸವನ್ನೇ ತೊರೆದು ಬಿಟ್ಟಳು. ಇದರಿಂದ ಎಲ್ಲರ ದೂಷಣೆಗೆ ಪಾತ್ರಳಾದ ಈಕೆ ನಗರವನ್ನೇ ತ್ಯಜಿಸಿ ಹಿಪ್ಪಿಯಂತೆ ಜೀವಿಸಲಾರಂಭಿಸಿದಳು. ಆಕೆಗೆ ಪೀಟರ್ ಮತ್ತು ಡೇವಿಡ್ ಎಂಬ ಇಬ್ಬರು ಮಕ್ಕಳು. ಆಸ್ಟ್ರೇಲಿಯದಲ್ಲಿ ಹೆಚ್ಚಿನವರು ತಮ್ಮ ಮಕ್ಕಳಿಗೆ ಖಾಸಗಿ ಶಿಕ್ಷಣದ ಏರ್ಪಾಡು ಮಾಡುವುದರಿಂದ ಅಲ್ಲಿನ ಶಾಲೆಗಳು ದುಃಸ್ಥಿತಿಯಲ್ಲೇ ಇರುವುದು ಸಾಮಾನ್ಯ. ರೋಸಿಯು ತನ್ನ ಮಕ್ಕಳಿಗೆ ಖಾಸಗಿ ಶಿಕ್ಷಣ ಒದಗಿಸಲು ಸಾಧ್ಯವಾಗದ ಕಾರಣ ಅವರು ಸಾಮಾನ್ಯ ಶಾಲೆಯಲ್ಲೇ ಶಿಕ್ಷಣ ಪಡೆಯುತ್ತಿದ್ದಾರೆ.

ಇನ್ನು ಪ್ರಧಾನಿಯ ಏಕಮಾತ್ರ ಪುತ್ರ. ಇಪ್ಪತ್ತರ ಹರೆಯದ ಸ್ಟೀಫನ್. ತಂದೆಯೊಂದಿಗೇ ಜೀವಿಸಿದ್ದು ಎಲ್ಲ ತರದ ಕಷ್ಟಗಳಲ್ಲಿಯೂ ಭಾಗಿಯಾದ ವ್ಯಕ್ತಿ. ಆತನೂ

ಉನ್ನತ ವಿಶ್ವವಿದ್ಯಾಲಯದ ಶಿಕ್ಷಣವನ್ನು ತೊರೆದು ತಂದೆಯ ವಂಶದ ಹೆಸರನ್ನು ತ್ಯಜಿಸಿ ತನ್ನ ತಾಯಿಯ ವಿವಾಹ ಪೂರ್ವದ ವಂಶನಾಮವನ್ನು ಧರಿಸಿಕೊಂಡು ಬಳಿಕ ಆಸ್ಟ್ರೇಲಿಯವನ್ನೇ ತೊರೆದು ಟಾಸ್ಮಾನಿಯಾಕ್ಕೆ ಹೊರಟು ಹೋದ. ಅಲ್ಲಿ ಒಬ್ಬ ಕುರುಬನ ಸ್ನೇಹವನ್ನು ಸಂಪಾದಿಸಿ ಆತನ ಗುಡಿಸಲಲ್ಲೇ ವಾಸಮಾಡ ತೊಡಗಿದ. ಈಗ ಆತ ಅಲ್ಲಿನ ಪೌರತ್ವವನ್ನು ಪಡೆದು ಭೂಮಿಯ ಒಡೆತನಕ್ಕಾಗಿ ಜನರು ನಡೆಸುವ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾನೆ.

ಬಾಬ್ ಹಾಕ್ ತಮ್ಮ ವೈವಾಹಿಕ ಜೀವನದ ಮೂವತ್ತಮೂರನೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಟಿ.ವಿ.ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ವೈಯುಕ್ತಿಕ ಜೀವನದ ಇನ್ನೊಂದು ಪ್ರಾಮುಖ್ಯ ರಹಸ್ಯವನ್ನು ಬಹಿರಂಗಗೊಳಿಸಿ ಎಲ್ಲರನ್ನೂ ಅಚ್ಚರಿಯಲ್ಲಿ ಮುಳುಗುವಂತೆ ಮಾಡಿದರು. ತಾವು ತಮ್ಮ ಪತ್ನಿಯೊಂದಿಗೆ ವೈವಾಹಿಕ ಜೀವನವನ್ನು ಸುಖಮಯವಾಗಿ ಸಾಗಿಸಿದ್ದರೂ, ಆಕೆಗೆ ಗೊತ್ತಾಗದಂತೆ ಪರಸ್ತ್ರೀಸಂಗ ಮಾಡುತ್ತಿದ್ದೆ ವೆಂಬುದೇ ಆ ರಹಸ್ಯ. ಟಿ.ವಿ.ವರದಿಗಾರರು ಪ್ರಧಾನಿಗೆ ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸಿದಾಗ ಕಣ್ಣೀರಿಡುತ್ತಾ ಅವರು ರಹಸ್ಯವನ್ನು ಬಹಿರಂಗಪಡಿಸಿದರು. ಆದರೆ ಇನ್ನು ಮುಂದೆ ತಾವೆಂದಿಗೂ ಹಾಗೆ ಮಾಡುವುದಿಲ್ಲವೆಂದೂ ತಮ್ಮ ಪತ್ನಿಯನ್ನು ಅತ್ಯಂತ ಪ್ರೀತಿಯಿಂದ ಕಾಣುತ್ತಿದ್ದೇವೆಂದೂ, ಆಕೆ ತಮ್ಮನ್ನು ಚೆನ್ನಾಗಿ ಅರ್ಥಮಾಡಿಕೊಂಡ ಅದಮ್ಯ ಉತ್ಸಾಹದ ಪತ್ನಿಯೆಂದೂ ಹೇಳಿ, ಆಕೆ ಈ ವಿಷಯ ಬಹಿರಂಗವಾದುದರಿಂದ ಬದಲಾಗಲಾರಳೆಂದೂ ಹೇಳಿಕೆಯಿತ್ತ.

ಬಾಬ್ ಹಾಕ್ ಪತ್ನಿಗೆ ವಿಶ್ವಾಸವಂಚನೆ ಮಾಡಿ, ಅದನ್ನು ಈವರೆಗೆ ರಹಸ್ಯವಾಗಿರಿಸಿ ಈಗ ಥಟ್ಟನೆ ಅದನ್ನು ಬಯಲುಗೊಳಿಸಿದ ಬಗ್ಗೆ ಆಸ್ಟ್ರೇಲಿಯದ ಸಿಡ್ನಿ ಕೌನ್ಸಿಲಿನ ಸದಸ್ಯೆಯಾದ ಮಿಸ್.ಕ್ಲವರ್‌ಮೂರ್ ಎಂಬಾಕೆ ಇಂಥ ದಿಢೀರ್ ಹೇಳಿಕೆಯಿಂದಾಗಿ ಯಾವ ಸ್ತ್ರೀಯೂ ಕೂಡ ಸಿಟ್ಟಿಗೇಳದಿರಲಾರಳೆಂದೂ, ಈ ರೀತಿ ಪತ್ನಿಯನ್ನು ಸಾರ್ವಜನಿಕವಾಗಿ ಅಪಮಾನಗೊಳಿಸುವುದು ಅತ್ಯಂತ ಕ್ರೂರತನದ ಕಾರ್ಯವೆಂದೂ, ಆಸ್ಟ್ರೇಲಿಯದ ಸ್ತ್ರೀಯರಲ್ಲಿ ಹೆಚ್ಚಿನವರು ಪ್ರಧಾನಿಯ ಈ ಹೇಳಿಕೆಯನ್ನೆಂದೂ ಮೆಚ್ಚಲಾರರೆಂದೂ ಹೇಳಿದಳು.

ಪ್ರಧಾನಿಯಾಗಿ ರಾಷ್ಟ್ರದಲ್ಲಿ ಉನ್ನತಪದವಿಗೇರಿದ್ದರೇನು? ಬಾಬ್ ಹಾಕ್ ತಮ್ಮ ಕುಡುಕತನದ ಚಟದಿಂದ ಬಿಡುಗಡೆ ಹೊಂದಿ ತಮ್ಮನ್ನು ತಾವೇ ಸುಧಾರಿಸಿಕೊಂಡರೇನು? ಮಡದಿ ಮಕ್ಕಳೊಂದಿಗೆ ಸುಖವಾಗಿರಲು ಅವರಿಗೆ ಸಾಧ್ಯವಾಗಲೇ ಇಲ್ಲ. ತಮ್ಮ ಕುಡುಕತನದ ಕಥೆಯನ್ನೂ, ಮಕ್ಕಳ ನಿರ್ಭಾಗ್ಯಕರ ಸ್ಥಿತಿಯ ವ್ಯಥೆಯನ್ನೂ ಅವರು 1984ರಷ್ಟು ಹಿಂದೆಯೆ ಟಿವಿ ವರದಿಗಾರರೆದುರು ಹೇಳಿಕೊಂಡಿದ್ದರು.

ಈ ವರ್ಷ ಆಸ್ಟ್ರೇಲಿಯದಲ್ಲಿ ಚುನಾವಣೆ ಜರುಗಲಿದೆ. ಅದರಲ್ಲಿ ಮತ್ತೆ ಸ್ಪರ್ಧಿಸಿ ಪ್ರಧಾನಿಯಾಗಿ ನಾಲ್ಕನೇ ಬಾರಿಯೂ ಗೆದ್ದು ರಾಜ್ಯವಾಳಬೇಕೆಂಬ ಉತ್ಕಟೇಚ್ಛೆ ಬಾಬ್ ಹಾಕ್‌ರದು. ಆದರೆ ಆ ದೇಶ ಸದ್ಯ ಎದುರಿಸುತ್ತಿರುವ ಆರ್ಥಿಕ ಸಮಸ್ಯೆಗಳಿಂದಲೂ, ಉನ್ನತ ಕರ ಭಾರದಿಂದಲೂ, ದಿನದಿಂದ ದಿನಕ್ಕೆ ಏರುತ್ತಿರುವ ಬೆಲೆ, ಬಡ್ಡಿಯ ದರಗಳಿಂದಲೂ ಅವರ ಜನಪ್ರಿಯತೆ ಕೆಳಗಿಳಿಯಬಹುದೆಂಬುದು ಕೆಲವರ ಅಭಿಮತ. ಆದರೂ ಆಸ್ಟ್ರೇಲಿಯದ ಜನತೆ ತಮ್ಮ ಲೋಪದೋಷಗಳನ್ನು ಖಂಡಿತವಾಗಿಯೂ ಮನ್ನಿಸುವುದೆಂದೂ ತಾವು ನಾಲ್ಕನೇ ಬಾರಿಯೂ ಪ್ರಧಾನಿಯಾಗಿ ಆಯ್ಕೆಯಾಗುವೆವೆಂದೂ ಹೇಳುತ್ತಾರೆ ಬಾಬ್ ಹಾಕ್. ●

ಪುಸ್ತಕ ವಿಭಾಗ

ವಂಗ ದರ್ಶನ



ಕೃಷ್ಣಾನಂದ ಕಾಮತ

ಸಂಗ್ರಹ: ಎಸ್ಕೆ

ವಂಗ ದರ್ಶನ

ಪಶ್ಚಿಮ ಬಂಗಾಲದ ಪ್ಲಾಸಿಯಲ್ಲಿ 1969ರಿಂದ 1971ರವರೆಗೆ ಸಂಶೋಧನಾ ಕೇಂದ್ರವೊಂದರ ಮೇಲ್ವಿಚಾರಕರಾಗಿ ನೆಲೆಸಿದ್ದ ಡಾ.ಕೃಷ್ಣಾನಂದ ಕಾಮತರು ಅಲ್ಲಿಯ ಜನಜೀವನ, ಅವರ ಸ್ವಭಾವ, ರೀತಿ ನೀತಿಗಳನ್ನು ನಿಕಟವಾಗಿ ನೋಡಿ ಅಭ್ಯಸಿಸುವ ಯತ್ನಗೈದರು. ಆ ಎರಡು ವರ್ಷಗಳ ಅವರ ಬಂಗಾಲವಾಸವೆಂದರೆ ಬೆಂಕಿಯ ಮೇಲಿಟ್ಟ ಬಾಣಲೆಯಲ್ಲಿ ಬಿದ್ದ ಹಾಗೆಯೇ. ಆಗಿನ ಅಲ್ಲಿಯ ರಾಜಕೀಯ ವಾತಾವರಣ, ದಿನನಿತ್ಯ ನಡೆಯುತ್ತಿದ್ದ ದೊಂಬಿ, ಕೊಲೆಗಳಂಥ ಭಯಾನಕ ಸನ್ನಿವೇಶದ ನಡುವೆಯೂ ಡಾ.ಕಾಮತರು ಸಮಚಿತ್ತದಿಂದ ಅಲ್ಲಿ ಸಂಶೋಧನೆಯನ್ನೂ ಸಮಾಜಾಭ್ಯಾಸವನ್ನೂ ಏಕಕಾಲಕ್ಕೇ ಮಾಡಿದರು. ಅಷ್ಟೇ ಅಲ್ಲ, ಬಂಗಾಲಿ ಭಾಷೆಯನ್ನು ಕಲಿಯುವತ್ತ ಲಕ್ಷ್ಯ ಹಾಯಿಸಿದರು.

1972ರಲ್ಲಿ ತಮ್ಮ ಬಂಗಾಲವಾಸದ ಕುರಿತು ಅವರು ಬರೆದ 'ವಂಗದರ್ಶನ' ಪುಸ್ತಕವನ್ನು ಧಾರವಾಡದ 'ಮನೋಹರ ಗ್ರಂಥ ಮಾಲಾ' ಪ್ರಕಟಿಸಿತು. ಈ ಪುಸ್ತಕದಲ್ಲಿ ಬರುವ ಅಂದಿನ ಅಲ್ಲಿಯ ರಾಜಕೀಯ ಸ್ಥಿತಿಗತಿಗಳ ಕುರಿತಾದ ವಿವರಣೆಯನ್ನು ಬಿಟ್ಟುಕೊಟ್ಟು, ಕೇವಲ ಬಂಗಾಲಿ ಜನರ ಬದುಕಿನ ವಿವಿಧ ಮಜಲುಗಳನ್ನು ಗುರುತಿಸುವ ಅಂಶಗಳನ್ನಷ್ಟೇ ಹೆಕ್ಕಿ ತೆಗೆದು 'ಕಸ್ತೂರಿ'ಯ ಓದುಗರಿಗಾಗಿ ಸಂಗ್ರಹಿಸಿ ಕೊಟ್ಟಿದ್ದಾರೆ ಎನ್ನೆ ಅವರು.

ಬೆಂಗಳೂರಿನ ಅಂತರ್ರಾಷ್ಟ್ರೀಯ ಸಂಸ್ಥೆಯೊಂದರಲ್ಲಿ ಚಾಕರಿ (ಬಂಗಾಲಿ ಶಬ್ದ) ಸಿಗುವ ಸಾಧ್ಯತೆ ಇದೆ ಎಂದು ತಿಳಿದಾಗ, ಜೈಪುರದಿಂದ ಬೆಂಗಳೂರು ಸೇರಲು ವೇಳೆಯ ಅಭಾವ ಇದ್ದುದರಿಂದ ವಿಮಾನದ ಮೊರೆ ಹೊಕ್ಕೆ. ಕೀಟಶಾಸ್ತ್ರದಲ್ಲಿ ಪಡೆದ ತರಬೇತಿ, ಸಂಶೋಧನೆಗೆ ಉಪಯುಕ್ತವಿದ್ದುದರಿಂದ ವಿಜಯಮಾಲೆ ಕೊರಳಿಗೆ ಬಿತ್ತು.

ಈ ಅಂತರ್ರಾಷ್ಟ್ರೀಯ ಸಂಸ್ಥೆ ಹೊಸ ಬಗೆಯ ಸಂಶೋಧನೆಯಲ್ಲಿ ತೊಡಗಿತ್ತು. ಪರಪುಷ್ಟ (ಪರಪೋಷಕ) ಜೀವಿಗಳನ್ನು ಪ್ರಯೋಗಾಲಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಾಕಿ ಉಪದ್ರವಿ ಕೀಟಗಳನ್ನು ನಿಯಂತ್ರಿಸುವುದೇ ಈ ಸಂಸ್ಥೆಯ ಮುಖ್ಯ ಉದ್ದೇಶ.

ಸಂಸ್ಥೆಯ ಮುಖ್ಯ ಕಚೇರಿ ಬೆಂಗಳೂರಿನಲ್ಲಿ ಇದ್ದರೂ ಅದರ ಶಾಖೆಗಳು ದೇಶದ ವಿವಿಧ ರಾಜ್ಯಗಳಲ್ಲಿ ಹರಡಿವೆ. ಪಶ್ಚಿಮ ಬಂಗಾಲದ ಪ್ಲಾಸಿಯ ಶಾಖೆಯ ಆಡಳಿತ, ಮೇಲ್ವಿಚಾರಣೆಗಳನ್ನು ನಾನು ನೋಡಿಕೊಳ್ಳಬೇಕಾಗಿತ್ತು. ಜೊತೆಗೆ ಬಿಹಾರದಲ್ಲಿಯ ಮೋತಿಪುರ, ಆಸಾಮದ ಗೌಹಾತಿಯ ಶಾಖೆಗಳ ಮೇಲ್ವಿಚಾರಣೆಯನ್ನು ನನಗೆ ಒಪ್ಪಿಸಲಾಗಿತ್ತು.

ಪಶ್ಚಿಮ ಬಂಗಾಲದಲ್ಲಿ ಇರುವುದು ಒಂದೇ ಒಂದು ಸಕ್ಕರೆಯ ಕಾರಖಾನೆ. ''ರಾಮನಗರ ಕಬ್ಬು ಸಕ್ಕರೆಯ ಕಂಪನಿ'' ಪ್ಲಾಸಿಯಲ್ಲಿದೆ. ಕಂಪನಿಯವರು ನಮಗೆ ಬೇಕಾದ ಸವಲತ್ತುಗಳನ್ನು ನೀಡಿ ತಮ್ಮ ಕಬ್ಬಿನ ತೋಟಗಳ ಕೀಟಗಳನ್ನು ನಾಶಮಾಡುವ ಕೆಲಸವನ್ನು ಸಂಸ್ಥೆಗೆ ಒಪ್ಪಿಸಿದ್ದರು.

ಬಂಗಾಲಕ್ಕೆ ಗೌಡ ದೇಶವೆಂದೂ ಹೆಸರಿದೆ. (ಆ ನಾಡಿನ ಮಹತಿಯರಿತದ್ದರಿಂದ, ಆ

ಮಹಾವಿಭೂತಿಗಳು ಜನಿಸಿದ ನೆಲವನ್ನು ನೋಡಬೇಕೆಂಬುದು ನನ್ನಲ್ಲಿ ಬಾಲ್ಯದಿಂದಲೂ ಬೆಳೆದು ಬಂದ ಆಸೆ.) ಗೌಡ ಸಾರಸ್ವತ ಬ್ರಾಹ್ಮಣರು ಬಂಗಾಲದಿಂದ ದಕ್ಷಿಣಕ್ಕೆ ಬಂದವರು ಎಂದೂ ಒಂದು ವಾದವಿದೆ. ಕೊಂಕಣಿ, ಬಂಗಾಲಿ ಭಾಷೆಗಳಲ್ಲಿಯ ಉಚ್ಚಾರಗಳಲ್ಲಿಯ ಸಾಮ್ಯ, ಹಲವಾರು ಶಬ್ದಗಳ ಸಾಮಾನ್ಯತೆ, ಎರಡೂ ಜನಾಂಗಗಳಲ್ಲಿಯ ಮತ್ಸ್ಯಾಹಾರಗಳು ಈ ವಾದಕ್ಕೆ ಪುಷ್ಟಿ ಕೊಡುತ್ತವೆ. ಹೀಗಾಗಿ ಬಂಗಾಲಿಗಳು ನಮ್ಮ ರಕ್ತಸಂಬಂಧಿಗಳೇ ಎಂದು ನೋಡುವ ಕುತೂಹಲವೂ ಇತ್ತು.

★

ಬೆಂಗಳೂರಿನಿಂದ ಮದ್ರಾಸಿಗೆ ಬೃಂದಾವನ ಎಕ್ಸ್‌ಪ್ರೆಸ್ ಮೂಲಕ ಹೋದೆ. ಅಲ್ಲಿಂದ ಆಂಧ್ರ, ಒಡಿಸ್ಸಾ ಪ್ರಾಂತಗಳನ್ನು ದಾಟಿಕೊಂಡು ರೈಲು ನನ್ನನ್ನು ಪಶ್ಚಿಮ ಬಂಗಾಲದೊಳಗೆ ಕರೆದೊಯ್ದಿತು.

ಬಂಗಾಲದ ದರ್ಶನ ಪಡೆಯಲೆಂದು ಬೋಗಿಯ ಬಾಗಿಲಿನಲ್ಲಿ ಬಂದು ನಿಂತೆ. ರೇಲಿನ ಇಕ್ಕೆಲಧಲ್ಲೂ ನೀರೆ ನೀರು. ಜಲಸಸ್ಯಗಳು ಹೂಗಳನ್ನು ತಳೆದು ಮಾಟವಾಗಿ ದಾರಿಹೋಕರನ್ನು ಸ್ವಾಗತಿಸಿದವು. ಸೂರ್ಯೋದಯದ ಸ್ನಾನವನ್ನು ಒಬ್ಬ ನಡೆಸಿದ್ದ. ಗೃಹಿಣಿಯೊಬ್ಬಳು ರಾತ್ರೆಯ ಮುಸುರೆಯ ಪಾತ್ರೆಗಳನ್ನು ತಿಕ್ಕಲು ಆರಂಭಿಸಿದ್ದಳು. ಮಕ್ಕಳು ಚಹಾ, ತಿಂಡಿಗಳನ್ನು ಮುಗಿಸುವ ಮೊದಲೇ ಅಲ್ಲಲ್ಲಿ ಹೊಂಡಗಳಲ್ಲಿ ಮೀನು ಹಿಡಿಯಲಾರಂಭಿಸಿದ್ದರು. ಖರಗಪುರದಲ್ಲಿ ನಿಂತ ಟ್ರೇನು ಮತ್ತೆ ಹೊರಡುವುದರಲ್ಲಿದ್ದಾಗ ಸ್ಟೇಶನ್ನಿನ ಮೇಲೆ ಏನೋ ಗದ್ದಲ ಪ್ರಾರಂಭವಾಯಿತು. ವಿದ್ಯುತ್ ತಂತಿಗಳು ಕಳವಾದ್ದರಿಂದ ಮುಂಜಾನೆ ಹೌರಾಕ್ಕೆ ಹೊರಡಬೇಕಾದ ಟ್ರೇನು ಹೊರಡಲಿಲ್ಲವಂತೆ. ಆಫೀಸಿಗೆ ಹೋಗುವವರು ರೊಚ್ಚಿಗೆದ್ದು ಗಾರ್ಡ್, ಡ್ರಾಯವರ್, ಸ್ಟೇಶನ್ ಮಾಸ್ತರರಿಗೆಲ್ಲ ಸಿಕ್ಕಂತೆ ಬೈದು ಅವರ ಮೇಲೆ ಕೈ ಮಾಡಿದ್ದರಿಂದ ರೇಲ್ವೆಯ ಎಲ್ಲ ಕರ್ಮಚಾರಿಗಳೂ ವಿದ್ಯುತ್ ವೇಗದಿಂದ ಸಂಪುಹೂಡಿದರು. ಮೇಲಿನ ಅಧಿಕಾರಿಗಳು ಧಾವಿಸಿ ಬಂದು ಇನ್ನು ಮುಂದೆ ಹೀಗೆ ಆಗದಂತೆ ತಾವು ನೋಡಿಕೊಳ್ಳುತ್ತೇವೆ ಎಂದು ಭರವಸೆ ಕೊಟ್ಟ ಮೇಲೆ ಟ್ರೇನು ಚಲಿಸಬೇಕಾದರೆ ಇನ್ನೊಂದು ಗಂಟೆಯೇ ಹಿಡಿಯಿತು. ದೂರ ಪ್ರಯಾಣದ ನಮ್ಮ ರೇಲಿನಲ್ಲಿ ಖರಗಪುರದ ಪ್ರವಾಸಿಗಳಿಗೆ ನಿಷೇಧವಿದ್ದರೂ ಎಲ್ಲ ಹತ್ತಿಯೇ ಬಿಟ್ಟರು. ತಿಕೀಟು ಇಲ್ಲದವರು ಎಷ್ಟೋ ಜನ ನಮ್ಮ ಡಬ್ಬಿಯಲ್ಲಿ ಹತ್ತಿಕೊಂಡರೂ ಅವರನ್ನು ಇಳಿಸುವ ಸಾಹಸವನ್ನು ಅಧಿಕಾರಿಗಳು ಮಾಡಲಿಲ್ಲ. ಖರಗಪುರದ ನಂತರ ಹೌರಾದಲ್ಲೇ ಗಾಡಿಯ ಕೊನೆಯ ನಿಲ್ದಾಣವಾಗಿತ್ತು. ಆದರೆ ಬಂಗಾಲಿಗಳು ಗಂಡಾಂತರ ಸರಪಳಿಯನ್ನು ಮೋಟಾರಿನ ಗಂಟೆಯಂತೆ ಎಳೆಯಲಾರಂಭಿಸಿದ್ದರಿಂದ ಪ್ರತಿಯೊಬ್ಬನ ಆಫೀಸ ಮುಂದೆಯೂ ರೇಲು ನಿಲ್ಲುತ್ತ ಹೊರಟಿತು. ಕಾರಣವಿಲ್ಲದೇ ಸರಪಳಿ ಎಳೆಯುವವನಿಗೆ 250 ರೂಪಾಯಿ ದಂಡ ವಿಧಿಸಲಾಗುವುದು ಎಂಬ ಕಾನೂನು ಬಂಗಾಲಿಗಳಿಗೆ ಅನ್ವಯಿಸುವುದಿಲ್ಲ ಎಂದು ತಿಳಿಯಿತು.

ಹೌರಾ ಸ್ಟೇಶನ್ ಸೇರಿ ಆ ಎಡೆಬಿಡದ ಜನಸಮುದ್ರವನ್ನು ದಾಟಿ (ಶುಭ್ರ, ಬಿಳಿ ಬಟ್ಟೆ ಧರಿಸಿದ ಗಂಡಸರು, ಹೆಂಗಳೆಯರು

ಈ ಸಂಗ್ರಹದ ಮೊದಲ ಪುಟದ ಚಿತ್ರ ಹಾಗೂ ಅಲ್ಲಲ್ಲಿ ಬಳಸಿಕೊಂಡ ರೇಖಾ ಚಿತ್ರಗಳನ್ನು ಡಾ.ಕೃಷ್ಣಾನಂದ ಕಾಮತರು ತೆಗೆದ ಛಾಯಾಚಿತ್ರಗಳನ್ನನುಸರಿಸಿ ತಯಾರಿಸಲಾಗಿದೆ.

- ಸಂಪಾದಕ

ಯಾವುದೋ ಅವಸರದಲ್ಲಿ ಹೊರಟಿದ್ದರು) ಸಿಯಾಲ್ಡಾ ಸ್ಟೇಶನ್ನಿಗೆ ಎಳೆದೊಯ್ಯುವ ರಿಕ್ಷಾದಲ್ಲಿ ಬರಬೇಕಾಯಿತು. ಬಂಗಾಲಿಗಳ ಬಾಯಲ್ಲಿ ಇದು 'ಸೀಲ್ಡಾ' ಸ್ಟೇಶನ್.. ಅಲ್ಲಿಂದ ನಾನು ಲಾಲಗೋಲಾ ಪೆಸೆಂಜರಿನಿಂದ ಪ್ಲಾಸಿಗೆ ಹೋಗಬೇಕು. ಸಿಯಾಲ್ಡಾದಿಂದ ತೊಂಬತ್ತು ಮೈಲುಗಳ ಪ್ರವಾಸ. (ಬಂಗಾಲಿಗಳು ಪ್ಲಾಸಿಗೆ 'ಪೊಲಾಶಿ' ಎನ್ನುತ್ತಾರೆ.) ಕೇಳಿ ಗೊತ್ತಿದ್ದ ಇತಿಹಾಸ ಪ್ರಸಿದ್ಧ ಪ್ಲಾಸಿಯಲ್ಲಿ ಪ್ರತ್ಯಕ್ಷ ಬಂದು ಇಳಿದೆ. ಅಲ್ಲಿಯವರ ಪ್ರಕಾರ ನಾನು ಸೇರಬೇಕಿದ್ದ ಸ್ಥಳ 'ಮಿಲ್ಲು.' ರಿಕ್ಷಾದಲ್ಲಿ ಹೊರಟೆ.

ಕಾರಖಾನೆಯ ಬಳಿ ಆಳೊಬ್ಬ, ''ನಾಲ್ಕನೇ ನಂಬರ್ ಮನೆ. ಹೊಸದಾಗಿ ಸುಣ್ಣ ಬಳಿದಿದ್ದಾರೆ,'' ಎಂದು ಹೇಳಿದ.

ಮೂರು ನಾಲ್ಕು ಎಕರೆ ವಿಸ್ತಾರವಾದ ಹಿತ್ತಲಿನ ಎದುರಿಗೆ ರಿಕ್ಷಾ ನಿಂತಿತು. ತೋಟಗಾರ, ಕಾಲಿಪದ, (ಸಕ್ಕರೆ ಕಂಪನಿಯವರು ಅವನನ್ನು ದಯಪಾಲಿಸಿದ್ದರು) ಸಾಮಾನುಗಳನ್ನೆಲ್ಲ ಒಳಗಿರಿಸಿದ. ನಂತರ ಮನೆಯ ಒಂದೊಂದೇ ಬಾಗಿಲು ತೆಗೆದು ಕೋಣೆಗಳ ದರ್ಶನ ಮಾಡಿಸಿದ. ಪ್ರತಿಯೊಂದಕ್ಕೂ ಹಣತೆತ್ತು ಜೀವಿಸಿದವನಿಗೆ ಸುಪ್ಪತ್ತಿಗೆ, ಪೀಠೋಪಕರಣ ಮೊದಲಾದ ಸೌಕರ್ಯಗಳಿರುವ ಈ ಮನೆಯನ್ನು ನೋಡಿ ಸ್ವರ್ಗಸುಖವನ್ನು ಪಡೆದಷ್ಟು ಸಂತೋಷವಾಯಿತು. ಬಹುಶಃ ಕಾಲಿಪದನು ಸರಿಯಾದ ಮೇಲ್ವಿಚಾರಣೆ ಮಾಡದ್ದರಿಂದ ತೋಟ ಹೂ-ಕಾಯಿಗಳಿಲ್ಲದೆ ಹಾಳು ಸುರಿಯುತ್ತಿತ್ತು.

ಮರುದಿನ ನೋಡಿದರೆ ಹರೆಯದಲ್ಲಿ ಕಾಲಿಡುವುದರಲ್ಲಿದ್ದ ಮೂರು - ನಾಲ್ಕು ಕುಮಾರಿಯರು ಏಕಚಿತ್ತದಿಂದ ಸಿಕ್ಕ ಹಾಗೆ ಹೂ ಕೊಯ್ಯುತ್ತಿದ್ದರು. ''ಆಮಾರ ಬಾರಿ ಪೂಜಾ ಆಛೆ. ಫೂಲ ತುಲ ಛಿಲಾ'' (ನಮ್ಮ ಮನೆಯಲ್ಲಿ ಪೂಜೆಯಿದೆ. ಅದಕ್ಕೇ ಹೂ ಬಿಡಿ



''ಥತ್, ಏನ್ರಿ, ಇವ... ಮಾತು ಮಾತಿಗೂ ನನ್ನನ್ನ 'ಚೀಪ್ ಗೆಸ್ಟ್,' 'ಚೀಪ್ ಗೆಸ್ಟ್' ಅಂತಿದಾನೆ..''

ಸುತ್ತಿದ್ದೇನೆ) ಎಂದರು. ಹಲ್ಲುಜ್ಜುತ್ತ ತೋಟದಲ್ಲಿ ತಿರುಗಾಡುತ್ತಿದ್ದಾಗ ಹೊರಗೇಟಿನ ಸದ್ದಾಯಿತು. ಅರೆನಗ್ನ ಕುಮಾರನೊಬ್ಬ ಕೈಯಲ್ಲಿ ಸಣ್ಣ ಎಣ್ಣೆಯ ಸೀಸೆಯೊಂದನ್ನು ಹಿಡಿದುಕೊಂಡು ಹಿತ್ತಲಿನ ನಳದತ್ತ ಧಾವಿಸಿದ. ''ಆಮಿ ಘುಸುಲ್ ಕೊರಬಿ'' (ಸ್ನಾನಕ್ಕಾಗಿ ಬಂದಿದ್ದೇನೆ) ಎಂದ.

ತಮ್ಮ ಹಕ್ಕು ಬಾಧ್ಯತೆಗಳನ್ನು ಇನ್ನೊಬ್ಬರ ಹಿತ್ತಲಲ್ಲಿ ಸಾಧಿಸುವ ಯೋಗ್ಯತೆಯುಳ್ಳವರು ಇರಬಹುದು ಈ ಜನ ಎಂದು ನಕ್ಕೆ. (ಹೀಗೆಯೇ ಕೆಲವು ದಿನ ನಡೆಯಿತು. ನನ್ನ ಮನೆಯ ತೋಟವೆಂದರೆ ಸಾರ್ವಜನಿಕ ಆಸ್ತಿ ಎಂಬಂತಾಗಿತ್ತು. ಇದಕ್ಕೆಲ್ಲ ಕಾಲಿಪದನ ಬೆಂಬಲವಿದೆಯೆಂದು ನಂತರ ಗೊತ್ತಾಯಿತು. ಅವನನ್ನು ನಿಯಂತ್ರಿಸಿದಾಗ ಈ ಅಕ್ರಮ ಪ್ರವೇಶ ತಂತಾನೇ ನಿಂತುಹೋಯಿತು.)

ಒಂದೆರಡು ದಿನ ಪ್ಲಾಸಿಯ ಹೋಟಲುಗಳಲ್ಲಿ ಊಟ ಮಾಡಿ, ಇಂತಹ ಊಟ ಮಾಡಿದರೆ ಆರೋಗ್ಯವೂ ಕೆಡುವುದು, ಬಾಯಿಗೂ ರುಚಿಯಿಲ್ಲ, ಕಿಸೆಗೂ ಕತ್ತರಿ ಎಂದು ಕಂಡುಕೊಂಡು ಬೇಗನೇ ಸ್ವಂತ ಅಡಿಗೆ ಪ್ರಾರಂಭಿಸಿದೆ.

★

ಪ್ರತಿ ವರ್ಷ ಲಕ್ಷಾವಧಿ ಬೆಲೆ ಬಾಳುವ ಕಬ್ಬು, ಕೀಟಗಳ ಹಾವಳಿಗೆ ಬಲಿಯಾಗುವುದರಿಂದ ಕಂಪನಿಯ ಆಡಳಿತಗಾರರು ನಮ್ಮ ಸಂಸ್ಥೆಯ ಸಹಾಯ ಕೋರಿದರು. ಆಮೇಲೆ

ಕೆಯ ಸರಕಾರದ ಮೂರು ಲಕ್ಷ ಡಾಲರಿನ ಕಬ್ಬಿನ ಕೀಟದ ಸಂಶೋಧನಾ ಯೋಜನೆಯೊಂದನ್ನು ಕಾರ್ಯಗತ ಮಾಡಲು ನೈಸರ್ಗಿಕ ಪ್ರಯೋಗಾಲಯ ಒಂದು ಬೇಕಾದ್ದರಿಂದ ಕಂಪನಿಯ ನೆರವಿಗೆ ಸಂಸ್ಥೆ ಒಪ್ಪಿಕೊಂಡಿತು. ಕಂಪನಿ ನಮ್ಮ ಪ್ರಯೋಗಶಾಲೆಗೆ ಕಟ್ಟಡವೊಂದನ್ನು ಕಟ್ಟಿಸಿಕೊಟ್ಟಿತಲ್ಲದೇ ಬೇಕಾಗುವ ವೈಜ್ಞಾನಿಕ ಸಲಕರಣೆಗಳನ್ನೂ ಪೂರೈಸಿತು. ಕೆಲಸಗಾರರಲ್ಲಿ ಇಬ್ಬರ ಸಂಬಳವನ್ನು ತಾನು ಕೊಟ್ಟಿತು. ಉಳಿದ ನಾಲ್ವರ ಸಂಬಳ ಮತ್ತು ಇತರ ಖರ್ಚನ್ನು ನಮ್ಮ ಸಂಸ್ಥೆ ನಿರ್ವಹಿಸಿಕೊಳ್ಳುತ್ತಿತ್ತು. ಕಬ್ಬಿನ ಕೀಟಗಳು ಬೊಡ್ಡೆಯ ಒಳಗೆ ವಾಸಿಸುವುದರಿಂದ ಕೀಟನಾಶಕ ದ್ರವ್ಯಗಳು ಫಲಕಾರಿಯಾಗುವಂತೆ ಇರಲಿಲ್ಲ. ಹೀಗಾಗಿ ಇಂಥ ಕೀಟಗಳನ್ನು ಧ್ವಂಸ ಮಾಡುವ ಇನ್ನೊಂದು ಕೀಟ ಜಾತಿಯನ್ನು ಪ್ರಯೋಗಾಲಯದಲ್ಲಿ ಬೆಳೆಸಿ ಕಬ್ಬಿನ ಹೊಲಗಳಲ್ಲಿ ಅವನ್ನು ಉಪಯೋಗಿಸುವುದು ನಮ್ಮ ಕೆಲಸವಾಗಿತ್ತು. ನಾವು ಇರುವುದು ಹತ್ತೇ ಜನರಾದರೂ ಇಪ್ಪತ್ತು ಜನರ ದುಡಿಮೆ ನಮ್ಮನ್ನು ಕಾದಿರುತ್ತಿತ್ತು. ಹೀಗಾಗಿ ಕೆಲಸ ತೂಗಿಸಿಕೊಂಡು ಹೋಗುವುದರಲ್ಲಿ ತುಂಬ ಕಷ್ಟವೆನಿಸುತ್ತಿತ್ತು. ಅಲ್ಲದೇ ಕೇವಲ ಟೇಬಲ್ಲಿನ ಕೆಲಸಕ್ಕೆ ಒಗ್ಗಿಕೊಳ್ಳುವ ಬಂಗಾಲಿಗಳಿಂದ ಮಣ್ಣಿನ ಕೆಲಸ ಮಾಡಿಸುವುದು ಅಷ್ಟು ಸುಲಭವಾಗಿರಲಿಲ್ಲ. ಆದರೆ ನಾನು ದಕ್ಷತೆಯನ್ನು ಮಾತ್ರ ಗೌರವಿಸುತ್ತೇನೆಂಬುದು ಗೊತ್ತಾದಾಗ ಅವರೆಲ್ಲ ನನ್ನೊಂದಿಗೆ, ಗಡಿಯಾರದ ಕಡೆ ಗಮನವಿಡದೆ, ದುಡಿಯಲಾರಂಭಿಸಿದರು.

ಸಕ್ಕರೆ ಕಂಪನಿಯಲ್ಲಿ ಅನೇಕರು ವಿವಿಧ ರಾಜ್ಯಗಳಿಂದ ಬಂದವರಿದ್ದಾರೆ. ಅವರಲ್ಲಿ ಬಹು ಸಂಖ್ಯಾತರು ಮಾರವಾಡಿಗಳು. ಸಕ್ಕರೆ ಕಂಪನಿಯ ಮೂಲಕ ವಿಖ್ಯಾತ ಮಾರವಾಡಿ ಕೋಟ್ಯಧೀಶನಿದ್ದುದೇ ಇದಕ್ಕೆ ಕಾರಣವಾಗಿತ್ತು. ಬಂಗಾಲದಲ್ಲಿ ನೆಲೆಸಿ, ಧನ ಸಂಪಾದಿಸಿ ಬಂಗಾಲಿಗಳನ್ನೇ ಬಯ್ಯುವುದು ಕೆಲವರಲ್ಲಿ ರೂಢಿಯಾಗಿಬಿಟ್ಟಂತೆ ತೋರಿತು. ಎಷ್ಟೋ ಕುಟುಂಬದವರು ಹಿಂದಿಯಲ್ಲಿ ನನ್ನೊಡನೆ ಸಂಭಾಷಿಸಿ, ಸ್ನೇಹ ಬೆಳೆಸಿ ಇತರ ಬಂಗಾಲಿ ಕೆಲಸಗಾರರ ಬಗ್ಗೆ ಅದೆಷ್ಟೋ ಸತ್ಯಾಸತ್ಯದ ವಿವರಗಳನ್ನು ಒದಗಿಸಿದರು. ಬಂಗಾಲದ ಬಗ್ಗೆ ನಿಜವಾದ ಪರಿಸ್ಥಿತಿಯನ್ನು ಅಭ್ಯಸಿಸುವ ಹಂಬಲ ನನ್ನದಾಗಿತ್ತು. ಹೀಗಾಗಿ ಅವರ ಮಾತು, ಮತಗಳಿಂದ ನನ್ನ ವಿಚಾರ, ದೃಷ್ಟಿಕೋನಗಳು ಬದಲಾಗಬಾರದೆಂಬ ಉದ್ದೇಶದಿಂದ ಅವರೊಂದಿಗೆ ಹೆಚ್ಚಾಗಿ ಬೆರೆಯುವ ಅವಕಾಶಗಳನ್ನು ತಪ್ಪಿಸಿಕೊಳ್ಳಲಾರಂಭಿಸಿದೆ. ಯಾವ ಗುಂಪಿಗೂ ಸೇರದೇ ವಿರಾಮ ವೇಳೆಯನ್ನು ಬಂಗಾಲಿಗಳೊಂದಿಗೆ ಕಳೆಯುವುದರಲ್ಲೇ ತೊಡಗಿಸಿದೆ.

★

ಬಂಗಾಲದಲ್ಲಿ ಎಂಥ ಸುಶಿಕ್ಷಿತನೂ ಆಗಂತುಕನನ್ನು ಮೊದಲಿಗೆ ಬಂಗಾಲಿಯಲ್ಲಿ ಮಾತನಾಡಿಸುವನು. ಮೊದಲು ಭೆಟ್ಟಿಯಾದಾಗ "ಆಶುನ ದಾದಾ" (ಬನ್ನಿ ಸ್ವಾಮಿ), "ಬಶುನ್, ಕಿ ಖೊಬೊರ್? ಭಾಲೋ ತೋ?" (ಕುಳಿತುಕೊಳ್ಳಿ, ಏನು ಸಮಾಚಾರ, ಎಲ್ಲ ಕ್ಷೇಮವಷ್ಟೆ?) "ಕಿ ಮೊನ ಆಛ್ಛೆ?" (ಸುಖವಾಗಿದ್ದೀರಾ?)ದಿಂದ ಪ್ರಾರಂಭವಾದ ಸಂಭಾಷಣೆ ರಾಜಕಾರಣದ ವರೆಗೆ ಹೋಗುವುದುಂಟು. ಶಾಲೆ-ಕಾಲೇಜು ಮುಗಿಸಿದವರಿಗೆ ಇಂಗ್ಲಿಷ್ ಶಬ್ದಗಳ ಅರ್ಥ ತಿಳಿದರೂ ವಾಕ್ಯ ಮಾಡಲು ಬರುವುದಿಲ್ಲ! ಹಿಂದಿಯಲ್ಲಿ ಮಾತನಾಡುವುದಂತೂ ಅವಮಾನಕರವೆಂದು ತಿಳಿಯುತ್ತಾರೆ. ಹೀಗಾಗಿ ಎಲ್ಲರೊಂದಿಗೆ ಬೊಂಗ್ಲಾ (ಬಂಗಾಲಿ) ಮಾತನಾಡುವ ಉತ್ಸುಕತೆಗಿಂತ ಅವಶ್ಯಕತೆ ಬಲುಬೇಗ ತೋರಿತು. (ತಮ್ಮ ಭಾಷೆ ಬರದ ಜನರಿರುತ್ತಾರೆಂದರೆ ಹಳ್ಳಿಯುವರಿಗೆ ಬಿಡದ

ಅಚ್ಚರಿ!) ಅವರ ಭಾಷೆಯಲ್ಲಿಯೇ ಮಾತನಾಡಬೇಕೆಂಬ ಛಲ ಹುಟ್ಟಿಕೊಂಡಿತು. ಬಂಗಾಲಿ ಭಾಷೆಯಲ್ಲಿ ಹಿಂದಿ, ಸಂಸ್ಕೃತ ಶಬ್ದಗಳು ಹೆಚ್ಚಿನ ಪ್ರಮಾಣದಲ್ಲಿ ಇದ್ದುದರಿಂದ ಮತ್ತು ಬಂಗಾಲಿ ಉಚ್ಚಾರಣೆ ಕೊಂಕಣಿಗೆ ಹೋಲುವುದರಿಂದ ಬಂಗಾಲಿ ಕಲಿಯುವುದು ನಿರೀಕ್ಷಿಸಿದ್ದಕ್ಕಿಂತ ಸುಲಭವೇ ಆಯಿತು.

ಮೂರುವರೆ ನೂರು ರೂಪಾಯಿ ಕೊಟ್ಟು ಟ್ರಾನ್ಸಿಸ್ಟರ್ ಒಂದನ್ನು ಕೊಂಡೆ. ಬಿಡುವಿದ್ದಾಗ ತಪ್ಪದೇ ಕಲಕತ್ತಾ, ರಾಜಶಾಹಿ, ಢಾಕಾಗಳಿಂದ ಪ್ರಸಾರವಾಗುವ ಬಂಗಾಲಿ ಕಾರ್ಯಕ್ರಮಗಳನ್ನು ಕೇಳಲಾರಂಭಿಸಿದೆ. ರೇಡಿಯೋ ನಾಟಕಗಳನ್ನು ಕೇಳುತ್ತಿದ್ದುದರಿಂದ ಭಾಷೆಯ ಜೊತೆಗೆ ವಂಗ ಸಾಹಿತ್ಯದ ಪರಿಚಯವೂ ಬೆಳೆಯಿತು. ಢಾಕಾದಿಂದ ಪ್ರಸಾರವಾಗುತ್ತಿದ್ದ ಹಳ್ಳಿಗರ ಕಾರ್ಯಕ್ರಮ ಗ್ರಾಮ್ಯ ಬಂಗಾಲಿ ಕಲಿಯಲು ಅತ್ಯುತ್ತಮ ಸಾಧನವಾಗಿತ್ತು. ಲಾಹೋರ ಕೇಂದ್ರದಿಂದ ಬಿತ್ತರಿಸಲಾಗುತ್ತಿದ್ದ ಬಂಗಾಲಿ ಪಾಠಗಳು ತುಂಬ ಉದ್ಬೋಧಕವಾಗಿದ್ದವು. ಅವರ ಪಾಠದ ಪದ್ಧತಿಯಿಂದ ಎಂಥ ಪ್ರೌಢನೂ ಬಂಗಾಲಿ ಕಲಿಯಬಲ್ಲವನಾಗಿದ್ದ.

ಬಂಗಾಲಿ ಕಲಿಯುವುದರಲ್ಲಿ ಆಸಕ್ತಿ ತೋರಿಸಿದ್ದರಿಂದ ಆಫೀಸಿನವರಿಗೆಲ್ಲ ಹೆಮ್ಮೆ ಉತ್ಸಾಹಗಳೆನಿಸಿದವು. ಅವರಿಗೆಲ್ಲ ಬಂಗಾಲಿಯಲ್ಲಿಯೇ ಸಂಭಾಷಿಸಲು ಕೇಳಿಕೊಂಡೆ. ವ್ಯಾಕರಣದಲ್ಲಿ, ಸಂಭಾಷಣೆಯ ರೀತಿಯಲ್ಲಿ ಅವರು ನನ್ನನ್ನು ತಿದ್ದುತ್ತಿದ್ದರು. ಬಂಗಾಲಿಗಳು ಇಂಗ್ಲಿಷಿನಲ್ಲಿ ಮಾತನಾಡುವಾಗ ಅವನು, ಅವಳು ಇವುಗಳನ್ನು ತಪ್ಪುತಪ್ಪಾಗಿ ಬಳಸುತ್ತಿದ್ದುದರಿಂದ ಹೀಗೇಕೆ ಎಂದು ವಿಸ್ಮಯಪಟ್ಟಿದ್ದೆ. ಆಮೇಲೆ ಬಂಗಾಲಿಯಲ್ಲಿ ಸ್ತ್ರೀಲಿಂಗ - ಪುಲ್ಲಿಂಗ ಭೇದವಿಲ್ಲವೆಂದು ತಿಳಿಯಿತು. ಕಾಲಿಪದನಿಂದ ಕಗ್ಗ ಬಂಗಾಲಿ ಭಾಷೆಯನ್ನು ಕಲಿಯಲಾರಂಭಿಸಿದೆ. ಕೆಲವರು ಒಂದೇ ಶಬ್ದಕ್ಕೆ ಬಂಗಾಲಿಯಲ್ಲಿ ಅನೇಕ ಅರ್ಥಗಳು ಇರುವುದನ್ನು ತಿಳಿಸಿಕೊಟ್ಟು ಅವುಗಳನ್ನು ಜಾಗರೂಕತೆಯಿಂದ ಬಳಸಬೇಕೆಂಬುದನ್ನು ಹೇಳಿಕೊಟ್ಟರು.

★

ನಾನಿರುವ ಮನೆಯಿಂದ ಅರ್ಧ ಮೈಲು ದೂರದಲ್ಲಿ ಗಂಗಾನದಿಯ ಶಾಖೆಯಾದ ಭಾಗೀರಥಿ ಹರಿಯುತ್ತಿದ್ದಾಳೆ. ಒಂದು ಸಂಜೆ ಅವಳ ದರ್ಶನ ಪಡೆಯಲು ಹೊರಟೆ. ಮೀರಾ ಬಝಾರದಿಂದ ಬರುವ ಮುಖ್ಯ ರಸ್ತೆ ನದೀತೀರದ ತನಕ ಹೋಗುವುದರಿಂದ ಹಾಗೇ ಹೊರಟೆ. ಅಂಚಿನಲ್ಲಿ ಒಂದು ಕಿರು ಚಹಾದಂಗಡಿ; ಎದುರಿಗೆ ಗಳಗಳನ್ನು ಹುಗಿದು ಎತ್ತರವಾಗಿ ತಯಾರಿಸಿದ ಬಿದಿರಿನ ಮಂಚ. ನಾಲ್ಕಾರು ಪ್ರೌಢ ಬಂಗಾಲಿಗಳು ಅದರ ಮೇಲೆ ವಿಶ್ರಮಿಸಿ ಒಂದೇ ದಿನ ಪತ್ರಿಕೆಯನ್ನು ಪಾಲುಗೊಂಡು ಓದಿ ರಾಜಕಾರಣವನ್ನು ತುರುಸಿನಿಂದ ಚರ್ಚಿಸುತ್ತಿದ್ದರು. ಮುಂದೊಂದು ಆಲದ ಮರ. ಅದರ ಅಡಿಯಲ್ಲಿ ಹುಲ್ಲಿನಿಂದ ನಿರ್ಮಿತವಾದ ಕಾಳಿಯ ವಿಗ್ರಹ ನಿಂತಿದೆ. ಈ ವಿಗ್ರಹಕ್ಕೂ ಭಕ್ತರು ಸಲ್ಲಿಸಿದ ಪೂಜೆಯ ಎಲ್ಲ ಕುರುಹುಗಳೂ ಅಲ್ಲಿದ್ದವು. ದಸರಾದ ಹೊತ್ತಿಗೆ ವಿವಿಧ ಮಣ್ಣಿನ ವಿವಿಧ ಬಣ್ಣಗಳನ್ನು ತಳೆದ ಕಾಳಿಯ ವಿಗ್ರಹ ಗಾಳಿ ಮಳೆಗೆ ತನ್ನ ಅಲಂಕಾರ, ಮಣ್ಣಿನ ಮಾಂಸ-ಖಂಡಗಳನ್ನು ಕಳೆದುಕೊಳ್ಳುವುದರಿಂದ ನಂತರ ಉಳಿಯುವ ಹುಲ್ಲಿನ ಅಸ್ಥಿಪಂಜರವನ್ನೇ ವರ್ಷದುದ್ದಕ್ಕೂ ಪೂಜಿಸುವರೆಂದು ನಂತರ ತಿಳಿಯಿತು.


ಎದುರಿಗೆ ಭಾಗೀರಥಿಯ ದರ್ಶನವಾಯಿತು. ಹೊನ್ನಾವರದಲ್ಲಿ ಅರ್ಧಮೈಲಗಲ ನದಿಯ ಪಾತ್ರವನ್ನು ನೋಡಿ ಬೆಳೆದವನಿಗೆ ಮಳೆಗಾಲದ ಹಳ್ಳದಂತಿದ್ದ ಭಾಗೀರಥಿಯನ್ನು ನೋಡಿ ನಿರುತ್ಸಾಹವಾಯಿತು.

★

ಒಂದು ಮುಂಜಾನೆ ಕೈಚೀಲ ಒಡಿದು ಪೇಟೆಗೆ ಹೊರಟೆ. ಹವೆ ಹಿತಕರವಾಗಿದ್ದರೂ ಬಂಗಾಲಿಗಳಿಗೆ ಚಳಿ ಎನಿಸಿದ್ದರಿಂದ ಕೆಲವರು ಹುಲ್ಲು ಕಡ್ಡಿಯಿಂದ ಬೆಂಕಿ ಹೊತ್ತಿಸಿ ಕಾಸಿಕೊಳ್ಳುತ್ತಿದ್ದರು. ದಿನದ ಶ್ರಮಜೀವಿಗಳು ಸಮಯಕ್ಕೆ ಹಾಜರ ಇರಬೇಕೆಂದು ವೇಗದಿಂದ ನಡೆದಿದ್ದರು.

ದೂರದ ಹೊಂಡವೊಂದರಲ್ಲಿ ಗಂಡಸರು, ಹೆಂಗಸರು, ಮಕ್ಕಳು ಎಲ್ಲರೂ ಉಟ್ಟ ಬಟ್ಟೆಯಲ್ಲಿಯೇ ಮೀನು ಹಿಡಿಯುವ ಸಾಹಸ ನಡೆಸಿದ್ದರು. ಒಮ್ಮಿಂದೊಮ್ಮೆ ಈ ಚಿಕ್ಕ ಹೊಂಡದಲ್ಲಿ ಇಷ್ಟು ಮೀನು ಹೇಗೆ ದೊರೆಯಲು ಸಾಧ್ಯವೆಂದು ಸೋಜಿಗಪಟ್ಟು ಪಕ್ಕದಲ್ಲಿದ್ದ ಹುಡುಗನನ್ನು ಕೇಳಿದೆ. ಅವನು, ''ಔಷಧ ಹಾಕಿದ್ದಾರೆ'' ಎಂದು ಹೇಳಿ ತನ್ನ ಪಾಲಿನ ಮೀನು ಪಡೆಯಲು ಧಾವಿಸಿದ. ಇದೆಂತಹ ಔಷಧವಿರಬಹುದೆಂದು ಪಕ್ಕದಲ್ಲಿ ಹೋಗಿ ಪರೀಕ್ಷಿಸಿ ನೋಡಿದೆ. ಯಾರೋ ಒಬ್ಬರು ಒಂದೊಂದೇ ಮೀನು ಹಿಡಿಯುವ ತೊಂದರೆ ತಪ್ಪಿಸಲು ವಿಷಕಾರಿ, ಕೀಟನಾಶಕ 'ಫೊಲಿಡಾಲ'ನ್ನು ನೀರಲ್ಲಿ ಸಿಂಪಡಿಸಿದ್ದರಿಂದ ಮೀನು ಸತ್ತು ಮೇಲೆ ತೇಲಲಾರಂಭಿಸಿದ್ದವು. ''ವಿಷ ತಿಂದು ಸತ್ತ ಮೀನನ್ನು ನೀನು ತಿಂದರೆ ನಿನಗೆ ವಿಷ ಬಾಧಿಸಲಾರದೇ?'' ಎಂದು ಕೇಳಿದಾಗ ಒಬ್ಬ, ಮಸಾಲೆ ಸೇರಿಸಿ ಬೇಯಿಸಿದಾಗ ವಿಷವೆಲ್ಲ ಉಗಿಯಾಗಿ ಹೋಗುವುದೆಂದು ಉತ್ತರ ಹೇಳಿ ನಾಗಾಲೋಟದಿಂದ ಓಡಿದ. ಹೊಟ್ಟೆಯ ಹಸಿವಿಗೆ ನಿಧಾನವಾಗಿ ಕೊಲ್ಲುವ ವಿಷವನ್ನು ಉಂಡು ಜೀವಿಸುವ ಜನರಿದ್ದಾರೆಂದು ತಿಳಿದು ಕಳವಳವಾಯಿತು.

ಮತ್ತೊಂದು ದಿನ. ರವಿವಾರ. ಊಟ ಮುಗಿಸಿ ಮಧ್ಯಾಹ್ನ ಅಡ್ಡಾದೆ. ಸ್ವಲ್ಪ ಜಂಪು ಹತ್ತುವುದರಲ್ಲಿದ್ದಾಗ ಹೊರಗಿನ ಕೂಗಾಟದಿಂದ ಎಚ್ಚರವಾಯಿತು. ಐದಾರು ಹುಡುಗರು ಕಬ್ಬಿನ ತೋಟದಲ್ಲಿ, ನಾಲ್ಕಾರು ಜನ



ಎಲ್ಲೆಲ್ಲಿಯೂ ಸೃಷ್ಟಿ ಸೌಂದರ್ಯ

ಮಾವಿನ ಮರವೇರಿ ಲೂಟಿ ನಡೆಸಿದ್ದರು. ಗದರಿಸಿದಾಗ ಚಿಕ್ಕ ಹುಡುಗರು ಓಡಿ ಹೋದರೂ ದೊಡ್ಡ ಹುಡುಗರು ಕುಳಿತಲ್ಲಿಂದ ಅಲುಗಾಡಲಿಲ್ಲ. ಬಳಿಗೆ ಹೋಗಿ ಯಾಕೆ ಹೀಗೆ ಎಂದು ಕೇಳಿದರೆ, ''ನೀವು ಪ್ರತಿದಿನ ತಿನ್ನುತ್ತೀರಿ, ನಾವು ಒಂದು ದಿನ ತಿನ್ನುವುದು ಬೇಡವೆ?'' ಒಬ್ಬನ ಸವಾಲು. ಇನ್ನೊಬ್ಬನು, ''ನಿಮಗೆ ಬೇಕಾಗುವುದೆಲ್ಲ ನಿಮ್ಮ ಹಿತ್ತಿಲಿನಲ್ಲಿದೆ. ನಮ್ಮ ಹಿತ್ತಿಲಲ್ಲಿ ಮಾವಿನ ಮರವಿಲ್ಲ. ಅಂತೆಯೇ ಇಲ್ಲಿ ಬಂದಿದ್ದೇವೆ. ಇಲ್ಲದಿದ್ದರೆ ಯಾರು ಬರುತ್ತಿದ್ದರು?'' ಎಂದು ದಿಟ್ಟತನದಿಂದ ಕೇಳಿದ. ಅವರ ಮಾತಿನ ಸರಣಿ ಕಮ್ಯುನಿಸ್ಟ್ ಸಮಾಜವಾದಿಗಳಿಗೆ ಸರಿಯೆನಿಸಬಹುದಾದರೂ ರೂಢಿಯಿಂದ ಸರಿಯಾಗಿಲ್ಲವೆಂದುಕೊಂಡೆ. ಈಗ ತಿಂದದ್ದು ಸಾಕು ಎಂದು ಅವರನ್ನೆಲ್ಲ ಕೆಳಗಿಳಿಸಿ ಕಳಿಸಿ ಗೇಟು ಹಾಕಿದೆ.

ದಾಲಿಪೋಕರನ್ನು ಏನಾದರೊಂದು ಹೆಸರಿಟ್ಟು ಕರೆದು ರೇಗಿಸುವುದು ಬಂಗಾಲಿ ಮಕ್ಕಳಿಗೆ ಪ್ರಿಯವಾದ ಹವ್ಯಾಸ. ಒಳ್ಳೆ ಬಟ್ಟೆ ಹಾಕಿಕೊಳ್ಳುವವನಿಗೆ, ಎತ್ತರವಾಗಿದ್ದವನಿಗೆ, ಕ್ರಾಪನ್ನು ಚೆನ್ನಾಗಿ ಬಾಚಿಕೊಳ್ಳುವವನಿಗೆ, ಎಲ್ಲರಿಗೂ ಒಂದೊಂದು ಹೆಸರಿಡುತ್ತಾರೆ. ತಿಂದುಂಡು ಗಟ್ಟಿಮುಟ್ಟಾದ ದೇಹವನ್ನೂ ನೋಡಲಾಗದು ಅವರಿಂದ. ಅಂತೆಯೇ ನನಗೆ ''ಬೋಂಗ್ಲಾರ್ ಬಾಘ್'' (ಬಂಗಾಲದ ಹುಲಿ) ಎಂದು ಹೆಸರಿಟ್ಟಿದ್ದರು. ಹಿಂದೊಮ್ಮೆ ಬಂಗಾಲಿಗಳಿಗೆ ಮಾರಕನಾಗಿದ್ದ ಒಬ್ಬನಿಗೆ ಭವ್ಯ ದೇಹವಿದ್ದು ಬಂಗಾಲಿಗಳ ಹುಲಿ ಎನಿಸಿಕೊಂಡಿದ್ದನಂತೆ. ಒಮ್ಮೆ ಆ ಹುಡುಗರ ಮೇಲೆ ಚೆನ್ನಾಗಿ ಗುಡುಗಿದ ನಂತರ ನನ್ನನ್ನವರು ಹಾಗೆ ಕರೆಯುವುದನ್ನು ನಿಲ್ಲಿಸಿದರು.

ಕಾರಖಾನೆಯ ಎಡದಿಕ್ಕಿಗೆ ಫಿಟ್ಟರ್ ಜನರ ಕಾಲೋನಿ ಇದೆ. ಎರಡೆರಡು ಕೋಣೆಗಳ ಮನೆಯಲ್ಲಿ ಇಪ್ಪತ್ತು ಜನ ವಾಸಿಸುತ್ತಿದ್ದರು. ಹೀಗಾಗಿ ಯಾರ ಮನೆಯ ಮಕ್ಕಳು ಯಾರು ಎಂದು ಅಲ್ಲಿದ್ದ ಎರಡು ವರ್ಷಗಳಲ್ಲಿ ಪತ್ತೆ ಹಚ್ಚಲಾಗಲಿಲ್ಲ. ಮುಂಜಾನೆಯೆದ್ದು ರಸ್ತೆಯ ಮೇಲೆ ಆಡಲು ಪ್ರಾರಂಭಿಸಿದರೆ ಮಲಗುವ ತನಕವೂ ರಸ್ತೆಯ ಮೇಲೆ ಇರುತ್ತಿದ್ದರು. ಹುಡುಗಿಯರು ಕಿರಿ ಫ್ರಾಕು ಹಾಕಿ, ಉದ್ದ ಚಡ್ಡಿ ಹಾಕಿ ಹೆರಳಿಗೆ ಕಪ್ಪು ರಿಬನ್ ಸುತ್ತಿ ಕಣ್ಣು ಮುಚ್ಚಾಲೆಯಾಟ, ಕುಂಟಹಲಪಿಯ ಆಟವಾಡುವರು. ಇನ್ನೂ ಬೆಳೆದ ಹುಡುಗಿಯರಿಗೆ ಅಣ್ಣನ, ಅಪ್ಪನ ಸೈಕಲ್ ನಡೆಸುವುದೆಂದರೆ ಪ್ರೀತಿ. ಬಂಗಾಲಿ ಕನ್ಯೆಯರಿಗೆ ವಿಪುಲ ಕೇಶರಾಶಿಯಿರಬೇಕು ಎಂಬ ಕಲ್ಪನೆ ಮಾಡಿಕೊಂಡವನಿಗೆ ಚೋಟುದ್ದ ಕೂದಲನ್ನೇ ಎಲ್ಲೆಲ್ಲೂ ಕಂಡು ನಿರಾಶೆಯಾಯಿತು.

★

ಪ್ರತಿವಾರ ಕಬ್ಬಿನ ಕೀಟಗಳ ಚಟುವಟಿಕೆಗಳನ್ನು ಅಭ್ಯಸಿಸಲು ಬೇರೆ ಬೇರೆ ಹೊಲಗಳಿಗೆ ಹೋಗಬೇಕಾಗುತ್ತಿತ್ತು. ಪ್ಲಾಸಿಯಲ್ಲಿ ಮುಖ್ಯ ರಾಜಮಾರ್ಗ ಮತ್ತು ಊರ ಸಮೀಪದಲ್ಲಿ ಹಾಯುತ್ತಿದ್ದ ರಾಷ್ಟ್ರೀಯ ಹೆದ್ದಾರಿಗಳನ್ನು ಬಿಟ್ಟರೆ ಉಳಿದವೆಲ್ಲ ಮಣ್ಣಿನ ರಸ್ತೆಗಳೇ. ಬೇಸಿಗೆಯಲ್ಲಿ ಧೂಳು ಹಿಟ್ಟಿನಂತೆ ಹಾರಿ ಕಣ್ಣು, ಕಿವಿ, ಮೂಗುಗಳನ್ನು ವ್ಯಾಪಿಸಿದರೆ, ಮಳೆಗಾಲದಲ್ಲಿ ರಸ್ತೆಗಳು ಕೆಸರಿನಿಂದ ತುಂಬಿಹೋಗುತ್ತವೆ. ಅಂಥ ದಿನಗಳಲ್ಲಿ ನಡೆದಾಡುವುದೂ, ಸಾಯಕಲ್, ಮೋಟಾರ್ ಸಾಯಕಲ್, ಜೀಪುಗಳಂಥ ವಾಹನಗಳನ್ನು ನಡೆಸುವುದೂ ದುಸ್ತರ. ಮಳೆ ಕಡಿಮೆಯಾಗಿ ಬಿಸಿಲು ಬಿದ್ದ ದಿನ ನೋಡಿ ಹೊರಗೆ ಹೊರಡಬೇಕು. ಕೀಟಗಳ ನಿರೀಕ್ಷಣೆಗೆ ಹೋದಾಗ ಬಂಗಾಲಿ ಜನಜೀವನದ ನಿರೀಕ್ಷಣೆಗೂ ಒಂದು ಅವಕಾಶ ದೊರೆಯುತ್ತಿತ್ತು.

ಇಂಥ ರಸ್ತೆಯಲ್ಲಿ, ರಸ್ತೆ ನಿಯಮ ಅರಿಯದ ಅವರಿಂದಾಗಿ, ಏನಾದರೂ ದುರ್ಘಟನೆ ನಡೆದರೆ ಹಳ್ಳಿಗರು ತಾವೇ ನ್ಯಾಯಸ್ಥಾನದಲ್ಲಿ ಕುಳಿತು ಕೊನೆಯ ತೀರ್ಪು ಕೊಡುವರಲ್ಲದೇ, ವಾಹನ ಚಾಲಕನನ್ನು ಹಿಡಿದು ಬಡಿಯಲಿಕ್ಕೆ ಹಿಂದೆ ಮುಂದೆ ನೋಡುವವರಲ್ಲ. ಈ ಕಾರಣಕ್ಕಾಗಿ ಇಂಥ ಪ್ರಯಾಣ ಕೈಕೊಂಡಾಗ, ಮೋಟಾರ್-ಸಾಯಕಲ್ ನಡೆಸಲು ಬರುತ್ತಿದ್ದರೂ ಚಾಲಕನ ಹೊಣೆಯನ್ನು ಬಂಗಾಲಿ ಸಹೋದ್ಯೋಗಿಗೆ ಬಿಟ್ಟುಕೊಟ್ಟು ಹಿಂದಿನ ಸೀಟಿನಲ್ಲಿ ಕೂಡುತ್ತಿದ್ದೆ. ಇದರಿಂದ ಇನ್ನೊಂದು ಲಾಭವೂ ಉಂಟು. ಚಾಲಕನ ಹೊಣೆಗಾರಿಕೆ ತಪ್ಪಿದ್ದರಿಂದ ಸುತ್ತಲಿನ ನೋಟಗಳನ್ನು ಸರಿಯಾಗಿ ನೋಡಬಹುದು. (ನನ್ನನ್ನು 'ಪುಕಾ ಬಾಬು' -ಕೀಟ ಪಂಡಿತ- ಎಂದು ಆ ಹಳ್ಳಿಗರು ಕರೆಯುತ್ತಿದ್ದರು.)

ಕೀಟಗಳಿಗೆ ಆಹುತಿಯಾದ ಕಬ್ಬನ್ನು ಕಡಿದಾಗ ಅವುಗಳನ್ನು ಹೊತ್ತು ತಂದು ನಮ್ಮ ಸಂಶೋಧನಾಲಯದ ಆವಾರದಲ್ಲಿ ಕುಳಿತು

ಅವನ್ನು ಸಿಗಿದು ಅವುಗಳಲ್ಲಿ ಬೇರೆ ಬೇರೆ ಅವಸ್ಥೆಯಲ್ಲಿ ಇರುವ ಕೀಟಗಳನ್ನು ಸಂಗ್ರಹಿಸಿ, ಎಣಿಸಿ, ಬರೆಸಿಕೊಂಡು ಹೋಗುತ್ತಿದ್ದರು. ಒಮ್ಮೊಮ್ಮೆ ಆಫೀಸಿನ ವೇಳೆ ಮೀರಿ ಬಂದವರು ಆದೇಶದಿಂದ ನನ್ನ ಮನೆಗೆ ಬಂದು ತಮ್ಮ ಕಾರ್ಯ ಮುಗಿಸಿ ಹೋಗುತ್ತಿದ್ದರು.

ಕಬ್ಬಿನ ಎಲೆಗಳ ಮೇಲೆ ಇಟ್ಟ ಅನೇಕ ಸಣ್ಣ ತತ್ತಿಗಳನ್ನು ಸಂಗ್ರಹಿಸುವುದು 10-14 ವರ್ಷದ ಚುರುಕುಗಣ್ಣಿನ ಹುಡುಗಿಯರಿಗೆ ಮೀಸಲು. ತೇಜನಗರ ಎಂಬ ಹಳ್ಳಿಯಿಂದ ಬರುವ ಹುಡುಗಿಯರು ಈ ಕೆಲಸ ಮಾಡುತ್ತಿದ್ದರು. ಮೈಯನ್ನು ಸರಿಯಾಗಿ ಮುಚ್ಚುವಷ್ಟೂ ಬಟ್ಟೆ ಅವರಿಗೆ ಇರುತ್ತಿರಲಿಲ್ಲ.

ತತ್ತಿಗಳನ್ನು ಸಂಗ್ರಹಿಸುವವರಿಗೆ (ಒಂದು ಗೊಂಚಲಿನಲ್ಲಿ 100-150 ತತ್ತಿಗಳಿರುತ್ತವೆ) ಒಂದು ಗೊಂಚಲಿಗೆ ಒಂದು ಪೈಸಾದಂತೆ ಕೊಡುವದು ವಾಡಿಕೆ. ಆದ್ದರಿಂದ ದಿನವೆಲ್ಲ ದುಡಿದರೂ ನಾಲ್ಕೆಂಟಾಣೆಯ ಗಳಿಕೆ ಅವರಿಗಿರಲಿಲ್ಲ. ಕೀಟದ ಹಾವಳಿ ಕಡಿಮೆಯಿದ್ದಾಗ ಅದೂ ಸಿಗುತ್ತಿರಲಿಲ್ಲ. ಪರಾವಲಂಬಿ ಕೀಟಗಳನ್ನು ಬೆಳೆಸಲು ಈ ತತ್ತಿಗಳ ಉಪಯೋಗವಾಗುತ್ತಿತ್ತು.

ಒಮ್ಮೆ ಎಷ್ಟು ಸಲ ಪ್ರಯತ್ನಿಸಿದರೂ ಈ ತತ್ತಿಗಳಿಂದ ಒಂದೂ ಕೀಟ ಹೊರಬಾರದಾದಾಗ ಸಂಶಯದಿಂದ ವಿವರವಾಗಿ ಪರೀಕ್ಷಿಸಿದೆ. ಅವು ಕೃತಕ ತತ್ತಿಗಳೆಂದು ತಿಳಿಯಿತು. ಅಂದು ತತ್ತಿಗಳನ್ನು ತಂದ ಹುಡುಗನಿಗೆ, ''ಈ ತತ್ತಿಗಳನ್ನು ಸಿದ್ಧ ಮಾಡುವ ಬಗೆ ಹೇಳು ಇಲ್ಲದಿದ್ದರೆ ಕಂಪನಿಗೆ ರಿಪೋರ್ಟ್ ಮಾಡುತ್ತೇನೆ,'' ಎಂದಾಗ ಹೆದರಿ ಬಾಯಿಬಿಟ್ಟ. ಕಬ್ಬಿನ ಪರ್ಣಕ್ಕೆ ಬೇಲಿಯಲ್ಲಿ ಬೆಳೆಯುವ ಕಂಟಿಯ ಸೊನೆಯನ್ನು ಹಚ್ಚಿ ಅದರ ಮೇಲೆ ತತ್ತಿಗಳನ್ನು ಹೋಲುವ ಬೊಡ್ಡೆಯ ಹುಡಿ ಉದುರಿಸಿದರೆ ಒಣಗಿದಾಗ ಅವು



ರಾಜವಾಡದ ಕುವರಿ

ಕಬ್ಬಿನ ಕೀಟದ ತತ್ತಿಗಳಂತೆ ಕಾಣುವವೆಂದು ವಿವರಿಸಿದ. ನಾಲ್ಕು ಪೈಸಾ ಹೆಚ್ಚು ಸಂಪಾದಿಸುವ ಸಲುವಾಗಿ ಅವರು ಕೈಕೊಂಡ ಈ ಸಂಶೋಧನೆಗೆ ತಲೆದೂಗಿದರೂ ಅದನ್ನು ಕಂಪನಿಗೆ ತಿಳಿಸದೇ ಬೇರೆ ಉಪಾಯವಿರಲಿಲ್ಲ.

ರಾಮನಗರದಿಂದ ಪ್ಲಾಸಿಯ ಕಾರಖಾನೆಗೆ ಬರುವಾಗ (ಅಲ್ಲಿ ಒಂದೆಡೆ ಕಂಪನಿಯ ರೇಲುಮಾರ್ಗವಿದೆ. ಕಬ್ಬು ಹೇರಿಕೊಂಡು ಹೋಗುವ ರೇಲುಗಳಿಗಾಗಿ) ಕಬ್ಬನ್ನು ಎಳೆದು ಒಯ್ಯು ಹುಡುಗರನ್ನು ನೋಡುತ್ತಿದ್ದಂತೆ ಸಕ್ಕರೆ ಕಂಪನಿಯ ಜನರಲ್ ಮೆನೇಜರ್ ಮುಝುಂದಾರರು ಕಾರಿನಲ್ಲಿ ಬಂದರು. ''ನೋಡಿ, ಈ ರೀತಿಯಾಗಿ ಕಬ್ಬನ್ನು ಕಳವು ಮಾಡಿದರೆ ಕಂಪನಿಗೆ ಹೇಗೆ ಲಾಭವಾಗಬೇಕು? ಪ್ರತಿವರ್ಷ ಎರಡರಿಂದ ಎರಡೂವರೆ

ಲಕ್ಷ ರೂಪಾಯಿ ಬೆಲೆ ಬಾಳುವ ಕಬ್ಬನ್ನು ತಿಂದು ಹಾಕುತ್ತಾರೆ ಈ ಮಕ್ಕಳು,'' ಎಂದರು. ''ಕಬ್ಬಿನ ಕೀಟಗಳು ತಿಂದು ಹಾಳು ಮಾಡುವುದಕ್ಕಿಂತ ಈ ಜನ ತಿಂದೇ ಹಾಳು ಮಾಡುವ ಹಾನಿ ಹೆಚ್ಚಾಯಿತು. ಇದನ್ನು ನಿಲ್ಲಿಸಲು ಉಪಾಯವಿಲ್ಲವೆ?'' ಎಂದು ಕೇಳಿದೆ. ಅವರು ವಿಷಾದದಿಂದ ನಕ್ಕು, ''ದೇವರೇ ರಕ್ಷಿಸಬೇಕು,'' ಎಂದು ನಿಟ್ಟು ಸಿರುಬಿಟ್ಟರು.

ಒಮ್ಮೆ ಕಬ್ಬು ಕಾರಖಾನೆಯ ಆವಾರದಲ್ಲಿ ಬಂದು ಬಿದ್ದರೆ ಅದೆಲ್ಲ ಸಕ್ಕರೆಗೆ ಮೀಸಲು ಎಂದು ಹೇಳಲು ಬರುವಂತಿಲ್ಲ. ಕಾರಬಾಬು, ಸತ್ಯಬಾಬುಗಳ ಮಕ್ಕಳೇನೋ ತಮಗೆ ಬೇಕಾ ದಷ್ಟು ಕಬ್ಬನ್ನು ಪಡೆಯುತ್ತಾರೆ. ಇನ್ನು ಮದುವೆಯಾಗದೇ ಇರುವ ತರುಣರು, ಚಿಕ್ಕ ಮಕ್ಕಳ ತಂದೆಯಿದ್ದವರು ಕಾರಖಾನೆಯಿಂ ದಲೇ ತಮಗೆ ಬೇಕಾದಷ್ಟು ಕಬ್ಬು ಪಡೆಯು ತ್ತಾರೆ. ಕಬ್ಬಾಡುವ ದಿನಗಳಲ್ಲಿ ನೀರು ಚಹ ಸೇವಿಸುವ ಬದಲಾಗಿ ಎಲ್ಲರೂ ರಸ ಹೀರು ತ್ತಾರೆ. ''ಕೆಲವರಂತೂ ಕಿಸೆಯಲ್ಲಿ ನಿಂಬು, ಆದಾ (ಹಸಿಶುಂಠಿ) ಇಟ್ಟುಕೊಂಡೇ ಕೆಲಸಕ್ಕೆ ಹೊರಡುತ್ತಾರೆ. ತಿಂಡಿ ಊಟದ ಬದಲಾಗಿ ಸಕ್ಕರೆ ತಿಂದು ಜೀವಿಸುವವರೂ ಇದ್ದಾರೆ,'' ಎಂದ ಪ್ರಧಾನ. ಅಂಥವರು ಪ್ರತಿದಿನ 2-3 ಕಿಲೋಗಳಷ್ಟು ಸಕ್ಕರೆಯನ್ನು ಸಹಜವಾಗಿ ಭಕ್ಷಿಸುವರಂತೆ!

ಕಾರಖಾನೆ ಕೆಲಸ ಪ್ರಾರಂಭ ಮಾಡಿದಾಗ ಪ್ಲಾಸಿಗೆ ಹೊಸ ಜೀವಕಳೆ ಬರುತ್ತದೆ. ಬಿಹಾರದಿಂದ ಬರುವ ತಾತ್ಕಾಲಿಕ ಕೆಲಸಗಾ ರರಿಗೆ ಅಲ್ಲಲ್ಲಿ ಸಣ್ಣ ಗುಡಿಸಲುಗಳು ಏಳು ತ್ತವೆ. ಈ ಕಾರ್ಮಿಕರು ತಮ್ಮ ಸಂಗಡ ಕುರಿ, ಕೋಳಿ, ಮಸಾಲೆ ರುಬ್ಬುವ ಕಲ್ಲು, ಟ್ರಾನ್ಸಿ ಸ್ಟರ್ ಮುಂತಾದವನ್ನೆಲ್ಲ ಹೊತ್ತು ತರು ತ್ತಾರೆ. ಅವರ ಸಲುವಾಗಿ ಚಹಾ, ತಿಂಡಿ, ತಂಬಾಕುಗಳ ಅಂಗಡಿಗಳು ಕಾಣಸಿಕೊಳ್ಳು ತ್ತವೆ. ಮರದಡಿಯ ಉಡಿಯಾ ನಾಪಿತ ಕೈತುಂಬ ಸಂಪಾದಿಸಲಾರಂಭಿಸುತ್ತಾನೆ.

★

ಪ್ಲಾಸಿಯಲ್ಲಿ ಭಾಗೀರಥಿ ನದಿ ದಾಟಿದರೆ 'ರಾಮೊನಗರ' ಬರುತ್ತದೆ. ಪ್ಲಾಸಿ ನದಿಯಾ ಜಿಲ್ಲೆಯಲ್ಲಿದ್ದರೆ, ರಾಮನಗರ ಮುರಶಿದಾ ಬಾದ ಜಿಲ್ಲೆಯಲ್ಲಿ ಬರುತ್ತದೆ. ಸಕ್ಕರೆ ಕಾರ ಖಾನೆ ಪ್ಲಾಸಿಯಲ್ಲಿದ್ದರೆ, ಆಫೀಸುಗಳೆಲ್ಲ ರಾಮನಗರದಲ್ಲಿದ್ದುದರಿಂದ ಇದಕ್ಕೆ 'ರಾಮ ನಗರ ಸಕ್ಕರೆ ಕಾರಖಾನೆ' ಎಂದು ಹೆಸರು.

ಒಮ್ಮೆ ರಾಮನಗರವನ್ನು ಸುತ್ತಾಡಿ ಬರಲು ದೋಣಿಯನ್ನು ಹತ್ತಿದೆ. ರಾಮನಗರ ದ ನದೀ ತೀರ ಪ್ಲಾಸಿಯದಕ್ಕಿಂತ ಸಾಕಷ್ಟು ಎತ್ತರದಲ್ಲಿದೆ. ಹೀಗಾಗಿ ದೂರ ದೂರದ ನೋಟಗಳು ಕಾಣುತ್ತವೆ.

ಸಂಜೆಯ ಸ್ನಾನ ಮಾಡುವವರು ಒಬ್ಬೊ ಬ್ಬರಾಗಿ ನದಿಗೆ ಬರಲಾರಂಭಿಸಿದರು. ಗಂಡ ಸರು ಮೀಯುವಲ್ಲಿಂದ ಐವತ್ತು ಅಡಿ ಆಚೆಯ ಸ್ನಾನ ಹೆಂಗಳೆಯರಿಗೆ ಮೀಸಲು. ಯಾರೂ ಬೇರೆ ಬಟ್ಟೆ, ಸಾಬೂನು ಮುಂತಾದ ವನ್ನು ತರುವ ಗೋಜಿಗೇ ಹೋಗಿರಲಿಲ್ಲ. ಬಂದಂತೆ ಸ್ನಾನ ಮಾಡಿ ಒದ್ದೆ ಬಟ್ಟೆಯಲ್ಲಿ ಮರಳುವರು.

ರಾಮನಗರದ ದಂಡೆಯಲ್ಲಿ ಕುಳಿತರೆ ಪ್ರತಿ ದಿನ ಶವ ಸಂಸ್ಕಾರಕ್ಕೆ ಬರುವವರನ್ನು ನೋಡ ಬಹುದಾಗಿದೆ. ಬಂದವರು 'ಬೋಲೋ ಹರಿ ಓಂ' ಅನ್ನುತ್ತಿರುತ್ತಾರೆ. ಅಕ್ಕ ಪಕ್ಕದ ಊರಿನ ವರು ಬಿಳಿಬಟ್ಟೆಯಲ್ಲಿ ಹೆಣವನ್ನು ಸುತ್ತಿ, ಬಿದಿರಿನ ಚಟ್ಟಕ್ಕೆ ಕಟ್ಟಿ ಒಯ್ಯುರೆ ದೂರದ ಊರಿನವರು ಹೊರುವವರನ್ನು ಗೊತ್ತು ಮಾಡಿ ಹಣಕೊಟ್ಟು ಅವರಿಗೇ ಎಲ್ಲವನ್ನು ಒಪ್ಪಿಸಿಬಿಡುತ್ತಾರೆ. ಹೆಣ ಹೊರುವವರಿಗೆ ಹಣ ಸುರಿಯಲು ಒಪ್ಪದಿದ್ದವರು ಎರಡು ಸಾಯಕಲ್ ನಡುವೆ ಬಿದಿರುಗಳನ್ನು ಬಿಗಿದು ಹೆಣವನ್ನು ಹೊತ್ತು ಇಬ್ಬರೇ ಸಾಗಿಸುತ್ತಾರೆ.

ನದಿಯ ದಂಡೆಯ ಬಿಲದಲ್ಲಿ ಹೊಕ್ಕ ಹೆಗ್ಗಣಗಳನ್ನು ಹಿಡಿದು ತಿನ್ನುವ ಶೂದ್ರರು, ಈ ಬಿಲಗಳನ್ನು ನೀರಿನಿಂದ ತುಂಬಿ ಹೆಗ್ಗಣಗಳನ್ನು ಕೊಲ್ಲುವ ಯತ್ನ ನಡೆಸುತ್ತಾರೆಂಬುದನ್ನು ನೋಡಿದಾಗ ಒಂದು ರೀತಿಯಾಯಿತು. ದೂರದಲ್ಲಿ ಹತ್ತಾರು ಚಿಮಣಿ ದೀಪಗಳು ಕಂಡವು. ಅವು ಹತ್ತಿರ ಬಂದಾಗ ಸೊಡರುಗಳಿಂದ ಡಬ್ಬಿಯಲ್ಲಿಟ್ಟ ದೀಪಗಳಿಂದ ಅವರು ದೀಪದ ಧೀವರರೆಂದು ಗೊತ್ತಾಯಿತು. ಈ ದೀಪಗಳಿಂದ ಅವರು ರಾತ್ರಿಯಲ್ಲಿ ಮೀನು ಹಿಡಿಯುತ್ತಿರುತ್ತಾರೆ. ಮೂವತ್ತು-ನಾಲ್ವತ್ತು ಮೀನುಗಾರರು ನದಿಗೆ ಇಳಿದಿದ್ದರಿಂದ ಗಂಗೆಯಲ್ಲಿ ತೆಪ್ಪೋತ್ಸವ ನಡೆದಂತೆ ಭಾಸವಾಗುತ್ತಿತ್ತು. ದೀಪದ ಬೆಳಕಿಗೆ ಹತ್ತಿರ ಬಂದ ಮೀನುಗಳನ್ನು ಬುಟ್ಟಿಯಲ್ಲಿ ಇರುವ ಬಿದಿರಿನ ಬಲೆಯಿಂದ ಹಿಡಿದು ತಮ್ಮ ಜಾಳಿಗೆಯ ಚೀಲಕ್ಕೆ ಸೇರಿಸಿ ಮುಂದುವರಿಯುತ್ತಿದ್ದರು.



ಬುಟ್ಟಿಯಿಂದ ಮೀನು ಹಿಡಿಯುವ ಮೀನುಗಾರ

★

ಕಾಲಿಪದನನ್ನು ಕೆಲಸದಿಂದ ತೆಗೆದುಹಾಕಿದಂದಿನಿಂದ ಕೆಲವು ಸಮಸ್ಯೆಗಳು ಪರಿಹಾರವಾದರೂ ಹೊಸಸಮಸ್ಯೆಗಳು ತಲೆಯೆತ್ತಿದವು. ದನಕಾಯುವವರು ನೇರ ದನಗಳನ್ನು ಗೇಟು ತೆಗೆದು ಒಳಗೆ ಬಿಡಲಾರಂಭಿಸಿದರು. ಸಂಶೋಧನಾಲಯದ ಆವಾರದಲ್ಲಿ ಬೆಳೆಸಿದ ಕಬ್ಬನ್ನು - ಕೀಟಗಳಿಗೆ ಆಹಾರ ಒದಗಿಸಲು ಯಾರೂ ಇಲ್ಲದ್ದು ನೋಡಿ - ದನಗಳಿಗೆ ಮೇಯಿಸಿ ಬಿಡುತ್ತಿದ್ದರಂತೆ. ತಮ್ಮ ಬುದ್ಧಿಯನ್ನು ಉಪಯೋಗಿಸಿ ನ್ಯಾಯವಾಗಿ ಜೀವಿಸುವುದನ್ನು ಕಲಿಯುವ ಬದಲಾಗಿ ಮಂದಿಯಿಂದ ಸಾಧ್ಯವಿದ್ದಷ್ಟು ಲಾಭ ಹೇಗೆ ಪಡೆಯಬಹುದು ಎಂಬುದರಲ್ಲಿಯೇ ಈ ಜನ ತೊಡಗಿರುವಂತೆ ಕಾಣುತ್ತದೆ.

ಒಮ್ಮೆ ಮುರಶಿದಾಬಾದಕ್ಕೆ ಹೋಗಿ ವಾಪಸಾದಾಗ ಸಂಜೆಯಾಗುತ್ತ ಬಂದಿತ್ತು. ಮನೆ, ತೋಟ ನೋಡಿದಾಗ ನಾನು ಮುಂಜಾನೆ ಬಿಟ್ಟ ಮನೆಯೇ ಇದು! ಅನಿಸುವಂತಾಯಿತು. ಹಿತ್ತಿಲ ಹೂ ಗಿಡ, ಚಿಗುರುಗಾಯಿ ಎಲ್ಲಾ ಹೋಗಿಬಿಟ್ಟಿದ್ದವು. ಚಿಕ್ಕ ಚಿಕ್ಕ ಹೂಗಿಡಗಳನ್ನು ಕಿತ್ತು ಕಿತ್ತು ಹಾಕಿದ್ದರು. ಅಡಿಗೆ ಮನೆಯ ಕಿಟಕಿಗೆ ಇದ್ದ ಜಾಳಿಗೆ ಹರಿದು ಬಾಗಿಲು ಒಡೆದು ಮುರಿತು ಇಟ್ಟಿದ್ದ ಸ್ಟೀಲಿನ ಪಾತ್ರೆಗಳು, ತಾಲ್ಕದ ಡಬ್ಬ ಒಯ್ದು ಬಿಟ್ಟಿದ್ದರು.

ಒಂದು ರವಿವಾರ. ಮನಸ್ಸು ಉಲ್ಲಾಸವಾಗಿತ್ತು. ಬೆಳಿಗ್ಗೆ ಆಮ್ಲೇಟ್ ಮಾಡಿ ಕಾಫಿ ಸೋಸಿದೆ. ದೂರದ ತೊಗರಿ ಗಿಡಗಳು ಬಾಗಿ ತೂಗಲಾರಂಭಿಸಿದ್ದರಿಂದ ಅತ್ತ ನೋಡಿದೆ. ನಾಲ್ಕಾರು ಆಡುಗಳು ಇದ್ದಬಿದ್ದ ತೊಗರಿ ಗಿಡಗಳನ್ನು ಏಕಚಿತ್ತದಿಂದ ಧ್ವಂಸಮಾಡಲಾರಂಭಿಸಿದ್ದವು. ಆ ಗಿಡಗಳ ತೊಗರಿ ಬೇಳೆ ದೊರೆಯುವ ಆಸೆಯನ್ನು ಎಂದೋ ಬಿಟ್ಟಿದ್ದೆ. ಆದರೂ ಅದಕ್ಕಾಗಿ ಸಾಕಷ್ಟು

ಏರ್ಪಡಿಸಿದ್ದನ್ನು ನೆನಪಿಗೆ ತಂದು ಕೊಂಡು ಗಿಡಗಳನ್ನಾದರೂ ನೋಡಿ ಸಂತೋಷಪಡುತ್ತಿದ್ದುದರಿಂದ ಈ ದೃಶ್ಯ ನೋಡಿ ಕೋಲು ಹಿಡಿದು ಅತ್ತ ಧಾವಿಸಿದೆ. ಅವು ನನ್ನನ್ನು ನೋಡಿ ಓಡಲಾರಂಭಿಸಿದವು. ಚಿಕ್ಕ ಮರಿಯೊಂದು ಮುಳ್ಳು ಬೇಲಿ ದಾಟಿ ಓಡಿತು. ಅವು ತಿರುಗಿ ಬಾರದಂತೆ ಬೇಲಿ ಸರಿಪಡಿಸಿ ಬಂದೆ.

ಸಂಜೆ, ಮಬ್ಬುಗತ್ತಲೆಯಾಗುತ್ತ ಬಂದಾಗ ಯಾರೋ ಹೊರಬಾಗಿಲಲ್ಲಿ "ಬಾಬು, ಬಾಬು," ಎಂದು ಕೂಗಿದ್ದು ಕೇಳಿಸಿತು. ಬಾಗಿಲು ತೆರೆದೆ. ಎದುರಿಗೆ ಒಂದು ಕೈಯಲ್ಲಿ ದೊಣ್ಣೆ, ಇನ್ನೊಂದು ಕೈಯಲ್ಲಿ ಆಡಿನ ಚರ್ಮವನ್ನು ತೂಗಿಸುತ್ತ ಹಳ್ಳಿಗನೊಬ್ಬ ನಿಂತಿದ್ದ, ಸಾಕ್ಷಾತ್ ಯಮಧರ್ಮನಂತೆ! ದೂರದಲ್ಲಿ ಇನ್ನಿಬ್ಬರು ಕೋಲು ಹಿಡಿದು ಚಿಕ್ಕ ಹುಡುಗನೊಬ್ಬನೊಡನೆ ನಿಂತಿದ್ದರು.

"ಬಾಬು, ನಾನು ಕಡು ಬಡವ, ಕುರಿಗಳನ್ನು ಸಾಕಿ ದೊಡ್ಡವನ್ನಾಗಿ ಮಾಡಿ ಮಾರಿ ಉಪಜೀವನ ನಡೆಸುತ್ತೇನೆ. ಇಂದು ಮುಂಜಾನೆ ನನ್ನ ಆಡುಗಳು ನಿಮ್ಮ ಹಿತ್ತಿಲಿಗೆ ಬಂದಿರಬಹುದು. ಅಷ್ಟು ಮಾತ್ರಕ್ಕೆ ಈ ಮರಿಯನ್ನು ಕೊಂದು ನೀವು ಹೊಂಡಕ್ಕೆ ಒಗೆಯಬಹುದೇ? ಈ ಮರಿ ಬೆಳೆದರೆ 60-70 ರೂಪಾಯಿಗಳು ಬರುತ್ತಿದ್ದವು. ಈ ಹಾನಿ ಯಾರು ತುಂಬಿಕೊಡಬೇಕು?" ಸವಾಲು ಹಾಕಿದ. ದೊಣ್ಣೆಯ ಬೆದರಿಕೆ ಹಾಕಿ ಹಣ ಎಬ್ಬಿಸಲು ಈತ ಬಂದದ್ದು ಎಂದು ಕೂಡಲೇ ತಿಳಿಯಿತು. ಹಣಕೊಟ್ಟರೆ ಮುಂದೆಯೂ ಇಂಥ ಚಟುವಟಿಕೆಗಳಿಗೆ ಪ್ರೋತ್ಸಾಹ ಕೊಟ್ಟಂತೆ ಆಗುವುದು. ಕೊಡದಿದ್ದರೆ ಪೋಲಿಗಳಿಂದ ಗಂಡಾಂತರವಿದ್ದರೂ ನೆರವಿಗೆ ಬರುವವರು ಯಾರೂ ಇರಲಿಲ್ಲ. ಬಂಗಾಲಿಯಲ್ಲದವನಿಗೆ ಬಂಗಾಲದ ಒಳಪ್ರದೇಶದಲ್ಲಿ ಬಾಳುವುದು ಎಷ್ಟು ಕಠಿಣವೆಂದು ಈಗಾಗಲೇ ಕಂಡುಕೊಂಡಿದ್ದೆ. ನಾನು ಬೆಳಿಗ್ಗೆ ನಡೆದದ್ದನ್ನು ಧೈರ್ಯವಾಗಿ ವಿವರಿಸಿದೆ. ಆತ ಒಪ್ಪಲಿಲ್ಲ. 'ಪ್ರತ್ಯಕ್ಷ ಸಾಕ್ಷಿ'ಯಾಗಿ ಕರೆತಂದಿದ್ದ ಹುಡುಗ(ಆತನ ಮಗ)ನಿಗೆ "ಹೇಳು," ಎಂದ. ಆತ ಬಾಯಿಪಾಠ ಮಾಡಿಸಿದ್ದಂತೆ ಹೇಳಿದ. ನಾನು "ಆ ಸ್ಥಳ ತೋರಿಸಿಯೇ ಘಟನೆ ಹೇಗೆ ನಡೆಯಿತು ಹೇಳು," ಎಂದೆ. ಎಲ್ಲರೂ ಒಪ್ಪಿ ಆ ಸ್ಥಳಕ್ಕೆ ಹೋದಾಗ ಆ ಹುಡುಗನಿಗೆ ಕಷ್ಟಕ್ಕಿಟ್ಟುಕೊಂಡಿತು. ಆಗ ಸುತ್ತಮುತ್ತ ಜನರೂ ಸಾಕಷ್ಟು ಸೇರಿದ್ದರು. "ಏನು? ಏನು?" ಎಂಬುದೇ ಎಲ್ಲರ ಪ್ರಶ್ನೆ. ಆಡಿನ ಒಡೆಯ ನಡೆದದ್ದನ್ನು ಹೇಳಿದ.

ಆಗ ಒಬ್ಬ "ಬೆಳಿಗ್ಗೆ ಈ ಬಾಬು ಆಡುಗಳನ್ನು ಓಡಿಸಿದಾಗ ನಾನಿದ್ದೆ. ಆದರೆ ಓಡಿಸಿದರೆ ಕೊಂದಂತಾಗುವುದೆ? ತೀರ ಚಂಚಲವಾಗಿ ಓಡುವ ಆಡಿನ ಮರಿಯನ್ನು ಬರಿಗೈಯಿಂದ ಹಿಡಿಯಲು ಸಾಧ್ಯವೇನಯ್ಯಾ?" ಎಂದು ಮರು ಸವಾಲು ಹಾಕಿದ. ಇನ್ನೊಬ್ಬ, "ನಿನ್ನ ಮಗ ಆಡನ್ನು ಕೊಂದು ಹಾಕಿದಾಗಲೂ ಏಕೆ ಸುಮ್ಮನಿದ್ದ? ಆಗಲೇ ಬಂದು ಏಕೆ ದೂರಲಿಲ್ಲ? ಕೊಂದ ಮರಿಯನ್ನು ಯಾರಾದರೂ ಎಲ್ಲರಿಗೂ ಕಾಣುವಂತೆ ಹೊಂಡದಲ್ಲಿ ಒಗೆಯುವ ಮೂರ್ಖತನ ಮಾಡುವರೇ?" ಎಂದು ನನ್ನ ಪರವಾಗಿ ವಾದಿಸಿದಾಗ ಆಡಿನ ಯಜಮಾನ ನಿರುತ್ತರನಾದ. "ಇನ್ನೊಮ್ಮೆ ಇಂತಹ ದಾದಾಗಿರಿ ಮಾಡಲು ಬಂದರೆ ನಿನಗೆ ಚೆನ್ನಾಗಿ ಬುದ್ಧಿ ಕಲಿಸಬೇಕಾಗುವುದು ನೋಡು," ಎಂದು ಒಬ್ಬ ಗದರಿಸಿದಾಗ, ಆಡಿನ ಯಜಮಾನ ಇನ್ನು ತನ್ನ ಆಟ ನಡೆಯದೆಂದು ತಿಳಿದು ಮಗನಿಗೆ ಎರಡೇಟು ಬಿಗಿದು, ತನ್ನ ಹಣೆಬರಹವನ್ನು ನಿಂದಿಸಿಕೊಂಡು ಹೊರಟುಹೋದ.

★

ಕಲಕತ್ತಾದಿಂದ ತೊಂಭತ್ತು ಮೈಲು ಉತ್ತರಕ್ಕಿದೆ ಸಣ್ಣ ಊರಾದ ಪ್ಲಾಸಿ. ಜನರನ್ನೂ

ಭೂಮಿಯನ್ನೂ ನಿಸರ್ಗ ಫಲವತ್ತಾಗಿ ಮಾಡಿದ ಈ ಪ್ರದೇಶದಲ್ಲಿ ಜನ ಮೊದಲಿನದರ ಪೂರ್ಣ ಲಾಭವನ್ನು ಪಡೆದು ಎರಡನೆಯದನ್ನು ಸಂಪೂರ್ಣ ಅಲಕ್ಷಿಸಿದ್ದಾರೆ. ಪ್ಲಾಸಿ ಎಲ್ಲಿದೆ ಎಂದು ಅರಿಯದ ಬಂಗಾಲಿಗಳಿದ್ದರೂ ಬಂಗಾಲದ ನವಾಬ ಸಿರಾಜುದ್ದೌಲ ಮತ್ತು ರೊಬರ್ಟ ಕ್ಲಾಯಿವ್‌ರಲ್ಲಿ ನಡೆದ ಪ್ಲಾಸಿಯ ಕದನದ ಬಗ್ಗೆ ಓದದ ಭಾರತೀಯ ವಿದ್ಯಾರ್ಥಿಯಿಲ್ಲ.

ಪ್ಲಾಸಿ ಊರನ್ನು ಬಝೂರಪಾಡಾ, ಆಶಾ ಪಾಡಾ, ಪಾಂಡು ಪಾಡಾ, ನೂತನ ಪಾಡಾ, ಆರಾಮಡಾಂಗಾ, ಮೀರಾ ಬಝೂರಗಳೆಂದು ವಿಭಾಗಿಸಲಾಗಿದೆ. ಇವೆಲ್ಲವುಗಳ ಹೃದಯಸ್ಥಾನದಲ್ಲಿ ರಾಮನಗರ ಸಕ್ಕರೆ ಕಾರಖಾನೆ ತಲೆ ಎತ್ತಿ ನಿಂತಿದೆ. ಈ ಕಾರಖಾನೆಯಲ್ಲಿರುವ ಅನೇಕ ತಂತ್ರಜ್ಞರಲ್ಲಿ ಬಂಗಾಲದ ಹೊರಗಿನಿಂದ ಬಂದ ತಂತ್ರಜ್ಞರೂ ಇದ್ದಾರೆ. ವರ್ಷದ ಆರೇಳು ತಿಂಗಳು ಕಾರಖಾನೆಯ ಕೆಲಸ ಜೋರಿನಿಂದ ನಡೆದಿರುತ್ತದೆ. ಆ ಕಾಲದಲ್ಲಿ ಸಾವಿರಾರು ತಾತ್ಪೂರ್ತಿಕ ಕೆಲಸಗಾರರನ್ನು ನೇಮಿಸುತ್ತಾರೆ. ಈ ಗ್ರಾಮಕ್ಕೆ ವಿದ್ಯುತ್ತು, ನಳಗಳು ಕನಸಿನ ಮಾತಾಗಿದ್ದರೆ ಕಂಪನಿಯ ಕೃಪೆಯಿಂದ ಅವೆಲ್ಲ ದೊರೆಯುವಂತಾಗಿ ಊರವರೆಲ್ಲ ಅದರ ಲಾಭ ಪಡೆಯುವಂತೆ ಆಗಿದೆ. ಕಂಪನಿಯ ಆಸ್ಪತ್ರೆ ಊರವರ ಆರೋಗ್ಯಕೇಂದ್ರವಾಗಿದೆ. ಸಕ್ಕರೆ ಕಾರಖಾನೆಯೇ ಪ್ಲಾಸಿಯ ಜೀವನಾಳವಾಗಿದೆ.

ಪ್ಲಾಸಿಗೆ ಹತ್ತಿರದ ಆಕಾಶವಾಣಿ ನೂರ ಐವತ್ತು ಕಿಲೋಮೀಟರ್ ದೂರದ ಕಲಕತ್ತಾದಲ್ಲಿ ಇತ್ತು. ಕಲಕತ್ತೆಯ ವಾತಾವರಣ ತುಂಬ ಅಶಾಂತವಿದ್ದುದರಿಂದ ಸಾವಿರದೈನೂರು ಮೈಲು ದೂರದ ಜಯಪುರದಲ್ಲೇ ಇರುವುದು ವಾಸಿ ಎಂದು ತಿಳಿದು ಜ್ಯೋತ್ಸ್ನಾ (ಪತ್ನಿ) ವರ್ಗಮಾಡಿಸಿಕೊಳ್ಳಲಿಕ್ಕೆ ಪ್ರಯತ್ನಿಸಿರಲಿಲ್ಲ. ಅವಳು ಒಂದು ತಿಂಗಳ ರಜೆ ಪಡೆದು



ನರ್ತಿಸುವ ವಾದ್ಯಗಾರರು

ಪ್ಲಾಸಿಗೆ ಬಂದಾಗ ಸುತ್ತಲಿನವರೆಲ್ಲ ಭೆಟ್ಟಿಗಾಗಿ ಧಾವಿಸಿ ಬಂದರು. ಬಂದವರಿಗೆ ಚಹಾ ತಿಂಡಿ ಪೂರೈಕೆಯಾಗುತ್ತಿದ್ದುರಿಂದಲೋ ಏನೋ ಬರುವವರ ಸಂಖ್ಯೆ ಹೆಚ್ಚಾಯಿತು! ಜತೆಗೆ ಪುಟ್ಟ ಸೈನ್ಯದಂತಿರುವ ಮಕ್ಕಳನ್ನೂ ಕರೆತರುವರು. ಅವು ಸೋಫಾದ ಮೇಲೆ ಹತ್ತಿ ಕುಣಿಯುವವು. ಸ್ಟೂಲನ್ನು ಎಳೆದೆಳೆದು ಆಡುವವು. ಹೂ ಹರಿಯುವುದು, ಪೇರಲ ಕಾಯಿ ಹರಿಯುವುದು ಮುಂತಾದ ಕೀಟಲೆ ಮಾಡುವವು. ಕೆಲವು ಹುಡುಗರಂತೂ ನಾವು ಕಲಿಯಲೆಂದು ತಂದ ಬಂಗಾಲಿಯ ಪುಸ್ತಕಗಳನ್ನು ಎತ್ತಿಕೊಂಡು ನಡೆದಿದ್ದವು! ಅವನ್ನು ಕಂಡು ಹಿಡಿದು ತಿರುಗಿ ತರಬೇಕಾದರೆ ಕಲಿತ ವಿದ್ಯೆಯೆಲ್ಲ ಖರ್ಚಾಯಿತು. ಈ ಹೆಂಗಸರಿಗೆಲ್ಲ ತಮ್ಮ ದೊಡ್ಡಸ್ತಿಕೆಯನ್ನು ಹೇಳಿಕೊಂಡು ನಮ್ಮದನ್ನು ಅಳೆಯುವ ಚಪಲ.

ಒಂದು ದಿನ ಬೇಗನೇ ತಿರುಗಾಡಲು ಹೋದ್ದರಿಂದ ನದಿಯಾಚೆಯ ರಾಮನಗರದಲ್ಲಿದ್ದ ಮುಝುಂದಾರರ ಮನೆಗೆ ಹೋಗಿ ಬರೋಣವೆಂದು ಅತ್ತ ಕಡೆ ಹೊರಟೆವು. ತಿಳಿಸದೇ ಹೋಗುವುದು ಸರಿಯಲ್ಲವೆಂದು ಜ್ಯೋತ್ಸ್ನಾ ಹೇಳಿದರೂ ಬ್ರಿಟಿಶರ ಔಪಚಾರಿಕತೆ ನಮಗೆ ಬೇಕಿಲ್ಲವೆಂದು ನಾನೆಂದೆ. ಅವರ ಅಂತಸ್ತಿಗೆ ತಕ್ಕಂತಹ ಭವ್ಯ ಮಹಲು. ಸುಂದರ ತೋಟ. ಹೊರಗಿದ್ದ ಆಳು, ಅನಿರೀಕ್ಷಿತ ಅತಿಥಿಗಳು ಬಂದದ್ದರಿಂದ ವಾಯುವೇಗದಿಂದ ಮನೆಯಲ್ಲಿ ಸುದ್ದಿ ಮುಟ್ಟಿಸಿದ. ಈಕೆ, ಐದು ನಿಮಿಷ ಯಾರೂ ಹೊರಗೆ ಬಾರದ್ದರಿಂದ, "ನಾ ಹೇಳಿರಲಿಲ್ಲವೆ?" ಎಂಬ ಅರ್ಥದಿಂದ ನನ್ನ ಕಡೆಗೆ ನೋಡಿದಳು. ಅಷ್ಟರಲ್ಲಿ ಬಂದ ಮುಝುಂದಾರರು ಆಗಷ್ಟೇ ಬಟ್ಟೆ ಬರೆ ಬದಲಿಸಿ ಬಂದದ್ದು ಸ್ಪಷ್ಟವಿತ್ತು. ಅಕ್ಕಪಕ್ಕದ ಕೋಣೆಯ ಬಾಗಿಲುಗಳು ಮುಚ್ಚಿಕೊಂಡ ಮೇಲೆ ನಮ್ಮನ್ನು ಡ್ರಾಯಿಂಗ್ ರೂಮಿಗೆ ಕರೆದೊಯ್ದರು. ಮುಝುಂದಾರರು ಒಬ್ಬರೇ ಕುಳಿತು ತಮ್ಮ ಪರಿವಾರದ ವಿಷಯ ಹೇಳಲಾರಂಭಿಸಿದರು. ಅವರಿಗೆ ಒಬ್ಬಳೇ ಮಗಳು. ಮದುವೆ ಮಾಡಿಕೊಟ್ಟಿದ್ದಾರೆ. ಅವಳಿಗೂ ಒಬ್ಬನೇ ಮಗ. ಹಳ್ಳಿಯ ಜೀವನದ ಬೇಸರ ಕಡಿಮೆಮಾಡಿಕೊಳ್ಳಲು ಮೊಮ್ಮಗನನ್ನು ತಾವು ರಾಮನಗರದಲ್ಲಿ ಇಟ್ಟುಕೊಂಡಿದ್ದನ್ನು ಪೇಳಿದರು. ಕಲಕತ್ತಾದಲ್ಲಿ ಸ್ವಂತವಾದ ಬಂಗಲೆಯಿದೆ. ಅದರ ಒಂದು ಭಾಗವನ್ನು ಬಾಡಿಗೆಗೆ ಕೊಟ್ಟು ಉಳಿದ ಅರ್ಧ ಭಾಗವನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿದ್ದಾರೆ. ಪ್ಲಾಸಿಯಲ್ಲಿ ಬೇಸರವಾದಾಗ ಆಗಾಗ ಕಲಕತ್ತಾಕ್ಕೆ ಹೋಗಿಬರುವುದು ವಾಡಿಕೆ.

ಬಹಳ ಹೊತ್ತಾದರೂ ಗೃಹಿಣಿ ಬಾರದ್ದರಿಂದ ಅವರು ಮನೆಯಲ್ಲಿ ಇರಲಿಕ್ಕಿಲ್ಲವೆಂದು ಊಹೆಯಾಯಿತು. ಕೊನೆಗೊಮ್ಮೆ ತುಂಬಾ ಎಚ್ಚರಿಕೆಯಿಂದ ಶೃಂಗರಿಸಿಕೊಂಡ ಮಹಿಳೆಯೊಬ್ಬಳು ಗಂಭೀರವಾಗಿ ಪ್ರವೇಶಿಸಿದಾಗ ಇಬ್ಬರೂ ಎದ್ದು ನಿಂತೆವು. ಈಕೆ ಮಗಳಿರಬಹುದೇ ಎಂದು ನಮಸ್ಕರಿಸುತ್ತಿದ್ದಂತೆ ತಮ್ಮ ಧರ್ಮಪತ್ನಿಯೆಂದು ಮುಝುಂದಾರರು ಪರಿಚಯ ಮಾಡಿಕೊಟ್ಟರು. ಆಕೆ ನನ್ನ ಶ್ರೀಮತಿಯ ಪಕ್ಕದಲ್ಲಿ ಬಂದು ಕುಳಿತಾಗ ನೆರೆತ ಕೂದಲು, ಮುಖದ ಬಣ್ಣ, ಕೃತಕ ಹುಬ್ಬುಗಳು ಗೋಚರಿಸಿದವಂತೆ!

ಕೆಲವೇ ದಿನಗಳಲ್ಲಿ ಮುಝುಂದಾರರಿಂದ ನಮಗೆ 'ಆಮಂತ್ರಣ' ಬಂತು. ಅಂದು ಪತ್ರದಲ್ಲಿ ತಿಳಿಸಿದ್ದಂತೆ, ಮಧ್ಯಾಹ್ನ ನಾಲ್ಕಕ್ಕೆ ಸರಿಯಾಗಿ ಅವರ ಕಾರು ನಮ್ಮ ಮನೆಗೆ ಬಂದಿತು. ಜ್ಯೋತ್ಸ್ನಾ ನವಿಲು ಬಣ್ಣದ ಬೆನ್ನಿ ಸಿಲ್ಕ್ ಉಟ್ಟು ಸಿದ್ಧಳಾದಳು. ನಾನು ಮಾತ್ರ ಸಾದಾ ಗಂಜಿಯ ಬುಶ್‌ಶರ್ಟ್ ಪ್ಯಾಂಟ್‌ಗಳನ್ನೇ ಧರಿಸಿದ್ದೆ.

ಶಿಸ್ತಾಗಿ ಬಟ್ಟೆ ಧರಿಸಿದ್ದ ಮುಝುಂದಾರ ದಂಪತಿಗಳು ಈ ಬಾರಿ ಹೊರಗೇ ಕಾಯುತ್ತ ನಿಂತಿದ್ದರು. ಮಹರಾಬಾಬುಗಳು ಮೊದಲೇ ಬಂದಿದ್ದರು. ಐದು ನಿಮಿಷಗಳಲ್ಲಿ ಕೆನೇಡಿಯನ್ ದಂಪತಿಗಳಾದ ಓರಿಯನ್‌ರೂ ಬಂದು ಇಳಿದರು. ಬೈಠಕ್-ಕೋಣೆಯನ್ನು ತುಂಬ ಸುಸಜ್ಜಿತವಾಗಿ ಅಲಂಕರಿಸಿದ್ದರು. ಪ್ರತಿ ಆಸನದ ಮುಂದೆಯೂ ಚಿಕ್ಕ ಟೇಬಲ್, ಅದರ ಮೇಲೆ ಸುಂದರವಾದ ನಕ್ಷೆಯಿದ್ದ ಪ್ಲೇಟು, ಕಪ್ಪು, ಬಿಸಿ ಕಾಗದದ ವಸ್ತ್ರಗಳನ್ನು ಮಾಟಾಗಿ ಜೋಡಿಸಲಾಗಿತ್ತು. ಶುಭ್ರ ವಸ್ತ್ರದ ಆಳೊಬ್ಬ ಗಾಜಿನ ಪಾತ್ರೆಯನ್ನು ಚಮಚದೊಂದಿಗೆ ಹೊತ್ತು ತಂದು ಪ್ರತಿಯೊಬ್ಬರ ಎದುರಿಗೆ ಹಿಡಿದ. ಅದರಲ್ಲಿ ಗುಲಾಬ ಜಾಮೂನುಗಳಿದ್ದವು. ಎಲ್ಲರೂ ಒಂದೊಂದನ್ನು ಎತ್ತಿ ಪ್ಲೇಟಿಗೆ ಹಾಕಿಕೊಂಡರು. ನಂತರ ಪ್ಯಾಟಿಸ್, ಸಮೋಸ್, ದಾಳಮೋಟ, ಶಿರಾಗಳು ಬಂದವು. ಅವನ್ನೂ ಸ್ವಲ್ಪ ಸ್ವಲ್ಪ ಬಡಿಸಿಕೊಂಡು ತಿನ್ನಬೇಕಾಯಿತು. ಚಹ ಕೊಟ್ಟ

ಪದ್ಧತಿಯೂ ಅದೇ. ಒಂದರಲ್ಲಿ ಡಿಕಾಕ್ಷನ್, ಇನ್ನೊಂದರಲ್ಲಿ ಸಕ್ಕರೆ, ಮತ್ತೊಂದರಲ್ಲಿ ಹಾಲು, ಸೋಸುವ ಪಾತ್ರೆ ಇವನ್ನೆಲ್ಲ ಹೊಂದಿಸಿ ಚಹಾ ಮಾಡಿಕೊಳ್ಳುವುದು ಬಗೆ ಹರಿಯದೇ ಆ ಕೆಲಸವನ್ನು ಜ್ಯೋತ್ಸ್ನಾಳಿಗೆ ಒಪ್ಪಿಸಿದೆ. ಅಲ್ಲಿದ್ದ ಪಾಶ್ಚಾತ್ಯ ಗೃಹಿಣಿ ಇದನ್ನೆಲ್ಲ ನೋಡಿ ಮನಸ್ಸಿನಲ್ಲೇ ನಕ್ಕಿರಬೇಕು. ಹೆಂಗಸರ ಚರ್ಚೆಯಲ್ಲಿ ಶ್ರೀಮತಿ ಮುಝುಂದಾರ ಶಿಲ್ಪಶಾಸ್ತ್ರದಿಂದ ಟಾಗೋರ್ ಸಾಹಿತ್ಯದ ವರೆಗೆ ಎಲ್ಲವನ್ನೂ ಚೆನ್ನಾಗಿ ಓದಿಕೊಂಡ ಮಹಿಳೆಯೆಂದು ತಿಳಿಯಿತು.



ರಂಗೋಲಿ(ಅಲ್ಪನಾ)ಬಿಡಿಸುತ್ತಿರುವ ಬಂಗಾಲಿ ಸ್ತ್ರೀ

★

ಅಂದು ಆಫೀಸ್ ಕೆಲಸ ಮುಗಿಸಿ ಚಹಾ ಕುಡಿದು ವರ್ತಮಾನ ಪತ್ರ ಓದುತ್ತ ಕುಳಿತಾಗ ಹತ್ತಾರು ಶಾಲಾ ಹುಡುಗರು ಬಂದು, ''ಬಾಬು, ಪೂಜಾ ಆಛೆ, ಚೊಂದಾ (ಚಂದಾ) ದೇನ್,'' ಎಂದು ಕೇಳಿದರು. ಅವರನ್ನು ಹೆಚ್ಚು ನಿಲ್ಲಿಸಿಕೊಳ್ಳುವ ಮನಸ್ಸಿಲ್ಲದೇ ಒಳಗೆ ಹೋಗಿ ಒಂದು ರೂಪಾಯಿಯನ್ನು ತಂದು ಮುಖಂಡ ಬಾಲಕನ ಕೈಗಿತ್ತೆ. ಅವನು ಮುಖ ಗಂಟಿಕ್ಕಿ ರೂಪಾಯಿಯನ್ನು ಟೇಬಲ್ಲಿನ ಮೇಲೆ ಒಗೆದ. ''ಬಾಬು, ಅಪನಾರ್ ಮೈನಾ ಕೊತೊ ಪಾವಬೇನ?'' (ಸ್ವಾಮಿ, ನಿಮ್ಮ ಸಂಬಳವೆಷ್ಟು?) ಎಂದು ಕೇಳಿ, ''ಕಡಿಮೆಯೆಂದರೆ ಹತ್ತು ರೂಪಾಯಿ ಕೊಡಬೇಕು'' ಎಂದು ಉದ್ಧಟತನದಿಂದ ಹೇಳಿದ. ಪೀಡಾ ಹೋಗಲಿ ಎಂದು ಇನ್ನೊಂದು ರೂಪಾಯಿ ಕೊಟ್ಟೆ. ಆದರೂ ನಿರಾಕರಿಸಿ, ''ತಾಳಿ, ಇನ್ನಷ್ಟು ಹುಡುಗರನ್ನು ಕರೆದುಕೊಂಡು ಬಂದರೆ ನೀವಾಗಿ ಕೊಡುತ್ತೀರಿ,'' ಎಂದು ಹೋಗಿಯೇ ಬಿಟ್ಟ. ಪ್ರಧಾನನಿಗೆ ಈ ಘಟನೆಯನ್ನು ಹೇಳಿ ''ನಮ್ಮಲ್ಲಿ ಹೆಚ್ಚಿನ ಸಾರ್ವಜನಿಕ ಕಾರ್ಯಕ್ರಮಗಳ ಹೊಣೆಯನ್ನು ಪಾಲಕರು ಹೊತ್ತಿರುತ್ತಾರೆ. ವರ್ಗಣಿ ಕೂಡಿಸುವುದೂ ಅವರ ಜವಾಬ್ದಾರಿ. ನಿಮ್ಮಲ್ಲಿ ಹೀಗೇಕೆ?'' ಎಂದು ವಿಚಾರಿಸಿದಾಗ ಆತ, ''ಬಂಗಾಲದಲ್ಲಿ ಎಲ್ಲದಕ್ಕೂ ಯುವಜನಾಂಗವೆ ಮುಂದೆ ಬರುತ್ತಿದೆ. ಈಗಂತೂ ಅವರದೇ ರಾಜ್ಯ. ಯಾರು ಎಷ್ಟೆಷ್ಟು ಚಂದಾ ಕೊಡಬೇಕು ಎಂಬುದನ್ನೂ ಅವರೇ ನಿರ್ಧರಿಸುತ್ತಾರೆ. ಅವರ ದ್ವೇಷ ಕಟ್ಟಿಕೊಳ್ಳಲು ತಯಾರಾಗದವರು ಅವರು ಕೇಳಿದಷ್ಟು ಕೊಟ್ಟು ತೆಪ್ಪಗಿರುತ್ತಾರೆ. ಕೊಡದವರು ಅವರ ಕೀಟಲೆಗೆ ಒಳಗಾಗುತ್ತಾರೆ,'' ಎಂದು ಹೇಳಿ ಅಂಥ ಒಂದೆರಡು ಭಯಂಕರ ಕೀಟಲೆಗಳ ಪ್ರಸಂಗಗಳನ್ನು ವಿವರಿಸಿ, ''ಹತ್ತು ರೂಪಾಯಿಗಳಲ್ಲದಿದ್ದರೆ ಐದು ರೂಪಾಯಿಗಳನ್ನಾದರೂ ಕೊಡಿರಿ. ಅವರ ಮುಖಂಡನಿಗೆ ನಾನೇ ಹೇಳುತ್ತೇನೆ,'' ಎಂದ.

ಒಂದು ವಾರದ ನಂತರ ಇನ್ನೊಂದು

ಬಂದಿತು. ಈ ಸಲ ಪೂಜೆಗೆಲ್ಲ, ಕ್ರಿಕೆಟ್ ಆಟಕ್ಕೆ. ಐದು ರೂಪಾಯಿ ಕೇಳಿದಾಗ ಬುದ್ಧಿ ಖರ್ಚು ಮಾಡಿ ಎರಡು ರೂಪಾಯಿ ಕೊಟ್ಟೆ. ಒಂದು ತಿಂಗಳ ನಂತರ ಅದೇ ತಂಡ ಮತ್ತೊಮ್ಮೆ ಬಂದದ್ದು "ವಾಲಿಬಾಲ್ ಆಟಕ್ಕೆ ಚಂದಾ" ಎಂದು. "ಋತುಮಾನಕ್ಕನುಸಾರ ವಾಗಿ ಆಟಗಳ ಏರ್ಪಾಟು ಶಾಲೆ - ಕಾಲೇಜು ಗಳಲ್ಲಿ ಇರುತ್ತದೆ. ಅವಿಲ್ಲದಲ್ಲಿ ಪಾಲಕರು ಒದಗಿಸುತ್ತಾರೆ. ನಿಮ್ಮ ಆಟಪಾಟಗಳಿಗೆ ಏನೂ ಸಂಬಂಧವಿಲ್ಲದ ನಮ್ಮನ್ನೇಕೆ ಪೀಡಿಸು ತ್ತೀರಿ?" ಎಂದು ಕೇಳಿದೆ. ಹಿಂದಿನಿಂದ ಯಾರೋ "ನೀವು ಬಂಗಾಲಿಗಳ ಅನ್ನ ತಿನ್ನು ವುದರಿಂದ" ಎಂದು ಕೂಗಿದ. "ಅಲ್ಲ, ಪ್ರತಿ ತಿಂಗಳೂ ನಮ್ಮೆಲ್ಲರ ಸಂಬಳ ದಕ್ಷಿಣದ ಮೈಸೂರು ರಾಜ್ಯದ ಬೆಂಗಳೂರಿನಿಂದ ಬರು ತ್ತಿದೆ" ಎಂದೆ. ಆ ಮುಖಂಡ ಮುಖ ಸಿಂಡ ರಿಸಿ, "ಎರಡು ರೂಪಾಯಿ ಕೊಡಲು ಎಷ್ಟೊಂದು ತಲೆಹರಟೆ. ಆ ಎರಡು ರೂಪಾಯಿ ನಾವೇ ನಿಮಗೆ ಕೊಡುತ್ತೇವೆ," ಎಂದು ಸಂಗಡಿಗರನ್ನು ಕರೆದುಕೊಂಡು ಹೊರಟ. ಹೊರಗೆ ಹೋಗುತ್ತಿದ್ದಂತೆ ಕೆಲವು ಹೂಗಿಡಗಳನ್ನು ಕಿತ್ತು ಹಣ್ಣಿನ ಮರಕ್ಕೆ ಕಲ್ಲು ಒಗೆದು ಗೇಟಿನ ಬಾಗಿಲು ಹಾಕಿಕೊಳ್ಳದೇ ಹೋಗಿಬಿಟ್ಟರು.

ಮುಂದೆ ದುರ್ಗಾಪೂಜೆ, ಸರಸ್ವತಿ ಪೂಜೆ ಗಳು. 'ಪೊಲಿಡಾಲ ಸಂಘ' 'ಯುಬಕ ಸಂಘ' 'ಸ್ಪುಟ್‌ನಿಕ್ ಸಮಾಜ' ಎಂದು ಹಲವಾರು ಸಂಘಗಳು ಪೂಜಾದಿನಗಳಿಗೆ ಸ್ವಲ್ಪ ದಿನ ಮೊದಲು ಜನ್ಮ ತಾಳಿದವು. ಈ ಓಣಿಗೊಂ ದೊಂದು ಎಂದು ಎದ್ದ ಸಂಘಗಳಿಗೆ 'ಚೊಂದಾ' ಸಲ್ಲಿಸುವ ಪ್ರಸಂಗ ಬಂದಿತು.

ಕೊನೆಗೊಮ್ಮೆ ಈ 'ಚಂದಾ ವೀರ'ರಿಗೆ ಸರಿಯಾದ ಪಾಠ ಕಲಿಸಿದ್ದೊಂದು ಬೇರೆ ಕಥೆ.

★

ತ್ರೆಯೊಂದನ್ನು ನಡೆಸಿಕೊಂಡು ಬಂದಿದ್ದಾರೆ. ಅದರಲ್ಲಿಯ ಡಾಕ್ಟರ್ ಬೋಸರು ಇಪ್ಪತ್ತು ವರ್ಷಗಳಿಂದ ಪ್ಲಾಸಿಯ ಜನರಿಗೆ ಸೇವೆ ಸಲ್ಲಿ ಸುತ್ತ ಬಂದಿದ್ದಾರೆ. ಅವರು ಪಾಕಿಸ್ತಾನದ ನಿರ್ಮಾಣವಾದೊಡನೆ ಪೂರ್ವಬಂಗಾಲ ದಿಂದ ಹೊರದೂಡಲ್ಪಟ್ಟವರಲ್ಲೊಬ್ಬರು. ತುಂಬ ಅಂತಃಕರಣವುಳ್ಳವರು. ಆಸ್ಪತ್ರೆಗೆ ಬರಲಾಗದ ರೋಗಿಗಳಿಗೆ ಅವರ ಮನೆತನಕ ಹೋಗಿ ಔಷಧ ಕೊಡುತ್ತಾರೆ.

ಡಾ.ಬೋಸರು ಅಂದು ಮಧ್ಯಾಹ್ನ ಎಂದಿ ನಂತೆ 25-30 ರೋಗಿಗಳನ್ನು ತಪಾಸ ಮಾಡಿ ಔಷಧಕೊಟ್ಟು ಮನೆಗೆ ಬಂದು ಸ್ನಾನಕ್ಕೆ ಇಳಿ ದಿದ್ದರು. ಯಾರೋ ಒಬ್ಬ ಶಾಲಾ ವಿದ್ಯಾರ್ಥಿ ತೇಕುತ್ತ ಬಂದು ಬಾಗಿಲು ಬಡಿದ. ಡಾಕ್ಟರರು ಲಗುಬಗೆಯಿಂದ ಸ್ನಾನ ಮುಗಿಸಿ ಬಂದಾಗ "ನನ್ನ ಸಹಪಾಠಿಯೊಬ್ಬ ಶಾಲೆಯಿಂದ ಬರು ವಾಗ ಮೂರ್ಛೆ ಹೋದ. ಅವನನ್ನು ಆಸ್ಪ ತ್ರೆಗೆ ಸಾಗಿಸಿದ್ದೇವೆ. ಕೂಡಲೇ ಬನ್ನಿ" ಎಂದ. ಕೂಡಲೇ ಡಾಕ್ಟರರು ಬಟ್ಟೆ ಧರಿಸಿ ಆಸ್ಪತ್ರೆಗೆ ಬಂದರು. ರೋಗಿಯನ್ನು ಚೆನ್ನಾಗಿ ಪರೀಕ್ಷಿಸಿ ಪ್ರಥಮ ಚಿಕಿತ್ಸೆ ನಡೆಸಿ ಪರಿಣಾಮಕ್ಕಾಗಿ ಕಾಯುತ್ತಿದ್ದರು. ಬಿಸಿ ರಕ್ತದ ಯುವಕ ನೊಬ್ಬ, "ಏನು, ದೇವರ ಮುಂದೆ ನಿಂತು ಕಾದಂತೆ ಕಾದಿದ್ದೀರಲ್ಲ? ಒಳ್ಳೆ ಔಷಧ ಕೊಟ್ಟು ಬೇಗನೆ ಪ್ರಜ್ಞೆ ಬರುವಂತೆ ಮಾಡಬಾ ರದೆ?" ಎಂದು ಕೇಳಿದ. ಸ್ವಭಾವತಃ ಸಾತ್ವಿಕ ರಾಗಿದ್ದ ಡಾಕ್ಟರರಿಗೆ ಸಿಟ್ಟು ಬಂದರೂ, ಶಾಂತರಾಗಿಯೇ "ರೋಗಿಯ ಬಾಯಿ ಯಿಂದ ನೊರೆ ಬರುತ್ತಿದೆ. ಈಗ ಯಾವುದಾ ದರೂ ಮಾತ್ರೆ ಅವನಿಗೆ ಹಾಕಿದರೆ ಅದು ಗಂಟಲಲ್ಲಿ ಸಿಕ್ಕು ಉಸಿರಾಟ ನಿಲ್ಲುವ ಸಾಧ್ಯತೆ ಇದೆ," ಅಂದರು. ಅದಕ್ಕೆ "ಔಷಧಿಯನ್ನು ಗಂಟಲಿನಿಂದಲೇ ಹಾಕಬೇಕೆಂಬ ನಿಯಮವೆ ಲ್ಲಿದೆ? ಚುಚ್ಚುಮದ್ದುಗಳು ಇವೆಯೆಂಬುದು

ಡಾಕ್ಟರರ ಲಕ್ಷ್ಯಕ್ಕೆ ಬಂದಂತಿಲ್ಲ,'' ಎಂಬ ವ್ಯಂಗ್ಯ ನುಡಿ ಕೇಳಿಬಂತು. ಈ ಅಲ್ಪತನದಿಂದ ಕೆರಳಿದ ಡಾಕ್ಟರರು, ''ನನ್ನ ಕರ್ತವ್ಯ ನನಗೆ ಗೊತ್ತು. ನನಗಿಂತ ಹೆಚ್ಚು ನಿನಗೆ ತಿಳಿದಿದ್ದರೆ ನೀನೇ ಶುಶ್ರೂಷೆ ಮಾಡು,'' ಎಂದು ಹೇಳಿದರು. ಕಲಿತ ಹುಡುಗನಿಗೆ ಈ ಉತ್ತರದಿಂದ ಅಪಮಾನವಾಯಿತು. ''ನೀವು ಆ ಬಡ ಹುಡುಗನನ್ನು ಕೊಲ್ಲಬೇಕೆಂದಿರುವಿರಿ. ಎಷ್ಟೆಂದರೂ ನೀವು, ಕಲಕತ್ತಾದಲ್ಲಿ ಕುಳಿತು ನಮ್ಮನ್ನು ಶೋಷಿಸುತ್ತಿರುವ ಸಾಹುಕಾರನ ಸೇವಕರಲ್ಲವೆ?'' ಎಂದು ಕೂಗಿಕೊಂಡರು. ಡಾಕ್ಟರರು ಏನೋ ಹೇಳಬೇಕೆಂದಿರುವಾಗ ಅವರನ್ನು ಯಾರೋ ಹಿಂದಿನಿಂದ ನೂಕಿದರು. ಒಬ್ಬ ಕಂಪಾಸಿನಿಂದ ಡಾಕ್ಟರರ ಹಣೆಗೆ ಬಲವಾಗಿ ಹೊಡೆದ. ನೆಲಕ್ಕೆ ಉರುಳಿದ ಅವರನ್ನು ಸಿಕ್ಕ ಹಾಗೆ ಹೊಡೆದರು. ಅವರು ಸ್ಮೃತಿ ತಪ್ಪಿ ಬಿದ್ದಾಗ ಆಸ್ಪತ್ರೆ ಹೊಕ್ಕು ಔಷಧದ ಬಾಟ್ಲಿಗಳನ್ನೆಲ್ಲ ಒಡೆದರು. ರಿಫ್ರಿಜರೇಟರನ್ನು ಬಡಿದು ಜಜ್ಜಿ ಹಾಳು ಮಾಡಿದರು. ಇದೆಲ್ಲ ಪುಂಡತನವನ್ನು ಕಾರಖಾನೆಯ ಮೆನೇಜರ್ ಓರಿಯನ್ನರಿಗೆ ಯಾರೋ ತಿಳಿಸಿದರು. ಅವರು ನಾಲ್ಕಾರು ಸಹಾಯಕರೊಡನೆ ಜೀಪಿನಲ್ಲಿ ಗಲಭೆ ನಡೆದ ಸ್ಥಳಕ್ಕೆ ಧಾವಿಸಿದರು. ಉದ್ರಿಕ್ತ ಜನ 'ಹೊ' ಎಂದು ಜೀಪಿನತ್ತ ಹೋದಾಗ ಬಂಗಾಲಿ ಸಹಾಯಕರು ಓರಿಯನ್ನರನ್ನಷ್ಟೇ ಬಿಟ್ಟು ಕಾಲಿಗೆ ಬುದ್ಧಿ ಹೇಳಿದರು. ಓರಿಯನ್ನರು ಆಕ್ರಮಣ ಮಾಡಲು ಬಂದ ಗುಂಪನ್ನು ಚದುರಿಸಲು ಆಕಾಶದಲ್ಲಿ ಪಿಸ್ತೂಲಿನ ಎರಡು ಗುಂಡು ಹಾರಿಸಿದರು. ದುರ್ದೈವಕ್ಕೆ ಯಾರೋ ಲಾಠಿಯಿಂದ ಅವರ ಕೈಗೆ ಏಟು ಹಾಕಿದರು. ಪಿಸ್ತೂಲು ಜಾರಿತು. ಕೂಡಲೇ ನರಿ ತೋಳಗಳು ಶವದ ಮೇಲೆ ಬೀಳುವಂತೆ ಪೋಲಿಗಳ ತಂಡವು ಅವರನ್ನು ಹೊಡೆಯಿತು. ಒಬ್ಬ ಕೈಗೆ ಇರಿದ. ಇನ್ನೊಬ್ಬ ಶರ್ಟ ಹರಿದ. ಕೊನೆಗೆ ಹಾಗೇ ಅವರನ್ನು ಹೊಡೆದುರುಳಿಸಿ, ತಂಡ ಅಲ್ಲಿಂದ ಹೊರಟಿತು. ಈ ಎಲ್ಲ ಗಲಭೆ ನಡೆಸಿದವರು ಶಾಲಾ ಹುಡುಗರು ಮತ್ತು ಕೆಲವು ಯುವಕರು. ಒಬ್ಬ ಪಾಲಕನಾದರೂ ಈ ದುಷ್ಕೃತ್ಯವನ್ನು ಖಂಡಿಸಲಿಲ್ಲ.



ಓರಿಯನ್ನರು ಭೀಮಕಾಯದವರಾದ್ದರಿಂದ ಬದುಕಿ ಉಳಿದರು. ಬಂಗಾಲಿಯಾಗಿದ್ದರೆ ಕಾಲಿಪಾದವನ್ನು ಎಂದೋ ಸೇರಿಕೊಳ್ಳುತ್ತಿದ್ದ. ಒಂದೇ ಫರ್ಲಾಂಗ್ ದೂರದಲ್ಲಿ ಪೋಲೀಸ್ ಚೌಕಿಯಿದ್ದರೂ ಪೋಲೀಸರು ಈ ಕಡೆಗೆ ಹಾಯುವ ಗೋಜಿಗೆ ಹೋಗಲಿಲ್ಲ. ಈ ಘಟನೆಯಾದ ಒಂದು ತಾಸಿನ ನಂತರ ಪ್ಲಾಸಿಯ ಶಾಂತ ವಾತಾವರಣದ ಭಂಗ ಮಾಡಿದ್ದಕ್ಕಾಗಿ ನರಳುತ್ತ ಬಿದ್ದಿದ್ದ ಡಾಕ್ಟರ್ ಬೋಸ್ ಮತ್ತು ಓರಿಯನ್ನರನ್ನು ಬಂಧಿಸಿ ಕೃಷ್ಣನಗರಕ್ಕೆ ಒಯ್ದರು. ಅಲ್ಲದೇ ಪ್ಲಾಸಿಗೆ ಬರದಂತೆ ಗಡಿಪಾರು ಮಾಡಿದರು. ಕಂಪನಿಯ ಒಡೆಯ ಕೇಡಿಯಾರು ಜಾಮೀನಿನ ಮೇಲೆ ಇಬ್ಬರನ್ನೂ ಬಿಡಿಸಿಕೊಂಡು ಕಲ್ಕತ್ತೆಗೆ

ಕರೆದೊಯ್ದು ಔಷಧೋಪಚಾರ ನಡೆಸಿದರು.

ಈ ಘಟನೆಯ ಫಲಶ್ರುತಿಯೆಂದರೆ ಬದುಕ ಬಹುದಾದ ಬಾಲಕನೊಬ್ಬ ಸರಿಯಾದ ಶುಶ್ರೂಷೆ ದೊರೆಯದೆ ಮರಣವನ್ನಪ್ಪಿದನು. ಡಾಕ್ಟರರಾದರೋ ಪಾಕಿಸ್ತಾನದಲ್ಲಿ ಒಮ್ಮೆ ಮನೆ ಮಠ ಕಳೆದುಕೊಂಡು ಮತ್ತೊಮ್ಮೆ ಭಾರತದಲ್ಲಿ ನಿರ್ವಾಸಿತರಾದರು.

★

ಬಂಗಾಲದಲ್ಲಿ ಸಂಯುಕ್ತರಂಗ ಸರಕಾರ ಅಧಿಕಾರರೂಢವಾದ ಮೇಲೆ ಅಲ್ಲಿಯ ರಾಜಕೀಯ ವಾತಾವರಣವೇ ಬದಲಾಯಿತು. ಜನತೆಯ ನಾಯಕರೆಂದು ಕೆಲವು ಪೋಲಿಗಳು ರಾಜಕೀಯ ಪಂಗಡಗಳಿಂದಾಗಿ ಮುಂದೆ ಬಂದರು. ಸಮಾಜ ಘಾತುಕ ಚಟುವಟಿಕೆಗಳು ಹೆಚ್ಚಲಾರಂಭಿಸಿದವು. ಶಾಲೆ - ಕಾಲೇಜುಗಳಿಗೂ ರಾಜಕಾರಣದ ಪಿಡುಗು ಹಬ್ಬಿತು. ಪಾಲಕರ ಅಲಕ್ಷ್ಯವೂ ಉರಿಯುವ ಬೆಂಕಿಗೆ ತುಪ್ಪ ಸುರಿದಂತೆ ಆಯಿತು.

ಅಂದು ನದಿಯ ತೀರಕ್ಕೆ ತಿರುಗಾಡಲು ಹೋದಾಗ ಮುಝುಂದಾರರು ಜೀಪಿನಲ್ಲಿ ಹೊರಟಿದ್ದರು. ನಮಸ್ಕಾರ, ಪ್ರತಿ ನಮಸ್ಕಾರ ಮಾಡುವುದರಲ್ಲಿ ಜೀಪ್ ಮುಂದೆ ಹೋಗಿಬಿಟ್ಟಿತು. ಒಂದು ಫರ್ಲಾಂಗ್ ಹೋಗುವಷ್ಟರಲ್ಲಿ ಜೀಪ್ ಒಮ್ಮೆಲೆ ನಿಂತಿತು. ಎರಡೇ ನಿಮಿಷದಲ್ಲಿ ಮತ್ತೆ ಓಡಲಾರಂಭಿಸಿತು. ಆದರೆ 'ಹೋ' ಎಂದು ಹೊಲಗಳಲ್ಲಿ ಕೆಲಸ ಮಾಡುವವರೆಲ್ಲ ನಿಮಿಷದಲ್ಲಿ ಆ ಸ್ಥಳದಲ್ಲಿ ಒಟ್ಟುಗೂಡಿದರು. ಏನೋ ಅನಾಹುತ ನಡೆದಿರಬಹುದೆಂದು ಲಗುಬಗೆಯಿಂದ ನಡೆದು ಆ ಸ್ಥಳವನ್ನು ಸೇರಿದೆ. ಜನರೆಲ್ಲ ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುತ್ತಿದ್ದರು: "ದೊಡ್ಡ ಸಾಹೇಬರಾದರೇನಾಯಿತು, ಜೀಪನ್ನು ನಿಲ್ಲಿಸಬಾರದಾಗಿತ್ತೆ? ಇವರೆಲ್ಲರ ಕಣ್ಣು ನೆತ್ತಿಗೇರಿವೆ.. ವಾಹನ ಸಿಕ್ಕರೆ ನುಚ್ಚು ನೂರು ಮಾಡಿಬಿಡಬಹುದಾಗಿತ್ತು.. ಈಗಲಾದರೂ ಬುದ್ಧಿ ಕಲಿಸಬಹುದು."

ಅಲ್ಲಿ ಕೂಡಿದ ಗಂಡಸರು - ಹೆಂಗಸರು ಇವರ ತಲೆಗಳ ಹೊರತಾಗಿ ಇನ್ನೇನೂ ಕಾಣಸುತ್ತಿರಲಿಲ್ಲವಾದ್ದರಿಂದ ಏನಾಗಿದೆಯೆಂದು ಒಬ್ಬನಿಗೆ ಕೇಳಿದೆ. "ಜೀಪದ ಅಡಿಯಲ್ಲಿ ಸಿಕ್ಕು ಮಗು (ಬಾಚಾ)★ ಸತ್ತಿತು."

ಎಂದು ಹೇಳಿದ. 'ಮುಝುಂದಾರರು ಹೀಗೇಕೆ ಮಗು ಸತ್ತರೂ ಜೀಪ್ ಮುಂದೆ ಹೊಡಿಸಿಕೊಂಡು ಹೋದರು?' ಎಂದು ಆಶ್ಚರ್ಯಪಡುತ್ತ, ಮುಝುಂದಾರರ ಬದಲಾಗಿ ಅವರ ಕಂಪನಿಯ ಪ್ರಯೋಗಾಲಯದಲ್ಲಿ ಕೆಲಸ ಮಾಡುತ್ತಿದ್ದ ನನ್ನನ್ನೇ ಬಂಗಾಲೀ ನ್ಯಾಯದ ಪ್ರಕಾರ ಹೊಡೆದಾರೆಂದು ಲಗುಬಗೆಯಿಂದ ನದಿಯತ್ತ ಹೆಜ್ಜೆ ಹಾಕಿದೆ. ಅದೇ ಜೀಪ್ ತಿರುಗಿ ಬರುತ್ತಿದ್ದುದನ್ನು ನೋಡಿ ಜನ ಚೀರುತ್ತ, ಕೂಗುತ್ತ ಅದರತ್ತ ಓಡಿದರು. ಡ್ರಾಯ್‌ವರನು "ಬಾಚಾನ ಪಾಲಕನೊಬ್ಬನೇ ಇತ್ತ ಬರಲಿ. ಉಳಿದವರು ಈ ಕಡೆ ಹಾಯ್ದರೆ ಅವರಿಗೂ ಬಾಚಾನ ಗತಿಯಾದೀತು" ಎಂದು ತಾರಸ್ವರದಲ್ಲಿ ಎರಡೆರಡು ಬಾರಿ ಎಚ್ಚರಿಸಿದ. ಹೀಗಾಗಿ ಜನ ಹಿಂದೆ ಸರಿದು ಒಬ್ಬನೇ ಜೀಪನ್ನೇರಿದ. ನಾನು ನದಿ ತೀರ ಮುಟ್ಟಿದಾಗ ಮುಝುಂದಾರರು ಚಿಂತಾಕುಲರಾಗಿ ನಿಂತಿದ್ದರು. "ಎಲ್ಲಿಂದಲೋ ಆಡಿನ ಮರಿಯೊಂದು ಓಡಿಬರುತ್ತಿದ್ದಾಗ ಜೀಪಿನ ಕೆಳಗೆ ಬಿದ್ದು ಪ್ರಾಣ ಬಿಟ್ಟಿತು. ವಾಹನ ನಿಲ್ಲಿಸೆಂದು ಡ್ರಾಯ್‌ವರನಿಗೆ ಹೇಳಿದರೂ ನನ್ನ ಸುರಕ್ಷಿತೆಗಾಗಿ ಆತನು ನಿಲ್ಲಿಸದೇ ಇಲ್ಲಿ ಬಂದ. ಈಗಿನ ದಿನಗಳಲ್ಲಿ ಜನ ಏನು ಮಾಡಿಯಾರು, ಏನು ಮಾಡಲಿಕ್ಕಿಲ್ಲ ಎಂದು

★ ಬಚ್ಚಾ ಹಿಂದಿಯಲ್ಲಿ ಚಿಕ್ಕ ಮಗು. ಆದರೆ ಪಶು ಪ್ರಾಣಿಗಳ ಮರಿಗಳಿಗೆ ಬಂಗಾಲಿಯಲ್ಲಿ 'ಬಾಚಾ' ಎನ್ನುತ್ತಾರೆ.ಮಾನವ ಮಗುವಿಗೆ 'ಖೋಕಾ' ಎನ್ನುತ್ತಾರೆ.

ಹೇಳಲು ಬರುವಂತಿಲ್ಲ,'' ಎಂದು ನನಗೆ ಹೇಳಿದರು. ಅಷ್ಟರಲ್ಲಿ ಡ್ರಾಯ್‌ವರನು ಜೀಪನ್ನು ಓಡಿಸಿಕೊಂಡು ಬಂದು, ''ನಲವತ್ತು ರೂಪಾಯಿಗಳೆಂದನು ಸಾಹೇಬರೇ. ಇಪ್ಪತ್ತು ರೂಪಾಯಿಗಿಂತ ಒಂದು ಪೈಸಾ ಕೂಡ ಹೆಚ್ಚಿಗೆ ಕೊಡುವುದಿಲ್ಲ. ಬೇಕಾದರೆ ಇನ್ನೊಂದು ಆಡಿನ ಮರಿ ಕೊಡಿಸುತ್ತೇನೆ ಎಂದು ಹೇಳಿದಾಗ ಒಪ್ಪಿದ್ದಾನೆ. ನೀವು ಅಲ್ಲಿದ್ದರೆ ನಲವತ್ತು ರೂಪಾಯಿ ಸುರಿಯಬೇಕಾಗಿತ್ತು. ಅವರಿಗೆ ಬುದ್ಧಿಕಲಿಸಲು ನನ್ನಂಥವರೇ ಬೇಕು,'' ಎಂದು ಅಭಿಮಾನಪಟ್ಟ. ಈ ಸಮಸ್ಯೆ ಸುಲಭವಾಗಿ ಪರಿಹಾರವಾದದ್ದಕ್ಕೆ ಮುಝುಂದಾರರೂ ನೆಮ್ಮದಿಯ ಉಸಿರೆಳೆದರು.

★

ಬಂಗಾಲಿಯ ಕವಿಗಳು ತಮ್ಮ ನಾಡಿನ ಹೃದಯ ಸ್ಥಾನವಾಗಿರುವ 'ಕೊಲಕತ್ತಾ' ನಗರವನ್ನು ಕುರಿತು ರೋಮಾಂಚಕ ಹಾಡುಗಳನ್ನು ಕಟ್ಟಿ ಹಾಡಿ ಕುಣಿದದ್ದುಂಟು. ಆದರೆ ಕೆಲ ಕಾಲದ ಹಿಂದೆ ವಿಶ್ವದ ಹಲವಾರು ಪತ್ರಿಕೆಗಳಲ್ಲೂ ಅಗ್ರಲೇಖನವನ್ನು ಪಡೆದ ''ಓ ಕಲಕತ್ತಾ'' ಈ ಮಹಾನಗರಕ್ಕೆ ಸಂಬಂಧಿಸಿರದೇ ಅಮೇರಿಕೆಯಲ್ಲಿ ಕಲೆಯ ಹೆಸರಿನಲ್ಲಿ ಎಲ್ಲ ಸಾಮಾಜಿಕ ಕಟ್ಟುಗಳನ್ನು ಮುರಿದು ಸಂಪೂರ್ಣ ನಗ್ನರಾಗಿ ಬಂದು ನಟನಟಿಯರು ಪ್ರದರ್ಶಿಸುತ್ತಿದ್ದ ಮುಕ್ತ ನೃತ್ಯದ ವಿನೋದಾವಳಿಯ ಹೆಸರಾಗಿತ್ತು. ಪ್ರವೇಶಧನ 150 ರೂಪಾಯಿ ಇದ್ದಾಗಲೂ ಎರಡೆರಡು ತಿಂಗಳು ಮೊದಲೇ ಟಿಕೆಟುಗಳೆಲ್ಲ ಮಾರಾಟವಾಗಿ ಹೋಗಿದ್ದವಂತೆ! ಒಮ್ಮೆ ಭಾರತದ ರಾಜಧಾನಿಯಾಗಿ ಮೆರೆದ ಈ ನಗರಕ್ಕೂ ಆ ನಾಟಕಕ್ಕೂ ಏನು ಸಂಬಂಧವೆಂದು ತಲೆ ಕೆರೆದುಕೊಂಡರೂ ತಿಳಿಯದು. ಬಹುಶಃ ಕಲಕತ್ತಾ ನಗರ ಮಾನವನ ದಾರಿದ್ರ್ಯ, ಅಧೋಗತಿಯ ನಗ್ನಸತ್ಯದ ಪ್ರತೀಕವೆಂದು, ಆ ನಗ್ನ ನೃತ್ಯಕ್ಕೆ ಈ ಹೆಸರು ಕೊಟ್ಟಿರಬೇಕು! ಸದ್ಯ ಸಾಹಿತ್ಯ, ನಾಟಕ, ಚಲಚ್ಚಿತ್ರಗಳೆಲ್ಲ ಇದೇ ತಳಹದಿಯ ಮೇಲೆ ಬೆಳೆದು ನಿಂತಿವೆ.

ಹುಗಳೀ ನದಿ, ಕಲಕತ್ತಾ ನಗರವನ್ನು ಹೌರಾ ಜಿಲ್ಲೆಯಿಂದ ಬೇರ್ಪಡಿಸುತ್ತದೆ. ಇವ



ಸಂತಾಲ ಗೃಹಿಣಿ ತನ್ನ ಮಕ್ಕಳೊಂದಿಗೆ

ರಡನ್ನೂ ಜೋಡಿಸುವ ರವೀಂದ್ರ - ಸೇತು (ಹೌರಾ - ಬ್ರಿಜ್) ಬಂಗಾಲಿಗಳ ಹೃದಯ ಮಿಡಿದಂತಿದೆ. ದೇಶದ ವಿವಿಧ ಭಾಗಗಳಿಂದ ರೇಲ್ವೆಗಳು ಪ್ರವಾಸಿಕರನ್ನು ಹೊತ್ತು ತರುತ್ತವೆ. ದುಡಿತಕ್ಕಾಗಿ ಬಿಹಾರ, ಓಡಿಸ್ಸಾಗಳಿಂದ ಬರುವ ಕೂಲಿಗಳು, ಸಾಯಕಲ್, ಟ್ಯಾಕ್ಸಿ, ಎತ್ತಿನ ಗಾಡಿ ಮುಂತಾದವುಗಳಿಂದ ಜನರನ್ನು ದಾಟಿಸುತ್ತಾರೆ. ಎರಡು ಲಕ್ಷ ಜನ ದಿನಾಲು, ಈ ಸೇತುವೆಯನ್ನು ಬಳಸುತ್ತಾರೆ.

ಹೌರಾದ ಕಡೆ ಆಂಗ್ಲ ಮಾದರಿಯ ಕಟ್ಟಡಗಳು, ಹೆಸರಾಂತ ಹೌರಾ ಸ್ಟೇಶನ್, ಕಲಕತ್ತಾದ ಕಡೆಗೆ ಗಗನಚುಂಬಿ ಕಟ್ಟಡಗಳು, ಹಳೆ - ಹೊಸದ್ವರ ವಿಚಿತ್ರ ಸಮ್ಮಿಶ್ರಣ ತಾಳಿ ನಿಂತಿವೆ. ಸೇತುವೆಯ ಕೆಳಗೆ ಸಾವಿರಾರು ಜನ ಭಕ್ತರು ಗಂಗಾಸ್ನಾನ (ಹುಗಳೀ ನದಿ ಗಂಗಾ ನದಿಯ ಒಂದು ಶಾಖೆ) ಮಾಡುತ್ತಾರೆ. ಮನೆ ಮಾರಿಲ್ಲದ ಲಕ್ಷಾವಧಿ ಜನರಿಗೂ ಅದು ಪುಕ್ಕಟೆ ಕಕ್ಕಸು ಮತ್ತು ಸ್ನಾನ ಗೃಹ.

ಹಿಂದೊಮ್ಮೆ 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆ ಲೇಖನ ಮಾಲೆಯೊಂದರಲ್ಲಿ "ಕಲಕತ್ತಾ: ಜಾಗತಿಕ ಕೊಳಚೆ ಉತ್ಪಾದನೆಯ ಕೇಂದ್ರ" ಎಂಬ ಶಿರೋನಾಮೆಯಿಂದ ಅಲ್ಲಿಯ ಜನಜೀವನದ ಮೇಲೆ ಬೆಳಕು ಬೀರಿದಾಗ ನಾನು ಸಿಡಿಮಿಡಿಗೊಂಡು, "ಅಮೇರಿಕನ್ನರು ಯಾವಾಗಲೂ ಕೊಳಚೆಯನ್ನಷ್ಟೇ ಏಕೆ ನೋಡಬೇಕು? ಅಲ್ಲಿಯ ಸಾಹಿತ್ಯ, ಸಂಸ್ಕೃತಿ, ಕಲೆಗಳನ್ನೇಕೆ ಅಭ್ಯಸಿಸಬಾರದು?" ಎಂದು ಉದ್ಗರಿಸಿದ್ದೆ. ಆದರೆ ಹಲವಾರು ಬಾರಿ ಈ ನಗರಕ್ಕೆ ಬಂದು ನೋಡಿ ನೋಡಿ ಯಾಂಕಿಗಳು ಇದರ ಬಗ್ಗೆ ಬರೆದದ್ದು ತುಂಬ ಕಡಿಮೆ ಎನಿಸಿತು!

ಕಲಕತ್ತಾ ನಗರ ಉತ್ತರ ದಕ್ಷಿಣವಾಗಿ ಹರಡಿದೆ. ಇಲ್ಲಿಯ ವಸತಿಗಳ ಹೆಸರುಗಳು ವಿಶಿಷ್ಟ ಶಬ್ದಗಳಲ್ಲಿ ಕೊನೆಗೊಳ್ಳುತ್ತವೆ. ಮಾಣಿಕ್ ತೊಲಾ, ಧರಮ್ ತೊಲಾ, ಬೌಬಜಾರ್, ಬಾಲಿಗಂಜ್, ಟೋಲಿಗಂಜ್, ಕಾಲಿಘಾಟ್, ಗೋಲಾಘಾಟ್, ನರಕೇಲಡಾಂಗಾ, ಬೇಲಡಾಂಗಾ. ಕೆರೆಗೆ ತಾಲಾ ಅಥವಾ ತೊಲಾ, ಪೇಟೆಗೆ ಬಝಾರ, ವ್ಯಾಪಾರ ಸ್ಥಳಕ್ಕೆ ಗಂಜ್, ನದಿಯ ತೀರಕ್ಕೆ ಘಾಟ್, ನದಿಯ ದಡಕ್ಕೆ ಡಾಂಗಾ ಎಂದು ಕರೆಯುವುದು ವಾಡಿಕೆ. ರಸ್ತೆ, ಉಪರಸ್ತೆ, ಓಣಿಗಳಿಗೆಲ್ಲ ಬಂಗಾಲಿ ವೀರರ ಹೆಸರುಗಳನ್ನು ಕೊಟ್ಟಿರುತ್ತಾರೆ. ಜನರಿಗೆ, ಸರಕಾರಕ್ಕೆ ಈ ಹೆಸರುಗಳನ್ನು ಬದಲಾಯಿಸುತ್ತ ಇರುವ ಹಂಬಲ ಬಹಳ. ಹ್ಯಾರಿಸನ್ ರಸ್ತೆ - ಮಹಾತ್ಮಾ ಗಾಂಧಿ ರಸ್ತೆ ಎಂದು, ಚೌರಂಗಿ ಜವಾಹರಲಾಲ್ ರಸ್ತೆ ಎಂದು ನಾಮಕರಣ ಹೊಂದಿವೆ.

ಕಲಕತ್ತೆಯ ಇರುಳು ಜೀವನವೂ ಭವ್ಯವಾಗಿದೆಯಂತೆ. ದೊಡ್ಡ ದೊಡ್ಡ ಹೊಟೇಲಗಳಲ್ಲಿ ಅಂತರ್ರಾಷ್ಟ್ರೀಯ ಖ್ಯಾತಿಯ ಕ್ಯಾಬರೇ ನೃತ್ಯ ಸಮೂಹಗಳು ಬರುವವು. ಅಸಂಖ್ಯ ವೇಶ್ಯೆಯರಿದ್ದಾರೆ. ಬಹುರೂಪಿಯಾಗಿ ಈ ವೃತ್ತಿ ಬೆಳೆದಿದೆ. ಹೊಟೇಲ ಮಾಲಿಕರು, ಮೇಲ್ವಿಚಾರಕರು ಇವರಲ್ಲಿ ಆಗೀಗ ತಲೆದೋರುವ ವಿಷಮತೆಯಿಂದ ಈ ವ್ಯಾಪಾರಗಳು ಬಯಲಿಗೆ ಬರುತ್ತವೆ. ಆದರೆ ಅದರಿಂದ ಪೋಲಿಸರ ಕಿಸೆ ತುಂಬಲು ಅವಕಾಶವಿದೆಯೇ ಹೊರತಾಗಿ ಇನ್ನೇನೂ ಆಗುವಂತಿಲ್ಲ.

★

ಬಂಗಾಲಕ್ಕೆ ಹೋದವರು ಕವೀಂದ್ರ ರವೀಂದ್ರನಾಥ ಠಾಕೂರರ ಶಾಂತಿನಿಕೇತನವನ್ನು ನೋಡಿಬರುವಂತೆ ದಕ್ಷಿಣೇಶ್ವರದ ದರ್ಶನ ಲಾಭವನ್ನು ಪಡೆದು ಬರುವುದೂ ರೂಢಿಯಾಗಿ ಬಿಟ್ಟಿದೆ. ಕಲಕತ್ತಾದಿಂದ ಅಲ್ಲಿಗೆ ಹೋಗಲು ಮೋಟಾರ ಸಾರಿಗೆಯೂ ಇದೆ. ರೇಲೂ ಇದೆ. ಕಲಕತ್ತೆಯ ಲೋಕಲ್ ಬಸ್‌ಗಳ ಟರ್ಮಿನಸ್ ಆದ ಎಸ್‌ಪ್ಲೆನೇಡ್‌ದಿಂದ ಪ್ರತಿ ಅರ್ಧ ತಾಸಿಗೊಂದು ಬಸ್ಸು ಓಡುತ್ತದೆ.

ಕಲಕತ್ತಾ ನಗರದ ಜಂಗುಳಿಯಿಂದ ಬೇಸತ್ತ ಜನ ಈ ಶಾಂತವಾತಾವರಣಕ್ಕೆ ಕಿಕ್ಕಿರಿದು ಬಂದು ತುಂಬುವುದರಿಂದ ಇಲ್ಲೂ ಸಾಕಷ್ಟು ಗದ್ದಲವಿದೆ. ಬರುವವರಲ್ಲಿ ಭಕ್ತ ವೃಂದಕ್ಕಿಂತ ಏಕಾಂತ ಬಯಸುವ ಪ್ರೇಮಿಗಳೇ ಹೆಚ್ಚು. ಹುಗಳೀ ನದಿಯ ದಡದಲ್ಲಿಯಾಗಲೀ, ಮರದ ಆಶ್ರಯದಲ್ಲಿಯಾಗಲಿ ಸುತ್ತಲಿನ ಜಗತ್ತನ್ನು ಮರೆತು ತಮ್ಮ ಲೋಕದಲ್ಲಿ ವಿಹರಿಸುತ್ತಿರುತ್ತಾರೆ.

ಹತ್ತಿರದಲ್ಲೇ ದಕ್ಷಿಣೇಶ್ವರ ಭವ್ಯ ದೇವಾಲಯವನ್ನು ಕಟ್ಟಿಸಿ, ರಾಮಕೃಷ್ಣ ಪರಮಹಂಸರು ಅಲ್ಲಿ ಬಂದು ಜೀವಿಸಲು ಕಾರಣಭೂತಳಾದ ರಾಣಿ ರಾಸಮಣಿಗೂ ಪುಟ್ಟ ದೇವಾಲಯವೊಂದನ್ನು ನಿರ್ಮಿಸಿದ್ದಾರೆ.

★

ಸಮಯ ದೊರೆತಾಗೆಲ್ಲ ಬಂಗಾಲಿ ಸಮಾಜದ ವಿವಿಧ ಹಂತಗಳ ಜನರನ್ನು ಭೆಟ್ಟಿಯಾಗಿ ಅವರ ದೃಷ್ಟಿಕೋನವನ್ನು ಅರಿಯಲು ಯತ್ನಿಸುತ್ತಿದ್ದೆ. ಒಮ್ಮೆ ತೇಜನಗರದಲ್ಲಿ ಕೆಮರಾ ಹಿಡಿದು ಸೃಷ್ಟಿಸೌಂದರ್ಯವನ್ನು ಸೆರೆ ಹಿಡಿಯುವುದರಲ್ಲಿದ್ದೆ. ದೂರದ ಹೊಲದಲ್ಲಿ ನಾಲ್ಕೈದು ಜನ ಮೀನು ಹಿಡಿಯುವುದನ್ನು ಕಂಡು ಅಲ್ಲಿಗೆ ಧಾವಿಸಿದೆ. ಅವರಿಗೆ ತಿಳಿಯದಂತೆಯೇ ಕಾರ್ಯೋನ್ಮುಖಿಯಾಗಿದ್ದಾಗಲೇ ಫೋಟೋ ತೆಗೆದೆ. ಹೊಲದಲ್ಲಿದ್ದ ಮಳೆ ನೀರಿನಲ್ಲಿ ತೀರ ಚಿಕ್ಕ ಮೀನುಗಳಿದ್ದವು. ಅವನ್ನು ಪಕ್ಕದ ಹೊಂಡಕ್ಕೆ ಓಡಿಸುತ್ತಿದ್ದರು. ನಂತರ ಮಣ್ಣಿನ ಕಟ್ಟನ್ನು ಹಾಕುತ್ತಿದ್ದರು. ಆಮೇಲೆ ಅವುಗಳನ್ನು ಹಿಡಿಯುವ ಕೆಲಸ. ಆದಾಗಲೇ ಸಂಜೆಯಾಗುತ್ತ ಬಂದಿದ್ದರಿಂದ ಆ ಕೆಲಸ ಮರುದಿನ ಮಾಡಿದರಾಗದೆ? ಎಂದು ಕೇಳಿದ್ದರಿಂದ ಮೀನುಗಾರನು ನಕ್ಕು,

''ಬಾಬು, ನೀವಿನ್ನೂ ಹೊಸಬರೆಂದು ಕಾಣುತ್ತದೆ. ಇಲ್ಲಿ ನಮ್ಮ ದುಡಿಮೆಯ ಫಲ ನಮಗೆ ಸಿಗುತ್ತದೆಂಬ ನೇಮವಿಲ್ಲ... ನನ್ನ ಮನೆಯ ಚಿಕ್ಕ ಮಡುವಿನಲ್ಲಿ ಹಣ ತೆತ್ತು ತಂದು ಕಟ್ಲಾ ಮೀನಿನ ಮರಿಗಳನ್ನು ಸಾಕಿದ್ದೆ. ಅವುಗಳನ್ನು ಇನ್ನೆಂಟು ದಿನಗಳಲ್ಲಿ ಹಿಡಿಯಬೇಕೆಂದಿದ್ದೆ. ಆದರೆ ಆಗದ ಯಾರೋ ಫೋಲಿಡಾಲನ್ನು ನೀರಿಗೆ ಹಾಕಿದ್ದರಿಂದ ಅಪಾರ ಹಾನಿಗೆ ಒಳಗಾದೆ. ಈಗ ನೋಡಿ, ಇಡೀ ರಾತ್ರಿ ಇದನ್ನು ಕಾಯುತ್ತ ಇಲ್ಲಿಯೇ ಬಿದ್ದಿರಬೇಕು. ಇಲ್ಲದಿದ್ದರೆ ಯಾರಾದರೂ ಬಂದು ಇವಿಷ್ಟೂ ಮೀನನ್ನು ತಾವೇ ಬುಟ್ಟಿಯಲ್ಲಿ ಹಾಕಿಕೊಂಡು ಓಡಿಬಿಡುತ್ತಾರೆ. ನಂತರ ನಾವು ಮಣ್ಣು ಮುಕ್ಕಬೇಕು. ಬಾಬು, ನಿಮ್ಮ ಆಫೀಸಿನಲ್ಲಿ ಫ್ಯಾನನ ಸ್ಥಳವೇನಾದರೂ ಸಿಗುವಂತಿದ್ದರೆ ದಯವಿಟ್ಟು ಕೊಡಿಸಿ. ಇಲ್ಲಿ ಕೂಳು ಹುಟ್ಟುವುದೇ ಕಷ್ಟ,'' ಎಂದ. ದಿನಗೂಲಿಯ ಕೆಲಸವೇನಾದರೂ ಇದ್ದರೆ ತಿಳಿಸುವೆನೆಂದು ಅವನ ಹೆಸರು, ವಿಳಾಸ ಕೇಳಿಕೊಂಡೆ.

★

ಬಂಗಾಲದಲ್ಲಿ ಉಚ್ಚ ಶಿಕ್ಷಣ ಪಡೆದವರ ಸಂಖ್ಯೆ ಅತಿ ಹೆಚ್ಚು. ರಾಜ್ಯದಲ್ಲಿ ಜೀವನದ ಸವಲತ್ತುಗಳು ಕಡಿಮೆಯಾದ್ದರಿಂದ ಸಾಹಸಿ ಬಂಗಾಲಿಗಳು ದೇಶದ ವಿವಿಧ ರಾಜ್ಯಗಳಲ್ಲಿಯೂ ವಿದೇಶಗಳಲ್ಲಿಯೂ ನೆಮ್ಮದಿಯ ಜೀವನ ಸಾಧ್ಯವಿದ್ದಲ್ಲಿ ಹೋಗಿಬಿಡುತ್ತಾರೆ. ಬಂಗಾಲದಲ್ಲಿ ಹುಟ್ಟಿ ತರಬೇತಿ ಪಡೆದು ಉಳಿದ ರಾಜ್ಯದ ಅಥವಾ ದೇಶದ ಜನರೊಡನೆ ಸಹಜೀವನ ನಡೆಸುವ ಬಂಗಾಲಿಗಳ ವರ್ತನೆ ಉತ್ಸುಕತೆ ಕೆರಳಿಸುವಂತಿರುತ್ತದೆ. ಕಳೆದ ಹತ್ತು ವರ್ಷಗಳಲ್ಲಿ ಬಂಗಾಲಕ್ಕೆ ಹೋಗುವುದಕ್ಕೆ ತುಂಬ ಮೊದಲಿನಿಂದಲೇ ಬೇರೆ ಬೇರೆ ದೇಶಗಳಲ್ಲಿ ಬಂಗಾಲಿಗಳನ್ನು ಕಂಡಿದ್ದೇನೆ. ಅವರೊಂದಿಗೆ ಸಹಜೀವನ ನಡೆಸಿದ್ದೇನೆ. ಅವರ ಕೆಲವು ಮನೋಭಾವನೆಗಳನ್ನು ತಿಳಿದುಕೊಳ್ಳಲು ಸಾಕಷ್ಟು ಯತ್ನಿಸಿದ್ದೇನೆ.

ಅಂದು ಬಾಂಬೆ ಸೆಂಟ್ರಲ್ ಸ್ಟೇಶನ್ನಿನಿಂದ ಹೌರಾ ಮೇಲಿಗೆ ರಿಝರ್ವ್ ಮಾಡಿಸಿ ಕಲಕತ್ತಾಗೆ ಹೊರಟಿದ್ದೆ. ರೇಲು ಹೊರಡಲು ಐದು ನಿಮಿಷ ಇರುವಾಗ ಬಂಗಾಲಿಯೊಬ್ಬ ಹತ್ತಾರು ಭಾರವಾದ ಸಾಮಾನು, ಹಮಾಲರೊಂದಿಗೆ ಆಗಮಿಸಿ ಒಳ್ಳೆಯ ಸ್ಥಳಕ್ಕಾಗಿ ಎಲ್ಲ ಡಬ್ಬಿಗಳಲ್ಲಿ ಹುಡುಕಾಡತೊಡಗಿದ. ಅವನಿಗಿಂತ ಅರ್ಧ ತಾಸು ಮೊದಲಿಗೆ ಬಂದವರು ನಿಂತಿದ್ದರೂ ಎರಡೇ ನಿಮಿಷಗಳಲ್ಲಿ ಡಬ್ಬಿಗೆ ನುಗ್ಗಿ ಗಲಾಟೆ ಎಬ್ಬಿಸಿದ. ರೇಲ್ವೆ ಅಧಿಕಾರಿಗಳ ಮೇಲೆ ರೇಗಿದ. ಹಮಾಲರು ಬೇಗ ಬೇಗ ಬರಲಿಲ್ಲವೆಂದು ಕೂಗಾಡಿದ. ತನ್ನ ಸಾಮಾನು ಬಿಟ್ಟು ಟ್ರೇನು ಹೇಗೆ ಹೋಗುತ್ತದೋ ನೋಡುತ್ತೇನೆ, ಚೇನನ್ನು ಎಳೆಯುತ್ತೇನೆ ಎಂದು ರೌದ್ರಾವತಾರ ತಾಳಿದ. ಆತನ ಹಾವಭಾವಗಳನ್ನು ನೋಡಿ, ಮಾತು ಕೇಳುವುದೇ ಪ್ರವಾಸಿಕರಿಗೊಂದು ಮೋಜೆನಿಸಿತು. ಯಾವನೊ ಒಬ್ಬ, ''ಇದು ಬಂಗಾಲ ಅಲ್ಲ ಸ್ವಾಮಿ, ಬೊಂಬಾಯಿ,'' ಎಂದ. ಅಷ್ಟಕ್ಕೇ ಆತ ರೇಗಿ ಬಿದ್ದ. ಟ್ರೇನು ಚಲಿಸಿತು. ಉಳಿದವರು ಟ್ರೇನಿನಲ್ಲಿ ತಿನ್ನುತ್ತ, ವರ್ತಮಾನ ಪತ್ರ ಓದುತ್ತ ಕುಳಿತಿದ್ದರು. ಅವನ ಮೇಲೆ ಮರುಕ ತೋರಿ ಬಿಹಾರಿಯೊಬ್ಬ ಸ್ವಲ್ಪ ಸ್ಥಳ ಮಾಡಿಕೊಟ್ಟ. ತಪಾಸಕನೂ ಅವನ ಗೊಡವೆಗೆ ಹೋಗಲಿಲ್ಲ. ಅವನ ಸಾಮಾನುಗಳೆಲ್ಲ ಹರಡಿದ್ದರಿಂದ ಇತರರಿಗೆ ಬಹಳ ತೊಂದರೆಯಾಗುತ್ತಿತ್ತು. ಆದರೂ ಅವೆಲ್ಲ ತನ್ನ ಕಣ್ಣೆದುರಿಗೇ ಇರಬೇಕೆಂದ. ತನಗೆ ನೆರವಾದ ಬಿಹಾರಿಗೂ ಅದರಿಂದ ತೊಂದರೆಯಾದರೂ ಅವನು ಅಲಕ್ಷ್ಯದಿಂದ ಇದ್ದ.

ನನ್ನ ಯುರೋಪ್ ಪ್ರವಾಸದಲ್ಲಿ ಒಂದು ಮೋಜಿನ ಅನುಭವ ಬಂದಿತ್ತು. ರೋಮದ ವಿಮಾನ ನಿಲ್ದಾಣದಲ್ಲಿ ಇಳಿದು ನಗರಕ್ಕೆ ಹೋಗುವ ಬಸ್ ಹತ್ತಲು ವೇಗವಾಗಿ ನಡೆಯುತ್ತಿದ್ದೆ. ಯಾರೋ ಹಿಂದಿನಿಂದ ''ಏ! ಭಾಯಿ ಸಾಹೇಬ್!'' ಎಂದು ಕರೆದದ್ದರಿಂದ ನಿಂತು ನೋಡಿದೆ. ಒಬ್ಬ ಬಂಗಾಲಿ ನನ್ನನ್ನೇ ಕರೆಯುತ್ತಿದ್ದ. ಅವನು ಹೊರಲಾರದಷ್ಟು ಸಾಮಾನು ಹೊತ್ತು ತಂದು ನನ್ನನ್ನು ನೋಡಿ ಗೊಳೋ ಎಂದು ಅತ್ತ. ನನಗೆ ಅರ್ಥವಾಗದೇ ಏನೆಂದು ವಿವರಿಸಲು ಕೇಳಿದೆ. ಪ್ಯಾರಿಸಿನಿಂದ ಅವನು ಬಂದು ಇಳಿದನಂತೆ. ಸಹಪ್ರಯಾಣದಲ್ಲಿದ್ದ ಒಬ್ಬ ಯುವತಿಯೊಡನೆ ಸ್ನೇಹ ಬೆಳೆಯಿತಂತೆ. ದಾಸಬಾಬು (ಅವನ



ಶಾಂತಿನಿಕೇತನದ ಕುಟಿರ

ಹೆಸರು) ವಿಮಾನ ನಿಲ್ದಾಣದಲ್ಲಿ ಮೋಟಾರಿನಲ್ಲಿ ಕೆಲ ಸಾಮಾನುಗಳನ್ನು ಹಾಕಿ, ಕಾರಿನಲ್ಲಿ ಸ್ನೇಹಿತೆಯನ್ನು ಬೀಳ್ಕೊಡುತ್ತಿದ್ದಂತೆಯೇ ಮೋಟಾರು ಹೋಗಿ ಬಿಟ್ಟಿತಂತೆ. ವಿಮಾನ ನಿಲ್ದಾಣದಲ್ಲಿ ವಿಚಾರಿಸಿದಾಗ ನಗರದ ಮೋಟಾರ ಆಫೀಸಿನಲ್ಲಿ ವಿಚಾರಿಸುವಂತೆ ಹೇಳಿದರಂತೆ. "ಸರ್ವಸ್ವವೆಲ್ಲ ಆ ಸೂಟ್‌ಕೇಸ್‌ಗಳಲ್ಲಿದೆ. ಅದು ಹೋಗಿಬಿಟ್ಟರೆ ಏನು ಮಾಡಲಿ," ಎಂದು ಗೋಗರೆದ. ಪ್ಯಾರಿಸಿನ ತನ್ನ ಗಳಿಕೆಯೆಲ್ಲ ವ್ಯರ್ಥವಾಯಿತು ಎಂದು ಬಡಬಡಿಸುತ್ತಲೇ ಇದ್ದ. ಮೋಟಾರ್ ಆಫೀಸಿಗೆ ಹೋದೆವು. ಅಲ್ಲಿ ವಿಚಾರಿಸಿದಾಗ ಆತನ ಎಲ್ಲಾ ಸಾಮಾನುಗಳೂ ದೊರೆತವು. ಯಾವ ಸಾಕ್ಷಿ ಯಾ ಪುರಾವೆಗಳಿಲ್ಲದೇ ಅವನ್ನು ಒಯ್ಯಲು ಹೇಳಿದವರಿಗೆ ಕೃತಜ್ಞತೆಯನ್ನೂ ಸೂಚಿಸುವ ಬುದ್ಧಿ ಬರಲಿಲ್ಲ ಅವನಿಗೆ!

ನಂತರ ನಾವು ಒಂದೆಡೆ ರೂಮ್ ಹಿಡಿದೆವು. ದಾಸ ಬಾಬು ಒಂದೊಂದಾಗಿ ಸಾಮಾನು ತೆಗೆದಿಡಲು ಪ್ರಾರಂಭಿಸಿದ. ಕೋಟು, ಪ್ಯಾಂಟು, ಶರ್ಟುಗಳ ಕಿಸೆಗಳೆಲ್ಲ ಸಾಮಾನುಗಳಿಂದ ತುಂಬಿ ಹೋಗಿದ್ದವು. ಹೀಗಾಗಿ ತೂಕ ಇಮ್ಮಡಿಯಾಗಿತ್ತು. ಬರುವಾಗ ದುಂಡ ದುಂಡಗೆ ಗಡತರವಾಗಿದ್ದವ ಎಲ್ಲವನ್ನೂ ತೆಗೆದಿಟ್ಟಾಗ ಕಡ್ಡಿ ಪೈಲವಾನನಾಗಿದ್ದ. ಸಾಮಾನಿನ ಭಾರ ಹೆಚ್ಚಾದರೆ ಹಣ ಕೊಡಬೇಕಾಗಿದ್ದರಿಂದ ತನ್ನ ಭಾರವನ್ನೇ ಹೆಚ್ಚು ಮಾಡಿಕೊಂಡಿದ್ದನಂತೆ! ನಾನು ರೋಂ ತಿರುಗಾಡಿದೆ. ಆತ ರೂಂ ಬಿಟ್ಟು ಅಲುಗಾಡಲಿಲ್ಲ. ನನ್ನ ಜತೆಯಿದ್ದಾಗ ಒಂದು ಪೈಸೆಯನ್ನೂ ಖರ್ಚು ಮಾಡಲಿಲ್ಲ.

ನಾನು ಅಲ್ಲಿಂದ ಕರಾಚಿಗೆ ಹೋಗುವವನಿದ್ದೆ. ಆತ ಮುಂಬಯಿಗೆ. ನನ್ನೊಂದಿಗೆ ಬಾ ಎಂದು ಹಲುಬಿದ. ಒಬ್ಬನೇ ಹೋದರೆ ಮುಂಬೈ ಕಸ್ಟಮ್ಸ್‌ದವರು ಸರಿಯಾಗಿ ಝಡ್ತಿ ಮಾಡುವರೆಂದು ಅವನಿಗೆ ಗೊತ್ತಿತ್ತು. ಪ್ಯಾರಿಸಿನಿಂದ ಒಳ್ಳೆ ಕೈಗಡಿಯಾರ ತಂದಿದ್ದ. ತೀರ ಹಳೆಯ ಕೈ ಗಡಿಯಾರ ನೋಡಿ ಹೊಸ ಗಡಿಯಾರಕ್ಕೆ ಸುಂಕ ಕೇಳಿದರೆ ಎಂಬ ಕಳವಳ ಬೇರೆ. ಹಿಂದಿನದನ್ನು ಬಿಡಲೂ ಮನಸ್ಸಿಲ್ಲ. ಅಂತೆಯೇ ನನ್ನ ಕೈಯಲ್ಲಿ ಹಳೆಯ ಕೈಗಡಿಯಾರವನ್ನಿಟ್ಟು "ನನ್ನ ಜೀವನದ ಎಷ್ಟೋ ಸವಿದಿನಗಳನ್ನು ಈ ಗಡಿಯಾರದೊಂದಿಗೆ ಕಳೆದಿದ್ದೇನೆ. ನನ್ನ ನೆನಪಿಗಾಗಿ ನಿನ್ನ ಹತ್ತಿರ ಇರಲಿ" ಎಂದ.

ನಾನು ಕರಾಚಿಗೆ ಹೋಗಿ ತಿರುಗಿ ಭಾರತಕ್ಕೆ ಬಂದು ನಮ್ಮೂರಿಗೆ ಹೋದಾಗ ಮೊದಲು ಸ್ವಾಗತಿಸಿದ್ದು ದಾಸಬಾಬುವಿನ ಪತ್ರ! ತಾನು ಕೊಟ್ಟ ಕೈಗಡಿಯಾರದೊಂದಿಗೆ ತನ್ನ ಜೀವನ ಹಾಸುಹೊಕ್ಕಾಗಿ ಹೋದದ್ದರಿಂದ ಅದನ್ನು ತನಗೆ ತಿರುಗಿ ಕಳಿಸಬೇಕೆಂದೂ, ಅದನ್ನು ಭಾರತಕ್ಕೆ ತರಲು ಸಾಗಿದ ಖರ್ಚನ್ನು ತಾನು ಕೊಡುವುದಾಗಿಯೂ ತಿಳಿಸಿದ್ದ ಈ ಬಂಗಾಲಿ ಬಾಬು!

★

ಬಂಗಾಲಿಗಳಿಗೆ ಸಂಶಯ ಪಿಶಾಚಿ ಹಗಲೆಲ್ಲ ಕಾಡುತ್ತಿರುತ್ತದೆ. ಅವರು ಬೇರೆಯವರನ್ನು ನಂಬುವುದಿರಲಿ, ತಮ್ಮನ್ನು ತಾವು ನಂಬುವರೋ ಇಲ್ಲವೋ! ಬಂಗಾಲಿಗಳಲ್ಲದವರ ಬಗ್ಗೆ ಬಂಗಾಲಿಗಳೆಲ್ಲ ಸೇರಿ ಅಸಹನೆ ತೋರಿದರೂ, ಒಮ್ಮೆ ಬಂಗಾಲ ಬಿಟ್ಟು ದಿಲ್ಲಿಗೆ ಹೋಗಲಿ, ಜಯಪುರಕ್ಕೆ ಹೋಗಲಿ, ಬೆಂಗಳೂರಿಗೆ ಹೋಗಲಿ ಒಬ್ಬರಿಂದೊಬ್ಬರು ದೂರವಿರಲು ಯತ್ನಿಸುತ್ತಾರೆ.

ಪರಿಚಯವಿಲ್ಲದವರ ಬಗ್ಗೆ ಸಂದೇಹ ಭಾವ. ಕ್ಯಾಮರಾ, ಟೇಪ್ ರಿಕಾರ್ಡರಗಳೊಡನೆ ತಿರುಗಿದರೂ ಸಂಶಯ. ಈ ಮನೋವೃತ್ತಿಯನ್ನು ಗಮನಿಸಿ, ಎಷ್ಟೋ ದಿವಸಗಳವರೆಗೆ ಯಾವ ಫೋಟೋವನ್ನೂ ತೆಗೆಯುವ ಗೋಜಿಗೆ ಹೋಗಿರಲಿಲ್ಲ. ಬಂಗಾಲಕ್ಕೆ ಹೋಗಿ ಎರಡು ವರ್ಷಗಳಾಗುತ್ತ ಬಂದಿ

ದ್ವಪು. ಅಲ್ಲಿಂದ ಎಂದು ಕಾಲು ಕೀಳಬಹುದೆಂದು ತಿಳಿಯದ್ದರಿಂದ ಅಲ್ಲಿಯ ದೊಡ್ಡ ಹಬ್ಬವಾದ ದುರ್ಗಾಪೂಜೆಯ ಕೆಲವು ಫೋಟೋಗಳನ್ನು ತೆರೆಯಲು ಹೋದೆ. ದುರ್ಗಾ ಮೂರ್ತಿ ಮತ್ತು ಮೆರವಣಿಗೆಯ ಒಂದೆರಡು ಫೋಟೋ ತೆಗೆದಿರಬಹುದು. ಅಷ್ಟರಲ್ಲಿ ಯುವಕನೊಬ್ಬ ಗರ್ಜಿಸಿ ನನ್ನ ಮೇಲೆ ಬಂದು ಕ್ಯಾಮರಾಕ್ಕೆ ಕೈ ಹಾಕಿದ. ನಾನು ಅಷ್ಟರಲ್ಲಿ ಸಾವರಿಸಿಕೊಂಡು ಎರಡು ಸಾವಿರ ರೂಪಾಯಿ ಬೆಲೆ ಬಾಳುವ ಜರ್ಮನ್ ಕ್ಯಾಮರಾಕ್ಕೆ ಪೋಲಿಯೊಬ್ಬನ ಕೈ ತಗಲಬಾರದೆಂದು ಅವನನ್ನು ದೂಡಿದೆ. ಕ್ಯಾಮರಾ ಮುಚ್ಚಿ ಕೈಚೀಲದಲ್ಲಿಟ್ಟು ''ಈಗ ನಿನಗೆ ಏನು ಬೇಕು ಹೇಳು?'' ಎಂದೆ. ''ಕ್ಯಾಮರಾದಲ್ಲಿ ಫಿಲ್ಮ್ ಇದೆಯೆ?'' ಎಂದ. ನಾನೂ ಅಷ್ಟೇ ಬಿರುಸಿನಲ್ಲಿ, ''ನಿನಗೆ ಅದರಿಂದ ಏನಾಗಬೇಕಾಗಿದೆ?'' ಎಂದು ಕೇಳಿದೆ. ಅದಕ್ಕವನು ಬಹಳ ದಿನಗಳಿಂದ ನನ್ನನ್ನು ನೋಡುತ್ತಿದ್ದಾನಂತೆ. ನಾನು ಬರೆ 'ಹೆಣ್ಣಿನ' ಫೋಟೋ ತೆಗೆಯುವುದರಲ್ಲಿ ಮಗ್ನನಾಗಿದ್ದನ್ನು ಕಂಡಿದ್ದಾನಂತೆ. ಫೋಟೋ ತೆಗೆಯುವುದಾದರೆ ಸೀನರಿಯನ್ನು ಬಿಟ್ಟು ಮಂದಿಯ ಫೋಟೋ ತೆಗೆಯುತ್ತಾರೆಯೆ? ಎಂದು ಕೇಳಿದ. ಅವನ ಬೆಪ್ಪುತನಕ್ಕೆ ಸಿಟ್ಟಿಗಿಂತ ಹೆಚ್ಚಾಗಿ ನಗು ಬಂದಿತು.

★



ಬಂಗಾಲದಲ್ಲಿಯ ಜೀವನ ದಡಕಾಣದ ನದಿಯಲ್ಲಿ ಈಸಿದಂತೆ. ಒಂದು ಸಮಸ್ಯೆಗೆ ಪರಿಹಾರ ಕಂಡು ಹಿಡಿಯುವಷ್ಟರಲ್ಲಿ ಇನ್ನೊಂದು ಹೆಡೆ ಎತ್ತಿ ನಿಲ್ಲುತ್ತದೆ. 1970 ಮಾರ್ಚ್‌ನಲ್ಲಿ ಮಾರ್ಕ್ಸ್‌ವಾದಿ ಪಂಗಡ ಮತ್ತು ರಾಜಕೀಯ ಪಂಗಡಗಳಲ್ಲಿ ಭಿನ್ನಾಭಿಪ್ರಾಯ ಉಂಟಾದ್ದರಿಂದ ಬಂಗಾಲದ ಜೀವನ ಅಲ್ಲೋಲ-ಕಲ್ಲೋಲವಾಯಿತು. ಕಲಕತ್ತಾದಲ್ಲಿ ಎದ್ದ ಅಶಾಂತಿಯ ತೆರೆಗಳು ಪ್ಲಾಸಿಗೂ ಬಡಿದು ಉತ್ತರ ಬಂಗಾಲದತ್ತ ಭರದಿಂದ ಬಡಿದವು. ಪ್ಲಾಸಿಯಲ್ಲಿಯ ಗಲಭೆಯ ಸಮಾಚಾರ ಕೇಳಿದ ಮೇಲೆ ಬೆಂಗಳೂರಿನ ಮುಖ್ಯ ಆಫೀಸಿನಿಂದ ಪ್ಲಾಸಿಯ ಸಂಶೋಧನಾಲಯವನ್ನು ಮುಚ್ಚಿ, ಕೆಲಸಗಾರರನ್ನು ಮನೆಗೆ ಕಳಿಸಿ ಸಾಮಾನುಗಳೊಂದಿಗೆ ಗೌಹಾತಿಗಾಗಲಿ, ಮೋತಿಪುರಕ್ಕಾಗಲಿ ಹೋಗುವಂತೆ ನನಗೆ ಆದೇಶ ಬಂದಿತು. ಅಂಚೆಯುವನು ತಂತಿಯನ್ನು ನನಗೆ ಮುಟ್ಟಿಸುವ ಮೊದಲೇ ಈ ಸಮಾಚಾರವನ್ನು ಊರಿಗೆಲ್ಲ ಬಿತ್ತರಿಸಿ ಆಗಲೇ ಸಂಶೋಧನಾಲಯ ಮುಚ್ಚಿತು ಎಂದು ಸಾರಿದ್ದ. ನನ್ನ ಬಂಗಾಲಿ ಸಹೋದ್ಯೋಗಿಗಳಿಗೂ ಈ ಸಮಾಚಾರ ತಲುಪಿ ತಮ್ಮ ಅನ್ನಕ್ಕೆ ಇನ್ನು ಸಂಚಕಾರ ಬಂದಿತೆಂದು ರಾತ್ರಿಯ ಹೊತ್ತಿನಲ್ಲೇ ನಾನಿದ್ದಲ್ಲಿ ಓಡಿ ಬಂದರು.

"ಅಂಚೆಯುವನು ತಂತಿಯ ಸಮಾಚಾರವನ್ನು ಊರಿಗೆಲ್ಲ ಸಾರಿದ್ದಾನೆ. ಇದು ಖಂಡನೀಯ. ಅವನ ವಿರುದ್ಧ ದೂರು ಕೊಡಲಿದ್ದೇನೆ. ಪ್ಲಾಸಿಯ ಶಾಖೆಯನ್ನು ಮುಚ್ಚಲು ಮೇಲಿನವರು ತಿಳಿಸಿದರೂ ಅದು ಸಲಹೆಯೇ ಹೊರತು ಆಜ್ಞೆಯಲ್ಲ. ಆದ್ದರಿಂದ ಕೊನೆಯ ನಿರ್ಧಾರವನ್ನು ಕೈಕೊಳ್ಳುವುದು ನನ್ನ ಕೈಯಲ್ಲೇ ಇದೆ," ಎಂದಾಗ ಅವರೆಲ್ಲ ಸಮಾಧಾನದ ಉಸಿರೆಳೆದರು.

ಮರುದಿನ ಪೋಸ್ಟ್‌ಮಾಸ್ತರರಿಗೆ 'ಬೊಪರ್ಜ್' ಪೋಸ್ಟ್‌ಮನ್ ಮಾಡಿದ ಅಪರಾಧದ ವಿರುದ್ಧ ದೂರುಕೊಟ್ಟೆ.

ಪರಿಚಯದವರೆಲ್ಲ "ನೀವು ಎಂದು ಹೊರಡುತ್ತೀರಾ?" ಎಂದು ಕೇಳುವವರೆ. ಅವರಿಗೆಲ್ಲ ವಿವರಿಸಿ ಹೇಳುವಲ್ಲಿ ಅರೆಜೀವವಾಯಿತು. ಮುಖ್ಯಾಂದಾರರಿಗೂ ಈ ಸಮಾಚಾರ ತಲುಪಿ ಸಂಶೋಧನಾಲಯದ ಮುಂದಿನ ವ್ಯವಸ್ಥೆ ಮತ್ತು ಕಟ್ಟಡದ ವಿತರಣದ ಬಗ್ಗೆ ಯೋಚಿಸಲು ನನಗೆ ಹೇಳಿ ಕಳಿಸಿದರು.

ಎಂದಿನಂತೆಯೇ ಸಣ್ಣ, ಪುಟ್ಟ ಉಪದ್ರವಗಳು ನಡೆದೇ ಇದ್ದರೂ ಯಾವ ವಿಶೇಷ ಘಟನೆಯೂ ನಡೆಯಲಿಲ್ಲ. ನಮ್ಮ ದೈನಂದಿನ ಕಾರ್ಯಗಳು ನಡೆದೇ ಇದ್ದವು. ನವೆಂಬರ್ ತಿಂಗಳಿನಲ್ಲಿ, ಇನ್ನೊಮ್ಮೆ ನಮ್ಮ ಶಾಖೆಯನ್ನು ಮುಚ್ಚುವ ಪ್ರಸಂಗ ಬಂದಿತು. ನಾನು ಬಂಗಾಲದಲ್ಲಿ ಯಾವುದಕ್ಕಾಗಿ ಹೆಣಗುತ್ತಿದ್ದೆನೋ ಅದೇ ಪಾಲಿಸದಿದ್ದಾಗ ನಾನೇಕೆ ರಾಜೀನಾಮೆ ಕೊಡಬಾರದೆಂದು ವಿಚಾರ ಸುಳಿದು ಹೋಯಿತು. ಅಂತೆಯೇ ರಾಜೀನಾಮೆ ಕೊಟ್ಟರೆ ಅದರಿಂದ ಉದ್ಭವಿಸಬಹುದಾದ ಸಮಸ್ಯೆಗಳ ಕುರಿತು ಪ್ರಧಾನಸೊಂದಿಗೆ ಚರ್ಚಿಸಿದೆ. ನನಗೆ ಆಗುವ ಹಾನಿಗಿಂತ ಲಾಭವೇ ಹೆಚ್ಚಿಗೆ ಅನಿಸಿದ್ದರಿಂದ ಅದೇ ದಿನ ರಾಜೀನಾಮೆಯ ಪತ್ರವನ್ನು ಕಳಿಸಿಬಿಟ್ಟೆ.

ನನ್ನ ರಾಜೀನಾಮೆ ಹಲವಾರು ಊಹಾಪೋಹಗಳಿಗೆ ಕಾರಣವಾಯಿತು. ಇನ್ನೂ ದೊಡ್ಡ ನೌಕರಿ ಸಿಕ್ಕಿರಬೇಕು ಎಂದು ಕೆಲವರು ತಿಳಿದರೆ, ಇನ್ನು ಕೆಲವರು ಬಂಗಾಲದ ಅಶಾಂತ ಸ್ಥಿತಿಯೇ ನಾನು ರಾಜೀನಾಮೆ ಕೊಡಲು ಕಾರಣ ಎಂದು ಬಗೆದರು. ಅಷ್ಟೇಷ್ಟರಂತೂ ಪ್ರತಿನಿತ್ಯ ತಾವು ಓದುತ್ತಿದ್ದ ಸಮಾಚಾರಗಳೇ ನನ್ನ ರಾಜೀನಾಮೆಗೆ ಕಾರಣವೆಂದು ತಿಳಿದರು. ಅತಿ ಮುಖ್ಯ ಕಾರಣ ತರ್ಕಬುದ್ಧಿಗೆ ನಿಲುಕದ್ದರಿಂದ ಹೆಚ್ಚಿನ ವಿವ

ರಣೆ ಕೊಡುವ ಗೋಜಿಗೆ ಹೋಗಲಿಲ್ಲ.

ಪ್ಲಾಸಿಯಲ್ಲಿ ಕಳೆದ ಎರಡು ವರ್ಷಗಳ ಸವಿನೆನಪಿಗೆಂದು ಆ ವರ್ಷ ದೀಪಾವಳಿಗೆ ಅಲ್ಲಿಯ ಪರಿಚಿತರಿಗೆಲ್ಲ ಶುಭಾಶಯಗಳ ಕಾರ್ಡ್ ಕಳಿಸಿದೆ. ಡಿಸೆಂಬರ್ ಒಂಬತ್ತರಂದು ಪ್ರಧಾನನಿಗೆ ಅಧಿಕಾರ ವಹಿಸಿಕೊಟ್ಟೆ. ಆದರೂ ಅವನು ಪ್ರತಿಯೊಂದು ವಿಷಯದಲ್ಲಿ ನನ್ನ ಸಲಹೆ ಪಡೆಯುತ್ತಿದ್ದ. ಬಂಗಾಲಿಗಳ ಇನ್ನೂ ಹಲವಾರು ವಿಷಯಗಳನ್ನು ತಿಳಿದುಕೊಳ್ಳ
ಬೇಕಾಗಿದ್ದರಿಂದ ನೌಕರಿ ಬಿಟ್ಟ ನಂತರ ಇನ್ನೊಂದು ತಿಂಗಳು ಪ್ಲಾಸಿಯಲ್ಲಿಯೇ ಇದ್ದು ಹತ್ತಿರದ ಹಲವಾರು ಸ್ಥಳಗಳನ್ನು ಸಂದರ್ಶಿಸಿದೆ. ಹಲವಾರು ಬಂಗಾಲಿಗಳನ್ನು ಭೆಟ್ಟಿಯಾದೆ.

ಊರಿಗೆ ಹೊರಡಲು ಸಿದ್ಧನಾದೆ. ಆ ಜನರೆಲ್ಲ ನನ್ನ ಸಾಮಾನು ಸರಂಜಾಮು ಪ್ಯಾಕ್ ಮಾಡುವುದರಲ್ಲಿ ಸಹಕರಿಸಿದರು. ಬಂಗಾಲದಲ್ಲಿ ಇದ್ದೂ ಅಲ್ಲಿಯ ಭಾಷೆ, ಸಾಹಿತ್ಯಗಳನ್ನು ಅರಗಿಸಿಕೊಳ್ಳುವ ಕನಸು ಕನಸಾಗಿಯೇ ಉಳಿಯಿತು. ಆ ದಿನಗಳಲ್ಲಿ ಹೊಲಗಳು ಎಕರೆಗೆ ಎರಡು ಸಾವಿರ ರೂಪಾಯಿಯಂತೆ ಮಾರಾಟವಾಗುತ್ತಿದ್ದವು. 4-5 ಎಕರೆ ಹೊಲ ಖರೀದಿಸಿ ಬಂಗಾಲದಲ್ಲಿಯೇ ನೆಲೆಯೂರಬೇಕೆಂಬ ಹುಚ್ಚು ವಿಚಾರವೂ ಹೊಳೆದು ಹೋಯಿತು. ಆದರೆ ಆ ವಿಚಾರವನ್ನು ಬದಿಗೊತ್ತಿ ಹೊರಡುವ ತಯಾರಿ ಪ್ರಾರಂಭಿಸಿದೆ. ಆದರೆ ಹಾಗೆ ಹೊರಡುವುದು ಅಷ್ಟೊಂದು ಸುಲಭದ ಮಾತಾಗಿರಲಿಲ್ಲ. ನನಗೇ ಅರಿಯದೇ ಭಾಗೀರಥಿ ನದಿ, ನನ್ನ ಮನೆ, ತೋಟ, ಕಾಡುತ್ತಿದ್ದ ಹುಡುಗರ ಕೂಡ ಪ್ರೇಮಪಾಶದಲ್ಲಿ ಬಂಧಿತನಾಗಿದ್ದೆ.

★

ಪ್ಲಾಸಿಯಿಂದ ಹೊರಡುವ ಮುನ್ನಾದಿನ ನನ್ನ ಸಹೋದ್ಯೋಗಿಗಳಿಗಾಗಿ ಮನೆಯಲ್ಲಿಯೇ ಚಿಕ್ಕ ಪಾರ್ಟಿಯೊಂದನ್ನು ಏರ್ಪಡಿ

ಸಿದೆ.

ಆ ಪ್ರದೇಶದಲ್ಲಿ ನಕ್ಸಲೀಯರ ಹಾವಳಿ ಹೆಚ್ಚಾಗಿದ್ದರಿಂದ ಕಲಕತ್ತಾದ ಮೇಲಿಂದ ಹಾದು ಹೋಗದೇ ರಾಮನಗರದಿಂದ ಸೀದಾ ಹೌರಾ ಸ್ಟೇಶನ್ನಿಗೆ ಹೋಗುವುದು ಒಳಿತೆಂದು ಎಲ್ಲರೂ ಹೇಳಿದರು; ನನಗೂ ಅದು ಸರಿ ಅನ್ನಿಸಿತು.

ರೇಲು ಎಂದಿನಂತೆ ತಡವಾಗಿ ಬರಲಿತ್ತು. ಪ್ರಧಾನ ಮಿತ್ರಾರೊಂದಿಗೆ ಮಾತನಾಡುತ್ತ ನಿಂತಿದ್ದಾಗ ದೂರದಿಂದ ತೇಕುತ್ತ ಬರುವ ಹಮೀದನನ್ನು ನೋಡಿ ಆಶ್ಚರ್ಯವಾಯಿತು. ಹಿಂದಿನ ದಿನವೇ ಅವರೆಲ್ಲರನ್ನು ಬೀಳ್ಕೊಂಡರೂ ಅವನು ಒಂಬತ್ತು ಮೈಲು ಸೈಕಲ್ ಓಡಿಸಿ ಸ್ಟೇಶನ್ನಿಗೆ ಬಂದಿದ್ದ. ನಂತರ ಬಂದ ಡೇನ ಕೈಯಲ್ಲಿ ಬಗೆಬಗೆಯ ಸುವಾಸನೆ ಬೀರುವ ಹೂಗಳ ದೊಡ್ಡ ಗುಚ್ಛವಿತ್ತು. ಅದನ್ನು ನನ್ನ ಕೈಯಲ್ಲಿ ಕೊಟ್ಟು, ''ಸರ್, ನಿಮಗೆ ಕೊಡುವಂತಹ ಯಾವ ಸಾಮಾನೂ ನನ್ನಲ್ಲಿಲ್ಲ.. ನಾನೇ ಬೆಳೆಸಿದ ಹೂಗಳ ಈ ಗುಚ್ಛವನ್ನು ನಿಮಗಾಗಿ ತಂದಿರುವೆ. ಈ ಹೂವು ಸಂಜೆಯೊಳಗಾಗಿ ಬಾಡಬಹುದು. ಆದರೆ ನಮಗೆ ನೀವು ತೋರಿದ ಪ್ರೀತಿ ಸದಾ ಅರಳಿ ನಿಂತಿದೆ,'' ಎಂದು ಗದ್ಗದಿತನಾದಾಗ ನಾಲ್ಕೂ ಕಣ್ಣುಗಳು ತೇವಗೊಂಡವು.

ಹೌರಾ ತಲಪಿದೆ. ಪ್ರೀತಿಯಿಂದ ಬಂಗಾಲಿಗಳನ್ನು ಗೆಲ್ಲಬಹುದು ಎಂದುಕೊಂಡಿದ್ದೆ. ಬಂಗಾಲಿಗಳಲ್ಲಿ ಸಂಶಯ, ಅಸೂಯೆ, ಹೆರವರ ಬಗ್ಗೆ ಅಸಹನೆಗಳಿರಲಿಕ್ಕೆ ಅವರ ಇತಿಹಾಸವೇ ಕಾರಣವೆಂದು ಅನಿಸಿತ್ತು. ದಬ್ಬಾಳಿಕೆ, ಬ್ರಿಟಿಶರ ಕೂಟ-ನೀತಿಗಳು ಮೊದಲು ವಿಕೃತ ರೂಪ ತಳೆದದ್ದು ಈ ನಾಡಿನಲ್ಲಿ. ಸ್ವಾತಂತ್ರ್ಯ ಹೋರಾಟದ ಕಿಡಿ ಹಾರಿದ್ದು ಇಲ್ಲಿ. ಭಾರತದ ಮೂಲೆಮೂಲೆಗಳಿಂದ ಬಂದು ಇಲ್ಲಿಯ ವ್ಯಾಪಾರ ನಿಯಂತ್ರಿಸಿದ ವ್ಯಾಪಾರಿಗಳು, ಉದ್ದಿಮೆದಾರರು ಇವರೆಲ್ಲ ಬಂಗಾಲದ ಅಶಾಂತಿಗೆ ಕೆಲಮಟ್ಟಿಗೆ ಕಾರಣವೆಂದು ಯೋಚಿಸುತ್ತಿದ್ದಾಗಲೇ ಟ್ರೇನು ಬಂದಿತು. ●

ನಮ್ಮ ದೃಷ್ಟಿಯನ್ನು ಒಂದೆಡೆ ಬೀರಲು ಕಣ್ಣಿನ ಸ್ನಾಯುಗಳು ಒಂದು ದಿನದಲ್ಲಿ ಒಂದು ಲಕ್ಷ ಬಾರಿ ಚಲಿಸುತ್ತವೆ. ಕಾಲುಗಳ ಸ್ನಾಯುಗಳು ಇಷ್ಟೇ ಸಲ ಚಲಿಸುವಂತೆ ಮಾಡಬೇಕಾದರೆ ಒಬ್ಬ ವ್ಯಕ್ತಿ 80 ಕಿಲೋಮೀಟರುಗಳಷ್ಟು ನಡೆಯಬೇಕಾಗುತ್ತದೆ.

ಸಾಮಾನ್ಯವಾಗಿ ಎಲ್ಲರೂ ಒಂದು ನಿಮಿಷದಲ್ಲಿ 25 ಸಲ ಕಣ್ಣು ಮಿಟುಕಿಸುತ್ತಾರೆ.

- ಟೇಕಲ್ ಗೋಪಾಲಕೃಷ್ಣ

Printed and Published by V.G.VAIDYA on behalf of Loka Shikshana Trust at "Samyukta Karnataka Press", Koppikar Road Hubli-580020. Phone:64303 - No. 2 Residency Road, Bangalore - 560025, Phone:213265 Managing Editor: K.SHAMA RAO, Representatives: Bombay - V.Satyamurthy, Phone: 5510592, Madras: S.K.Murthi, Phone: 414870, New Delhi: V.K.Chopra, Phone: 7114785

Registered with the Registrar of Newspapers for India under No. 35/3957.

KASTURI
Kannada Digest
PRICE: Rs. 3-00
Reg. No. KRNG -43
Licence No. L 2120/WPP No.33